
ಭಾನುವಾರ, ಫೆಬ್ರುವರಿ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 37 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಗೋರಖಪುರ ಆಸ್ಪತ್ರೆಯಲ್ಲಿ ಹಸುಗೂಸುಗಳು ಸಾವನ್ನಪ್ಪಿದ ಆ ದುರಂತ ಘಟನೆಯ ಹಿಂದಿನ ಮಜಕೂರು



ಎಸ್‌ಬಿಐ ಲಾಭ ಶೇ 62ರಷ್ಟು ಹೆಚ್ಚಳ 9
ಪಂಜಾಬ್: ತಾರಾ ಪ್ರಚಾರಕರ ಪಟ್ಟಿಯಿಂದ ತಿವಾರಿ ಹೊರಕ್ಕೆ 8
'ಭಾರತದಲ್ಲಿ ಇರುವುದು ಪ್ರಧಾನಿಯಲ್ಲ, ರಾಜ' 8
ಕಾಂಗ್ರೆಸ್ ಭಿನ್ನಮತ ಬಹಿರಂಗ 8

ಸವಾಲಿನ ಸುಳಿಯಲ್ಲಿ ಹೈನೋದ್ಯಮ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ರಾಜ್ಯದಲ್ಲಿ ಯಥೇಚ್ಛ ಪ್ರಮಾಣದಲ್ಲಿ ಹಾಲು ಉತ್ಪಾದನೆಯಾಗಿ, ಹೈನುಗಾರಿಕೆ ನೆಚ್ಚಿಕೊಂಡಿದ್ದ ಅನ್ನದಾತರಲ್ಲಿ ನೆಮ್ಮದಿ ಮೂಡ ತೊಡಗಿದ ಹೊತ್ತಿನಲ್ಲೇ ಕೋವಿಡ್ ವಕ್ಕರಿಸಿತ್ತು. ಸೋಂಕು ಹಾವಳಿ ಕಡಿಮೆಯಾಗಿ ಜನಜೀವನ ಸಹಜ ಸ್ಥಿತಿಗೆ ಮರಳಿದ ಬಳಿಕ ಈ ಉದ್ಯಮ ಚೇತರಿಕೆಯತ್ತ ಸಾಗಿತ್ತು.

ಈ ಚೇತರಿಕೆಯ ಸಂದರ್ಭದಲ್ಲಿ ಬ್ರ್ಯಾಂಡ್‌ಗೆ ಧಕ್ಕೆ ತರುವಂತಹ ನಕಲಿ ತುಪ್ಪ, ಕಳಪೆ ಹಾಲು ಪ್ರಕರಣಗಳು ಮತ್ತು ಹಾಲಿನ ಪುಡಿಯ ಪರಿವರ್ತನೆಯಿಂದ ಸುಮಾರು ₹80 ಕೋಟಿಗೂ ಹೆಚ್ಚು ನಷ್ಟವಾಗಿರುವುದು ಹೈನುಗಾರಿಕೆ ಮೇಲೆ ಪರಿಣಾಮ ಬೀರಲಾರಂಭಿಸಿದೆ.

ಈ ಸಂಕಟಗಳ ನಡುವೆಯೂ, ರಾಜ್ಯದಲ್ಲಿನ 25 ಲಕ್ಷಕ್ಕೂ ಹೆಚ್ಚು ಹಾಲು ಉತ್ಪಾದಕರ ಜತೆ ದಿನನಿತ್ಯ ವಹಿವಾಟು ನಡೆಸುವ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಎಲ್ಲ ತೊಡಕುಗಳನ್ನು ನಿವಾರಿಸಿಕೊಂಡು ಮತ್ತೆ ಪುಟದೇಳುವ ಉತ್ಸಾಹದಲ್ಲಿದೆ.

ರಾಜ್ಯದಲ್ಲಿ ಪ್ರತಿ ದಿನ 84 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ವಿಧಿಸಿದ ನಿರ್ಬಂಧಗಳಿಂದಾಗಿ ಹೆಚ್ಚುವರಿ ಹಾಲಿನ ಮಾರಾಟ ಸಮಸ್ಯೆಯಾಗಿತ್ತು. ಕೋವಿಡ್–19 ಬಳಿಕ ಉದ್ಯೋಗ ಕಳೆದುಕೊಂಡ ಹಲವರು ಹೈನುಗಾರಿಕೆಯನ್ನು ಕೈಗೊಂಡಿದ್ದು ಸಹ ಹಾಲು ಉತ್ಪಾದನೆ ಹೆಚ್ಚಳವಾಗಲು ಕಾರಣವಾಗಿತ್ತು.

ಸಂಪೂರ್ಣ ಲಾಕ್‌ಡೌನ್ ವಿಧಿಸಿದ ಸಂದರ್ಭದಲ್ಲಿ 25 ಲಕ್ಷ ಲೀಟರ್ ಹೆಚ್ಚುವರಿಯಾಗಿ ಉಳಿಯುತ್ತಿತ್ತು. ಈ ಹಾಲು ಮಾರಾಟ ಮಾಡುವುದು ಕೆಎಂಎಫ್‌ಗೂ ತಲೆನೋವಾಗಿ ಪರಿಣಮಿಸಿತ್ತು. ಆಗ ಸರ್ಕಾರದ ವತಿಯಿಂದ ಜನರಿಗೆ ಉಚಿತವಾಗಿ ಹಾಲು ವಿತರಿಸಿ ತಾತ್ಕಾಲಿಕ ಪರಿಹಾರ ಕಂಡುಕೊಳ್ಳಲಾಗಿತ್ತು. ಜತೆಗೆ, ಹಾಲಿನ ಪುಡಿ ತಯಾರಿಕೆಗೆ ಆದ್ಯತೆ ನೀಡಲಾಯಿತು. ಆರ್ಥಿಕವಾಗಿ ಹೊರೆಯಾಗಿರುವ ಹಾಲಿನ ಪುಡಿ ತಯಾರಿಸುವುದು ಮತ್ತು ಮಾರಾಟ ಮಾಡುವುದು ಈಗಲೂ ಸಮಸ್ಯೆಯಾಗಿದೆ.

ಒಳನೋಟ
ಹೈನುಗಾರಿಕೆಗೆ ಸಂಕಷ್ಟ
ಪ್ರತಿಕ್ರಿಯಿಸಿ: 9606038256
feedback@prajavani.co.in

ಕೆಎಂಎಫ್ ವ್ಯಾಪ್ತಿ
- **23.600** ಹಳ್ಳಿಗಳು
- **25** ಲಕ್ಷಕ್ಕೂ ಹೆಚ್ಚು ಹಾಲು ಉತ್ಪಾದಕರು
- **140** ಹಾಲು ಮತ್ತು ಹಾಲಿನ ಉತ್ಪನ್ನಗಳು
- **14** ಹಾಲು ಒಕ್ಕೂಟಗಳು
- **₹24** ಕೋಟಿ ಪ್ರತಿ ದಿನ ರೈತರಿಗೆ ಪಾವತಿ

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4



ಕೊಪ್ಪಳದ ಮಹಾವೀರ ಗೋಶಾಲೆಯಲ್ಲಿ ಹಾಲಿನ ಗುಣಮಟ್ಟ ಪರಿಶೀಲಿಸುತ್ತಿರುವ ಸಿಬ್ಬಂದಿ
ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



ರೈತರಿಗೆ ನೆರವಾಗುವ ಉದ್ದೇಶದಿಂದ ಸಕಾಲಕ್ಕೆ ಪ್ರೋತ್ಸಾಹ ಧನ ನೀಡಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆ. ಆರ್‌ಟಿಜಿಎಸ್ ಮೂಲಕ ನೇರವಾಗಿ ಹಣ ಪಾವತಿಸಲಾಗುತ್ತಿದೆ. ಈ ಮೂಲಕ ಹೈನುಗಾರಿಕೆ ಪ್ರೋತ್ಸಾಹ ನೀಡಲಾಗುತ್ತಿದೆ

ಪ್ರಭು ಬಿ.ಚವ್ಹಾಣ ಪಶು ಸಂಗೋಪನೆ ಸಚಿವ

'ನಂದಿನಿ'ಗೆ ನಕಲಿ ತುಪ್ಪದ ಕಾಟ

ಕೆಎಂಎಫ್ ಉತ್ಪನ್ನಗಳಲ್ಲಿ ನಂದಿನ ತುಪ್ಪ ಅಗ್ರಸ್ಥಾನ ಪಡೆದಿದೆ. ಪ್ರತಿ ನಿತ್ಯ 100 ಟನ್‌ಗೂ ಅಧಿಕ ತುಪ್ಪವನ್ನು ತಯಾರಿಸಲಾಗುತ್ತಿದೆ. ರಾಜ್ಯದಲ್ಲಿ ಸುಮಾರು 600 ವಿತರಕರು ಮತ್ತು ಹೊರರಾಜ್ಯಗಳಲ್ಲಿ 50ಕ್ಕೂ ಹೆಚ್ಚು ವಿತರಕರ ಮೂಲಕ ಸರಬರಾಜು ಮಾಡಲಾಗುತ್ತಿದೆ. ಅಮೆರಿಕ, ಆಸ್ಟ್ರೇಲಿಯಾ, ಕತಾರ್, ಸಿಂಗಪುರ, ದುಬೈ, ಒಮಾನ್, ಬಹರೇನ್ ದೇಶಗಳಿಗೆ ಕಳೆದ ವರ್ಷ 180 ಟನ್ ತುಪ್ಪ ಸರಬರಾಜು ಮಾಡಲಾಗಿದೆ.

ರಕ್ಷಣಾ ಇಲಾಖೆಗೂ ಕಳೆದ ವರ್ಷದ ಒಪ್ಪಂದದ ಅನ್ವಯ 150 ಟನ್ ಹಾಗೂ ತಿರುಮಲ ತಿರುಪತಿ ದೇವಸ್ಥಾನಕ್ಕೆ ಒಂದು ವರ್ಷದ ಅವಧಿಗೆ 410 ಮೆಟ್ರಿಕ್ ಟನ್ ಪೂರೈಸಲಾಗಿದೆ.

ಆದರೆ, ಇತ್ತೀಚೆಗೆ ನಕಲಿ ತುಪ್ಪದ ಪ್ರಕರಣಗಳು ಮೈಸೂರು ಮತ್ತು ಬೆಂಗಳೂರಿನಲ್ಲಿ ಪತ್ತೆಯಾಗಿದ್ದು ಗ್ರಾಹಕರ ಮತ್ತು ಕೆಎಂಎಫ್ ಆಡಳಿತ ಮಂಡಲಿಯ ಆತಂಕಕ್ಕೆ ಕಾರಣವಾಗಿತ್ತು.

ಸ್ಥಳೀಯ ಆಹಾರ ಸುರಕ್ಷತಾ ಪ್ರಾಧಿಕಾರದ ಅಧಿಕಾರಿಗಳು ಕಲಬೆರಕೆಗೆ ಬಳಸುತ್ತಿದ್ದ ಡಾಲ್ಡಾ, ಪಾಮ್ ಆಯಿಲ್, ಬಣ್ಣ, ಯಂತ್ರಗಳು ಸೇರಿದಂತೆ ವಿವಿಧ ಸಾಮಗ್ರಿಗಳನ್ನು ವಶಪಡಿಸಿ ಕೊಂಡು ಎಫ್‌ಐಆರ್ ದಾಖಲಿಸಿದ್ದರು. ಈ ಪ್ರಕರಣಗಳ ಬಳಿಕ, ರಾಜ್ಯದಾದ್ಯಂತ ನಂದಿನಿ ತುಪ್ಪದ ಮಾದರಿಗಳನ್ನು ಪಡೆದು ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿನ್ಯಾಸ ಬದಲು: ನಂದಿನ ತುಪ್ಪವನ್ನು ನಕಲು ಮಾಡದಂತೆ ತಡೆಯಲು ವಿನ್ಯಾಸ ಮತ್ತು ಪ್ಯಾಕಿಂಗ್ ಬದಲಾಯಿಸಲಾಗುವುದು. ಎಲ್ಲ ನಂದಿನಿ ತುಪ್ಪದ ಪ್ಯಾಕ್‌ಗಳ ಮೇಲೆ ಕ್ಯೂಆರ್ ಕೋಡ್ ಮತ್ತು ಹಾಲೊಗ್ರಾಂ ಅಳವಡಿಸಲಾಗುವುದು. ಜತೆಗೆ, 'ನಂದಿನಿ ಗುಡ್ ಲೈಫ್' ಹೆಸರಿನಲ್ಲೇ ಇನ್ನು ಮುಂದೆ ತುಪ್ಪವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು. ಇದನ್ನು ನಕಲು ಮಾಡುವುದು ಕಷ್ಟ ಎಂದು ತಿಳಿಸಿದ್ದಾರೆ.

ಆದೇಶ ಹೊರಡಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆ

ಹಿಜಾಬ್–ಶಾಲು ನಿರ್ಬಂಧ ಸಮವಸ್ತ್ರ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಾಲೆಗಳಲ್ಲಿ ಭುಗಿಲೆದ್ದಿರುವ ಶಿರವಸ್ತ್ರ (ಹಿಜಾಬ್)–ಕೇಸರಿ ಶಾಲು ವಿವಾದ ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದ ಬೆನ್ನಲ್ಲೇ, ಎಲ್ಲ ಸರ್ಕಾರಿ ಶಾಲೆ– ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯಗೊಳಿಸಿ ಪದವಿಪೂರ್ವ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಆ ಮೂಲಕ, ಹಿಜಾಬ್ ಮತ್ತು ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ವಿಧಿಸಿದೆ.

ಖಾಸಗಿ ಕಾಲೇಜುಗಳಲ್ಲಿ ಕೂಡ ಆಯಾ ಆಡಳಿತ ಮಂಡಳಿ ನಿರ್ಧರಿಸುವ ಸಮವಸ್ತ್ರವನ್ನೇ ವಿದ್ಯಾರ್ಥಿಗಳು ಧರಿಸಬೇಕು ಎಂದೂ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಆರಂಭವಾದ ಹಿಜಾಬ್ – ಕೇಸರಿ ಶಾಲು ವಿವಾದವನ್ನು ಕೆಲವು ಸಂಘಟನೆಗಳು ಇದೀಗ ರಾಜ್ಯವ್ಯಾಪಿ ಹರಡಿಸಿವೆ. ಹಿಜಾಬ್ ಧರಿಸಿ ಬಂದ ಮುಸ್ಲಿಂ ವಿದ್ಯಾರ್ಥಿನಿಯರನ್ನು ಪ್ರವೇಶ ದ್ವಾರದಲ್ಲೇ ತಡೆದಿದ್ದ ಕುಂದಾಪುರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು, ಪ್ರವೇಶ ನಿರಾಕರಿಸಿದ್ದರು. ಇದು ದೊಡ್ಡ ಮಟ್ಟದ ಸುದ್ದಿಯಾಗಿತ್ತು. ಹಿಜಾಬ್ ಧರಿಸಿದವರಿಗೆ ಪ್ರವೇಶ ನಿರ್ಬಂಧಿಸಿದ ವಿಷಯ ಹೈಕೋರ್ಟ್ ಮೆಟ್ಟಿಲೇರಿತ್ತು. ಇದೇ 8ರಂದು ಈ ವಿಷಯ ವಿಚಾರಣೆಗೆ ಬರಲಿದೆ.

ಹೀಗೆ, ಉಡುಪಿ, ಕುಂದಾಪುರದಲ್ಲಿ ಶುರುವಾಗಿದ್ದ ವಿವಾದವು ಬೆಳಗಾವಿ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಗೂ ವ್ಯಾಪಿಸಿದೆ. ಈ ಬೆಳವಣಿಗೆಗಳ ಬೆನ್ನಲ್ಲೇ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಶುಕ್ರವಾರ ಚರ್ಚೆ ನಡೆಸಿದ್ದರು. ಹೈಕೋರ್ಟ್ ನೀಡಬಹುದಾದ ಸೂಚನೆ ಆಧರಿಸಿ ಮುಂದಿನ ಹೆಜ್ಜೆ ಇಡುವ ಬಗ್ಗೆ ಚಿಂತನೆ ನಡೆಸಲಾಗಿತ್ತು ಎಂದೂ ಹೇಳಲಾಗಿತ್ತು. ಏತನ್ಮಧ್ಯೆ, ಶನಿವಾರವೇ ಸರ್ಕಾರ ಆದೇಶ ಹೊರಡಿಸಿದೆ.

'ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ– ವಿದ್ಯಾರ್ಥಿನಿಯರು ತಮ್ಮ ಧರ್ಮದ ಅನುಸಾರ ಆಚರಣೆಗಳನ್ನು ಪಾಲಿಸುತ್ತಿದ್ದಾರೆ. ಇದರಿಂದಾಗಿ ಶಾಲಾ ಕಾಲೇಜುಗಳಲ್ಲಿ ಸಮಾನತೆ ಮತ್ತು ಏಕತೆಗೆ ಧಕ್ಕೆ ಉಂಟಾಗುತ್ತಿದೆ' ಎಂದು ಆದೇಶದಲ್ಲಿ ಸರ್ಕಾರ ಹೇಳಿದೆ.

5ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 5

ಸಮವಸ್ತ್ರ ಇದ್ದವರಿಗೆ ಮಾತ್ರ ಅವಕಾಶ

ಉಡುಪಿ: ಕಾಲೇಜು ಸಮವಸ್ತ್ರ ಹೊರತುಪಡಿಸಿ ಬೇರೆ ವಸ್ತ್ರ ಸಂಹಿತೆಗೆ ಅವಕಾಶ ನೀಡದಿರಲು ಕುಂದಾಪುರ ಸರ್ಕಾರಿ ಪದವಿಪೂರ್ವ ಕಾಲೇಜು ಅಭಿವೃದ್ಧಿ ಸಮಿತಿ ಸಭೆ ನಿರ್ಧರಿಸಿದೆ. ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಅವರ ಸೂಚನೆಯಂತೆ ಶನಿವಾರ ಸಭೆ ನಡೆದಿದ್ದು, ಹಿಜಾಬ್ ಹಾಗೂ ಕೇಸರಿ ಶಾಲು ಧರಿಸಿ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಕಾಲೇಜು ಆವರಣದೊಳಗೆ ಕೂರಲು ಪ್ರತ್ಯೇಕ ವ್ಯವಸ್ಥೆ ಮಾಡಲು ನಿರ್ಧರಿಸಲಾಯಿತು.

'ಮೂರು ದಿನಗಳಿಂದ ಗೇಟ್ ಹೊರಗೆ ನಿಂತು ಪ್ರತಿಭಟನೆ ಮಾಡುತ್ತಿದ್ದ ವಿದ್ಯಾರ್ಥಿನಿಯರಿಗೆ ತೊಂದರೆ ಆಗಬಾರದು ಎಂಬ ದೃಷ್ಟಿಯಿಂದ ಕಾಲೇಜಿನ ಆವರಣದ ತರಗತಿ ಕೊಠಡಿಯಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿಕೊಡಬೇಕು. ಹಿಜಾಬ್ ಹಾಗೂ ಕೇಸರಿ ಶಾಲು ತೆಗೆದು ಬಂದವರಿಗೆ ಮಾತ್ರ ತರಗತಿಗೆ ಪ್ರವೇಶ ನೀಡಬೇಕು. ಕಾಲೇಜಿನ ಆವರಣದೊಳಗೆ ಯಾವುದೇ ಸಂಘಟನೆ ಹಾಗೂ ಸಾರ್ವಜನಿಕರಿಗೆ ಪ್ರವೇಶ ನೀಡದಿರಲು ನಿರ್ಣಯ ತೆಗೆದುಕೊಳ್ಳಲಾಗಿದೆ' ಎಂದು ಸಮಿತಿಯ ಸದಸ್ಯ ಮೋಹನದಾಸ್ ಶೆಣೈ ಮಾಹಿತಿ ನೀಡಿದರು. ಗಂಗೊಳ್ಳಿ ಎಸ್.ವಿ.ಎಸ್. ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕ- ರಕ್ಷಕ ಸಮಿತಿ ಹಾಗೂ ಆಡಳಿತ ಮಂಡಳಿಯ ಸಭೆ ನಡೆಸಿ ಕಾಲೇಜಿನಲ್ಲಿ ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು. ಹಿಜಾಬ್ ಧರಿಸಿ ಬಂದರೆ ಪ್ರವೇಶ ನೀಡದಿರುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಯಿತು.



ಹಿಜಾಬ್ ಹೆಸರಿನಲ್ಲಿ ಶಿಕ್ಷಣಕ್ಕೆ ಅಡ್ಡಿ ಮಾಡುವ ಮೂಲಕ ದೇಶದ ಹೆಣ್ಣುಮಕ್ಕಳ ಭವಿಷ್ಯವನ್ನು ಕಸಿಯಲಾಗುತ್ತಿದೆ

ರಾಹುಲ್ ಗಾಂಧಿ
ಸಂಸದ, ಕಾಂಗ್ರೆಸ್ ಮುಖಂಡ

ಪದವಿ ತರಗತಿ: ಅತಿಥಿ ಉಪನ್ಯಾಸಕರ ಮುಷ್ಕರ ತಂದಿಟ್ಟ ಸಂಕಷ್ಟ

'ಪಾಠ'ವೇ ಮುಗಿದಿಲ್ಲ; ಪರೀಕ್ಷೆಗೆ ಆತುರ!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪಾಠ- ಪ್ರವಚನ ಇನ್ನೂ ಮುಗಿದಿಲ್ಲ. ಅದಕ್ಕೂ ಮೊದಲೇ ಹಲವು ವಿಶ್ವವಿದ್ಯಾಲಯಗಳು, ತಮ್ಮ ವ್ಯಾಪ್ತಿಯ ಕಾಲೇಜುಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನ (2021-22) ಮೊದಲ ಸೆಮಿಸ್ಟರ್ ಪೂರ್ಣಗೊಳಿಸಿ, ಪರೀಕ್ಷೆಗಳನ್ನು ನಡೆಸಲು ಮುಂದಾಗಿವೆ!

2019-20 ಮತ್ತು 2020-21ನೇ ಸಾಲಿನಲ್ಲಿ ಕೋವಿಡ್ ಕಾರಣದಿಂದ ಭೌತಿಕ ತರಗತಿಗಳು ಬಹುತೇಕ ನಷ್ಟ ಆಗಿದ್ದವು. ಅಲ್ಲದೆ, ಜೂನ್‌ನಲ್ಲಿ ಆರಂಭಗೊಂಡು ಏಪ್ರಿಲ್‌ನಲ್ಲಿ ಮುಗಿಯಬೇಕಾಗಿದ್ದ ಶೈಕ್ಷಣಿಕ ವರ್ಷವೂ ಬದಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕೋವಿಡ್ ಎರಡನೇ ಅಲೆ ಕಡಿಮೆಯಾದ ಬಳಿಕ, ಅಕ್ಟೋಬರ್‌ನಲ್ಲಿ ಶೈಕ್ಷಣಿಕ ವರ್ಷ ಆರಂಭಗೊಂಡಿದೆ. ಮೊದಲ ಸೆಮಿಸ್ಟರ್ ಫೆಬ್ರುವರಿ ಅಂತ್ಯದೊಳಗೆ ಮುಗಿಯಬೇಕಿದೆ.

7ನೇ ಪುಟ ನೋಡಿ



ಪಠ್ಯಕ್ರಮ ಪೂರ್ಣಗೊಳಿಸಿದ ಬಳಿಕ ಪರೀಕ್ಷೆಗಳನ್ನು ನಡೆಸಬೇಕಿದೆ. ಈ ಬಗ್ಗೆ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆ ಶೀಘ್ರದಲ್ಲಿ ವಿಡಿಯೊ ಸಂವಾದ ನಡೆಸಲಾಗುವುದು

ಪಿ. ಪ್ರದೀಪ್
ಆಯುಕ್ತರು, ಉನ್ನತ ಶಿಕ್ಷಣ ಇಲಾಖೆ



ಅತಿಥಿ ಉಪನ್ಯಾಸಕರ ಮುಷ್ಕರದಿಂದ ಪದವಿ ಕಾಲೇಜುಗಳಲ್ಲಿ ಪಾಠ ಪ್ರವಚನ ಪೂರ್ಣಗೊಂಡಿಲ್ಲ. ಪರೀಕ್ಷೆಗೂ ಮೊದಲು ಈ ವಿಚಾರವನ್ನು ಖಚಿತಪಡಿಸಿಕೊಳ್ಳಬೇಕು

ಟಿ.ಎಂ. ಮಂಜುನಾಥ, ಅಧ್ಯಕ್ಷರು,
ಸರ್ಕಾರಿ ಕಾಲೇಜುಗಳ ಅಧ್ಯಾಪಕರ ಸಂಘ

'ಗ್ರಾಮ ಒನ್'ನಲ್ಲಿ ಪಡಿತರ ಚೀಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸುಮಾರು 4 ಲಕ್ಷ ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗೆ ಮಂಜೂರಾತಿ ನೀಡಲಾಗಿದ್ದು, ಅವುಗಳನ್ನು 'ಗ್ರಾಮ ಒನ್' ಸೇವಾ ಕೇಂದ್ರಗಳ ಮೂಲಕ ವಿತರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಗ್ರಾಮ ಒನ್' ಯೋಜನೆಯ ಪ್ರಗತಿ ಕುರಿತು ಯೋಜನೆ ಆರಂಭಗೊಂಡಿರುವ 12 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಈ ಸೇವಾ ಕೇಂದ್ರಗಳ ಕಂಪ್ಯೂಟರ್ ನಿರ್ವಾಹಕರ ಜೊತೆ ಶನಿವಾರ ಅವರು ವಿಡಿಯೊ ಸಂವಾದ ನಡೆಸಿದರು.

'ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಈ ಸೇವಾ ಕೇಂದ್ರಗಳನ್ನು ಆದ್ಯತೆಯ ಮೇಲೆ ಆರಂಭಿಸಬೇಕು ಮತ್ತು ಈ ಕೇಂದ್ರಗಳಲ್ಲಿ ಲಭ್ಯವಿರುವ ಸೇವೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಹೆಚ್ಚಿನ ಪ್ರಚಾರ ನೀಡಬೇಕು' ಎಂದು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು.

'ಸರ್ಕಾರ ತನ್ನ ಅಧಿಕಾರ ಮತ್ತು ಜವಾಬ್ದಾರಿಯನ್ನು ಈ ಸೇವಾ ಕೇಂದ್ರಗಳ ನಿರ್ವಾಹಕರಿಗೆ ವಹಿಸಿದೆ. ಹೀಗಾಗಿ, ಕೇಂದ್ರಗಳ ಸಿಬ್ಬಂದಿ ಜನರ ಸಮಸ್ಯೆಗಳನ್ನು ಸೌಜನ್ಯದಿಂದ ಆಲಿಸಿ, ಪರಿಹಾರ ನೀಡಬೇಕು' ಎಂದೂ ಸೂಚಿಸಿದರು.

'ಎಲ್ಲ ಮಾಹಿತಿಗಳನ್ನು ಜನರು ಕಾಗದ ರೂಪದಲ್ಲಿಯೇ ಪಡೆಯುವ ಅವಶ್ಯಕತೆಯಿಲ್ಲ. 'ಕುಟುಂಬ' ಜನಸೇವಕ ತಂತ್ರಾಂಶದಲ್ಲಿ ಮಾಹಿತಿಗಳು ಲಭಿಸುತ್ತವೆ' ಎಂದರು.

'ಕಾರ್ಯಕ್ಷಮತೆ'ಗೆ ಬಹುಮಾನದ ಗರಿ

'ಗ್ರಾಮ ಒನ್ ಕಂಪ್ಯೂಟರ್ ನಿರ್ವಾಹಕರನ್ನು ಪ್ರೋತ್ಸಾಹಿಸಲು ಮುಂದಿನ 12 ತಿಂಗಳು, ಪ್ರತಿ ವಾರ ಮೂವರು ಉತ್ತಮ ನಿರ್ವಾಹಕರನ್ನು ಆಯ್ಕೆ ಮಾಡಿ ಪ್ರಥಮ (₹ 10 ಸಾವಿರ), ದ್ವಿತೀಯ (₹ 7 ಸಾವಿರ), ತೃತೀಯ (₹ 5 ಸಾವಿರ) ಬಹುಮಾನವನ್ನು ಇ– ಆಡಳಿತ ಇಲಾಖೆ ವತಿಯಿಂದ ನೀಡಲಾಗುವುದು. ಜಿಲ್ಲಾಮಟ್ಟದಲ್ಲಿ ಉತ್ತಮ ಕಾರ್ಯಕ್ಷಮತೆಯನ್ನು ಪ್ರದರ್ಶಿಸಿದ ಜಿಲ್ಲೆಗೆ ತಿಂಗಳಿಗೊಮ್ಮೆ ₹ 1 ಲಕ್ಷ ಬಹುಮಾನ ನೀಡಲಾಗುವುದು' ಎಂದು ಮುಖ್ಯಮಂತ್ರಿ ತಿಳಿಸಿದರು.

ಕೋವಿಡ್ ಪ್ರಕರಣ ಮತ್ತಷ್ಟು ಇಳಿಕೆ 6

ಗಾಯಕಿ ಲತಾ ಮಂಗೇಶ್ಕರ್ ಸ್ಥಿತಿ ಮತ್ತೆ ಗಂಭೀರ

ಮುಂಬೈ (ಪಿಟಿಐ): ಹೆಸರಾಂತ ಹಿನ್ನೆಲೆ ಗಾಯಕಿ, 'ಗಾನ ಕೋಗಿಲೆ' ಲತಾ ಮಂಗೇಶ್ಕರ್ ಅವರ ಆರೋಗ್ಯ ಸ್ಥಿತಿ ಮತ್ತೆ ಹದಗೆಟ್ಟಿದ್ದು, ತೀವ್ರನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ.

92 ವರ್ಷದ ಅವರನ್ನು ಇಲ್ಲಿನ ಬೀಚ್ ಕ್ಯಾಂಡಿ ಆಸ್ಪತ್ರೆಗೆ ಸೇರಿಸಲಾಗಿದೆ. 'ಆರೋಗ್ಯ ಇನ್ನಷ್ಟು ಗಂಭೀರವಾಗಿದೆ. ವೆಂಟಿಲೇಟರ್‌ನಲ್ಲಿ ಇರಿಸಲಾಗಿದೆ' ಎಂದು ಆಸ್ಪತ್ರೆಯ ಡಾ.ಪ್ರತೀತ್ ಸಮ್ದಾನಿ ಶನಿವಾರ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇಬ್ರಾಹಿಂ ಸುತಾರ ನಿಧನ

ಬಾಗಲಕೋಟೆ: ಸರ್ವಧರ್ಮ ಪ್ರವಚನಕಾರ, ಮುಧೋಳ ತಾಲ್ಲೂಕು ಮಹಾಲಿಂಗಪುರದ ಇಬ್ರಾಹಿಂ ಸುತಾರ (81) ಶನಿವಾರ ಮುಂಜಾನೆ ತೀವ್ರ ಹೃದಯಾಘಾತದಿಂದ ನಿಧನರಾದರು.



ಎದೆ ನೋವಿನಿಂದ ಮನೆಯಲ್ಲಿ ಅಸ್ವಸ್ಥರಾದ ಅವರನ್ನು ಪುತ್ರ ಹುಮಾಯೂನ್ ಸ್ಥಳೀಯ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ. ಸುತಾರ ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಸರ್ಕಾರಿ ಗೌರವದೊಂದಿಗೆ ಮುಸ್ಲಿಂ ವಿಧಿ ವಿಧಾನಗಳ ಪ್ರಕಾರ ಅವರ ಅಂತ್ಯಕ್ರಿಯೆ ನಡೆಯಿತು.


ನುಡಿ ನಮನ 6

ಬಡತನ ನಿವಾರಣೆಗೆ ಇಂತಹ ಮಧ್ಯಸ್ಥಿಕೆಯ ಕ್ರಮ ಅಗತ್ಯ: ಬೊಮ್ಮಾಯಿ

ಸ್ತ್ರೀಶಕ್ತಿ ಗುಂಪುಗಳಿಗೆ ಅಮೆಜಾನ್ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಾಗಿರುವ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಇ-ಕಾಮರ್ಸ್ ವಹಿವಾಟಿನ ಮೂಲಕ ಮಾರುಕಟ್ಟೆ ಕಲ್ಪಿಸಲು ಸಂಜೀವಿನಿ– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಉತ್ತೇಜನ ಸಂಸ್ಥೆಯು ಇ-ಕಾಮರ್ಸ್ ರಂಗದ ದೈತ್ಯ ಸಂಸ್ಥೆ ಅಮೆಜಾನ್ ಜತೆ ಒಪ್ಪಂದ ಮಾಡಿಕೊಂಡಿದೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಉತ್ತೇಜನ ಸಂಸ್ಥೆಯ ಅಧಿಕಾರಿಗಳು ಹಾಗೂ ಅಮೆಜಾನ್ ಕಂಪನಿಯ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿ ಹಾಕಿದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪ್ರಸ್ತುತ ಸಂದರ್ಭದಲ್ಲಿ ಬಡತನ ನಮ್ಮ ದೊಡ್ಡ ಶತ್ರು. ಗ್ರಾಮೀಣ ಜನರನ್ನು ಬಡತನದಿಂದ ಮೇಲೆತ್ತುವ ಜತೆಯಲ್ಲೇ, ಬಡತನವನ್ನು ಸೋಲಿಸಬೇಕಿದೆ. ಆ ದಿಸೆಯಲ್ಲಿ ಇಂತಹ ಮಧ್ಯಸ್ಥಿಕೆ ಕ್ರಮಗಳು ಹೆಚ್ಚು ಪರಿಣಾಮ ಬೀರಲಿವೆ' ಎಂದರು.

ಈ ಯೋಜನೆಯಡಿ ಸಂಜೀವಿನಿ– ಸ್ವಸಹಾಯ ಗುಂಪುಗಳ ಸದಸ್ಯರು ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ಅಮೆಜಾನ್ ಕಂಪನಿಯು ಡಿಜಿಟಲ್ ಮಾರುಕಟ್ಟೆ ವ್ಯವಸ್ಥೆಯಡಿ ನೆರವು ನೀಡಲಿದೆ. ಗೃಹಬಳಕೆ, ಗೃಹಾಲಂಕಾರ, ಕಚೇರಿಗಳಲ್ಲಿ ಬಳಸುವ ವಸ್ತುಗಳು, ಸಂಸ್ಕರಿಸಿದ ಮತ್ತು ಮೌಲ್ಯವರ್ಧಿತ ಆಹಾರ ಪದಾರ್ಥಗಳಿಗೆ ಆನ್‌ಲೈನ್ ಮಾರುಕಟ್ಟೆ ಒದಗಿಸಲಾಗುತ್ತಿದೆ.

ಆರಂಭದಲ್ಲಿ ಸ್ವಸಹಾಯ ಗುಂಪುಗಳ 53 ಉತ್ಪನ್ನಗಳು ಅಮೆಜಾನ್ ಮೂಲಕ ಆನ್‌ಲೈನ್‌ನಲ್ಲಿ ಲಭ್ಯವಾಗಲಿವೆ. ಮಾರ್ಚ್ ಅಂತ್ಯದೊಳಗೆ 200 ಉತ್ಪನ್ನಗಳನ್ನು ಆನ್‌ಲೈನ್ ಮಾರುಕಟ್ಟೆಯಲ್ಲಿ ಒದಗಿಸುವ ಗುರಿ ಇದೆ. ಇದಕ್ಕಾಗಿ ಮೈಶುಗರ್ ಕಟ್ಟಡದಲ್ಲಿ ಸಂಗ್ರಹಾಗಾರವನ್ನೂ ತೆರೆಯಲಾಗಿದೆ ಎಂದು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಉತ್ತೇಜನ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಅಮೆಜಾನ್ ಕಂಪನಿ ಮುಖ್ಯಸ್ಥ ಚೇತನ್ ಕೃಷ್ಣಸ್ವಾಮಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಕೌಶಲಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಆಯುಕ್ತೆ ಮಂಜುಶ್ರೀ ಉಪಸ್ಥಿತರಿದ್ದರು.

'ಓಬವ್ವ ಆತ್ಮರಕ್ಷಣೆ ಕಲೆ' ತರಬೇತಿಗೆ ಇಂದು ಚಾಲನೆ

ಬೆಂಗಳೂರು: ಸರ್ಕಾರ ನಡೆಸುತ್ತಿರುವ ವಿವಿಧ ವಸತಿ ಶಾಲೆಗಳ 1.82 ಲಕ್ಷ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆಗಾಗಿ ಕರಾಟೆ, ಟೇಕ್ವಾಂಡೊ ಮತ್ತು ಜೂಡೊ ತರಬೇತಿ ನೀಡುವ 'ಓಬವ್ವ ಆತ್ಮರಕ್ಷಣೆ ಕಲೆ' ತರಬೇತಿ ನೀಡಲು ಸರ್ಕಾರ ಮುಂದಾಗಿದೆ.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, 'ಮೆಟ್ರಿಕ್ ನಂತರದ ತರಗತಿಗಳ ವಿದ್ಯಾರ್ಥಿನಿಯರಿಗೆ ಈ ತರಬೇತಿ ನೀಡಲಾಗುವುದು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 629, ಸಮಾಜ ಕಲ್ಯಾಣ ಇಲಾಖೆಯ 257 ವಸತಿ ನಿಲಯಗಳು ಮತ್ತು ಕ್ರೈಸ್ ಅಧೀನದ 818 ವಸತಿ ಶಾಲೆಗಳಲ್ಲಿ ಆತ್ಮರಕ್ಷಣೆ ಕಲೆ ತರಬೇತಿ ಆರಂಭವಾಗಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ತರಬೇತಿಗೆ ಚಾಲನೆ ನೀಡುವರು' ಎಂದರು.

ಕ್ರಿಕೆಟ್: ಭಾರತಕ್ಕೆ ಇಂದು 1000ನೇ ಪಂದ್ಯ

ಅಹಮದಾಬಾದ್(ಪಿಟಿಐ): ಭಾರತ ಕ್ರಿಕೆಟ್ ತಂಡವು ಭಾನುವಾರ 1000ನೇ ಏಕದಿನ ಕ್ರಿಕೆಟ್ ಪಂದ್ಯ ಆಡಲಿದೆ.

ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಮೈದಾನದಲ್ಲಿ ವೆಸ್ಟ್ ಇಂಡೀಸ್ ಎದುರಿನ ಮೊದಲ ಪಂದ್ಯದಲ್ಲಿ ಆಡುವ ಮೂಲಕ ಈ ದಾಖಲೆ ಬರೆಯಲಿದೆ. ಈ ಸಾಧನೆ ಮಾಡಿದ ಮೊಟ್ಟಮೊದಲ ತಂಡವೆಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. 48 ವರ್ಷಗಳ ಹಿಂದೆ ಅಜಿತ್ ವಾಡೇಕರ್ ನಾಯಕತ್ವದ ಭಾರತ ತಂಡವು ಲೀಡ್ಸ್‌ನಲ್ಲಿ ಇಂಗ್ಲೆಂಡ್ ಎದುರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿತ್ತು.

ರೋಹಿತ್ ಶರ್ಮಾ ನಾಯಕತ್ವದ ಭಾರತ ಮತ್ತು ಕೀರನ್ ಪೊಲಾರ್ಡ್ ಬಳಗವು ಇಲ್ಲಿ ಮೂರು ಪಂದ್ಯಗಳನ್ನು ಆಡಲಿವೆ. ನಂತರ ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಮೂರು ಟಿ20 ಪಂದ್ಯಗಳನ್ನು ಆಡಲಿವೆ. ಇಶಾನ್ ಕಿಶನ್ ಅವರು ರೋಹಿತ್ ಶರ್ಮಾ ಅವರೊಂದಿಗೆ ಇನಿಂಗ್ಸ್ ಆರಂಭಿಸುವರು.

ಕಸ ನಿರ್ವಹಣೆ: ಶುಲ್ಕ ಸಂಗ್ರಹಕ್ಕೆ ಸಿಪಿಎಂ ವಿರೋಧ

ಬೆಂಗಳೂರು: 'ವಿದ್ಯುತ್ ಬಿಲ್ ಮೂಲಕ ಕಸ ನಿರ್ವಹಣೆ ಶುಲ್ಕ ಸಂಗ್ರಹಕ್ಕೆ ಮುಂದಾಗಿರುವ ಪಾಲಿಕೆ ನಿರ್ಧಾರವನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳ ಸದಸ್ಯರು ಪಾಲಿಕೆ ಕಚೇರಿ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

'ಆಸ್ತಿ ತೆರಿಗೆ ಜೊತೆಯಲ್ಲೇ ಮಾಲೀಕರಿಂದ ಕಸ ನಿರ್ವಹಣಾ ಸುಂಕ ಸಂಗ್ರಹಿಸಲಾಗುತ್ತಿದೆ. ಈಗ ಮತ್ತೆ ಕಸಕ್ಕೆ ಶುಲ್ಕ ವಿಧಿಸುತ್ತಿರುವುದು ಅಪರಾಧ. ಸರ್ಕಾರ ಕಸದ ಮಾಫಿಯ ಜತೆ ಶಾಮೀಲಾಗಿ ಈ ಕ್ರಮಕ್ಕೆ ಮುಂದಾಗಿದೆ' ಎಂದು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ ಆರೋಪಿಸಿದರು. 'ಸರ್ಕಾರವು ಈ ಪರಿಸ್ಥಿತಿಯಲ್ಲಿ ಜನರ ಪರ ನಿಲ್ಲದೆ, ಜನವಿರೋಧಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು ಖಂಡನೀಯ. ಈ ಅರ್ಥಹೀನ ನಿರ್ಧಾರಗಳನ್ನು ಕೂಡಲೇ ಕೈಬಿಡಬೇಕು' ಎಂದು ಆಗ್ರಹಿಸಿದರು.

ಕೂಡ್ಲು ಮತ್ತು ಸಿಂಗಸಂದ್ರದಲ್ಲಿ ಉದ್ಯಾನಕ್ಕೆ ಕಾಯ್ದಿರಿಸಿದ್ದ ಪ್ರದೇಶದಲ್ಲಿ ಕಾರ್ಯಾಚರಣೆ

ಬಿಡಿಎ: ಅನಧಿಕೃತ ಕಟ್ಟಡಗಳ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೂಡ್ಲು ಮತ್ತು ಸಿಂಗಸಂದ್ರದಲ್ಲಿ ಉದ್ಯಾನ ನಿರ್ಮಿಸಲು ಕಾಯ್ದಿರಿಸಿದ್ದ ಜಾಗದಲ್ಲಿ ನಿರ್ಮಾಣಗೊಂಡಿದ್ದ 15 ಕ್ಕೂ ಹೆಚ್ಚು ತಾತ್ಕಾಲಿಕ ಕಟ್ಟಡಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳು ಶನಿವಾರ ತೆರವುಗೊಳಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕುಗಳ ವ್ಯಾಪ್ತಿಯ ಕೂಡ್ಲು ಮತ್ತು ಸಿಂಗಸಂದ್ರದಲ್ಲಿ ಏರ್ ಕ್ರಾಫ್ಟ್ ಎಂಪ್ಲಾಯೀಸ್ ಹೌಸಿಂಗ್ ಸೊಸೈಟಿಯವರು ಬಿಡಿಎ ಭೂಸ್ವಾಧೀನ ಮಾಡಿಕೊಟ್ಟಿದ್ದ ಜಾಗದಲ್ಲಿ ಬಡಾವಣೆ ನಿರ್ಮಾಣ ಮಾಡಿದ್ದರು. ನಿಯಮಗಳ ಪ್ರಕಾರ ಈ ಬಡಾವಣೆಗಳಲ್ಲಿ ಒಟ್ಟು 39 ಉದ್ಯಾನಗಳ ನಿರ್ಮಾಣಕ್ಕೆ ಜಾಗವನ್ನು ಮೀಸಲಿಡಲಾಗಿತ್ತು. 2015ರಲ್ಲಿ 16 ಉದ್ಯಾನಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗಿತ್ತು.

ಉದ್ಯಾನಕ್ಕೆ ಮೀಸಲಿಟ್ಟಿದ್ದ 18 ಸ್ಥಳಗಳಲ್ಲಿ ಅನಧಿಕೃತವಾಗಿ ಶೆಡ್‌ಗಳು ಮತ್ತು ಆರ್‌ಸಿಸಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿತ್ತು. ಅನಧಿಕೃತವಾಗಿ ನಿರ್ಮಾಣಗೊಂಡಿದ್ದ 15 ತಾತ್ಕಾಲಿಕ ಶೆಡ್‌ಗಳು, 4 ಅಂಗಡಿಗಳು, 20 ಕ್ಕೂ ಹೆಚ್ಚು ಮನೆಗಳು, ಪ್ರಾರ್ಥನಾ ಮಂದಿರದಿಂದ ಒತ್ತುವರಿಯಾಗಿ ನಿರ್ಮಾಣಗೊಂಡಿದ್ದ ಕಟ್ಟಡ ಸೇರಿದಂತೆ 30 ಕ್ಕೂ ಹೆಚ್ಚು ಕಟ್ಟಡಗಳನ್ನು ಬಿಡಿಎ ಅಧಿಕಾರಿಗಳು ತೆರವುಗೊಳಿಸಿದರು.

ವಿಶೇಷ ಕಾರ್ಯಪಡೆಯ ಡಿವೈಎಸ್‌ಪಿ ರವಿಕುಮಾರ್ ಮತ್ತು ಕಾರ್ಯಪಾಲಕ ಎಂಜಿನಿಯರ್ ಕೆ.ಮಹದೇವ ಗೌಡ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆಯಿತು. ಒತ್ತುವರಿಯನ್ನು ತೆರವುಗೊಳಿಸಿದ ಜಾಗ ಸೇರಿದಂತೆ 18 ಉದ್ಯಾನಗಳಿಗೆ ಸೇರಿದ ಒಟ್ಟು 25 ಎಕರೆ 6 ಗುಂಟೆ ಜಾಗವನ್ನು ಬಿಡಿಎ ಅಧಿಕಾರಿಗಳು ಮತ್ತೆ ಸ್ವಾಧೀನಕ್ಕೆ ಪಡೆದು ಈ ಜಾಗವನ್ನು ಉದ್ಯಾನ ನಿರ್ಮಾಣಕ್ಕಾಗಿ ಬಿಬಿಎಂಪಿಗೆ ಹಸ್ತಾಂತರಿಸುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಹಸ್ತಾಂತರ ಪ್ರಕ್ರಿಯೆ ಸದ್ಯದಲ್ಲೇ ಪೂರ್ಣಗೊಳ್ಳಲಿದೆ ಎಂದು ಬಿಡಿಎ ತಿಳಿಸಿದೆ.

> ಒತ್ತುವರಿ ಮಾಡಿಕೊಂಡಿರುವವರು ಸ್ವಯಂಪ್ರೇರಿತರಾಗಿ ಬಿಡಿಎ ಜಾಗವನ್ನು ಮರಳಿಸಬೇಕು. ಇಲ್ಲವಾದರೆ, ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಿದೆ
>
> **ಎಸ್.ಆರ್.ವಿಶ್ವನಾಥ್,** ಬಿಡಿಎ ಅಧ್ಯಕ್ಷ



ಉದ್ಯಾನಕ್ಕೆ ಮೀಸಲಿಟ್ಟ ಜಾಗದಲ್ಲಿ ನಿರ್ಮಾಣವಾಗಿದ್ದ ಕಟ್ಟಡಗಳನ್ನು ಬಿಡಿಎ ಅಧಿಕಾರಿಗಳು ಶನಿವಾರ ತೆರವುಗೊಳಿಸಿದರು

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, 'ಪ್ರಾಧಿಕಾರಕ್ಕೆ ಸೇರಿದ ಸಾವಿರಾರು ಎಕರೆಗಳಷ್ಟು ಜಾಗವನ್ನು ವಶಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಚುರುಕುಗೊಳಿಸಲಾಗುತ್ತಿದೆ. ಒತ್ತುವರಿ ಮಾಡಿಕೊಂಡಿರುವವರು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

'ರೇರಾ ಕಾಯ್ದೆ ಬಲಗೊಳಿಸಿ'

ಬೆಂಗಳೂರು:'ಮನೆ ಅಥವಾ ನಿವೇಶನಗಳನ್ನು ಖರೀದಿಸುವ ಗ್ರಾಹಕರ ನೆರವಿಗೆ ಇರುವ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು (ರೇರಾ) ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ' ಎಂದು ಕರ್ನಾಟಕ ಮನೆ ಗ್ರಾಹಕರ ವೇದಿಕೆ ಸಂಚಾಲಕ ಧನಂಜಯ ಪದ್ಮನಾಭಾಚಾರ್ ದೂರಿದ್ದಾರೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಸಾವಿರಾರು ಜನ ಕೆಲ ರಿಯಲ್ ಎಸ್ಟೇಟ್ ಮಾಫಿಯಾಗಳಿಗೆ ಸಿಲುಕಿ, ಹಣ ಕಳೆದುಕೊಂಡಿದ್ದಾರೆ. ಖರೀದಿಸಿದ ಜಾಗಗಳಿಗೆ ಸೂಕ್ತ ದಾಖಲೆಗಳನ್ನು ಕೊಡದೆ, ರಿಯಲ್ ಎಸ್ಟೇಟ್‌ನವರು ವಂಚಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಮೋಸ ಹೋದವರು ಮಾಲೀಕರ ವಿರುದ್ಧ ಠಾಣೆಗಳಲ್ಲಿ ದೂರು ಕೊಟ್ಟರೆ, ಪ್ರಕರಣ ದಾಖಲಿಸಿಕೊಳ್ಳುವುದಿಲ್ಲ. ಎಫ್‌ಐಆರ್ ಆದರೂ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದಾಗಿ ಗ್ರಾಹಕರಿಗೆ ನ್ಯಾಯ ಸಿಗುತ್ತಿಲ್ಲ. ಈ ಮೋಸಗಳಿಗೆ ಕಡಿವಾಣ ಹಾಕಲು ಜಾರಿ ಮಾಡಿರುವ 'ರೇರಾ ಕಾಯ್ದೆ'ಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು' ಎಂದು ಆಗ್ರಹಿಸಿದರು.

'ಮೇಕೆದಾಟು ಹೋರಾಟ ಮತ್ತೆ ತೀವ್ರ'



ಬೆಂಗಳೂರು: 'ಮೇಕೆದಾಟು ಮತ್ತು ಮಹದಾಯಿ ಯೋಜನೆಗಳು ಜಾರಿಯಾಗುವ ತನಕ ಹೋರಾಟ ನಿಲ್ಲುವುದಿಲ್ಲ. ಕೋವಿಡ್ ಕಾರಣದಿಂದ ಸ್ಥಗಿತಗೊಂಡಿರುವ ಹೋರಾಟವನ್ನು ಮುಂದಿನ ದಿನಗಳಲ್ಲಿ ತೀವ್ರಗೊಳಿಸಲಾಗುವುದು' ಎಂದು ಕರುನಾಡ ವಿಜಯಸೇನೆ ಅಧ್ಯಕ್ಷ ಎಚ್.ಎನ್.ದೀಪಕ್ ಹೇಳಿದರು.

ಕರುನಾಡ ವಿಜಯಸೇನೆಯ ಬೆಂಗಳೂರು ಜಿಲ್ಲಾ ಘಟಕದ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮೇಕೆದಾಟು ವಿಚಾರದಲ್ಲಿ ತಮಿಳುನಾಡು ಪದೇ ಪದೇ ಕ್ಯಾತೆ ತೆಗೆಯುತ್ತಿದೆ. ಸಮುದ್ರ ಪಾಲಾಗುವ ನೀರನ್ನು ತಡೆದು, ಬೆಂಗಳೂರು ನಗರ ಸೇರಿದಂತೆ ಆರು ಜಿಲ್ಲೆಯ ಜನರಿಗೆ ಕುಡಿಯುವ ನೀರು ಕಲ್ಪಿಸಬಹುದು. ರೈತರ ಕೃಷಿಗೆ ಅನುಕೂಲ, ವಿದ್ಯುತ್ ಉತ್ಪಾದನೆಗೂ ಸಹಕಾರಿಯಾಗಲಿದೆ' ಎಂದರು. 'ಬೆಂಗಳೂರಿನಲ್ಲಿ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ಅನ್ಯರಾಜ್ಯದವರು ಬದುಕು ಕಟ್ಟಿಕೊಂಡಿದ್ದಾರೆ. ಅವರಿಗೂ ಕುಡಿಯುವ ನೀರು ಬೇಕಾಗಿದೆ' ಎಂದರು.

'ತಮಿಳುನಾಡು ವಿಚಾರದಲ್ಲಿ ಅಲ್ಲಿನ ಜನಪ್ರತಿನಿಧಿಗಳು ಪಕ್ಷಭೇದ ಮರೆತು ಎಲ್ಲರೂ ಒಂದಾಗುತ್ತಾರೆ. ಆದರೆ, ರಾಜ್ಯದ ನಾಯಕರು ಹಿಂಜರಿಯುವುದು ಏಕೆ? ಕನ್ನಡ ನೆಲ, ಜಲ, ಭಾಷೆ ವಿಷಯ ಬಂದಾಗ ಬುದ್ಧಿವಂತಿಕೆಯಿಂದ ನ್ಯಾಯ ದೊರಕಿಸಿಕೊಡಬೇಕು' ಎಂದರು.

ಆನೇಕಲ್: ಸಂಭ್ರಮದ ಜಾತ್ರಾ ಉತ್ಸವ

ಆನೇಕಲ್: ಪಟ್ಟಣದ ಕಲ್ಯಾಣ ಮಂಟಪ ರಸ್ತೆಯ ವೇಣುಗೋಪಾಲ ಸ್ವಾಮಿ ಜಾತ್ರೆ ಮಹೋತ್ಸವವು ಶನಿವಾರ ನಡೆಯಿತು. ವೇಣುಗೋಪಾಲ ಸ್ವಾಮಿ ದೇವಾಲಯದಲ್ಲಿ ವಿಶೇಷ ಅಲಂಕಾರ, ಪೂಜೆ ಏರ್ಪಡಿಸಲಾಗಿತ್ತು. ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದ ನಂತರ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇವಾಲಯದ ಪ್ರಾಂಗಣದಲ್ಲಿ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಯು ಮನೆ ಮನೆಗಳ ಬಳಿ ಬರುತ್ತಿದ್ದಂತೆ ಭಕ್ತರು ಸ್ವಾಮಿಗೆ ಪೂಜೆ ಸಲ್ಲಿಸಿದರು. ಪಟ್ಟಣದ ತ್ಯಾಗರಾಜ ರಸ್ತೆ, ಥಳೀ ರಸ್ತೆಗಳಲ್ಲಿ ಉತ್ಸವವು ಸಾಗಿತು. ರಥೋತ್ಸವದ ಅಂಗವಾಗಿ ಹನುಮಂತೋತ್ಸವ, ಪೂಲಂಗಿ ಉತ್ಸವ, ಶೇಷ ವಾಹನೋತ್ಸವ, ಕಲ್ಯಾಣೋತ್ಸವ, ಪ್ರಾಕಾರೋತ್ಸವ, ಶ್ರೀಗಂಧೋತ್ಸವ ಆಯೋಜಿಸಲಾಗಿತ್ತು. ಬೆಳಗಿನಿಂದಲೂ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

ಪಿಐಎಲ್ ದಾಖಲಿಸಲು ಮನವಿ

ಬೆಂಗಳೂರು: ಅಘನಾಶಿನಿ ನದಿ ಪಾತ್ರದ ಗ್ರಾಮಗಳಲ್ಲಿ ಅಕ್ರಮ ಮರಳು, ಚಿಪ್ಪು ಗಣಿಗಾರಿಕೆ ಸೇರಿದಂತೆ ಪರಿಸರ ವಿರೋಧಿ ಚಟುವಟಿಕೆಗಳು ಹೆಚ್ಚುತ್ತಿದ್ದು ಇವುಗಳನ್ನು ತಡೆಯಲು ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಲಾದ ಮನವಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ (ಕೆಎಸ್‌ಎಲ್‌ಎಸ್‌ಎ) ಗಂಭೀರವಾಗಿ ಪರಿಗಣಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮಘಟ್ಟದಲ್ಲಿ ಹರಿಯುವ ಅಘನಾಶಿನಿ ನದಿ ಸಂರಕ್ಷಣೆಗೆ ಸಂಬಂಧಿಸಿದಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳುವ ದಿಸೆಯಲ್ಲಿ ಕೆಎಸ್‌ಎಲ್‌ಎಸ್‌ಎ ಹೈಕೋರ್ಟ್ ಕಾನೂನು ಸೇವಾ ಸಮಿತಿಗೆ ಪತ್ರ ಬರೆದಿದೆ. 'ಅಘನಾಶಿನಿ ನದಿ ಪಾತ್ರದಲ್ಲಿನ ಅಕ್ರಮ ಚಟುವಟಿಕೆಗಳ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದರೂ ಕ್ರಮ ಕೈಗೊಂಡಿಲ್ಲ. ನದಿ ಸಂರಕ್ಷಿಸುವ ಕುರಿತು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸುವ ರೀತಿಯಲ್ಲಿ ಪಿಐಎಲ್ ದಾಖಲಿಸಬೇಕು' ಎಂದು ಕೋರಿ ಬೆಳಗಾವಿಯ ಸಾಮಾಜಿಕ ಕಾರ್ಯಕರ್ತ ಹಾಗೂ ವಕೀಲ ಭೀಮನಗೌಡ ಕೆಎಸ್‌ಎಲ್‌ಎಸ್‌ಎಗೆ ಮನವಿ ಮಾಡಿದ್ದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ

ವಸತಿ ಸಮುಚ್ಚಯಗಳಲ್ಲಿ ಖಾತಾ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವ್ಯಾಪ್ತಿಗೆ ಬಾರದ ವಸತಿ ಸಮುಚ್ಚಯಗಳಲ್ಲಿ ಖಾತಾ ಮೇಳ ಏರ್ಪಡಿಸಿ ಆಸ್ತಿ ತೆರಿಗೆ ವ್ಯಾಪ್ತಿಗೆ ತರಬೇಕು' ಎಂದು ಪಾಲಿಕೆ ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದರು.

ಆಸ್ತಿ ತೆರಿಗೆ ಸಂಬಂಧ ಬೆಂಗಳೂರು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಒಕ್ಕೂಟದ ಜೊತೆ ಶನಿವಾರ ಸಭೆ ನಡೆಸಿದ ಅವರು, 'ಈ ಪೈಕಿ ನಗರದಲ್ಲಿ ಪ್ರಾಯೋಗಿಕವಾಗಿ 20 ವಸತಿ ಸಮುಚ್ಚಯಗಳನ್ನು ಗುರುತಿಸಿ ಈ ಕಾರ್ಯಕ್ರಮ ಜಾರಿಗೊಳಿಸಬೇಕು' ಎಂದರು.



ಆಸ್ತಿ ತೆರಿಗೆ ಸಂಗ್ರಹವನ್ನು ಚುರುಕುಗೊಳಿಸುವ ಸಂಬಂಧ ಬೆಂಗಳೂರು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಒಕ್ಕೂಟದ ಪದಾಧಿಕಾರಿಗಳ ಜತೆ ಗೌರವ್ ಗುಪ್ತ ಸಭೆ ನಡೆಸಿದರು. ವಿಶೇಷ ಆಯುಕ್ತ (ಕಂದಾಯ) ಡಾ. ದೀಪಕ್ ಇದ್ದರು

'ಪಾಲಿಕೆಗೆ ಪ್ರಮುಖ ಆದಾಯದ ಮೂಲ ಆಸ್ತಿ ತೆರಿಗೆ. ಹೆಚ್ಚು ಆಸ್ತಿ ತೆರಿಗೆ ಸಂಗ್ರಹಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು. ಈ ಪೈಕಿ ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರುವ ಎಲ್ಲಾ ಆಸ್ತಿಗಳನ್ನು ಗುರುತಿಸಿ ತೆರಿಗೆ ವ್ಯಾಪ್ತಿಗೆ ತರಲು ಸೂಕ್ತ ಕ್ರಮ ವಹಿಸಬೇಕು' ಎಂದು ತಿಳಿಸಿದರು.

'ನಗರದಲ್ಲಿ ತ್ವರಿತಗತಿಯಲ್ಲಿ ಖಾತಾ ಪ್ರಕ್ರಿಯೆಗಳು ಜಾರಿಯಾಗಬೇಕೆಂಬ ಉದ್ದೇಶದಿಂದ ಆಯಾ ವಲಯಗಳಿಗೆ ಖಾತಾ ನೀಡುವ ಜವಾಬ್ದಾರಿ ನೀಡಿ ಅಧಿಕಾರ ವಿಕೇಂದ್ರಿಕರಣಗೊಳಿಸಲಾಗಿದೆ. ಖಾತೆ ನೀಡುವ ಕೆಲಸ ಮಾಡಿದಾಗ ಆಸ್ತಿ ತೆರಿಗೆ ವ್ಯಾಪ್ತಿಗೆ ಹೆಚ್ಚು ಹೆಚ್ಚು ಆಸ್ತಿಗಳು ಸೇರ್ಪಡೆಯಾಗಿ ಗರಿಷ್ಠ ಪ್ರಮಾಣದಲ್ಲಿ ಆಸ್ತಿ ತೆರಿಗೆ ಪಾಲಿಕೆಗೆ ಬರಲಿದೆ' ಎಂದು ತಿಳಿಸಿದರು.

ನಗರದಲ್ಲಿ ಒಂದು ವಸತಿ ಸಮುಚ್ಚಯದಲ್ಲಿನ ಎಲ್ಲಾ ಆಸ್ತಿಗಳಿಗೆ ಒಂದೇ ರೀತಿಯ ಖಾತೆಯಿರಬೇಕು. ಈ ಸಂಬಂಧ ಕಂದಾಯ ಅಧಿಕಾರಿಗಳು ಹೆಚ್ಚು ಕಾರ್ಯಪ್ರವೃತ್ತರಾಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿ.ಎಂ. ಬೊಮ್ಮಾಯಿ ನಾಳೆ ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ನವದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದು, ಕೇಂದ್ರ ಸರ್ಕಾರದಲ್ಲಿ ಬಾಕಿ ಇರುವ ರಾಜ್ಯದ ಪ್ರಮುಖ ಯೋಜನೆಗಳ ಕುರಿತು ಕರ್ನಾಟಕದ ಸಂಸದರ ಜತೆ ಸಭೆ ನಡೆಸಲಿದ್ದಾರೆ.

ಸೋಮವಾರ ಬೆಳಿಗ್ಗೆ 9.40ರ ಸುಮಾರಿಗೆ ದೆಹಲಿ ತಲುಪುವ ಬೊಮ್ಮಾಯಿ, ಕೇಂದ್ರದ ಕೆಲವು ಸಚಿವರನ್ನು ಭೇಟಿ ಮಾಡಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ರಾಜ್ಯದ ಎಲ್ಲ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರ ಜತೆ ಸಭೆ ನಡೆಸುವರು. ಕೇಂದ್ರ ಸರ್ಕಾರದಲ್ಲಿ ಸಚಿವರಾಗಿರುವ ರಾಜ್ಯದ ಸಂಸದರೂ ಈ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ಮುಖ್ಯಮಂತ್ರಿಯವರ ಕಾರ್ಯಾಲಯ ತಿಳಿಸಿದೆ.

ಸಂಸದರ ಜತೆ ಸಭೆ ಮುಗಿಸಿದ ಬಳಿಕ ಮುಖ್ಯಮಂತ್ರಿಯವರು ದೆಹಲಿಯ ಕರ್ನಾಟಕ ಭವನದಲ್ಲಿ ವಾಸ್ತವ್ಯ ಹೂಡುವರು. ಅಂತರರಾಜ್ಯ ಜಲ ವಿವಾದಗಳಲ್ಲಿ ರಾಜ್ಯವನ್ನು ಪ್ರತಿನಿಧಿಸುವ ವಕೀಲರ ತಂಡದ ಜತೆ ಬೊಮ್ಮಾಯಿ ಮಂಗಳವಾರ ಬೆಳಿಗ್ಗೆ ಸಭೆ ನಡೆಸುವರು. ಬಳಿಕ ಕೇಂದ್ರದ ಸಚಿವರನ್ನು ಭೇಟಿ ಮಾಡುವರು. ದೆಹಲಿಯಿಂದ ಹಿಂದಿರುಗುವ ಸಮಯ ಇನ್ನೂ ನಿಗದಿಯಾಗಿಲ್ಲ.

ಫೆ.9ರಿಂದ ಬಜೆಟ್ ಪೂರ್ವಭಾವಿ ಸಭೆ

ಬೆಂಗಳೂರು: 2022–23ನೇ ಆರ್ಥಿಕ ವರ್ಷದ ಬಜೆಟ್ ಸಿದ್ಧಪಡಿಸುವುದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 9ರಿಂದ 25ರವರೆಗೆ ಎಂಟು ದಿನಗಳ ಕಾಲ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಂಘ, ಸಂಸ್ಥೆಗಳ ಪ್ರತಿನಿಧಿಗಳ ಜತೆ ಬಜೆಟ್ ಪೂರ್ವಭಾವಿ ಸಭೆಗಳನ್ನು ನಡೆಸಲಿದ್ದಾರೆ.

ಇದೇ 9ರಿಂದ 11ರವರೆಗೆ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಚರ್ಚೆ ನಡೆಯಲಿದೆ. 14 ಮತ್ತು 15ರಂದು ಕೂಡ ಇಲಾಖಾವಾರು ಚರ್ಚೆ ಮುಂದುವರಿಯಲಿದೆ. ಇದೇ 21ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ರೈತ ಸಂಘಟನೆಗಳು ಮತ್ತು ಸಂಸ್ಥೆಗಳ ಪ್ರತಿನಿಧಿಗಳ ಜತೆ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿಯವರ ಸಚಿವಾಲಯ ತಿಳಿಸಿದೆ.

ಇದೇ 22ರಂದು ವಾಣಿಜ್ಯ, ಸಾರಿಗೆ, ಅಬಕಾರಿ, ರಿಯಲ್ ಎಸ್ಟೇಟ್ ಉದ್ಯಮಕ್ಕೆ ಸಂಬಂಧಿಸಿದ ಸಂಘ, ಸಂಸ್ಥೆಗಳು ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರತಿನಿಧಿಗಳ ಜತೆ ಮುಖ್ಯಮಂತ್ರಿ ಚರ್ಚೆ ನಡೆಸುವರು. 22ರಂದು ವರಮಾನ ಸಂಗ್ರಹದ ಮೂಲಗಳಾದ ವಾಣಿಜ್ಯ ತೆರಿಗೆ, ಅಬಕಾರಿ, ಸಾರಿಗೆ, ನೋಂದಣಿ ಮತ್ತು ಮುದ್ರಾಂಕ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸುವರು.

ಆಯಾ ಇಲಾಖೆಯ ನಾಲ್ವರು ಹಿರಿಯ ಅಧಿಕಾರಿಗಳೊಂದಿಗೆ ಬಜೆಟ್ ಪೂರ್ವಭಾವಿ ಚರ್ಚೆಗೆ ಬರುವಂತೆ ಎಲ್ಲ ಸಚಿವರಿಗೂ ಆಹ್ವಾನ ನೀಡಲಾಗಿದೆ.

ಸದಸ್ಯತ್ವ ನೋಂದಣಿ: ಡಿಕೆಶಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಡಿಜಿಟಲ್ ಸದಸ್ಯತ್ವ ನೋಂದಣಿ ಹಾಗೂ ನಿಯಂತ್ರಣ ಕೊಠಡಿಯ ಸದಸ್ಯರ ಜೊತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಶನಿವಾರ ಸಭೆ ನಡೆಸಿದರು.

ಸದಸ್ಯತ್ವ ನೋಂದಣಿಗೆ ಸಂಬಂಧಿಸಿ ಎಐಸಿಸಿ ಉಸ್ತುವಾರಿಗಳಾದ ಪ್ರದೇಶ್ ರಿಟರ್ನಿಂಗ್ ಆಫೀಸರ್ ಸುದರ್ಶನ್ ನಾಚಿಯಪ್ಪನ್, ಜಾನ್ಸನ್ ಅಬ್ರಹಾಂ, ಮೋತಿಲಾಲ್ ದೇವಗನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಸದಸ್ಯತ್ವ ನೋಂದಣಿ ಕರ್ನಾಟಕದ ಸಂಚಾಲಕ ಆರ್.ವಿ. ವೆಂಕಟೇಶ್, ಡಿಜಿಟಲ್ ಸದಸ್ಯತ್ವ ನೋಂದಣಿ ಕರ್ನಾಟಕದ ಮುಖ್ಯ ಸಮನ್ವಯಕಾರ ರಘುನಂದನ್ ರಾಮಣ್ಣ ಸಭೆಯಲ್ಲಿದ್ದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗದವರ ಕ್ಷೇತ್ರಗಳಲ್ಲಿ ಪಕ್ಷಕ್ಕೆ ಶಕ್ತಿ ತುಂಬುವ ಬಗ್ಗೆ ಚರ್ಚಿಸಲು ಎಐಸಿಸಿಯಿಂದ ತಂಡ ಬಂದಿತ್ತು' ಎಂದರು.

ಹಿಜಾಬ್ ಕುರಿತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನೀಡಿದ ಹೇಳಿಕೆ ಪ್ರತಿಕ್ರಿಯಿಸಿದ ಅವರು, 'ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ ಮುಖ್ಯಮಂತ್ರಿ, ರಾಜ್ಯದ ಆಡಳಿತ ನಡೆಸುತ್ತಿದ್ದಾರೆ. ಅವರ ಪಕ್ಷದವರು ಏನು ಹೇಳಿದ್ದಾರೆ. ದೇಶದ ಸಂವಿಧಾನದಂತೆ ಆಡಳಿತ ನಡೆಸುತ್ತಿದ್ದಾರಾ ಅಥವಾ ಅವರ ಪಕ್ಷದವರು ಹೇಳಿದಂತೆ ಆಡಳಿತ ಮಾಡುತ್ತಿದ್ದಾರಾ ಎಂದು ಅವರೇ ಹೇಳಬೇಕು. ರಸ್ತೆಯಲ್ಲಿ ಹೋಗುವವರು ಮಾತನಾಡಿದ್ದಕ್ಕೆಲ್ಲ ನಾನು ಉತ್ತರ ನೀಡಲು ಸಾಧ್ಯವಿಲ್ಲ' ಎಂದರು.

ಕಾಂಗ್ರೆಸ್ ತೊರೆದು ಜೆಡಿಎಸ್ ಸೇರುವುದಾಗಿ ಸಿ.ಎಂ. ಇಬ್ರಾಹಿಂ ನೀಡಿದ ಹೇಳಿಕೆಗೆ, 'ನಾನು ಪಕ್ಷ ಸಂಘಟನೆಯಲ್ಲಿ ಮಗ್ನನಾಗಿದ್ದೇನೆ. ಆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ' ಎಂದರು.

ಪಿ.ಯು ಶಿಕ್ಷಣ ಇಲಾಖೆ ನಿರ್ದೇಶಕಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕಿ ಆರ್. ಸ್ನೇಹಲ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರ ಜಾಗಕ್ಕೆ ಬೀದರ್ ಜಿಲ್ಲಾಧಿಕಾರಿ ರಾಮಚಂದ್ರನ್ ಆರ್. ಅವರನ್ನು ನೇಮಿಸಲಾಗಿದೆ.

ವಿಜಯಪುರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋವಿಂದ ರೆಡ್ಡಿ ಅವರನ್ನು ಬೀದರ್ ಜಿಲ್ಲಾಧಿಕಾರಿಯಾಗಿ ನಿಯೋಜಿಸಲಾಗಿದೆ. ರೆಡ್ಡಿ ಜಾಗಕ್ಕೆ ಇಂಡಿ ಉಪ ವಿಭಾಗದ ಹಿರಿಯ ಉಪ ವಿಭಾಗಾಧಿಕಾರಿ ರಾಹುಲ್ ಶಿಂಧೆ ಅವರನ್ನು ವರ್ಗಾವಣೆ ಮಾಡಲಾಗಿದೆ.

ಸ್ಥಳ ನಿರೀಕ್ಷೆಯಲ್ಲಿದ್ದ ಸುರೇಶ್ ಇಟ್ನಾಳ್ ಅವರನ್ನು ಧಾರವಾಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ನಿಯೋಜಿಸಲಾಗಿದೆ.

ಪಾಸ್‌ಪೋರ್ಟ್ ಅದಾಲತ್


ಬೆಂಗಳೂರು: ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯಲ್ಲಿ ಫೆ.23ರಂದು ಬೆಳಿಗ್ಗೆ 9.30ರಿಂದ 12.30ರವರೆಗೆ ಪಾಸ್‌ಪೋರ್ಟ್ ಅದಾಲತ್ ನಡೆಯಲಿದೆ.

2021ರ ಡಿಸೆಂಬರ್ 31ರೊಳಗೆ ಅರ್ಜಿ ಸಲ್ಲಿಸಿದವರು ಮಾತ್ರ ಅದಾಲತ್‌ನಲ್ಲಿ ಭಾಗವಹಿಸಬಹುದು. ಅದಾಲತ್‌ನಲ್ಲಿ ಭಾಗವಹಿಸುತ್ತಿರುವ ಉದ್ದೇಶವನ್ನು ಫೆ.16ರೊಳಗೆ ಸಲ್ಲಿಸಬೇಕು ಎಂದು ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ ಕೆ.ಕೃಷ್ಣ ತಿಳಿಸಿದ್ದಾರೆ.

ಐಪಿಡಿ ಸಾಲಪ್ಪ ಪ್ರಶಸ್ತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಫಾಯಿ ಕರ್ಮಚಾರಿಗಳು ಹಾಗೂ ಪೌರ ಕಾರ್ಮಿಕರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸಾಧಕರಿಗೆ ಐ.ಪಿ.ಡಿ. ಸಾಲಪ್ಪ ಹೆಸರಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ನೀಡಲು ಬಿಬಿಎಂಪಿ ಅರ್ಜಿ ಆಹ್ವಾನಿಸಿದೆ.



ಐಪಿಡಿ ಸಾಲಪ್ಪ

ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸಾಧಕರು ವಿವರವಾದ ಮಾಹಿತಿ ಒಳಗೊಂಡ ಅರ್ಜಿಯನ್ನು 15 ದಿನಗಳಲ್ಲಿ ಮುಖ್ಯ ಆಯುಕ್ತರ ನೇತೃತ್ವದ ಪ್ರಶಸ್ತಿ ಆಯ್ಕೆ ಸಮಿತಿಗೆ ಸಲ್ಲಿಸಬೇಕು.

'60 ವರ್ಷ ಮೇಲ್ಪಟ್ಟವರು ಅರ್ಜಿ ಸಲ್ಲಿಸಲು ಅರ್ಹರು. ಯಾವುದೇ ಅಪರಾಧ ಹಿನ್ನೆಲೆ ಇರಬಾರದು, ಪ್ರಶಸ್ತಿಗೆ ಪರಿಗಣಿಸುವ ಕ್ಷೇತ್ರದಲ್ಲಿಯೇ ವಿಶಿಷ್ಟ ಸಾಧನೆ ಮಾಡಿರಬೇಕು. ಕನಿಷ್ಠ 20 ವರ್ಷಗಳ ಸೇವೆ ಸಲ್ಲಿಸಿರಬೇಕು. ಪ್ರಶಸ್ತಿಗೆ ಆಯ್ಕೆಯಾದವರಿಗೆ ₹1 ಲಕ್ಷ ಮೊತ್ತ ನೀಡಲಾಗುವುದು. ಮರಣೋತ್ತರವಾಗಿ ಪ್ರಶಸ್ತಿ ನೀಡಲು ಪರಿಗಣಿಸುವುದಿಲ್ಲ' ಎಂದು ಬಿಬಿಎಂಪಿ ತಿಳಿಸಿದೆ.

ಕಲ್ಯಾಣ ಕರ್ನಾಟಕಕ್ಕೆ ₹ 731 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ₹ 731.03 ಕೋಟಿ ಅನುದಾನ ಬಿಡುಗಡೆ ಮಾಡಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಶನಿವಾರ ಆದೇಶ ಹೊರಡಿಸಲಾಗಿದೆ.

2021–22ನೇ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ₹ 1,492.97 ಕೋಟಿ ಅನುದಾನ ಒದಗಿಸಲಾಗಿದೆ. ಈ ಪೈಕಿ ಮೂರು ಮತ್ತು ನಾಲ್ಕನೇ ಕಂತಿನ ಬಾಬ್ತು ₹ 731.03 ಕೋಟಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ.

ಸ್ವಚ್ಛ–ಸುಂದರ ಬೆಂಗಳೂರಿನತ್ತ ನಮ್ಮ ನಡೆ

ಪ್ರಜಾವಾಣಿ




ಘನ ತ್ಯಾಜ್ಯ ನಿರ್ವಹಣೆ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರ, ಕೈಗಾರಿಕೆಗಳು ಹಾಗೂ ನಾಗರೀಕರ ಸಕ್ರಿಯ ಭಾಗವಹಿಸುವಿಕೆಯಿಂದಾಗಿ ಬೆಂಗಳೂರು ಸ್ವಚ್ಛ–ಸುಂದರ ನಗರವಾಗಿ ರೂಪುಗೊಳ್ಳುತ್ತಿದೆ. ಶಿಸ್ತುಬದ್ಧವಾಗಿ ತ್ಯಾಜ್ಯ ಸಂಗ್ರಹಿಸುವುದು ಹಾಗೂ ವೈಜ್ಞಾನಿಕವಾಗಿ ತ್ಯಾಜ್ಯ ನಿರ್ವಹಣೆ ಮಾಡುವುದು ಪರಿಣಾಮಕಾರಿ ವಿಧಾನವಾಗಿದ್ದು, ಈ ವಿಚಾರದ ಬಗ್ಗೆ ಜನರಲ್ಲಿ ಹೆಚ್ಚು ಜಾಗೃತಿ ಮೂಡಿಸುವ ಸದುದ್ದೇಶದಿಂದ ಡೆಕನ್ ಹೆರಾಲ್ಡ್ ಹಾಗೂ ಪ್ರಜಾವಾಣಿ ದಿನಪತ್ರಿಕೆಯು ತಜ್ಞರಿಂದ 'ವಿಚಾರ ಮಂಥನ'ವನ್ನು ಏರ್ಪಡಿಸಿದೆ.


ವೆಬಿನಾರ್
ವಿಷಯ: ಘನ ತ್ಯಾಜ್ಯ ನಿರ್ವಹಣೆ
ಸಮಯ: ಸಂಜೆ 4.30 | ದಿನಾಂಕ: ಫೆಬ್ರವರಿ 11, 2022

ಪ್ರಜಾವಾಣಿ ಸ್ವಚ್ಛ ಬೆಂಗಳೂರು


ಮುಖ್ಯ ಅತಿಥಿಗಳು




ಗೌರವ್ ಗುಪ್ತ
ಆಯುಕ್ತರು, ಬಿಬಿಎಂಪಿ



ವಿಲ್ಮಾ ರೋಡ್ರಿಗಸ್
ಸಿಇಒ, ಸಾಹಸ್ ಜೀರೋ ವೇಸ್ಟ್



ಸಂಧ್ಯಾ ನಾರಾಯಣ್
ಸದಸ್ಯೆ, ಎಸ್‌ಡಬ್ಲ್ಯುಎಂಆರ್‌ಟಿ



ಹರೀಶ್ ಕುಮಾರ್ ಕೆ
ವಿಶೇಷ ಆಯುಕ್ತರು (ಎಸ್‌ಡಬ್ಲ್ಯುಎಂ), ಬಿಬಿಎಂಪಿ



ಶ್ರೀನಿವಾಸ್ ಅಲವಿಲ್ಲಿ
ನಾಗರೀಕ ವಿಭಾಗದ ಮುಖ್ಯಸ್ಥರು, ಜನಾಗ್ರಹ, ಮಾಡರೇಟರ್

bit.ly/PVBengaluru ವಿಳಾಸಕ್ಕೆ ಭೇಟಿ ನೀಡಿ, ಅರ್ಜಿಯನ್ನು ಭರ್ತಿ ಮಾಡಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ. ಫೆಬ್ರವರಿ 11 ರಂದು prajavani.net ಹೋಮ್‌ಪೇಜ್‌ನಲ್ಲಿ ಪ್ರಸಾರವಾಗುವ ಕಾರ್ಯಕ್ರಮವನ್ನು ನೇರವಾಗಿ ವೀಕ್ಷಿಸಿ.

ನೊಂದಾಯಿಸಿಕೊಳ್ಳಲು ಇಲ್ಲಿ ಸ್ಕ್ಯಾನ್ ಮಾಡಿ

www.prajavani.net

ಕೋವಿಡ್ ನಂತರ ಉಕ್ಕಿದ ಹಾಲು: ಒಕ್ಕೂಟಕ್ಕೆ ಸವಾಲು

● ಪ್ರದೀಶ್ ಎಚ್. ಮರೋಡಿ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೋವಿಡ್ ನಂತರ ಹೈನುಗಾರರ ಸಂಖ್ಯೆ ಮತ್ತು ಹಾಲು ಉತ್ಪಾದನೆ ಗಣನೀಯವಾಗಿ ಏರಿಕೆಯಾಗಿದೆ. ಇದು ಆಶಾದಾಯಕ ಬೆಳವಣಿಗೆಯಾದರೂ ಉತ್ಪಾದನೆಯಾಗುವ ಹೆಚ್ಚುವರಿ ಹಾಲಿನ ನಿರ್ವಹಣೆಯು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟಕ್ಕೆ ಸವಾಲಾಗಿ ಪರಿಣಮಿಸಿದೆ.

2020ರ ಫೆಬ್ರುವರಿ ವೇಳೆಗೆ ಒಕ್ಕೂಟದಲ್ಲಿ 61 ಸಾವಿರ ಸಕ್ರಿಯ ಸದಸ್ಯರಿದ್ದರು. ಪ್ರತಿನಿತ್ಯ 4.23 ಲಕ್ಷ ಲೀಟರ್ ಹಾಲು ಸಂಗ್ರಹವಾಗಿ, 3.41 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿತ್ತು. ಈಗ ಸದಸ್ಯರ ಸಂಖ್ಯೆ 67,496ಕ್ಕೆ ಏರಿಕೆಯಾಗಿದೆ. ದಿನನಿತ್ಯ 5.02 ಲಕ್ಷ ಲೀಟರ್ ಸಂಗ್ರಹವಾಗುತ್ತಿದೆ. 3.55 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದೆ. ಹಾಲು ಸಂಗ್ರಹದಲ್ಲಿ ಆಗಿರುವ ಏರಿಕೆ ಪ್ರಮಾಣಕ್ಕೆ ಅನುಗುಣವಾಗಿ ಮಾರಾಟ ಪ್ರಮಾಣದಲ್ಲಿ ಏರಿಕೆ ಆಗಿಲ್ಲ.

2021ರ ಜೂನ್‌ನಲ್ಲಿ ದಿನನಿತ್ಯ 5.70 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗಿ ದಾಖಲೆ ನಿರ್ಮಾಣವಾಗಿತ್ತು. ಆ ತಿಂಗಳಲ್ಲಿ ಹೆಚ್ಚುವರಿ ಹಾಲನ್ನು ಗ್ರಾಹಕರಿಗೆ ಕೊಡುಗೆಯಾಗಿ ನೀಡಲಾಗಿತ್ತು. ಅರ್ಧ ಲೀಟರ್ ಹಾಲಿಗೆ 20 ಎಂ.ಎಲ್, 1 ಲೀಟರ್‌ಗೆ 40 ಎಂ.ಎಲ್. ಹೆಚ್ಚುವರಿ ಹಾಲನ್ನು ಪ್ಯಾಕೆಟ್‌ನಲ್ಲೇ ತುಂಬಿಸಿ ಗ್ರಾಹಕರಿಗೆ ಉಚಿತವಾಗಿ ನೀಡಲಾಗಿತ್ತು.

ಕೋವಿಡ್, ಲಾಕ್‌ಡೌನ್‌ನಿಂದಾಗಿ ಉದ್ಯೋಗ ಕಳೆದುಕೊಂಡವರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವುದು ಹಾಲು ಉತ್ಪಾದನೆ ಹೆಚ್ಚಲು ಪ್ರಮುಖ ಕಾರಣ. ಜತೆಗೆ ಹೋಟೆಲ್, ಇತರೆಡೆ ಹಾಲು ಮಾರುತ್ತಿದ್ದ ಹಲವರು ಮಾರುಕಟ್ಟೆಯ ಗೊಂದಲದಿಂದಾಗಿ ಒಕ್ಕೂಟವನ್ನು ಅವಲಂಬಿಸಿದ್ದಾರೆ. ಕೆಲವೆಡೆ ಹೊಸ ಡೇರಿಗಳ ಸ್ಥಾಪನೆಯಾಗಿರುವುದು ಕೂಡ ಉತ್ಪಾದನೆ ಹೆಚ್ಚಳಕ್ಕೆ ಕಾರಣ.

'ಕೋವಿಡ್ ನಂತರದಲ್ಲಿ ಹಾಲಿನ ಸಂಗ್ರಹ ಶೇ 12ರಿಂದ 15ರಷ್ಟು ಜಾಸ್ತಿಯಾಗಿದೆ. ಲಾಕ್‌ಡೌನ್‌ನಿಂದಾಗಿ ಮಾರುಕಟ್ಟೆಯಲ್ಲಿ ಹಾಲಿನ ಬೇಡಿಕೆಗೆ ತೊಂದರೆಯಾದ ಕಾರಣ, ದಿನನಿತ್ಯ ಲಕ್ಷಕ್ಕೂ ಅಧಿಕ ಲೀಟರ್ ಹಾಲು ಉಳಿಕೆಯಾಗುತ್ತಿತ್ತು. ಹೀಗಾಗಿ, ಉಳಿಕೆ ಹಾಲನ್ನು ಪುಡಿಯಾಗಿ ಪರಿವರ್ತಿಸುವುದು ಅನಿವಾರ್ಯವಾಗಿದೆ. ಅದಕ್ಕೆ ಲೀಟರ್‌ಗೆ ₹ 10ರಿಂದ ₹12 ಹೆಚ್ಚುವರಿ ಖರ್ಚು ತಗಲುವುದರಿಂದ ಒಕ್ಕೂಟಕ್ಕೆ ಹೊರೆಯಾಗಿದೆ' ಎಂದು ಒಕ್ಕೂಟದ ಅಧ್ಯಕ್ಷ ರವಿರಾಜ ಹೆಗ್ಡೆ ವಿವರಿಸುತ್ತಾರೆ.

ಹೊರಬಾರದ ಸಿಐಡಿ ತನಿಖಾ ವರದಿ; ರಾಜಕೀಯ ಸ್ವರೂಪ ಪಡೆದ ಅವ್ಯವಹಾರ

15 ಕ್ಯಾನ್ ಹಾಲಿಗೆ 10 ಕ್ಯಾನ್ ನೀರು!

● ಎಂ.ಎನ್.ಯೋಗೇಶ್

ಮಂಡ್ಯ: ಜಿಲ್ಲಾ ಹಾಲು ಒಕ್ಕೂಟದ (ಮನ್‌ಮುಲ್) ಶೀತಲೀಕರಣ ಘಟಕಗಳಲ್ಲಿ ಸಂಗ್ರಹವಾಗುತ್ತಿದ್ದ ಪ್ರತಿ 15 ಕ್ಯಾನ್ ಹಾಲಿಗೆ 10 ಕ್ಯಾನ್ ನೀರು ಹಾಗೂ ರಾಸಾಯನಿಕ ಬೆರೆಸುತ್ತಿದ್ದರೆಂಬ ಪ್ರಕರಣ ಇನ್ನೂ ತಾರ್ಕಿಕ ಅಂತ್ಯ ಕಂಡಿಲ್ಲ.

8 ತಿಂಗಳ ಹಿಂದೆ ಹಲವು ಬಿಎಂಸಿ (ಶೀತಲೀಕರಣ ಘಟಕ)ಗಳಲ್ಲಿ ನೀರು ಬೆರೆಸುತ್ತಿರುವ ಪ್ರಕರಣ ಬಯಲಿಗೆ ಬಂದಿತ್ತು. ಮಾರ್ಪಡಿಸಿದ ಟ್ಯಾಂಕರ್‌ಗಳ ಮೂಲಕ ನೀರು ಬೆರೆಸಿ ಒಕ್ಕೂಟಕ್ಕೆ ಪೂರೈಸಿದ ಪ್ರಕರಣದಲ್ಲಿ ಒಕ್ಕೂಟದ 6 ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿತ್ತು. ತನಿಖೆ ಪೂರ್ಣಗೊಂಡು 6 ತಿಂಗಳಾಗಿದ್ದರೂ ಸಿಐಡಿ ವರದಿ ಬಹಿರಂಗಗೊಂಡಿಲ್ಲ. ಇದಕ್ಕೆ ರಾಜಕೀಯ ಒತ್ತಡವೇ ಕಾರಣ ಎನ್ನಲಾಗಿದೆ. ನೀರು ಹಾಗೂ ರಾಸಾಯನಿಕ ಮಿಶ್ರಣ -ಎರಡೂ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಈಚೆಗೆ ಇನ್ನೊಂದು ಬಿಎಂಸಿಯಲ್ಲಿ ನೀರಿನ ಜೊತೆಗೆ ಹಾಲಿನ ಕೊಬ್ಬು ಹೆಚ್ಚಿಸುವ ರಾಸಾಯನಿಕ ಬೆರೆಸುತ್ತಿದ್ದರೆಂಬ ಪ್ರಕರಣದಲ್ಲಿ ಬಂಧಿತರಾಗಿದ್ದ ನಾಲ್ವರಿಗೆ ಜಾಮೀನು ದೊರಕಿದೆ. ರೈತರಿಂದ ಖರೀದಿಸಿದ ಹಾಲಿನಲ್ಲಿದ್ದಷ್ಟೇ ಕೊಬ್ಬಿನ ಪ್ರಮಾಣ ರಾಸಾಯನಿಕ ಮಿಶ್ರಿತ ಹಾಲಿನಲ್ಲೂ ಬರುತ್ತಿದ್ದುದರಿಂದ ಆರೋಪಿಗಳು ನೀರಿನ ಜೊತೆಗೆ ರಾಸಾಯನಿಕವನ್ನೂ ಬೆರೆಸಿ ಪೂರೈಸುತ್ತಿದ್ದರೆಂಬ ಅಂಶ ಬೆಳಕಿಗೆ ಬಂದಿದೆ. ಈ ವಿವಾದದ ನಡುವೆಯೇ ಒಕ್ಕೂಟದಲ್ಲಿ ನೂರಾರು ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿರುವುದು ಅನುಮಾನ ಮೂಡಿಸಿದೆ.



ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಕಚೇರಿ

ನಕಲಿ ತುಪ್ಪ: ಹೊರಬಾರದ ಅಸಲಿಯತ್ತು!

● ಕೆ.ಎಸ್.ಗಿರೀಶ್

ಮೈಸೂರು ತಾಲ್ಲೂಕಿನ ಹೊಸಹುಂಡಿ ಗ್ರಾಮದ ಹೊರವಲಯದಲ್ಲಿ ಕಳೆದ ವರ್ಷದ ಡಿಸೆಂಬರ್ 16ರಂದು ಪತ್ತೆಯಾದ ನಕಲಿ ನಂದಿನಿ ತುಪ್ಪ ತಯಾರಿಕಾ ಘಟಕದಲ್ಲಿ ಒಂದೂವರೆ ಟನ್‌ನಷ್ಟು ಕಲಬೆರಕೆ ತುಪ್ಪ, 500 ಕೆ.ಜಿ ವನಸ್ಪತಿ, 500 ಲೀಟರ್ ಪಾಮೊಲಿನ್ ಅನ್ನು ಜಿಲ್ಲಾ ಹಾಲು ಒಕ್ಕೂಟ ಹಾಗೂ ಆಹಾರ ಸುರಕ್ಷತೆ, ಗುಣಮಟ್ಟ ಇಲಾಖೆಯ ಅಧಿಕಾರಿಗಳು ವಶಪಡಿಸಿಕೊಂಡಿದ್ದರು.

7 ಆರೋಪಿಗಳನ್ನು ಬಂಧಿಸಿದ ಬಳಿಕ, ಮಾನವ ಹಕ್ಕುಗಳ ರಕ್ಷಣೆ ಮತ್ತು ಭ್ರಷ್ಟಾಚಾರ ನಿರ್ಮೂಲನಾ ಸಂಸ್ಥೆಯು 'ತನಿಖೆ ದಿಕ್ಕು ತಪ್ಪಿದೆ' ಎಂದು ಆರೋಪಿಸಿತ್ತು. 'ಪ್ರಮುಖ ಆರೋಪಿಗಳನ್ನು ರಕ್ಷಿಸಲಾಗುತ್ತಿದ್ದು, ಸಿಐಡಿ ಅಥವಾ ಸಿಬಿಐ ತನಿಖೆಗೆ ನೀಡಬೇಕು' ಎಂದು ಆಗ್ರಹಿಸಿ ಸಂಘಟನೆಗಳು ಪ್ರತಿಭಟನೆಯನ್ನೂ ನಡೆಸಿದ್ದವು.

ಬಂಧಿತರಾಗಿರುವವರು ನಕಲಿ ತುಪ್ಪವನ್ನು ಸಿಹಿತಿನಿಸು ಮಾರುವ ಪ್ರತಿಷ್ಠಿತ ಅಂಗಡಿಗಳಿಗೆ ಹಾಗೂ ತಮಿಳುನಾಡಿನ ಹಲವೆಡೆ ಪೂರೈಸುತ್ತಿದ್ದರೆಂಬುದು ಗೊತ್ತಾಗಿದೆ. 'ಘಟಕ ಆರಂಭಿಸಿದ ಪ್ರಭಾವಿಯೊಬ್ಬರು ಅದನ್ನು ಬೇರೆಯವರ ಸುಪರ್ದಿಗೆ ನೀಡಿದ್ದರು. ದಂಪತಿಯ ಜಗಳದಿಂದ ಘಟಕದಲ್ಲಿನ ಅಕ್ರಮ ಬೆಳಕಿಗೆ ಬಂತು' ಎನ್ನಲಾಗಿದೆ.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, '7 ಆರೋಪಿಗಳನ್ನು ಬಂಧಿಸಿದ್ದು, ಇನ್ನಿಬ್ಬರ ಹುಡುಕಾಟ ನಡೆದಿದೆ. ತನಿಖಾ ಹಂತದಲ್ಲಿರುವುದರಿಂದ ವಿವರಗಳನ್ನು ಬಹಿರಂಗಪಡಿಸಲಾಗದು' ಎಂದರು


ಮೈಸೂರು ತಾಲ್ಲೂಕಿನ ಹೊಸಹುಂಡಿ ಗ್ರಾಮದ ಹೊರವಲಯದಲ್ಲಿ ಗುರುವಾರ ಪತ್ತೆಯಾದ ನಕಲಿ ನಂದಿನಿ ತುಪ್ಪದ ತಯಾರಿಕಾ ಘಟಕದಲ್ಲಿ ಸಂಗ್ರಹಿಸಡಲಾಗಿದ್ದ ಕಲಬೆರಕೆ ತುಪ್ಪ

ಎಮ್ಮೆಯ ಹಾಲನ್ನು ಎಮ್ಮೆಗೇ ಕುಡಿಸುವ ಸ್ಥಿತಿ!

ಪಾಕೆಟ್ ಹಾಲಿನ ಪೈಪೋಟಿಗೆ ಬಸವಳಿದ ಗೌಳಿಗರು

● ಸಂತೋಷ ಈ.ಚಿನಗುಡಿ

ಕಲಬುರಗಿ: 'ನಾಲ್ಕು ತಲೆಮಾರುಗಳಿಂದ ಗೌಳಿತನವೇ ನಮ್ಮ ಮನೆಯ ಕಾಯಕ. ಹೈನುಗಾರಿಕೆಯಿಂದ ಬಂದ ಆದಾಯದಲ್ಲೇ ಅಜ್ಜ ದೊಡ್ಡ ಮನೆ ಕಟ್ಟಿ ಶ್ರೀಮಂತರೂ ಆಗಿದ್ದರು. ಆದರೆ, ಪಾಕೆಟ್ ಹಾಲು ಬಂದ ಮೇಲೆ ಮನೆ, ಮನೆಗೆ ಹಾಲು ಹಾಕುವುದು ಕಡಿಮೆಯಾಗಿದೆ. ಎಷ್ಟೋ ಸಾರಿ ಎಮ್ಮೆಯ ಹಾಲನ್ನು ಎಮ್ಮೆಗೇ ಕುಡಿಸುವ ಪರಿಸ್ಥಿತಿಯೂ ಬರುತ್ತದೆ...'

ಕಲಬುರಗಿಯ ಐವಾನ್ ಇ ಶಾಹಿ ಪ್ರದೇಶದ ನಿವಾಸಿ ಆನಂದ ಬಾಬುರಾವ್ ಗೌಳಿ ಅವರು ತಮ್ಮ ಕುಲಕಸುಬಿನ ಬಗ್ಗೆ ಹೇಳಿದ ಮಾತುಗಳಿವು.

'ನಾಲ್ವರು ಸಹೋದರರಿದ್ದು, ಯಾರೂ ಎಸ್ಸೆಸ್ಸೆಲ್ಸಿ ನಂತರ ಓದಲು ಆಗಲಿಲ್ಲ. ನಾಲ್ವರೂ ಸೇರಿಕೊಂಡು 30 ಎಮ್ಮೆ ಸಾಕಿದ್ದೇವೆ. ತಂದೆ, ತಾಯಿ ಸೇರಿ 12 ಜನರ ಅವಿಭಕ್ತ ಕುಟುಂಬ ನಮ್ಮದು. ನಾವು ಎಮ್ಮೆಗಳನ್ನು ಸಾಕುತ್ತಿದ್ದೇವೆ; ಎಮ್ಮೆಗಳೂ ನಮ್ಮನ್ನು ಸಾಕುತ್ತಿವೆ. ಎಮ್ಮೆಗಳಿಗೆ ಕಷ್ಟವಾದಾಗ ನಮ್ಮ ಬದುಕೂ ಕಷ್ಟವಾಗುತ್ತದೆ' ಎನ್ನುತ್ತಾರೆ ಅವರು.

ಸಮೀಪದಲ್ಲಿ ಕೆರೆಗಳೇ ಇಲ್ಲದ ಕಾರಣ ಎಮ್ಮೆಗಳ ಮೈ ತೊಳೆಯುವುದು ದೊಡ್ಡ ತಲೆನೋವು. ಬೋರ್‌ವೆಲ್‌ನಿಂದ ಕುಡಿಯುವ ನೀರು ತರಬೇಕು. ಬೇಸಿಗೆಯಲ್ಲಿ ನೀರು– ಮೇವು ಸಿಗದ ಕಾರಣ ಹಾಲು ಉತ್ಪಾದನೆಯೂ ಕುಸಿಯುತ್ತದೆ. ಇದೇ ಕಾರಣಕ್ಕೆ ಈ ಹಿಂದೆ 18 ಎಮ್ಮೆಗಳನ್ನು ಸಾಕಿದ್ದ ಜಡಿಮಲ್ಲಿಕಾರ್ಜುನ ಅವರು ಈಗ ಎರಡನ್ನು ಮಾತ್ರ ಉಳಿಸಿಕೊಂಡಿದ್ದಾರೆ.


ಪಾಕೆಟ್‌ಗೆ ಜೋತುಬಿದ್ದ ಜನ: ಕೆಎಂಎಫ್‌ನ ಮಳಿಗೆಗಳನ್ನು ಈಗ ಗಲ್ಲಿಗಲ್ಲಿಗೂ ತೆರೆಯುತ್ತಿದ್ದಾರೆ. ಮೇಲಾಗಿ, ಕಲಬುರಗಿ ನಗರವೊಂದಕ್ಕೇ ಮಹಾರಾಷ್ಟ್ರದಿಂದ ಪ್ರತಿ ದಿನ 80 ಸಾವಿರ ಲೀಟರ್ ಹಾಲು ಬರುತ್ತದೆ ಎನ್ನುವುದು ಕಲಬುರ್ಗಿ–ಬೀದರ್–ಯಾದಗಿರಿ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಆರ್. ಕೆ.ಪಾಟೀಲ ಅವರ ಮಾಹಿತಿ. ಒಕ್ಕೂಟದ ಡೇರಿಗೆ ಪ್ರತಿ ದಿನ 60 ಸಾವಿರ ಲೀಟರ್ ಹಾಲು ಮಾರಾಟ ಮಾಡುತ್ತಾರೆ. ಡೇರಿಗಳ ಸವಾಲುಗಳನ್ನು ದಾಟಿಕೊಂಡು ಗೌಳಿಗರು ಮನೆಮನೆ ಹಾಲು ಹಾಕಿ ಜೀವನ ಸಾಗಿಸುತ್ತಿದ್ದಾರೆ.

'ಕೆಎಂಎಫ್‌ನವರು ಲೀಟರ್‌ಗೆ ₹ 50ರಿಂದ ₹ 52ರಷ್ಟು ದರ ನೀಡುತ್ತಾರೆ. ಮನೆಗಳಿಗೇ ಹೋಗಿ ಹಾಲು ಹಾಕಿದರೆ ₹ 60 ದರವಿದೆ. ಹೋಟೆಲ್‌ಗಳವರು ₹ 55ಕ್ಕೆ ಖರೀದಿಸುತ್ತಾರೆ. ಡೇರಿಗಿಂತ ಮನೆಗೆ ಹಾಲು ಹಾಕುವುದೇ ಲೇಸು. ಆದರೆ, ಬಹಳಷ್ಟು ಜನ ಈಗ ಪಾಕೆಟ್, ಟೆಟ್ರಾಪ್ಯಾಕ್ ಹಾಲಿನ ಮೊರೆ ಹೋಗಿದ್ದಾರೆ. ಇದರಿಂದ ದುಡಿಮೆಗೆ ತಕ್ಕ ಫಲ ಸಿಗುತ್ತಿಲ್ಲ' ಎನ್ನುವುದು ಸ್ಟೇಷನ್ ಬಜಾರ್ ನಿವಾಸಿ ಕೃಷ್ಣಾಬಾಯಿ ಗೌಳಿ ಅವರ ಅಳಲು.

ಪೌಷ್ಟಿಕಾಂಶಗಳ ದರ ಹೆಚ್ಚಳ

ಗಟ್ಟಿ ಹಾಲು ಬರಬೇಕಾದರೆ ಎಮ್ಮೆಗಳಿಗೆ ಪೌಷ್ಟಿಕ ಆಹಾರ ಕೊಡಬೇಕು. ಈಗ ಎಲ್ಲವುಗಳ ದರ ಹೆಚ್ಚಾಗಿದೆ. ಆದರೆ, ಹಾಲಿನ ದರ ಅಷ್ಟೇ ಇದೆ. ಮಧ್ಯದಲ್ಲಿ ಲಸಿಕೆ, ವೈದ್ಯಕೀಯ ವೆಚ್ಚ ಮೇಲಿಂದ ಮೇಲೆ ಬರುತ್ತದೆ. ಒಂದು ಎಮ್ಮೆಗೆ ದಿನಕ್ಕೆ ಎಷ್ಟು ಖರ್ಚು ಮಾಡುತ್ತೇವೆಯೋ ಅಷ್ಟೇ ಅದರ ಗಳಿಕೆ ಆಗುತ್ತದೆ ಎನ್ನುತ್ತಾರೆ ಗೌಳಿಗರು.

ದರ (ಕ್ವಿಂಟಲ್‌ಗೆ)	
ತೊಗರಿ ಹೊಟ್ಟು	₹1,900
ಹತ್ತಿಕಾಳು ಹಿಂಡಿ	₹2,500
ಗೋಧಿಬೂಸಾ	₹2,000
ಒಂದು ಕಟ್ ಕಣಕಿಗೆ	₹30


ಕಲಬುರಗಿಯ ಗುಲ್ಲಾಬಾವಡಿಯ ನಿವಾಸಿ ಪವನ್ ಅವರು ಹಾಲು ಕರೆದಿದ್ದು ಹೀಗೆ –ಪ್ರಜಾವಾಣಿ ಚಿತ್ರ/ತಾಜುದ್ದೀನ ಆಜಾದ್

ಸವಾಲಿನ ಸುಳಿಯಲ್ಲಿ ಹೈನೋದ್ಯಮ

ಒಂದನೇ ಪುಟದಿಂದ

ಕೋವಿಡ್ ಸಂದರ್ಭದಲ್ಲಿ ನಂದಿನಿ ಐಸ್‌ಕ್ರೀಂ ಮಾರಾಟಕ್ಕೂ ತೀವ್ರ ಹೊಡೆತ ಬಿದ್ದಿತ್ತು. ಮಾರಾಟ ಬಹುತೇಕ ಶೂನ್ಯ ಹಂತಕ್ಕೆ ತಲುಪಿತ್ತು. ಈಗ ಮತ್ತೆ ಚೇತರಿಸಿಕೊಳ್ಳುತ್ತಿದ್ದು, ಜನವರಿ ತಿಂಗಳಲ್ಲಿ 8 ಸಾವಿರ ಲೀಟರ್ ಐಸ್‌ಕ್ರೀಂ ಮಾರಾಟವಾಗಿದೆ. ಈ ಬಾರಿಯ ಬೇಸಿಗೆಯಲ್ಲಿ 25 ಸಾವಿರದಿಂದ 30 ಸಾವಿರ ಲೀಟರ್‌ವರೆಗೆ ಮಾರಾಟವಾಗುವ ನಿರೀಕ್ಷೆ ಇದೆ ಎನ್ನುವ ವಿಶ್ವಾಸ ಅಧಿಕಾರಿಗಳದ್ದು.

ಹೈನುಗಾರಿಕೆ ಉದ್ಯಮವು ಸ್ಥಿತ್ಯಂತರಗಳ ನಡುವೆಯೂ ಸಮೃದ್ಧಿಯ ಸನ್ನಿವೇಶ ತಲುಪಿದೆ. ರಾಜ್ಯದ ಮಾರುಕಟ್ಟೆಯಲ್ಲಿ ಶೇಕಡ 70ಕ್ಕೂ ಹೆಚ್ಚು ಪಾಲು ಹೊಂದಿರುವ ಕೆಎಂಎಫ್, ಈಗ ಪ್ರತಿ ದಿನ 1 ಕೋಟಿ ಕೆ.ಜಿಗೂ ಹೆಚ್ಚು ಹಾಲು ಉತ್ಪಾದಿಸುವ ಗುರಿ ಹೊಂದಿದೆ.

ಹಾಲಿನ ಹೊಸ ಉತ್ಪನ್ನಗಳನ್ನು ದೇಶದಾದ್ಯಂತ ಮಾರುಕಟ್ಟೆಗೆ ಬಿಡುಗಡೆ ಮಾಡಲು ಯೋಜನೆ ರೂಪಿಸಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ.

ಖಾಸಗಿ ಕಂಪನಿಗಳು ಕೆಎಂಎಫ್‌ಗೆ ದಿನೇ ದಿನೇ ಸ್ಪರ್ಧೆ ನೀಡುತ್ತಿವೆ. ಹಳ್ಳಿಗಳಿಂದಲೇ ಹಾಲು ಸಂಗ್ರಹಿಸಿ, ಪೂರೈಸುವ ಸಮಗ್ರ ವ್ಯವಸ್ಥೆಯನ್ನು ರೂಪಿಸಿದ್ದು, ತುಪ್ಪ ಸೇರಿದಂತೆ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿವೆ. ಸುಧಾರಣೆ ಕ್ರಮಗಳನ್ನು ಕೈಗೊಂಡು ಮಾರುಕಟ್ಟೆಯಲ್ಲಿ ನಮ್ಮ ಪಾಲು ಮತ್ತಷ್ಟು ಹೆಚ್ಚಿಸಲಾಗುವುದು ಎಂದು ಕೆಎಂಎಫ್ ಅಧಿಕಾರಿಗಳು ಪ್ರತಿಪಾದಿಸುತ್ತಾರೆ.

ಪ್ರೋತ್ಸಾಹ ಧನ ವಿಳಂಬ



ಸರ್ಕಾರ ಹಾಲಿನ ಪ್ರೋತ್ಸಾಹ ಧನವನ್ನು ಸಕಾಲಕ್ಕೆ ನೀಡುತ್ತಿಲ್ಲ ಎನ್ನುವ ದೂರು ರೈತರದ್ದು.

ಪ್ರತಿ ಲೀಟರ್‌ಗೆ ₹4ರಿಂದ ₹5 ಪ್ರೋತ್ಸಾಹ ಧನ ನೀಡಲಾಗುತ್ತಿದ್ದು, ನಾಲ್ಕೈದು ತಿಂಗಳು ಬಾಕಿ ಉಳಿಸಿಕೊಳ್ಳುವುದು ಸಾಮಾನ್ಯವಾಗಿದೆ.

'ಸರ್ಕಾರ ಸಕಾಲಕ್ಕೆ ಎಂದೂ ಪ್ರೋತ್ಸಾಹ ಧನ ನೀಡಿಲ್ಲ. ಕನಿಷ್ಠ ನಾಲ್ಕು ತಿಂಗಳು ವಿಳಂಬವಾಗುತ್ತಿದೆ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ದೂರಿದ್ದಾರೆ.

ಹಾಲು ಉತ್ಪಾದನೆ ಮತ್ತು ಪೂರೈಕೆ

17 ಲಕ್ಷ ಕೆ.ಜಿ. ಹಾಲಿನ ವಿವಿಧ ಉತ್ಪನ್ನಗಳನ್ನು ತಯಾರಿಸಲು ಬಳಕೆ

84 ಲಕ್ಷ ಲೀಟರ್ ಪ್ರತಿ ದಿನ ಸರಾಸರಿ ಉತ್ಪಾದನೆ

7 ಲಕ್ಷ ಕೆ.ಜಿ. ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶಕ್ಕೆ ಪೂರೈಕೆ

52 ಲಕ್ಷ ಕೆ.ಜಿ. ಹಾಲು ಮಾರಾಟ

8 ಲಕ್ಷ ಕೆ.ಜಿ. ಪ್ರತಿ ದಿನ ಅಂಗನವಾಡಿಗೆ

'ನಂದಿನಿ' ಬ್ರ್ಯಾಂಡ್ ಮೌಲ್ಯವರ್ಧನೆಯತ್ತ ಹೆಜ್ಜೆ

ಹೆಚ್ಚುವರಿ ಹಾಲಿನ ಸದ್ಬಳಕೆ ಮತ್ತು ವಹಿವಾಟು ವಿಸ್ತರಿಸಲು ರಾಷ್ಟ್ರಮಟ್ಟದಲ್ಲೇ 'ನಂದಿನಿ' ಬ್ರ್ಯಾಂಡ್ ಮೌಲ್ಯ ಹೆಚ್ಚಿಸುವ ಯೋಜನೆಯನ್ನು ಕೆಎಂಎಫ್ ರೂಪಿಸಿದೆ.

ಹೊಸ ತಂತ್ರಜ್ಞಾನ ಮೂಲಕ ಸುರಕ್ಷಿತ ಹಾಲಿನ ಉತ್ಪನ್ನಗಳು ಪೂರೈಸಲು ಉದ್ದೇಶಿಸಲಾಗಿದೆ. ಉತ್ಪನ್ನಗಳ ಮೇಲೆಯೂ ಹಾಲೊಗ್ರಾಂ ಮತ್ತು ಕ್ಯೂಆರ್ ಕೋಡ್ ಹಾಕಲು ಯೋಜನೆ ರೂಪಿಸಲಾಗಿದೆ.

12 ವಿವಿಧ ರೀತಿಯ 'ಪ್ರೀಮಿಯಂ' ಚಾಕೊಲೇಟ್‌ಗಳನ್ನು ತಯಾರಿಸಲು ಯೋಜನೆ ರೂಪಿಸಲಾಗಿದೆ. ಸದ್ಯ ಮಾರುಕಟ್ಟೆಯಲ್ಲಿ ಹೆಚ್ಚು ಪ್ರಚಾರದಲ್ಲಿರುವ ಚಾಕೊಲೇಟ್‌ಗಳ ಮಾದರಿಯಲ್ಲೇ 'ಬ್ರ್ಯಾಂಡಿಂಗ್' ರೂಪಿಸಲಾಗುತ್ತಿದೆ. ಹಾಲಿನ ಪುಡಿ ಬಳಸಿ ಈ ಚಾಕೊಲೇಟ್‌ಗಳನ್ನು ತಯಾರಿಸಿ, 'ನಂದಿನಿ ಗುಡ್ ಲೈಫ್' ಹೆಸರಿನಲ್ಲಿ ದೇಶದಾದ್ಯಂತ ಬಿಡುಗಡೆ ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಾಸನ ಹಾಲು ಒಕ್ಕೂಟದಲ್ಲಿ ₹160 ಕೋಟಿ ವೆಚ್ಚದಲ್ಲಿ 'ಪೆಟ್ ಬಾಟಲ್' ಘಟಕ ಸ್ಥಾಪಿಸಲಾಗುತ್ತಿದೆ. ಸುವಾಸಿತ ಹಾಲು, ಮಿಲ್ಕ್ ಶೇಕ್, ಲಸ್ಸಿ, ಮಜ್ಜಿಗೆ ಮುಂತಾದ 19 ಹಾಲಿನ ಉತ್ಪನ್ನಗಳನ್ನು ಈ ಪೆಟ್ ಬಾಟಲ್‌ಗಳಲ್ಲಿ ಭರ್ತಿ ಮಾಡಿ ಮಾರಾಟ ಮಾಡುವ ಯೋಜನೆ ರೂಪಿಸಲಾಗಿದೆ.

ದಂಧೆಗೆ ದಶಕಗಳ ಹಿಂದೆಯೇ ಕಡಿವಾಣ

● ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಹಾಲಿಗೆ ಹಾನಿಕಾರಕ ರಾಸಾಯನಿಕ ಸೇರಿ ಹಲವು ವಸ್ತುಗಳನ್ನು ಮಿಶ್ರಣ ಮಾಡುವ ದಂಧೆಯ ವಿರುದ್ಧ ಇಲ್ಲಿನ ಶಿವಮೊಗ್ಗ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ದಶಕಗಳ ಹಿಂದೆಯೇ ಬಿಗಿ ತಪಾಸಣೆ ಆರಂಭಿಸಿದ ಪರಿಣಾಮ ಇಂದು ಮಿಶ್ರಣ ಪ್ರಕರಣಗಳು ಕ್ಷೀಣಿಸಿವೆ.

ಎರಡು ಲೀಟರ್ ಹಾಲು ಮಾರಾಟ ಮಾಡುವ ಉತ್ಪಾದಕರು ಒಂದು ಲೀಟರ್ ನೀರು ಬೆರೆಸಿ, ಹಾಲಿನಂತೆ ಅದನ್ನು ಗಟ್ಟಿಗೊಳಿಸಲು ಅದಕ್ಕೆ ಬೆಳೆಗಳಿಗೆ ಬಳಸುವ ಯೂರಿಯಾ, ಗೃಹೋಪಯೋಗಿ ಸಕ್ಕರೆ, ಗಂಜಿ, ಸೋಡಾ, ಉಪ್ಪು ಒಳಗೊಂಡಂತೆ ಹಲವು ಸಾಮಗ್ರಿಗಳನ್ನು ಮಿಶ್ರಣ ಮಾಡುತ್ತಿದ್ದರು.

ಇಂತಹ ಕಲಬೆರಕೆ ನಿಯಂತ್ರಿಸಲು ಹಾಲಿನ ರಾಸಾಯನಿಕ ಮಿಶ್ರಣ ತಪಾಸಣೆ ಮತ್ತು ಅಧ್ಯಯನಕ್ಕಾಗಿ ತಂಡವನ್ನೇ ರಚಿಸಲಾಗಿತ್ತು. ಈ ತಂಡ ಹಾಲು ಉತ್ಪಾದಕರ ಮನೆಗಳಿಗೇ ತೆರಳಿ ಹಾಲು ಪರೀಕ್ಷೆ ನಡೆಸುತ್ತಿತ್ತು. ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಹಾಲಿನ ಗುಣಮಟ್ಟ ಪರೀಕ್ಷೆಗೆ ಒತ್ತು ನೀಡಿತ್ತು. ಇಂತಹ ನಿರಂತರ ಪ್ರಯತ್ನಗಳ ಫಲವಾಗಿ ಇಂದು ಕಲಬೆರಕೆ ದಂಧೆಗೆ ಕಡಿವಾಣ ಬಿದ್ದಿದೆ.

ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿ ಒಳಗೊಂಡ ಶಿಮುಲ್‌ನಲ್ಲಿ ಪ್ರಸ್ತುತ 1,200 ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. 80 ಸಾವಿರ ಜನರು ಹಾಲು ಉತ್ಪಾದನೆಯಲ್ಲಿ ತೊಡಗಿದ್ದಾರೆ. ಪ್ರತಿನಿತ್ಯ ಸರಾಸರಿ 6 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಕಲಬೆರಕೆ ತಡೆಯಲು ಕಠಿಣ ಕ್ರಮಗಳನ್ನು ಕೈಗೊಂಡಿರುವ ಶಿಮುಲ್ ಆಡಳಿತ ಮಂಡಳಿ ದಾವಣಗೆರೆಯ ಬಾತಿ, ಶಿವಮೊಗ್ಗದ ಮಾಚೇನಹಳ್ಳಿಯ ಎರಡೂ ಘಟಕಗಳಿಗೂ ₹ 1.70 ಕೋಟಿ ವೆಚ್ಚದಲ್ಲಿ ಎರಡು ಅತ್ಯಾಧುನಿಕ ಮಿಲ್ಕ್ ಸ್ಕ್ಯಾನಿಂಗ್ ಯಂತ್ರಗಳನ್ನು ಅಳವಡಿಸಿದೆ. ಈ ಯಂತ್ರ ಮಿಶ್ರಣವಾದ 14 ಬಗೆಯ ರಾಸಾಯನಿಕಗಳನ್ನು ಪತ್ತೆ ಹಚ್ಚುವ ಸಾಮರ್ಥ್ಯ ಹೊಂದಿದೆ.

'ದಶಕಗಳ ಹಿಂದೆ ಕಲಬೆರಕೆ ಹಾಲಿನ ಹಾವಳಿ ತೀವ್ರವಾಗಿತ್ತು. ಈಗ ಅಂತಹ ಸಮಸ್ಯೆ ತೀರ ಗೌಣವಾಗಿದೆ. ಮಕ್ಕಳು ಕುಡಿಯುವ ಹಾಲಿಗೆ ಮಿಶ್ರಣ ಮಾಡುವುದು ದ್ರೋಹ ಎನ್ನುವ ಮನಃಸ್ಥಿತಿ ಹಲವರಲ್ಲಿ ಬಂದಿದೆ. ಒಕ್ಕೂಟವೂ ಕಠಿಣ ನಿಯಮಗಳನ್ನು ಪಾಲಿಸುತ್ತಿದೆ. 1,200 ಹಾಲು ಉತ್ಪಾದಕ ಸಂಘಗಳಲ್ಲೂ ಪರೀಕ್ಷಕರು, ಪರೀಕ್ಷೋಪಕರಣಗಳನ್ನು ನೀಡಲಾಗಿದೆ. ಕಲಬೆರಕೆ ಕಂಡು ಬಂದರೆ ಹಣ ಪಾವತಿ ತಡೆಹಿಡಿಯುವ ಸೂಚನೆ ನೀಡಲಾಗಿದೆ' ಎನ್ನುತ್ತಾರೆ ಶಿಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಬಸವರಾಜು.

ಪ್ರಸ್ತುತ ಪ್ರತಿ ಲೀಟರ್ ಹಾಲಿನ ಖರೀದಿ ದರ ಶೇ 3.5 ಕೊಬ್ಬಿನಾಂಶ ಇರುವ ಹಾಲಿಗೆ ₹ 23.60 ಇದೆ. ಪ್ರತಿ ಕೊಬ್ಬಿನಾಂಶ ಶೇ0.1ಕ್ಕೆ 25 ಪೈಸೆಯಂತೆ ಹೆಚ್ಚುವರಿ ನೀಡಲಾಗುತ್ತಿದೆ. ಹಿಂದೆ ಪ್ರತಿ ವರ್ಷ 50ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿದ್ದವು. ಈಗ ಆ ಸಂಖ್ಯೆ ತೀರ ಕಡಿಮೆ' ಎಂದು ವಿವರ ನೀಡುತ್ತಾರೆ ಶಿಮುಲ್ ಮಾರುಕಟ್ಟೆ ವ್ಯವಸ್ಥಾಪಕ ಪೀರ್ಯಾನಾಯ್ಕ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 6-2-1997

● **ಪಾಕಿಸ್ತಾನದ ಜತೆ ಮಾತುಕತೆಗೆ ಭಾರತ ಸಿದ್ಧ- ದೇವೇಗೌಡ**

ಮಾರಿಷಸ್, ಫೆ. 5– ಪಾಕಿಸ್ತಾನವು ಭಾರತದ ಜತೆ ಮಾತುಕತೆಗೆ ಮುಂದೆ ಬಂದಲ್ಲಿ ಪರಿಪೂರ್ಣ ಸಹಕಾರ ನೀಡುವುದಾಗಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಇಂದು ಇಲ್ಲಿ ಪ್ರಕಟಿಸಿದರು.

'ತಂತ್ರಜ್ಞಾನ ಅಭಿವೃದ್ಧಿ ನಿಧಿ' ಸ್ಥಾಪಿಸಲು ಮಾರಿಷಸ್‌ಗೆ 10 ಕೋಟಿ ರೂಪಾಯಿ ಸಾಲ ನೀಡುವ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಗೌಡರು, 'ಪಾಕಿಸ್ತಾನದಲ್ಲಿ ಇತ್ತೀಚಿನ ಚುನಾವಣೆಯಿಂದಾಗಿ ಪ್ರಜಾಸತ್ತೆ ಪುನರ್ ಸ್ಥಾಪನೆ ಲಕ್ಷಣ ಕಂಡು ಬಂದಿದೆ' ಎಂದರು.

50 ವರ್ಷಗಳ ಹಿಂದೆ

ಭಾನುವಾರ, 6-2-1972

● **ಹಿಂದುಳಿದವರಿಗೆ ಹಿಂದೆಂದೂ ಇಲ್ಲದಷ್ಟು ಪ್ರಾತಿನಿಧ್ಯ**

ಬೆಂಗಳೂರು, ಫೆ. 5– ಹಿಂದುಳಿದ ವರ್ಗಗಳಿಗೆ ಹಿಂದೆಂದೂ ಇಲ್ಲದಷ್ಟು ಹಾಗೂ 24 ಪಂಗಡಗಳಿಗೆ ಪ್ರಥಮ ಬಾರಿಗೆ ಪ್ರಾತಿನಿಧ್ಯ, 212 ಮಂದಿ ಅಭ್ಯರ್ಥಿಗಳಲ್ಲಿ 112 ಮಂದಿ ಪದವೀಧರರು. 143 ಮಂದಿ ಹೊಸಬರು. ಸಂಪ್ರದಾಯ ರೀತಿಯಲ್ಲಿ ಬರುತ್ತಿದ್ದ ಲಿಂಗಾಯತ ಹಾಗೂ ಒಕ್ಕಲಿಗರ ಪ್ರಾತಿನಿಧ್ಯದಲ್ಲಿ ಖೋತಾ.

–ಇವು ರಾಜ್ಯದ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಸಿದ್ಧ ಮಾಡಿರುವ ಅಭ್ಯರ್ಥಿಗಳ ಪಟ್ಟಿಯ ವಿಶೇಷ ಲಕ್ಷಣಗಳು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 6, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮಕರ ಮಾಸದ 23ನೇ ದಿನ
ತಿಥಿ: (ಮಾಘ ಶುಕ್ಲ) ಷಷ್ಠಿ ಗಂ. 28-39 **ನಕ್ಷತ್ರ:** ರೇವತಿ ಗಂ. 17-10 **ಯೋಗ:** ಸಾಧ್ಯ ಗಂ. 16-53, **ಕರಣ:** ಕೌಲವ ಗಂ. 16-07. **ರಾಹುಕಾಲ:** ಸಾಯಂಕಾಲ 04:30–06:00, **ಸೂರ್ಯೋದಯ :** 07-00
ಸೂರ್ಯಾಸ್ತ : 06-29 **ಮುಸ್ಲಿಂ ದಿನಾಂಕ :** 04 ರಜಬ್,
ಅದೃಷ್ಟ ಸಂಖ್ಯೆ: 8, 11

ಮೇಷ: ನಿಮ್ಮ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಸರಿಯಾಗಿ ವ್ಯವಹರಿಸುವುದರಿಂದ ಲಾಭಾಂಶ ವೃದ್ಧಿಯಾಗಲಿದೆ. ನಿಮ್ಮ ವಾಸಸ್ಥಾನ ಬದಲಾಗುವ ಲಕ್ಷಣ. ನಿಮ್ಮ ಅಧ್ಯಯನದ ವಿಷಯಕ್ಕೆ ಇರುವ ಪ್ರಾಮುಖ್ಯತೆ ತಿಳಿಯುವುದು.

ವೃಷಭ: ಕೇವಲ ಮಾತಿನಲ್ಲದೇ ವ್ಯವಹಾರದಲ್ಲಿಯೂ ಚಾಣಾಕ್ಷತನ ತೋರುವುದು ನಿಮ್ಮ ಏಳಿಗೆಗೆ ಕಾರಣವಾಗಲಿದೆ. ಕೃಷಿ ಅಥವಾ ಕೃಷಿ ಕೈಗಾರಿಕೆಯಲ್ಲಿನ ವ್ಯವಹಾರಗಳು ಸಮಾಧಾನಕರವಾದ ಆದಾಯವನ್ನು ತರಲಿವೆ.

ಮಿಥುನ: ಮನೆಯಲ್ಲಿ ಶಾಂತ ವಾತಾವರಣವಿದ್ದು ನಿಧಾನಗತಿಯ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸಿ ಇರುವ ಅವಕಾಶವನ್ನು ಮುಂದುವರಿಸುವಿರಿ.

ಕರ್ಕಾಟಕ: ಖರ್ಚು-ವೆಚ್ಚಗಳಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನ. ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆಯೇ ನಡೆಯಲು ಒಪ್ಪುವಿರಿ. ನೂತನ ಉದ್ಯೋಗ ದೊರೆತು ಸಮಾಧಾನ.

ಸಿಂಹ: ಅಕ್ಕ- ಪಕ್ಕದವರಲ್ಲಿ ಸ್ನೇಹಪರ ಸ್ವಭಾವ ತೋರುವುದರಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿನ ಅತೀವ ಆಸಕ್ತಿಗೆ ಮೋಡ ಮುಸುಕಿ ಗ್ರಹಣ ಬಂದಂತಾಗಬಹುದು.

ಕನ್ಯಾ: ಮಗನ ಮುಂದಿನ ಓದಿನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು. ಕಲಾವಿದರ ಆಸಕ್ತಿಯಿಂದ ಹೆಚ್ಚು ಅವಕಾಶಗಳು ಲಭ್ಯ. ಉದಯೋನ್ಮುಖ ತಾರೆಯರಿಗೆ ಹೆಚ್ಚಿನ ಅವಕಾಶಗಳಿಂದ ಲಾಭ ಮತ್ತು ಅನುಭವ ಬರಲಿದೆ.

ತುಲಾ: ನಿಮ್ಮ ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಘ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ. ವಾಹನ ಕೊಳ್ಳುವವರಿಗೆ ಸುದಿನ.

ವೃಶ್ಚಿಕ: ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ಪ್ರಾಪ್ತಿಯಾಗಲಿದೆ. ಕುಡಿಯುವ ನೀರಿನಿಂದ ಅನಾರೋಗ್ಯ ಉಂಟಾಗಬಹುದು. ಗಮನವಿರಲಿ. ಶ್ರೀಮಹಾಲಕ್ಷ್ಮಿಯನ್ನು ಪೂಜಿಸಿ ಏಳಿಗೆಯನ್ನು ಹೊಂದುವಿರಿ.

ಧನು: ನಿಮ್ಮ ಉದ್ಯೋಗಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕಾನುಕೂಲದ ಜೊತೆಗೆ ಸಾಮಾಜಿಕವಾಗಿ ತೂಕದ ವ್ಯಕ್ತಿಯಾಗುವಿರಿ. ಮನೆಯಲ್ಲಿ ಸಂತಾನದ ಶುಭ ಸುದ್ದಿಯನ್ನು ಕೇಳುವಿರಿ.

ಮಕರ: ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯ. ವ್ಯಾಪಾರಸ್ಥರಿಗೆ ಲಾಭ-ನಷ್ಟದ ಪರಿಚಯವಾಗಲಿದೆ. ಅಬಕಾರಿ ಮತ್ತು ಕಂದಾಯ ಇಲಾಖೆಯವರಿಗೆ ಉದ್ಯೋಗದಲ್ಲಿ ಹೆಸರು, ಕೀರ್ತಿಗಳನ್ನು ಕಾಪಾಡಿಕೊಳ್ಳಲು ಕಷ್ಟವಾಗಲಿದೆ.

ಕುಂಭ: ಸಾಂಸಾರಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಯಾಗದಂತೆ ಎಚ್ಚರ ವಹಿಸಿ. ವೃತ್ತಿಪರವಾಗಿ ಬಹಳ ದಿನಗಳ ನಿರೀಕ್ಷಿತ ಕಾರ್ಯಕ್ಕೆ ಈ ದಿನ ಸಲಹೆ ದೊರಕುವುದು. ವಿವೇಕ ರಹಿತವಾದ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.


ಮೀನ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳು ನಿವಾರಣೆಯಾಗುವುದು. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಆದಾಯ ವೆಚ್ಚಗಳು ಎರಡೂ ಸರಿ ಸಮವಾಗಿರುವುದು.

ಪದಬಂಧ 4861

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಶೀ ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಔಷಧ (4)
3.ಕಡಲೆಬೇಳೆ,ಬೆಲ್ಲ ಬೇಯಿಸಿ ಮಾಡುವ ಸಿಹಿ ಖಾದ್ಯ (4)
5.ಉಲ್ಲಾ ಹಿಡಿದಿರುವ ವಂದರಿ (3)
7.ಈತ ಕೆಲಸಕ್ಕೆ ಬಾರದವ (4)
9.ಮಾತು ಬಾರದವನು (2)
10.ನ್ಯಾಯಾಲಯದ ತೀರ್ಪು (2)
11.ಈಕೆ ತೆಳ್ಳನೆಯ ಉದರವುಳ್ಳವಳು (4)
13.ಎಲ್ಲೆಯ ಬಳಿಯಿರಿಸಿದ ಮಡಿಕೆ (3)
16.ಈ ತರಹ ಕನ್ನಡಿಗ ತೋರಿದ ಅರ್ಜೆಂಟ್! (4)
17.ಕೆಟ್ಟ ಹೆಸರು ಹೀಗೆ ಬಂದಿದೆ (4)
15.ಅಜ್ಞಾತದಲ್ಲಿ ತಿಳಿದವನು ಕಾಣಿಸುತ್ತಾನೆಯೇ? (2)

ಮೇಲಿಂದ ಕೆಳಕ್ಕೆ
1.ನಾಡಿನಲ್ಲಿರುವ ಅಲ್ಪವ್ಯಕ್ತಿ (3)
2.ಮಜ ಮಾಡುತ್ತಿರುವ ಮನುಷ್ಯ! (3)
3.ಹಳಬನಲ್ಲಿ ಆವರಿಸಿದ ಭ್ರಮೆ! (4)
4.ಎದೆ ಮತ್ತು ಹೊಟ್ಟೆಯನ್ನು ಬೇರ್ಪಡಿಸುವ ಸೂಕ್ಷ್ಮ ಪದರ (2)
6.ನೆತ್ತರಲ್ಲೇ ಕೂಡಿದುದು (4)
7.ಈ ಪರಿ ತಪ್ಪಿಸಿಕೊಳ್ಳುವಿಕೆ! (3)
8.ಮಿಡಿ ಹಿಡಿದುಕೊಂಡದ್ದಕ್ಕೇ ಈ ಸಿಟ್ಟು! (4)
12.ಗಿರಿಯ ಹತ್ತಿರ ಸೆರೆ ಹಿಡಿಯುವುದು (4)
13.ಗಣಪತಿ ಚಿಕ್ಕದಾಗಿ ಮೂಡಿದ್ದಾನೆ (3)
14.ಈಕೆ ಸ್ನೇಹಿತೆ (3)



4860ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉತ್ಪ್ರೇಕ್ಷೆ 2.ಹಣಾಹಣಿ
4.ಹಲ್ಲುಗಿಂಜು 6.ಸಿಂಬಳ
7.ಣೆಹ 9.ಕಿಟಕಿ 11ಹರ
13.ಕುಲುಮೆ 14.ನಳಪಾಕ
16.ವರಸಾಮ್ಯ 17.ದುರುಳ

ಮೇಲಿಂದ ಕೆಳಕ್ಕೆ:
1.ಉದಾಹರಣೆ 2.ಹಗ್ಗ
3.ಹಣೆಬರಹ 5.ಜುಮುಕಿ
8.ಹಲಾಲುಕೋರ 10.ಕಿರ್ತನ
12.ರಸಕವಳ 15.ಗಮ್ಯ

ಸುಡೊಕು 5247

	8			5		9		
1			6		4			3
6	5			7			2	4
5		8	9					
	1					7	5	2
4		7					8	
2		5		9			3	
	6		3		5	2		7
3	7	9		6			4	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5246 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹಲವು ಕಾಲೇಜುಗಳಿಗೆ ರಜೆ ಘೋಷಣೆ: ಸಮವಸ್ತ್ರ ಧರಿಸಿದರೆ ಮಾತ್ರ ತರಗತಿಗೆ ಅವಕಾಶ

ಕೇಸರಿ ಶಾಲು ಧರಿಸಿ ವಿದ್ಯಾರ್ಥಿಗಳ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಕುಂದಾಪುರ: ತಾಲ್ಲೂಕಿನ ಹಲವು ಕಾಲೇಜುಗಳಲ್ಲಿ ಹಿಜಾಬ್ ಹಾಗೂ ಕೇಸರಿ ಶಾಲು ಸಂಘರ್ಷ ಶನಿವಾರವೂ ಮುಂದುವರಿದಿದ್ದು, ಕುಂದಾಪುರ ಸರ್ಕಾರಿ ಜೂನಿಯರ್ ಕಾಲೇಜು ಹಾಗೂ ಆರ್.ಎನ್.ಶೆಟ್ಟಿ ಕಾಲೇಜುಗಳಿಗೆ ಶನಿವಾರ ರಜೆ ಘೋಷಿಸಲಾಗಿತ್ತು.

ಆರ್.ಎನ್.ಶೆಟ್ಟಿ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಿದ ಕ್ರಮಕ್ಕೆ ಆಕ್ಷೇಪಿಸಿ, ಇತರ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಘೋಷಣೆ ಕೂಗಿದರು. ಪರಿಸ್ಥಿತಿ ಗಂಭೀರತೆ ಅರಿತ ಕಾಲೇಜು ಆಡಳಿತ ಮಂಡಳಿ ರಜೆ ಘೋಷಿಸಿತು.

ಕೇಸರಿ ಶಾಲಿನ ಮೆರವಣಿಗೆ: ಆರ್.ಎನ್. ಶೆಟ್ಟಿ ಕಾಲೇಜು ಹಾಗೂ ಭಂಡಾರ್‌ಕಾರ್ಸ್ ಕಾಲೇಜು ವಿದ್ಯಾರ್ಥಿಗಳು ಕುಂದೇಶ್ವರ ದೇವಸ್ಥಾನದ ಮುಖಮಂಟಪದಿಂದ ಶಾಸ್ತ್ರಿ ಸರ್ಕಲ್‌ವರೆಗೆ ಕೇಸರಿ ಶಾಲು ಧರಿಸಿ ಮೆರವಣಿಗೆ ನಡೆದರು. ಜೈ ಶಿವಾಜಿ, ಜೈ ಭವಾನಿ, ಜೈ ಶ್ರೀರಾಮ್ ಘೋಷಣೆ ಕೂಗಿದರು. ಆರ್.ಎನ್. ಶೆಟ್ಟಿ ಕಾಲೇಜು ಮುಂಭಾಗದಲ್ಲಿ ವಿದ್ಯಾರ್ಥಿನಿಯರು 'ಹಿಜಾಬ್ ನಮ್ಮ ಹಕ್ಕು' ಎಂದು ಘೋಷಣೆ ಕೂಗಿದರು.

ಮೆರವಣಿಗೆ ಮುಗಿಸಿ ಬಂದ ಭಂಡಾರ್‌ಕಾರ್ಸ್ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರು ಕೇಸರಿ ಶಾಲು, ಮೊಬೈಲ್ ಇಲ್ಲದೆ ಒಳ ಬರುವಂತೆ ಸೂಚಿಸಿದರು. ಅದರಂತೆ ವಿದ್ಯಾರ್ಥಿಗಳು ತರಗತಿಗೆ ತೆರಳಿದರು. ಡಾ.ಬಿ.ಬಿ.ಹೆಗ್ಡೆ ಕಾಲೇಜಿನಲ್ಲಿ ಹಿಜಾಬ್ ಧರಿಸಿ ತರಗತಿ ಪ್ರವೇಶಕ್ಕೆ ನಿರಾಕರಿಸಿದ್ದನ್ನು ಖಂಡಿಸಿ ವಿದ್ಯಾರ್ಥಿನಿಯರು ಕಾಲೇಜು ಮುಂಭಾಗದಲ್ಲಿ ಕುಳಿತು ಪ್ರತಿಭಟಿಸಿದರು.

ಬೈಂದೂರು ತಾಲ್ಲೂಕಿನ ನಾವುಂದ ಹಾಗೂ ಖಂಬದಕೋಣೆ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಶನಿವಾರ ರಜೆ ನೀಡಲಾಗಿತ್ತು. ಬೈಂದೂರು, ಗಂಗೊಳ್ಳಿ, ವಂಡ್ಸೆ ಹಾಗೂ ಶಿರೂರು ಪದವಿಪೂರ್ವ ಕಾಲೇಜುಗಳಲ್ಲಿ ತರಗತಿಗಳು ನಡೆದವು.

ಹಿಜಾಬ್ ಪ್ರತಿಭಟನೆ: ಮಾರಕಾಸ್ತ್ರ ತಂದಿದ್ದ ಇಬ್ಬರ ಬಂಧನ

ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜು ಬಳಿ ಶುಕ್ರವಾರ ಹಿಜಾಬ್ ಹಾಗೂ ಕೇಸರಿ ಶಾಲು ಧಾರಣೆ ವಿಚಾರದಲ್ಲಿ ನಡೆದ ಪ್ರತಿಭಟನೆಗೆ ಮಾರಕಾಸ್ತ್ರಗಳೊಂದಿಗೆ ಬಂದಿದ್ದ ಇಬ್ಬರು ವ್ಯಕ್ತಿಗಳನ್ನು ಕುಂದಾಪುರ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಗಂಗೊಳ್ಳಿಯ ಅಬ್ದುಲ್ ಮಜೀದ್ (32) ಹಾಗೂ ರಜಬ್ (41) ಬಂಧಿತರು. ಇತರೆ ಆರೋಪಿಗಳಾದ ಖಲೀಲ್, ರಿಜ್ವಾನ್ ಹಾಗೂ ಇಫ್ತಿಕರ್ ಬಂಧನಕ್ಕೆ ಶೋಧ ನಡೆದಿದೆ. ಕುಂದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕುಂದಾಪುರದಲ್ಲಿ ಕೇಸರಿ ಶಾಲು ಧರಿಸಿದ್ದ ವಿದ್ಯಾರ್ಥಿನಿಯರು –ಪ್ರಜಾವಾಣಿ ಚಿತ್ರ

> ಶಾಲೆ ಸರಸ್ವತಿಯ ದೇಗುಲ. ಶಾಲೆ ನಿಯಮದ ಜೊತೆಗೆ ಕಲಿಯುವುದು ವಿದ್ಯಾರ್ಥಿಗಳ ಧರ್ಮ. ಶಾಲೆಯ ನಿಯಮಕ್ಕೆ ಒಪ್ಪದಿದ್ದರೆ ಬೇರೆ ದಾರಿ ನೋಡಿಕೊಳ್ಳಲಿ.
>
> **ನಳಿನ್‌ಕುಮಾರ್ ಕಟೀಲ್,** ಸಂಸದ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> ಹಿಜಾಬ್ ವ್ಯಕ್ತಿ ಸ್ವಾತಂತ್ರ್ಯ ಎಂದು ಸಿದ್ದರಾಮಯ್ಯ ಸೇರಿ ಹಲವರು ಹೇಳುತ್ತಿದ್ದಾರೆ. ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವವರು, ಮಸೀದಿಗಳಲ್ಲಿ ಮಹಿಳೆಯರಿಗೆ ಪ್ರವೇಶ ಒದಗಿಸಲಿ.
>
> **ವಿ. ಸುನಿಲ್‌ಕುಮಾರ್,** ಸಚಿವ

ರಹೀಂ ಉಚ್ಚಿಲ್‌ಗೆ ಕೊಲೆ ಬೆದರಿಕೆ

ಮಂಗಳೂರು: ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡಿದ್ದ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ರಹೀಂ ಉಚ್ಚಿಲ್ ಅವರಿಗೆ ಕೊಲೆ ಬೆದರಿಕೆ ಹಾಕಲಾಗಿದೆ.

ಬಿಜೆಪಿ ನಾಯಕ ರಹೀಂ ಉಚ್ಚಿಲ್ ಅವರ ಮೊಬೈಲ್‌ಗೆ ಬೆದರಿಕೆ ಕರೆ ಮಾಡಲಾಗಿದ್ದು, ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಂಗಳೂರು ಪೊಲೀಸರು ಮೊಬೈಲ್ ಸಂಖ್ಯೆಯ ಆಧಾರದಲ್ಲಿ ತನಿಖೆ ಆರಂಭಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ರಹೀಂ, 'ಇಂತಹ ಬೆದರಿಕೆಗಳಿಗೆ ಹೆದರುವ ಪ್ರಶ್ನೆಯೇ ಇಲ್ಲ' ಎಂದು ಹೇಳಿದ್ದಾರೆ.

ಟ್ವಿಟ್ಟರ್‌ನಲ್ಲಿ ಟ್ರೆಂಡಿಂಗ್

'ಹಿಜಾಬ್ ಇಸ್ ಅವರ್ ರೈಟ್' ಹ್ಯಾಷ್‌ಟ್ಯಾಗ್ ಟ್ವಿಟ್ಟರ್‌ನಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ಟ್ರೆಂಡಿಂಗ್‌ನಲ್ಲಿತ್ತು. 62 ಸಾವಿರಕ್ಕೂ ಹೆಚ್ಚು ಟ್ವೀಟ್‌ಗಳು ಬಂದಿದ್ದವು. 'ತಾಯಿ ಸರಸ್ವತಿ ಎಲ್ಲರಿಗೂ ಜ್ಞಾನ ಹಂಚಲಿ. ಆಕೆ ಯಾರಿಗೂ ಭೇದ ತೋರುವುದಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಿಜಾಬ್ ವಿವಾದ ಕುರಿತು ಟ್ವೀಟ್ ಮಾಡಿ ಗಮನ ಸೆಳೆದರು.

'ಹಿಜಾಬ್‌ಗೆ ಪಟ್ಟು ಹಿಡಿದವರು ಮದರಸಾಕ್ಕೆ ಹೋಗಲಿ'

ಮಡಿಕೇರಿ: 'ಈ ನೆಲದ ನೀತಿ, ನಿಯಮಗಳ ಆಧಾರದ ಮೇಲೆ ಶಾಲಾ ಕಾಲೇಜುಗಳು ನಡೆಯುತ್ತಿವೆ. ಹಿಜಾಬ್, ತಲೆಯ ಮೇಲೆ ಟೊಪ್ಪಿ, ಬುರ್ಖಾ ಹಾಗೂ ಮೊಣಕಾಲು ಕಾಣುವಂತೆ ಪ್ಯಾಂಟ್ ಧರಿಸಿಯೇ ಬರುತ್ತೇವೆ ಎನ್ನುವವರು ಮದರಸಾಗಳಿಗೆ ಹೋಗಬಹುದು' ಎಂದು ಸಂಸದ ಪ್ರತಾಪ ಸಿಂಹ ಇಲ್ಲಿ ಶನಿವಾರ ಹೇಳಿದರು.

'ನಮ್ಮ ಧರ್ಮ ಹಾಗೂ ಷರಿಯತ್ತೇ ಮುಖ್ಯವೆಂದು ಪ್ರತಿಪಾದಿಸುವವರು, 1947ರಲ್ಲಿ ನೀಡಿದ್ದ ಪ್ರತ್ಯೇಕ ದೇಶಕ್ಕೇ ಹೋಗಬಹುದಿತ್ತು ಅಲ್ಲವೇ? ಈ ದೇಶವನ್ನು ಮೂರು ಭಾಗವಾಗಿ ವಿಭಜಿಸಿ ಅದರಲ್ಲಿ ಎರಡು ಭಾಗವನ್ನು ನಿಮಗೇ ಕೊಡಲಾಗಿತ್ತು. ಭಾರತದಲ್ಲಿದ್ದ ಮೇಲೆ ಇಲ್ಲಿನ ಕಾನೂನಿಗೆ ಅನುಗುಣವಾಗಿ ನಡೆದುಕೊಳ್ಳಬೇಕು. ಇದು ಬ್ರಿಟಿಷರ ಇಂಡಿಯಾ ಅಲ್ಲ. ಭಾರತದ ಬುನಾದಿಯೇ ಹಿಂದೂ ಧರ್ಮ. ಈ ನೆಲದ ಸಂಸ್ಕೃತಿ ಪ್ರಶ್ನಿಸುವ ಹಕ್ಕು ನಿಮಗಿಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ಹೊರಹಾಕಿದರು.

'ಚುನಾವಣೆಗಾಗಿ ಸಿದ್ದರಹೀಮಯ್ಯ' (ಮೈಸೂರು): 'ಚಾಮರಾಜಪೇಟೆಯಲ್ಲಿ ಸ್ಪರ್ಧಿಸುವಂತೆ ಸಿದ್ದರಾಮಯ್ಯ ಅವರನ್ನು ಗೋರಿಪಾಳ್ಯದ ಜಮೀರ್ ಆಹ್ವಾನಿಸುತ್ತಿದ್ದಾರೆ. ಒಂದು ವೇಳೆ ಅಲ್ಲಿ ಸ್ಪರ್ಧಿಸಿ ಯಾರಾದರೂ ಸಿದ್ದರಾಮಯ್ಯ ಅವರನ್ನು 'ಸರ್, ನಿಮ್ಮ ಹೆಸರಲ್ಲಿ ರಾಮ ಇದ್ದಾನೆ' ಎಂದು ಪ್ರಶ್ನಿಸಿದರೆ, ಚುನಾವಣೆಗಾಗಿ ಸಿದ್ದರಹೀಮಯ್ಯ ಎಂಬ ಹೆಸರು ಇಟ್ಟುಕೊಳ್ಳಲಿದ್ದಾರೆ' ಎಂದು ಲೇವಡಿ ಮಾಡಿದರು.

ಕಲಬುರಗಿ: ಪ್ರತಿಭಟನೆಗೆ ಕಾಂಗ್ರೆಸ್ ಶಾಸಕಿ ಕನೀಜ್ ಫಾತಿಮಾ ನೇತೃತ್ವ

'ಹಿಜಾಬ್' ಪರ ಮುಸ್ಲಿಂ ವಿದ್ಯಾರ್ಥಿನಿಯರ ಹೋರಾಟ

ಪ್ರಜಾವಾಣಿ ವಾರ್ತೆ

ಕಲಬುರಗಿ: ಹಿಜಾಬ್ ಧರಿಸಿ ಬಂದ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಉಡುಪಿ ಹಾಗೂ ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಪ್ರವೇಶ ನಿರಾಕರಿಸಿದ ಕ್ರಮ ಖಂಡಿಸಿ ಕಾಂಗ್ರೆಸ್ ಶಾಸಕಿ ಕನೀಜ್ ಫಾತಿಮಾ ನೇತೃತ್ವದಲ್ಲಿ ಸಾವಿರಾರು ವಿದ್ಯಾರ್ಥಿನಿಯರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

'ಹಿಜಾಬ್ ನಮ್ಮ ಹಕ್ಕು' ಎಂಬ ಫಲಕ ಹಿಡಿದಿದ್ದ ವಿದ್ಯಾರ್ಥಿನಿಯರು, ಕಾಲೇಜು ಆಡಳಿತ ಮಂಡಳಿಗಳ ನಿರ್ಧಾರ ಖಂಡಿಸಿ ಘೋಷಣೆ ಕೂಗಿದರು.

'ಹಿಜಾಬ್ ಧರಿಸುವುದು ಮುಸ್ಲಿಂ ಮಹಿಳೆಯರ ಮೂಲಭೂತ ಹಕ್ಕಾಗಿದ್ದು, ಇಲ್ಲಿಯವರೆಗೆ ಇಲ್ಲದ ನಿರ್ಬಂಧ ಈಗೇಕೆ? ದಶಕಗಳಿಂದ ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸುತ್ತಿದ್ದಾರೆ. ಇದು ಅವರ ನಂಬಿಕೆಯ ಪ್ರಶ್ನೆ. ಉಡುಪಿ ಹಾಗೂ ಕುಂದಾಪುರ ಕಾಲೇಜುಗಳಿಗೆ ಎಂದಿನಂತೆ ತೆರಳಿದ ವಿದ್ಯಾರ್ಥಿನಿಯರನ್ನು ಹಿಜಾಬ್ ಹಾಕಿಕೊಂಡ ಕಾರಣಕ್ಕಾಗಿ ಗೇಟ್ ಒಳಗೆ ಬಾರದಂತೆ ತಡೆಯಲಾಗಿದೆ. ಇದು ಅಕ್ರಮ ಹಾಗೂ ಅಸಾಂವಿಧಾನಿಕ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಶಾಸಕಿಯಾಗಿ ನಾನೂ ಹಿಜಾಬ್ ಧರಿಸಿಕೊಂಡೇ ವಿಧಾನಸೌಧದ ಕಲಾಪಗಳಲ್ಲಿ ಪಾಲ್ಗೊಂಡಿದ್ದೇನೆ. ನನ್ನ ಕ್ಷೇತ್ರದ ಜನರ ಸಮಸ್ಯೆ, ಬೇಡಿಕೆಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದೇನೆ. ಹಾಗಿದ್ದರೆ ನನ್ನನ್ನು ಇನ್ನು ಮುಂದೆ ಕಲಾಪಕ್ಕೆ ತಡೆಯುತ್ತೀರಾ' ಎಂದು ಕಲಬುರಗಿ ಉತ್ತರ ಕ್ಷೇತ್ರದ ಶಾಸಕಿ ಕನೀಜ್ ಫಾತಿಮಾ ಪ್ರಶ್ನಿಸಿದರು.



ಹಿಜಾಬ್ ಧರಿಸಿ ಕಾಲೇಜಿಗೆ ಬರುವುದನ್ನು ನಿಷೇಧಿಸಿದ ಉಡುಪಿ, ಕುಂದಾಪುರ ಕಾಲೇಜುಗಳ ಆಡಳಿತ ಮಂಡಳಿಗಳ ಕ್ರಮ ಖಂಡಿಸಿ ಮುಸ್ಲಿಂ ವಿದ್ಯಾರ್ಥಿನಿಯರು ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಹೊನ್ನಾಳಿ ಕಾಲೇಜಿನಲ್ಲಿ ಬುರ್ಖಾಗೆ ವಿರೋಧ

ಹೊನ್ನಾಳಿ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲೂ ಶನಿವಾರ ವಸ್ತ್ರಸಂಹಿತೆ ವಿಚಾರ ಸದ್ದು ಮಾಡಿದ್ದು, ಕಾಲೇಜಿನ ತರಗತಿಗಳಿಗೆ ವಿದ್ಯಾರ್ಥಿನಿಯರು ಬುರ್ಖಾ ಧರಿಸಿಕೊಂಡು ಬರುತ್ತಿರುವುದಕ್ಕೆ ವಿರೋಧ ವ್ಯಕ್ತವಾಗಿದೆ.

'ತರಗತಿಗಳಲ್ಲಿ ಬುರ್ಖಾ ನಿಷೇಧಿಸದಿದ್ದರೆ ಪ್ರತಿಭಟಿಸುತ್ತೇವೆ. ನಾವೂ ಕೇಸರಿ ಶಾಲು ಹಾಕಿಕೊಂಡು ಬರುತ್ತೇವೆ' ಎಂದು ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿಕೊಂಡು ಬಂದು ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕಾಲೇಜಿನ ಪ್ರಾಂಶುಪಾಲ ಬಸಪ್ಪ ಎಚ್.ಎತ್ತಿನಹಳ್ಳಿ, 'ಕಾಲೇಜಿನಲ್ಲಿ ಸಮವಸ್ತ್ರ ಕಡ್ಡಾಯವಿಲ್ಲ. ಹೀಗಾಗಿ ಈ ವಿಚಾರದ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಕಾಲೇಜು ಶಿಕ್ಷಣ ಇಲಾಖೆ ಹಾಗೂ ಆಯುಕ್ತರನ್ನು ಕೋರಲಾಗಿದೆ. ಬುರ್ಖಾ ಅಥವಾ ಹಿಜಾಬ್ ಕುರಿತು ವಿದ್ಯಾರ್ಥಿಗಳು ಗಲಾಟೆ ಮಾಡಿದರೆ ಪೊಲೀಸರಿಗೆ ದೂರು ನೀಡಲಾಗುವುದು' ಎಂದು ತಿಳಿಸಿದರು.

ಐಡಿಎಸ್‌ಜಿ ಕಾಲೇಜು: ಹಿಜಾಬ್– ಕೇಸರಿ ಶಾಲು ವಿವಾದ

ಚಿಕ್ಕಮಗಳೂರು: ಹಿಜಾಬ್ ಮತ್ತು ಕೇಸರಿ ಶಾಲು ವಿವಾದ ನಗರದ ಐಡಿಎಸ್‌ಜಿ ಕಾಲೇಜಿಗೂ ವ್ಯಾಪಿಸಿದೆ. ಕಾಲೇಜಿನ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜಿಗೆ ಶನಿವಾರ ಬಂದಿದ್ದರು. ಕಾಲೇಜಿನಲ್ಲಿ ಹಿಜಾಬ್‌ಗೆ ಅವಕಾಶ ನಿರಾಕರಿಸುವವರೆಗೆ ಕೇಸರಿ ಶಾಲು ತೆಗೆಯಲ್ಲ ಎಂದು ಪಟ್ಟುಹಿಡಿದರು.

ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿದ್ದರು. ಹಿಜಾಬ್ ಧರಿಸುವುದರಿಂದ ಯಾವುದೇ ತೊಂದರೆಯಾಗಿಲ್ಲ. ಅದು ನಮ್ಮ ಶಕ್ತಿ, ಧರಿಸುವುದನ್ನು ಬಿಡಲ್ಲ ಎಂದು ಹೇಳಿದರು.

ಎರಡೂ ಕಡೆಯವರು ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿದರು. ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿಗಳು, ಕಾಲೇಜು ಅಭಿವೃದ್ಧಿ ಸಮಿತಿಯವರೊಂದಿಗೆ (ಸಿಡಿಸಿ) ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಪ್ರಾಚಾರ್ಯ ಕೆ.ಎ.ರಾಜಣ್ಣ ತಿಳಿಸಿದರು.


ರಾಜ್ಯ ಸರ್ಕಾರದಿಂದ ಬೇಟಿ ಹಟಾವೊ ಯತ್ನ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣು ಮಕ್ಕಳ ಉದ್ಧಾರಕ್ಕಾಗಿ ಕೇಂದ್ರ ಸರ್ಕಾರ ಬೇಟಿ ಬಚಾವೊ, ಬೇಟಿ ಪಡಾವೊ ಯೋಜನೆ ಜಾರಿಗೊಳಿಸಿದೆ. ಆದರೆ, ರಾಜ್ಯ ಸರ್ಕಾರ ಹಿಜಾಬ್ ಧರಿಸುವ ವಿಷಯವನ್ನು ವಿವಾದ ಮಾಡುವ ಮೂಲಕ ಬೇಟಿ ಹಟಾವೊ ಮಾಡಲು ಹೊರಟಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ರಾಜ್ಯದಲ್ಲಿ ಸಾಮರಸ್ಯ ನೆಲೆಸಿರಬೇಕು ಎಂಬ ಕಾಳಜಿ ರಾಷ್ಟ್ರೀಯ ಪಕ್ಷಗಳಿಗೆ ಇದ್ದರೆ ಹಿಜಾಬ್ ಮತ್ತು ಕೇಸರಿ ಶಾಲುಗಳ ವಿಷಯವನ್ನು ಇಲ್ಲಿಗೇ ಅಂತ್ಯಗೊಳಿಸಲಿ ಎಂದು ಆಗ್ರಹಿಸಿದರು.

'ಮಕ್ಕಳ ನಿರ್ಮಲ ಮನಸ್ಸಿನಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ವಿಷ ತುಂಬಬಾರದು. 15 ದಿನಗಳಿಂದ ಚರ್ಚೆಯಲ್ಲಿರುವ ವಿಷಯವನ್ನು ಇಲ್ಲಿಗೇ ಬಿಡುವುದು ಉತ್ತಮ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂಥಹ ಸೂಕ್ಷ್ಮ ವಿಷಯವನ್ನು ಹೆಚ್ಚು ಬೆಳೆಸಲು ಬಿಡಬಾರದು. ಸೂಕ್ತವಾಗಿ ಪರಿಸ್ಥಿತಿ ನಿಭಾಯಿಸುವ ಮೂಲಕ ಸಮಾಜದ ವಾತಾವರಣ ಹದಗಡೆದಂತೆ ನೋಡಿಕೊಳ್ಳಬೇಕು' ಎಂದು ಕುಮಾರಸ್ವಾಮಿ ಹೇಳಿದರು.



ಕುಮಾರಸ್ವಾಮಿ

'ಕಾಂಗ್ರೆಸ್ ಪಕ್ಷದ್ದು ಎರಡು ನಾಲಗೆ': 'ಮಹದಾಯಿ ಜಲ ವಿವಾದದ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಎರಡು ನಾಲಗೆ ಹೊಂದಿದೆ. ಮಹದಾಯಿ ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ಮಾಡುತ್ತೇವೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದ್ದಾರೆ. ಆದರೆ, ಗೋವಾದಿಂದ ನೀರು ಬಿಡುವುದಿಲ್ಲ ಎಂದು ಕಾಂಗ್ರೆಸ್ ಪಕ್ಷದ ಅಲ್ಲಿನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಅದನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಿಡುಗಡೆ ಮಾಡಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಹೊರಗೆ ಹೋಗಿ ಎನ್ನಲು ದೇಶವೇನು ಇವರ ತಾತನದ್ದಾ?: ತನ್ವೀರ್ ಸೇಠ್

ಮೈಸೂರು: 'ವಿಭಜನೆ ಮಾಡಿ ನಮಗೊಂದು, ನಿಮಗೊಂದು ದೇಶ ಎಂದು ಎತ್ತಿಕೊಡಲು ದೇಶವೇನು ಇವರ ತಾತನದ್ದಾ? ಬೇರೆ ದೇಶಕ್ಕೆ ಹೋಗಿ ಎಂದು ವೀಸಾ ಕೊಡಲು ಇವರು ಯಾರು? ಚುನಾಯಿತ ಪ್ರತಿನಿಧಿ ಹೇಳುವ ಮಾತೇ ಇದು? ಇದು ನಮ್ಮ ಭಾರತ. ನಾವು ಉಳಿಸಿರುವುದರಿಂದಲೇ ಇವರು ಇರುವುದು' ಎಂದು ಶಾಸಕ ತನ್ವೀರ್ ಸೇಠ್ ವಾಗ್ದಾಳಿ ನಡೆಸಿದರು.

ಸಂಸದ ಪ್ರತಾಪಸಿಂಹ ಹೇಳಿಕೆಗೆ ಅವರು ಶನಿವಾರ ಅವರು ಪ್ರತಿಕ್ರಿಯಿಸಿದರು. 'ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ನಂಬಿಕೆ ಇಟ್ಟಿದ್ದೇವೆ. ದೇಶ ಕಟ್ಟುವುದು ನಮ್ಮ ಮೇಲಿರುವ ಜವಾಬ್ದಾರಿ. ನಾವು ಹುಟ್ಟಿರುವುದು, ಬೆಳೆದಿರುವುದು ಇಲ್ಲೇ. ಸತ್ತರೂ ಇಲ್ಲೇ ಮಣ್ಣಾಗುತ್ತೇವೆ' ಎಂದರು.



ತನ್ವೀರ್ ಸೇಠ್

ಮುಖ್ಯಮಂತ್ರಿಗೆ ಪತ್ರ: ಹಿಜಾಬ್ ವಿವಾದ ವಿಚಾರವಾಗಿ ಮುಖ್ಯಮಂತ್ರಿ, ಗೃಹ ಸಚಿವ ಹಾಗೂ ಶಿಕ್ಷಣ ಸಚಿವರಿಗೆ ತನ್ವೀರ್ ಸೇಠ್ ಪತ್ರ ಬರೆದು ವಿವಾದ ಬಗೆಹರಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

'ಮುಸ್ಲಿಮರ ಹೆಣ್ಣು ಮಕ್ಕಳು ಹಿಜಾಬ್ ಧರಿಸುವುದು, ಸಿಖ್ಖರು ಪೇಟ ಧರಿಸುವುದು, ಸನ್ಯಾಸ ದೀಕ್ಷೆ ಪಡೆದ ಹೆಣ್ಣು ಮಕ್ಕಳು ಸ್ಕಾರ್ಫ್ ಧರಿಸುವುದು ಕ್ರೈಸ್ತರಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಅದಕ್ಕೆ ಯಾರೂ ನಿಷೇಧ ಹೇರಿಲ್ಲ' ಎಂದಿದ್ದಾರೆ.

ಹಿಜಾಬ್-ಶಾಲು ನಿರ್ಬಂಧ; ಸಮವಸ್ತ್ರ ಕಡ್ಡಾಯ

ಒಂದನೇ ಪುಟದಿಂದ

'ಶಿರವಸ್ತ್ರ ಹಾಕಿಕೊಂಡು ಅಥವಾ ತಲೆಯನ್ನು ಮುಚ್ಚಿಕೊಂಡು ಶಾಲೆಗೆ ಬರದಂತೆ ವಿದ್ಯಾರ್ಥಿಗಳನ್ನು ತಡೆದರೆ, ಅದು ಸಂವಿಧಾನದ ಅನುಚ್ಛೇದ 25 ಉಲ್ಲಂಘನೆ ಅಲ್ಲ ಎಂದು ಸುಪ್ರೀಂ ಕೋರ್ಟ್ ಮತ್ತು ವಿವಿಧ ರಾಜ್ಯಗಳ ಹೈಕೋರ್ಟ್‌ಗಳು ಈಗಾಗಲೇ ತೀರ್ಪು ನೀಡಿವೆ. ಹೀಗಾಗಿ, ಈ ಆದೇಶ ಹೊರಡಿಸಲಾಗಿದೆ' ಎಂದು ಆದೇಶದಲ್ಲಿ ಸರ್ಕಾರ ಸಮರ್ಥನೆಯನ್ನೂ ನೀಡಿದೆ.

'ಪದವಿಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಎಲ್ಲ ಕಾಲೇಜುಗಳಲ್ಲಿ ಆಯಾ ಕಾಲೇಜುಗಳ ಕಾಲೇಜು ಅಭಿವೃದ್ಧಿ ಮಂಡಳಿ (ಸಿಡಿಸಿ) ಅಥವಾ ಆಡಳಿತ ಮಂಡಳಿಯ ಮೇಲ್ವಿಚಾರಣಾ ಸಮಿತಿ ನಿರ್ಧರಿಸುವ ಸಮವಸ್ತ್ರವನ್ನು ವಿದ್ಯಾರ್ಥಿಗಳು ಧರಿಸಬೇಕು. ಆಡಳಿತ ಮಂಡಳಿಗಳು ಸಮವಸ್ತ್ರಗಳನ್ನು ನಿಗದಿಪಡಿಸದೇ ಇದ್ದರೆ ಸಮಾನತೆ ಮತ್ತು ಏಕತೆಯನ್ನು ಕಾಪಾಡಿಕೊಂಡು ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಆಗದಂತೆ ಉಡುಪು ಧರಿಸಬೇಕು' ಎಂದೂ ಈ ಆದೇಶದಲ್ಲಿದೆ.

ಆದರೆ, ಆದೇಶದಲ್ಲಿ ಎಲ್ಲಿಯೂ ಹಿಜಾಬ್ ಎಂಬ ಪದವನ್ನು ಬಳಸಿಲ್ಲ. ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ತಮ್ಮ ಧರ್ಮದ ಆಚರಣೆಗಳನ್ನು ಪಾಲಿಸುತ್ತಿದ್ದಾರೆ. ಇದರಿಂದ ಸಮಾನತೆಗೆ ಧಕ್ಕೆಯಾಗುತ್ತಿದೆ ಎಂದು ಉಲ್ಲೇಖಿಸಿರುವ ಆದೇಶ, ಶಿರವಸ್ತ್ರ(ಹೆಡ್ ಸ್ಕಾರ್ಫ್) ಅಥವಾ ತಲೆಗೆ ಮುಚ್ಚಿಕೊಂಡು ಬರಲಾಗುತ್ತಿರುವುದನ್ನು ಹೇಳಿದೆ.

ಕೋರ್ಟ್ ತೀರ್ಪು ಉಲ್ಲೇಖಿಸಿದ ಆದೇಶ

ಪ್ರತ್ಯೇಕ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಮತ್ತು ವಿವಿಧ ರಾಜ್ಯಗಳ ಹೈಕೋರ್ಟ್‌ಗಳು ವೈಯಕ್ತಿಕ ವಸ್ತ್ರ ಸಂಹಿತೆಗಿಂತ ಏಕರೂಪದ ವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ತೀರ್ಪು ನೀಡಿವೆ. ಸರ್ಕಾರ ಹೊರಡಿಸಿರುವ ಆದೇಶದ ಪ್ರಸ್ತಾವನೆಯಲ್ಲಿ ಈ ತೀರ್ಪುಗಳನ್ನು ಉಲ್ಲೇಖಿಸಲಾಗಿದೆ.

ಆಶಾ ರೆಂಜನ್ ಹಾಗೂ ಇತರರು ಮತ್ತು ಬಿಹಾರ ರಾಜ್ಯ ಪ್ರಕರಣದಲ್ಲಿ, ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ವಿಚಾರದಲ್ಲಿ ವೈಯಕ್ತಿಕ ಹಿತಾಸಕ್ತಿಗಿಂತ ಸಾರ್ವಜನಿಕ ಹಿತಾಸಕ್ತಿ ಮುಖ್ಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಕೇರಳ ಹೈಕೋರ್ಟ್ 2018ರಲ್ಲಿ ನೀಡಿದ ತೀರ್ಪು ಒಂದರಲ್ಲಿ ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು ಉಲ್ಲೇಖಿಸಿದೆ. ಸುಪ್ರೀಂ ಕೋರ್ಟ್‌ನ ಇದೇ ತೀರ್ಪು ಉಲ್ಲೇಖಿಸಿ ವಿ. ಕಮಲಮ್ಮ ವಿರುದ್ಧ ಡಾ.ಎಂ.ಜಿ.ಆರ್. ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ಇತರರು ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್, ವಿಶ್ವವಿದ್ಯಾಲಯದ ನಿಗದಿಪಡಿಸಿದ್ದ ವಸ್ತ್ರ ಸಂಹಿತೆ ನಿರ್ಧಾರವನ್ನು ಎತ್ತಿಹಿಡಿದಿದೆ. ಎಂ. ವೆಂಕಟಸುಬ್ಬರಾವ್ ಮೆಟ್ರಿಕ್ಯುಲೇಷನ್ ಹೈಯರ್ ಸೆಕೆಂಡರಿ ಸ್ಕೂಲ್ ಆಫ್ ಸ್ಟಾಫ್ ಅಸೋಸಿಯೇಷನ್ ವಿರುದ್ಧ ಎಂ. ವೆಂಕಟಸುಬ್ಬರಾವ್ ಮೆಟ್ರಿಕುಲೇಷನ್ ಹೈಯರ್ ಸೆಕೆಂಡರಿ ಸ್ಕೂಲ್ ಪ್ರಕರಣದಲ್ಲಿಯೂ ಮದ್ರಾಸ್ ಹೈಕೋರ್ಟ್ ಇದೇ ರೀತಿಯ ತೀರ್ಪು ನೀಡಿದೆ. ಫಾತಿಮಾ ಹುಸೇನ್ ಸೈಯದ್ ವಿರುದ್ಧ ಭಾರತ್ ಎಜುಕೇಷನ್ ಸೊಸೈಟಿ ಮತ್ತು ಇತರರು ಪ್ರಕರಣದಲ್ಲಿ ವಸ್ತ್ರಸಂಹಿತೆಗೆ ಸಂಬಂಧಿಸಿದಂತೆ ಮುಂಬೈಯ ಕಾರ್ತಿಕ್ ಇಂಗ್ಲಿಷ್ ಶಾಲೆಯಲ್ಲಿ ಸಮಸ್ಯೆ ಉಂಟಾಗಿತ್ತು. ಈ ಪ್ರಕರಣದಲ್ಲಿ, ಶಿರವಸ್ತ್ರ ಹಾಕಿಕೊಂಡು ಅಥವಾ ತಲೆಯನ್ನು ಮುಚ್ಚಿಕೊಂಡು ಶಾಲೆಗೆ ಬರದಂತೆ ಅರ್ಜಿದಾರರನ್ನು ಪ್ರಾಂಶುಪಾಲರು ನಿರ್ದೇಶಿಸಿರುವುದು ಸಂವಿಧಾನದ ಅನುಚ್ಛೇದ 25ರ ಉಲ್ಲಂಘನೆ ಅಲ್ಲ ಎಂದು ಬಾಂಬೆ ಹೈಕೋರ್ಟ್ ತೀರ್ಪು ನೀಡಿದೆ ಎಂದೂ ಪ್ರಸ್ತಾವನೆ ವಿವರಿಸಿದೆ.


'ದೇಣಿಗೆ ಮರಳಿಸುವ ವಿಚಾರಕ್ಕೆ ಬದ್ಧ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಚಿವ ಮುರುಗೇಶ ನಿರಾಣಿ ಮಠಕ್ಕೆ ದಾನವಾಗಿ ನೀಡಿರುವ ವಸ್ತುಗಳೆಲ್ಲವನ್ನೂ ಅವರ ಮನೆಗೆ ಮರಳಿಸುವ ವಿಚಾರಕ್ಕೆ ಈಗಲೂ ಬದ್ಧವಾಗಿದ್ದೇನೆ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿ, 'ಮಾತುಕತೆಗೆ ನಾನು ಅವರನ್ನು ಕರೆಯುವುದಿಲ್ಲ. ಬೇಕಾದರೆ ಅವರೇ ಬಂದು ಮಾತನಾಡಲಿ. ಗುರುಗಳ ಭೇಟಿಗೆ ಎಲ್ಲರಿಗೂ ಅವಕಾಶವಿದೆ. ನನ್ನ ಮಠ 24X7 ತೆರೆದಿರುತ್ತದೆ. ನಾವಿಬ್ಬರು ಗುರು–ಶಿಷ್ಯರು. ಅವರು ಗುರುವನ್ನು ಭೇಟಿಯಾಗಲಿ' ಎಂದು ಸ್ಪಷ್ಟಪಡಿಸಿದರು.

ದೇಶಕ್ಕೆ ಒಬ್ಬರೇ ರಾಷ್ಟ್ರಪತಿ: 'ದೇಶಕ್ಕೆ ಒಬ್ಬರೇ ರಾಷ್ಟ್ರಪತಿ, ಒಂದು ಸಮುದಾಯಕ್ಕೆ ಒಬ್ಬರೇ ಗುರು. ಪಂಚಮಸಾಲಿ ಸಮಾಜಕ್ಕೆ ಮೂರನೇ ಪೀಠದ ಅಗತ್ಯವಿಲ್ಲ' ಎಂಬುದನ್ನು ಅವರು ಪುನರುಚ್ಚರಿಸಿದರು.



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

'14 ವರ್ಷಗಳಿಂದ ಕಷ್ಟಪಟ್ಟು ಸಮುದಾಯವನ್ನು ಒಗ್ಗೂಡಿಸಿದ್ದೇನೆ. ಕೂಡಲಸಂಗಮ ಶ್ರೀಗಳ ಪ್ರಭಾವ ಹೆಚ್ಚಾಗುತ್ತಿದೆ ಎಂಬ ಹೊಟ್ಟೆ ಕಿಚ್ಚಿನಿಂದ ಕೆಲವರು ಈ ಹುನ್ನಾರ ನಡೆಸಿದ್ದಾರೆ. ಪಂಚಮಸಾಲಿ ಪೀಠವೇ ನಮ್ಮ ಪೀಠ. ಅವರು ಬೇಕಾದರೆ ಮನೆಗೊಂದು, ಊರಿಗೊಂದು ಪೀಠ ಮಾಡಿಕೊಳ್ಳಲಿ. ಪಂಚಮಸಾಲಿಗೆ 2ಎ ಮೀಸಲಾತಿ ಕೊಡಿಸುವುದಷ್ಟೇ ನಮ್ಮ ಗುರಿ. ಏನೇ ಮಾಡಿದರೂ ನಮ್ಮ ಹೋರಾಟ ನಿಲ್ಲುವುದಿಲ್ಲ. ಸದ್ಯದಲ್ಲೇ ಜಯ ಸಿಗಲಿದೆ' ಎಂದು ಸ್ವಾಮೀಜಿ ಹೇಳಿದರು.

ಹಿಜಾಬ್, ಉರ್ದು ಬೇಕಾದವರು ಪಾಕಿಸ್ತಾನಕ್ಕೆ ಹೋಗಲಿ: ಯತ್ನಾಳ

ಪ್ರಜಾವಾಣಿ ವಾರ್ತೆ

ಮೈಸೂರು: 'ಹಿಜಾಬ್ ಬೇಕು, ಉರ್ದು ಬೇಕು, ಇಸ್ಲಾಂ ಧರ್ಮದ ಸಂಸ್ಕೃತಿ ಪಾಲಿಸಬೇಕು ಎನ್ನುವವರು ಪಾಕಿಸ್ತಾನಕ್ಕೆ ಹೋಗಲಿ. ಇಲ್ಲಿಯೇ ಇರಬೇಕಾದರೆ ದೇಶದ ಸಂವಿಧಾನ ಮತ್ತು ಸಂಸ್ಕೃತಿಯನ್ನು ಪಾಲಿಸಬೇಕು' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.



ಬಸನಗೌಡ ಪಾಟೀಲ ಯತ್ನಾಳ

ಶನಿವಾರ ಇಲ್ಲಿ ಮಾಧ್ಯಮದವರ ಜತೆ ಮಾತನಾಡಿ, 'ಇಂದು ಹಿಜಾಬ್ ಧರಿಸಲು ಅವಕಾಶ ನೀಡಿ ಎನ್ನುವವರು, ನಾಳೆ ಶಾಲೆಯಲ್ಲಿ ಮಸೀದಿ ಕಟ್ಟಬೇಕು ಎನ್ನುತ್ತಾರೆ. ಅಂಥವರಿಗೆ ಬೆಂಬಲ ಕೊಡುವವರು ನಿಜವಾದ ದೇಶದ್ರೋಹಿಗಳು. ಆ ರೀತಿಯ ಚಟುವಟಿಕೆಗಳನ್ನು ಮುಲಾಜಿಲ್ಲದೆ ಹತ್ತಿಕ್ಕಬೇಕು. ಹಿಜಾಬ್ ಧರಿಸಿ ಬರುವವರನ್ನು ಶಾಲೆಯಿಂದ ಹೊರಗೆ ಹಾಕಬೇಕು' ಎಂದು ಸರ್ಕಾರವನ್ನು ಆಗ್ರಹಿಸಿದರು.

ಸಿದ್ದರಾಮಯ್ಯ ಮತಾಂತರಗೊಂಡಿದ್ದಾರೆಯೇ?: 'ಸಿದ್ದರಾಮಯ್ಯ ಅವರು ಹಿಂದೂ ಆಗಿಯೇ ಇದ್ದಾರೆಯೇ ಅಥವಾ ಇಸ್ಲಾಂಗೆ ಮತಾಂತರಗೊಂಡಿದ್ದಾರೆಯೇ ಎಂಬ ಅನುಮಾನ ನನ್ನನ್ನು ಕಾಡುತ್ತಿದೆ. ಪ್ರತಿಬಾರಿಯೂ ಮುಸ್ಲಿಮರ ಪರವಾಗಿ ಮಾತನಾಡುವುದು ಜಾತ್ಯತೀತರ ಲಕ್ಷಣವಲ್ಲ. ಜಾತ್ಯತೀತ ಎಂದರೆ ಎಲ್ಲ ಸಮಾಜದ ಭಾವನೆಗಳನ್ನು ಅರಿತು ಕೆಲಸ ಮಾಡಬೇಕು. ಒಂದು ವರ್ಗವನ್ನು ಮೆಚ್ಚಿಸಿಕೊಂಡು ಕುಳಿತರೆ ದೇಶದ ಪರಿಸ್ಥಿತಿ ಏನಾಗಬೇಡ? ತಾಲಿಬಾನಿ ಸಂಸ್ಕೃತಿಯನ್ನು ತರುವ ಷಡ್ಯಂತ್ರಕ್ಕೆ ನಮ್ಮ ಪಕ್ಷ ಅವಕಾಶ ಕೊಡುವುದಿಲ್ಲ' ಎಂದು ಹರಿಹಾಯ್ದರು.

ಹಿಜಾಬ್–ಕೇಸರಿ ಶಾಲು ವಿವಾದ: ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿಕೆ

‘ಹಿಜಾಬ್‌ಗೆ ಅವಕಾಶ: ಕ್ರಿಯೆಗೆ ತಕ್ಕ ಪ್ರತಿಕ್ರಿಯೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗಳಿಗೆ ಬರಲು ಅವಕಾಶ ನೀಡಬೇಕೆಂಬ ಬೇಡಿಕೆ ವಿಷಯದಲ್ಲಿ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ನಡೆಯುತ್ತಿದೆ. ಪ್ರತಿಕ್ರಿಯೆಯ ರೂಪದಲ್ಲಿ ಕೆಲವರು ಕೇಸರಿ ಶಾಲು ಧರಿಸಿ ಬರುತ್ತಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸಮವಸ್ತ್ರ ಧರಿಸುವುದು ಕಡ್ಡಾಯ. ಆದರೆ, ಕೆಲವರು ಹಿಜಾಬ್ ಧರಿಸಲು ಅವಕಾಶ ನೀಡಬೇಕೆಂಬ ಬೇಡಿಕೆ ಮುಂದಿಟ್ಟುಕೊಂಡು ಸಮಾಜ ಒಡೆಯಲು ಕುತಂತ್ರ ರೂಪಿಸಿದ್ದಾರೆ. ಸರ್ಕಾರ ಇದನ್ನು ಸಹಿಸುವುದಿಲ್ಲ’ ಎಂದರು.

ಒಂದೂವರೆ ವರ್ಷದಿಂದ ಯಾವ ಸಮಸ್ಯೆಯೂ ಇರಲಿಲ್ಲ. ಹೊರಗಿನ ಮತಾಂಧ ಶಕ್ತಿಗಳ ಕೈವಾಡದಿಂದ ಈಗ ಸಮಸ್ಯೆ ಉಂಟಾಗಿದೆ. ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆಹಚ್ಚಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

‘ಹಿಜಾಬ್ ಧರಿಸುವುದನ್ನು ವಿರೋಧಿಸಿ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ತರಗತಿಗಳಿಗೆ ಬರುವುದು ತಪ್ಪಲ್ಲವೆ? ಎಂದು ಕೆಲವರು ಪ್ರಶ್ನೆ ಮಾಡಿದ್ದಾರೆ. ಒಂದು ತಪ್ಪಾದರೆ ಇನ್ನೊಂದು ಕೂಡ ತಪ್ಪು. ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಅಷ್ಟೇ ಇದು’ ಎಂದರು.

‘ಕೇಸರಿ ಆಗಲಿ, ಹಿಜಾಬ್ ಆಗಲಿ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಗೊಂದಲ ಇರಬಾರದು. ಅದು ಸರಿಯಾ? ಇದು ಸರಿಯಾ? ಅನ್ನೋದು ಪ್ರಶ್ನೆಯಲ್ಲ. ಒಂದು ತಪ್ಪಾದರೆ ಇನ್ನೊಂದು ಕೂಡ ತಪ್ಪು ಅಲ್ಲವೆ’ ಎಂದು ಪ್ರಶ್ನಿಸಿದರು.

‘ಹಿಜಾಬ್ ವಿಚಾರದಲ್ಲಿ ಸರ್ಕಾರಕ್ಕೆ ಸ್ಪಷ್ಟತೆ ಇದೆ. ಯಾವ ಗೊಂದಲವೂ ಇಲ್ಲ. ಹಿಜಾಬ್ ಹೆಸರಿನಲ್ಲಿ ಮತಾಂಧತೆ ಪ್ರದರ್ಶಿಸುವುದನ್ನು ನಾವು ವಿರೋಧಿಸುತ್ತೇವೆ’ ಎಂದು ಪೂಜಾರಿ ಹೇಳಿದರು.

ಇಡೀ ದೇಶಕ್ಕೆ ಕಿರುಕುಳ ನೀಡಬೇಕು, ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕು ಎಂಬ ಕಾರಣಕ್ಕಾಗಿ ಈ ಬೆಳವಣಿಗೆಗಳು ನಡೆದಿವೆ. ಈ ವಿಚಾರ ಕಾಶ್ಮೀರದಲ್ಲೂ ಚರ್ಚೆಗೆ ಬರಬೇಕು ಮತ್ತು ಅದರಿಂದ ದೇಶದ ಭದ್ರತೆಗೆ ತೊಂದರೆ ಆಗಬೇಕು ಎಂಬ ಹುನ್ನಾರ ಇದರ ಹಿಂದಿದೆ ಎಂದು ಆರೋಪಿಸಿದರು.

ಹಿಜಾಬ್ ಧರಿಸಿ ತರಗತಿಗೆ ಬರಲು ಅವಕಾಶ ನೀಡಬೇಕೆಂಬ ಬೇಡಿಕೆಯನ್ನು ವಿರೋಧಿಸಬೇಕು ಎಂಬ ವಿಚಾರ ಸಿದ್ದರಾಮಯ್ಯ ಅವರ ಮನಸ್ಸಿನಲ್ಲೂ ಇದೆ. ಆದರೆ, ಮತಗಳ ಮೇಲೆ ಕಣ್ಣಿಟ್ಟು ಸರ್ಕಾರವನ್ನು ಚುಚ್ಚುವ ಕೆಲಸ ಮಾಡುತ್ತಿದ್ದಾರೆ. ಈ ವೇಳೆಗೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರೇ ಮಧ್ಯ ಪ್ರವೇಶ ಮಾಡಿ ವಿಷಯವನ್ನು ತಿಳಿಗೊಳಿಸಬೇಕಿತ್ತು ಎಂದರು.

‘ಪಕ್ಷದ ನಿರ್ಧಾರಕ್ಕೆ ಬದ್ಧ’

‘ಸಂಪುಟ ಪುನಾರಚನೆ ಮಾಡುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ಪಕ್ಷದ ರಾಷ್ಟ್ರೀಯ ವರಿಷ್ಠರಿಗೆ ಇರುವ ಪರಮಾಧಿಕಾರ. ಸಂಪುಟದಿಂದ ಅವರನ್ನು ಕೈಬಿಡುತ್ತಾರೆ, ಇವರನ್ನು ಕೈಬಿಡುತ್ತಾರೆ ಎಂಬ ಊಹೆ ಬೇಡ. ಪಕ್ಷದ ನಿರ್ಧಾರಕ್ಕೆ ನಾನು ಬದ್ಧ’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.



ಕೋಟ ಶ್ರೀನಿವಾಸ ಪೂಜಾರಿ

‘ಮಕ್ಕಳ ಭಾವನೆ ಕೆರಳಿಸಬೇಡಿ’

ಯಾದಗಿರಿ: ‘ರಾಜಕೀಯ ನುಸುಳಿದ್ದರಿಂದ ಶಿಕ್ಷಣ ಕ್ಷೇತ್ರ ಗೊಂದಲದ ಗೂಡಾಗಿದ್ದು, ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಬೆಳೆಯುವ ಮಕ್ಕಳಲ್ಲಿ ಸಾಮರಸ್ಯ, ದೇಶಭಕ್ತಿ ಮತ್ತು ಶಿಕ್ಷಣದ ಬಗ್ಗೆ ಅರಿವು ಮೂಡಿಸಬೇಕೇ ಹೊರತು ಅವರ ಭಾವನೆ ಕೆರಳಿಸುವ ಕೆಲಸ ಆಗಬಾರದು’ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಹಿಜಾಬ್‌ಗೆ ನಿರ್ಬಂಧ: ಹಿಂದುತ್ವವಾದಿಗಳ ವ್ಯವಸ್ಥಿತ ಸಂಚು

ಬೆಂಗಳೂರು: ‘ಮುಸ್ಲಿಂ ವಿದ್ಯಾರ್ಥಿನಿಯರಿಗೆ ಕಾಲೇಜಿನಲ್ಲಿ ಹಿಜಾಬ್ ಧರಿಸದಂತೆ ನಿರ್ಬಂಧ ಹೇರುತ್ತಿರುವುದು ಮುಸ್ಲಿಂ ಹೆಣ್ಣು ಮಕ್ಕಳನ್ನು ಅಮಾನವೀಯವಾಗಿ ನಡೆಸಿಕೊಳ್ಳಲು ಮತ್ತು ಅವರ ಧಾರ್ಮಿಕ ಗುರುತನ್ನು ದೂಷಿಸಲು ಹಿಂದೂಪರ ಗುಂಪುಗಳು ನಡೆಸುತ್ತಿರುವ ವ್ಯವಸ್ಥಿತ ಪಿತೂರಿ’ ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಷ್ಟ್ರೀಯ ಸಮಿತಿ ಸದಸ್ಯೆ ಕೆ.ಪಿ.ಫಾತಿಮಾ ಶೆರಿನ್ ಆರೋಪಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಬಿಜೆಪಿಯವರ ಒತ್ತಡದಿಂದಾಗಿ ಕಾಲೇಜಿನ ಆಡಳಿತ ಮಂಡಳಿ ಹಿಜಾಬ್ ತೆರವು ಮಾಡಲು ಮುಸ್ಲಿಂ ವಿದ್ಯಾರ್ಥಿನಿಯರ ಮೇಲೆ ನಿರ್ಬಂಧ ಹೇರುತ್ತಿದೆ’ ಎಂದು ದೂರಿದರು.

‘ಮುಸ್ಲಿಂ ಹುಡುಗಿಯರು ಹಿಜಾಬ್ ಧರಿಸಿ ತರಗತಿಗಳಿಗೆ ಹಾಜರಾಗುವುದನ್ನು ವಿರೋಧಿಸಿ ಹಿಂದೂ ವಿದ್ಯಾರ್ಥಿಗಳ ಗುಂಪು ಕೇಸರಿ ಶಾಲು ಧರಿಸಿ ಕಾಲೇಜಿಗೆ ಪ್ರವೇಶಿಸಿದ್ದಾರೆ. ಇದೇ ತಂತ್ರವನ್ನು ಹಿಂದುತ್ವವಾದಿಗಳು ಇತರ ಕಾಲೇಜುಗಳಿಗೂ ಪಸರಿಸುತ್ತಿದ್ದಾರೆ. ಇದೊಂದು ವ್ಯವಸ್ಥಿತ ಪಿತೂರಿ ಎನ್ನುವುದರಲ್ಲಿ ಎರಡು ಮಾತಿಲ್ಲ’ ಎಂದರು.

‘ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನು ನಿರಾಕರಿಸುವಲ್ಲಿ ಕಾಲೇಜು ಪ್ರಾಂಶುಪಾಲರನ್ನು ಬಳಸಿಕೊಂಡಿರುವುದು ಬೇಸರದ ಸಂಗತಿ. ಈ ಬಗ್ಗೆ ನ್ಯಾಯಯುತ ತನಿಖೆ ನಡೆಯಬೇಕು. ಈ ಷಡ್ಯಂತ್ರದ ಹಿಂದಿರುವ ವ್ಯಕ್ತಿಗಳನ್ನು ಬಂಧಿಸಬೇಕು’ ಎಂದೂ ಆಗ್ರಹಿಸಿದರು.

ಕ್ಯಾಂಪಸ್ ಫ್ರಂಟ್‌ನ ಕೇರಳ ಘಟಕದ ಉಪಾಧ್ಯಕ್ಷೆ ಝಿಬಾ ಶಿರೀನ್, ‘ಮುಸ್ಲಿಂ ಮಹಿಳಾ ಹೋರಾಟಗಾರ್ತಿಯರನ್ನು ಆನ್‌ಲೈನ್ ವೇದಿಕೆಗಳಲ್ಲಿ ಹರಾಜು ಹಾಕುವುದು, ಕರ್ನಾಟಕ ಮತ್ತು ಕೇರಳದಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ಮೂಲಭೂತ ಹಕ್ಕುಗಳನ್ನು ನಿರಾಕರಿಸುವುದು ಪಿತೂರಿಯ ಭಾಗವಾಗಿದೆ’ ಎಂದು ದೂರಿದರು.

‘ಈ ಸಂಚುಕೋರರು ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಮಧ್ಯಪ್ರದೇಶ ಮತ್ತು ಉತ್ತರಾಖಂಡಕ್ಕೆ ಸೇರಿದವರಾಗಿದ್ದಾರೆ. ಇದೊಂದು ಸಂಘಟಿತ ಜಾಲ’ ಎಂದರು.

‘ಸಿದ್ದರಾಮಯ್ಯ ಸಮಯ ಸಾಧಕರು’

ತುಮಕೂರು: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಮಯ ಸಾಧಕರು. ಈ ಹಿಂದೆ ತಮ್ಮದೇ ಸರ್ಕಾರದಲ್ಲಿ ಏಕ ರೀತಿಯ ವಸ್ತ್ರಸಂಹಿತೆ ಜಾರಿಗೆ ತಂದಿದ್ದರು. ಈಗ ಅವರೇ ಹಿಜಾಬ್‌ಗೆ ಬೆಂಬಲ ಸೂಚಿಸುತ್ತಿದ್ದಾರೆ. ಸಮಯಕ್ಕೆ ತಕ್ಕಂತೆ ಮಾತನಾಡುವ ಕೆಲಸ ಮಾಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಸೊಗಡು ಶಿವಣ್ಣ ಟೀಕಿಸಿದರು.

ಸುದ್ದಿ 2 ನಿಮಿಷ

‘ಬಿಎಂಟಿಸಿ ನಿರ್ವಾಹಕರು ಕನ್ನಡದಲ್ಲಿ ವ್ಯವಹರಿಸಲಿ’

ಬೆಂಗಳೂರು: ‘ಬಿಎಂಟಿಸಿ ಬಸ್‌ಗಳ ನಿರ್ವಾಹಕರು ಇಲ್ಲಿಗೆ ವಲಸೆ ಬಂದ ಅನ್ಯಭಾಷಿಕರೊಂದಿಗೂ ಕನ್ನಡದಲ್ಲಿ ವ್ಯವಹರಿಸಬೇಕು. ಇದರಿಂದ ಕನ್ನಡ ಕಲಿಕೆ ಸಾಧ್ಯವಾಗುತ್ತದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದ್ದಾರೆ.

ಈ ಬಗ್ಗೆ ಅವರು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ‘ಉದ್ಯೋಗ ಸೇರಿದಂತೆ ವಿವಿಧ ಕಾರಣಗಳಿಂದ ಬೆಂಗಳೂರಿಗೆ ಬಂದವರು ಕನ್ನಡ ಕಲಿಯುವ ಪ್ರಯತ್ನ ಮಾಡುತ್ತಿಲ್ಲ. ಅವರು ಬಸ್‌ಗಳಲ್ಲಿ ಪ್ರಯಾಣಿಸುವಾಗ ನಿರ್ವಾಹಕರು ಅವರದ್ದೇ ಭಾಷೆಯಲ್ಲಿ ಸೇವೆ ನೀಡಲು ಮುಂದಾಗುತ್ತಿದ್ದಾರೆ. ಈ ಬಗ್ಗೆ ಪ್ರಾಧಿಕಾರಕ್ಕೆ ದೂರುಗಳು ಬಂದಿವೆ’ ಎಂದು ಹೇಳಿದ್ದಾರೆ.

‘ಬೆಂಗಳೂರಿನಲ್ಲಿ ವಲಸಿಗರು ಸಂಚಾರಕ್ಕಾಗಿ ಬಿಎಂಟಿಸಿ ಬಸ್‌ಗಳನ್ನೇ ಅವಲಂಬಿಸುತ್ತಾರೆ. ಅನ್ಯಭಾಷಿಕರಿಗೆ ಕನ್ನಡಿಗರೇ ಅವರ ಭಾಷೆಯಲ್ಲಿ ಸೇವೆ ಒದಗಿಸಿದರೆ ಕನ್ನಡ ಕಲಿಯುವ ಪ್ರಕ್ರಿಯೆಯಿಂದ ದೂರಮಾಡಿದಂತೆ ಆಗುತ್ತದೆ. ಕನ್ನಡವನ್ನು ಕಲಿಯದೆಯೂ ಜೀವನ ನಡೆಸಬಹುದು ಎಂಬ ಸನ್ನಿವೇಶವನ್ನು ನಾವೇ ಸೃಷ್ಟಿಸುತ್ತಿರುವುದು ನೋವಿನ ಸಂಗತಿ. ಆದ್ದರಿಂದ ಅನ್ಯ ಭಾಷಿಕರೊಂದಿಗೆ ಕನ್ನಡದಲ್ಲಿಯೇ ನಿರ್ವಾಹಕರು ವ್ಯವಹರಿಸುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.



‘ವಿದ್ಯುತ್ ದರ ಹೆಚ್ಚಳ ಬೇಡ’

ಬೆಂಗಳೂರು: ವಿದ್ಯುತ್ ದರ ಪರಿಷ್ಕರಣೆಗೆ ಕರ್ನಾಟಕ ವಿದ್ಯುತ್ ಬಳಕೆದಾರರ ಸಂಘ ವಿರೋಧ ವ್ಯಕ್ತಪಡಿಸಿದೆ.

ಚೆಸ್ಕಾಂ ಮತ್ತು ಹೆಸ್ಕಾಂ ಜತೆಗೆ ಇತರ ವಿದ್ಯುತ್ ಕಂಪನಿಗಳು ವಿದ್ಯುತ್ ದರ ಏರಿಕೆಗೆ ಪ್ರಸ್ತಾವ ಸಲ್ಲಿಸಿವೆ. ಇದಕ್ಕೆ ಪೂರಕವಾಗಿ ಇಂಧನ ಸಚಿವರು ವಿದ್ಯುತ್ ದರ ಪರಿಷ್ಕರಣೆ ಅನಿವಾರ್ಯ ಎಂದು ತಿಳಿಸಿದ್ದಾರೆ. ಇದರಿಂದ, ಜನಸಾಮಾನ್ಯರಲ್ಲಿ ಬಹಳಷ್ಟು ಆಕ್ರೋಶ ಉಂಟಾಗಿದೆ ಎಂದು ತಿಳಿಸಿದೆ.

‘ಕೋವಿಡ್‌ನಿಂದ ಈಗಾಗಲೇ ಜನಸಾಮಾನ್ಯರು ಬಸವಳಿದಿದ್ದು, ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಬಹುತೇಕ ಜನರಿಗೆ ಮನೆ ಖರ್ಚು ನಿಭಾಯಿಸುವುದೇ ಬಹಳ ದೊಡ್ಡ ಸವಾಲಾಗಿರುವ ಈ ಹೊತ್ತಿನಲ್ಲಿ, ವಿದ್ಯುತ್ ದರ ಏರಿಕೆ ಹೆಸರಿನಲ್ಲಿ ಇನ್ನಷ್ಟು ಹೊರೆ ಹೊರಿಸುವುದು ಅತ್ಯಂತ ಜನವಿರೋಧಿ’ ಎಂದು ಸಂಘದ ಸಂಚಾಲಕ ಕೆ. ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸರ್ಕಾರದ ವಿವಿಧ ಇಲಾಖೆಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸುಮಾರು ₹12 ಸಾವಿರ ಕೋಟಿ ಬಾಕಿ ಉಳಿಸಿಕೊಂಡಿವೆ. ವ್ಯಾಪಕ ಭ್ರಷ್ಟಾಚಾರ ಮತ್ತು ಸರ್ಕಾರದ ವೈಫಲ್ಯವೇ ಈ ಜನವಿರೋಧಿ ಕ್ರಮಕ್ಕೆ ನಿಜವಾದ ಕಾರಣ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸುಸ್ತಿದಾರರಿಂದ ಬಾಕಿ ವಸೂಲಿ, ವಿದ್ಯುತ್ ದುರ್ಬಳಕೆಗೆ ತಡೆ ಮತ್ತು ವಿತರಣೆ ನಷ್ಟಗಳನ್ನು ತಗ್ಗಿಸುವ ಕ್ರಮಗಳಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಆಗಿರುವ ನಷ್ಟಗಳನ್ನು ಸಮರ್ಪಕವಾಗಿ ಸರಿದೂಗಿಸಬಹುದ’ ಎಂದು ಅವರು ಪ್ರತಿಪಾದಿಸಿದ್ದಾರೆ.

ಸಚಿವರು ‘ರಿವ್ಯಾಂಪ್ಡ್ ಡಿಸ್ಟ್ರಿಬ್ಯೂಷನ್ ಸೆಕ್ಟರ್ ಸ್ಕೀಮ್’ (ಆರ್‌ಡಿಎಸ್‌ಎಸ್) ಅನುಷ್ಠಾನದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಇದು ವಿದ್ಯುತ್ ಮಸೂದೆ– 2003ರ ಅವಿಭಾಜ್ಯ ಅಂಗ. ಈ ಯೋಜನೆ ಅಡಿಯಲ್ಲಿ ನಾವು ಮೊಬೈಲ್ ಫೋನ್‌ಗಳಿಗೆ ಪ್ರಿಪೇಯ್ಡ್ ರಿಚಾರ್ಜ್ ಮಾಡಿಸಿದಂತೆಯೇ ಇರುತ್ತದೆ. ಪ್ರಿಪೇಯ್ಡ್ ಆಧಾರದ ಮೇಲೆ ಕೆಲಸ ಮಾಡುವ ಡಿಜಿಟಲ್ ಮೀಟರ್‌ಗಳನ್ನು (ಸ್ಮಾರ್ಟ್ ಮೀಟರ್) ಅಳವಡಿಸುತ್ತಾರೆ. ಇದು ಜನರ ದುಡ್ಡಿನಲ್ಲಿ ಕಟ್ಟಿ ಬೆಳೆಸಿರುವ ವಿದ್ಯುತ್ ಸರಬರಾಜು ವ್ಯವಸ್ಥೆಯ ಖಾಸಗೀಕರಣಕ್ಕೆ ರಾಜ್ಯ ಸರ್ಕಾರ ನಡೆಸುತ್ತಿರುವ ಹುನ್ನಾರವಲ್ಲದೇ ಮತ್ತೇನೂ ಅಲ್ಲ. ಈ ಯೋಜನೆ ಜಾರಿಗೆ ಬಂದರೆ, ಸಾಮಾನ್ಯ ಬಳಕೆದಾರರು ಖಾಸಗಿ ವಿದ್ಯುತ್ ಕಂಪನಿಗಳ ತಾಳಕ್ಕೆ ಕುಣಿಯಬೇಕಾಗುತ್ತದೆ’ ಎಂದು ದೂರಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

17,53,636 ▲	ಒಟ್ಟು ಪ್ರಕರಣಗಳು
45,742 ▼	ಸಕ್ರಿಯ ಪ್ರಕರಣಗಳು
16,91,234 ▲	ಗುಣಮುಖರಾದವರು
16,659 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	4,532 ▼
ಗುಣಮುಖ	10,420 ▼
ಸಾವು	15

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ವಾರ್ಡ್ ವಿಂಗಡಣೆ ಅವೈಜ್ಞಾನಿಕ: ಕೋರ್ಟ್‌ಗೆ ಮೊರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವಾರ್ಡ್ ವಿಂಗಡಣೆ ಪ್ರಕ್ರಿಯೆಯನ್ನು ವೈಜ್ಞಾನಿಕವಾಗಿ ನಡೆಸದಿದ್ದರೆ ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸುತ್ತೇವೆ. ಬಳಿಕ, ಕೋರ್ಟ್ ಮೊರೆ ಹೋಗುತ್ತೇವೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

‘ವಾರ್ಡ್‌ಗಳ ಮರು ವಿಂಗಡಣೆಯಲ್ಲಿ ಬಿಜೆಪಿ ಹಸ್ತಕ್ಷೇಪ ಮಾಡುತ್ತಿದೆ ಮತ್ತು ಮರುವಿಂಗಡಣಾ ಸಮಿತಿ ನಿಷ್ಕ್ರಿಯವಾಗಿದೆ’ ಎಂದು ಆರೋಪಿಸಿ ಕಾಂಗ್ರೆಸ್ ನಾಯಕರು ಬಿಬಿಎಂಪಿ ಕೇಂದ್ರ ಕಚೇರಿ ಮುಂದೆ ಶನಿವಾರ ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ರಾಮಲಿಂಗಾ ರೆಡ್ಡಿ, ‘ಕೋವಿಡ್ ಕಾರಣ ಕಾರ್ಯಕರ್ತರುಗಳನ್ನು ಪ್ರತಿಭಟನೆಗೆ ಆಹ್ವಾನಿಸಿಲ್ಲ. ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ನಮ್ಮ ಬೇಡಿಕೆಗಳಿಗೆ ಸ್ಪಂದಿಸಬೇಕು. ಅವರು ಪಕ್ಷಾತೀತವಾಗಿದ್ದು, ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕು’ ಎಂದರು.

‘ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳ ಅಧಿಕಾರಿಗಳನ್ನು ಕರೆದು ಚರ್ಚಿಸಿ ವಾರ್ಡ್‌ಗಳ ಪುನರ್ ವಿಂಗಡಣೆ ಮಾಡಬೇಕಿತ್ತು. ಆದರೆ, ಆ ರೀತಿ ಮರು ವಿಂಗಡಣೆ ಆಗುತ್ತಿಲ್ಲ. ವಾರ್ಡ್ ವಿಂಗಡಣೆ ವಿಚಾರವಾಗಿ ಸಣ್ಣ ದಾಖಲೆಯೂ ಮರು ವಿಂಗಣಾ ಸಮಿತಿಯ ಬಳಿ ಇಲ್ಲ. ಹೀಗಾಗಿ ಈ ಕೆಲಸವನ್ನು ಬೆಂಗಳೂರಿನ ಮೂವರು ಸಂಸದರು, ಬೆಂಗಳೂರಿನ ಬಿಜೆಪಿ ಶಾಸಕರ ಕಚೇರಿಯಲ್ಲಿ ತಮಗೆ ಬೇಕಾದಂತೆ ಆ ಪಕ್ಷದ ಮತ್ತು ಆರೆಸ್ಸೆಸ್ ನಾಯಕರು ಮಾಡುತ್ತಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕ’ ಎಂದರು.

‘ಕಾಂಗ್ರೆಸ್ ಗೆಲ್ಲಬಾರದು. ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿಯವರೇ ಗೆಲ್ಲಬೇಕು ಎಂಬುದನ್ನೇ ಧ್ಯೇಯವಾಗಿಟ್ಟುಕೊಂಡು ವಾರ್ಡ್‌ಗಳ ಮರುವಿಂಗಡಣೆ ಮಾಡಲಾಗುತ್ತಿದೆ. ಈ ಲೋಪವನ್ನು ಸಮಿತಿ ಸರಿಪಡಿಸಬೇಕು. ಸರ್ಕಾರ ಇದೇ ರೀತಿ ನಡೆದುಕೊಂಡರೆ ಇನ್ನೂ ದೊಡ್ಡ ರೀತಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಬಿಜೆಪಿಯವರು ಚುನಾವಣೆ ಗೆಲ್ಲಲು ತಂತ್ರ ಮಾಡಲಿ. ಆದರೆ, ಕುತಂತ್ರ ಬೇಡ’ ಎಂದರು.

‘ಬಿಜೆಪಿ ಶಾಸಕರು ತಮ್ಮ ಕಚೇರಿಯಲ್ಲಿ ವಾರ್ಡ್‌ಗಳ ಮರು ವಿಂಗಡಣೆ ಮಾಡಲಿ. ಆದರೆ, ಕೇಶವ ಕೃಪದಲ್ಲಿ ಆರೆಸ್ಸೆಸ್‌ನವರು ಮರುವಿಂಗಡಣೆ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರು ಹೆಚ್ಚಿರುವ ಕಡೆಗಳಲ್ಲಿ ಅವರಿಗೆ ಅವಕಾಶ ತಪ್ಪಿಸಬೇಕು. ಬಡವರು ಹೆಚ್ಚಿರುವ ಕಡೆ ಬಡವರಿಗೆ ಅವಕಾಶ ತಪ್ಪಿಸಬೇಕು. ಮಹಿಳೆಯರ ಪ್ರಾಬಲ್ಯ ಇರುವ ಕಡೆ ಮಹಿಳೆಯರ ಅವಕಾಶ ತಪ್ಪಿಸಬೇಕು ಎಂಬ ಕಾರಣಕ್ಕೆ ಈ ರೀತಿ ಮಾಡಲಾಗುತ್ತಿದೆ’ ಎಂದೂ ದೂರಿದರು.

ಶಾಸಕ ಕೃಷ್ಣ ಭೈರೇಗೌಡ, ‘ಬಿಜೆಪಿಯವರು ಕದ್ದು ಮುಚ್ಚಿ ವಾರ್ಡ್‌ಗಳ ಮರು ವಿಂಗಡಣೆ ಮಾಡುತ್ತಿದ್ದಾರೆ. ಕಾನೂನುಗಳನ್ನು ಗಾಳಿಗೆ ತೂರಿ, ರಾಜಕೀಯ ಅನುಕೂಲಕ್ಕೆ ತಕ್ಕಂತೆ ಮರು ವಿಂಗಡಣೆ ಮಾಡಲಾಗುತ್ತಿದೆ’ ಎಂದು ದೂರಿದರು.



ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ರಾಮಲಿಂಗಾರೆಡ್ಡಿ, ಬಿ.ಕೆ. ಹರಿಪ್ರಸಾದ್, ಯು.ಬಿ. ವೆಂಕಟೇಶ್ ಹಾಗೂ ಪಕ್ಷದ ಕಾರ್ಯಕರ್ತರು ಇದ್ದರು ಪ್ರಜಾವಾಣಿ ಚಿತ್ರ

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	39.26 ಕೋಟಿ ▲	4.20 ಕೋಟಿ ▲
ಸಕ್ರಿಯ ಪ್ರಕರಣ	7.55 ಕೋಟಿ ▲	13.31 ಲಕ್ಷ ▼
ಗುಣಮುಖ	31.12 ಕೋಟಿ ▲	4.02 ಕೋಟಿ ▲
ಸಾವು	57.47 ಲಕ್ಷ ▲	5.01 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	29.41 ಲಕ್ಷ ▼	1.27 ಲಕ್ಷ ▼
ಗುಣಮುಖ	24.17 ಲಕ್ಷ ▼	2.30 ಲಕ್ಷ ▼
ಸಾವು	11,557 ▼	1,051 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಜರ್ಮನಿ	ಅಮೆರಿಕ	ಫ್ರಾನ್ಸ್
2.35 ಲಕ್ಷ ▲	2.81 ಲಕ್ಷ ▲	2.41 ಲಕ್ಷ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಫ್ರಾನ್ಸ್	ಸ್ಪೇನ್
2.90 ಕೋಟಿ ▲	64.94 ಲಕ್ಷ ▼	36.06 ಲಕ್ಷ ▲

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.42 ಲಕ್ಷ
ಕೇರಳ	57,296 ▲
ತಮಿಳುನಾಡು	37,696 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	77.82 ▲
ಕೇರಳ	62.11 ▲
ತಮಿಳುನಾಡು	33.97 ▲

ಭಾರತದ ಕೋವಿಡ್ ಸಂಖ್ಯೆ ವಿವರ: ಶನಿವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಮಾದಿಗ ಸಮುದಾಯದ ಬೇಡಿಕೆ ಈಡೇರಿಕೆಗೆ ಮಠಾಧೀಶರ ಮನವಿ

ಚಿತ್ರದುರ್ಗ: ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮಾದಿಗ ಸಮುದಾಯದ ವಿವಿಧ ಮಠಾಧೀಶರು ಮಾಜಿ ಸಚಿವ ಎಚ್.ಆಂಜನೇಯ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಬೆಂಗಳೂರಿನ ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿಯಾಗಿ ಸಮುದಾಯದ ವಿವಿಧ ಸಮಸ್ಯೆ–ಸವಾಲುಗಳ ಕುರಿತು ಚರ್ಚಿಸಿದರು. ಸಮಸ್ಯೆ ಆಲಿಸಿದ ಮುಖ್ಯಮಂತ್ರಿ, ಬೇಡಿಕೆಗಳನ್ನು ಈಡೇರಿಸುವುದಾಗಿ ಅವರು ಭರವಸೆ ನೀಡಿದರು.

ಹಂಪಿ ಮಾತಂಗ ಮಠದ ಪೂರ್ಣಾನಂದ ಭಾರತೀ ಸ್ವಾಮೀಜಿ, ಕೋಡಿಹಳ್ಳಿ ಆದಿಜಾಂಬವ ಬೃಹನ್ಮಠದ ಷಡಕ್ಷರಮುನಿ ಸ್ವಾಮೀಜಿ, ಗುರು ಪ್ರಕಾಶ ಮುನಿ ಸ್ವಾಮೀಜಿ, ಮಠದ ಪ್ರಧಾನ ಕಾರ್ಯದರ್ಶಿ ಆರ್. ಸಂತೋಷ್, ಟ್ರಸ್ಟಿಗಳಾದ ನಾಗ ಕುಮಾರ್, ಚಿದಾನಂದಸ್ವಾಮಿ, ರಂಗಸ್ವಾಮಿ, ಮುಖಂಡ ದೊಡ್ಡಗುಬ್ಬಿ ಸತೀಶ್ ಇದ್ದರು.

‘ಬಿಡಿಎ ನಿವೇಶನ ಹಂಚಿಕೆ ದಾಖಲೆಗಳನ್ನೇ ತಿದ್ದಿ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರ ಬಡಾವಣೆಯ ನಿವೇಶನವೊಂದರ ಹಂಚಿಕೆಗೆ ಸಂಬಂಧಿಸಿ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಮಹಿಳೆಯೊಬ್ಬರ ಹೆಸರಿಗೆ ಶುದ್ಧ ಕ್ರಯಪತ್ರ ಮಾಡಿಕೊಟ್ಟಿರುವುದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಂತರಿಕ ತನಿಖೆಯಿಂದ ದೃಢಪಟ್ಟಿದೆ. ಈ ಕೃತ್ಯದಲ್ಲಿ ಉಪಕಾರ್ಯದರ್ಶಿ–3 ಆಗಿದ್ದ ಕೆಎಎಸ್ ಅಧಿಕಾರಿ ಅನಿಲ್ ಕುಮಾರ್ ಹಾಗೂ ಅವರ ಕಚೇರಿಯ ಇಬ್ಬರು ಸಿಬ್ಬಂದಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

ಈ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹದಿಂದ ವಿಸ್ತೃತ ತನಿಖೆಗೆ ಒಳಪಡಿಸುವಂತೆ ಬಿಡಿಎ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಚಂದ್ರ ಲೇಔಟ್ ಎರಡನೇ ಹಂತದ ನಿವೇಶನವೊಂದನ್ನು (ಸಂಖ್ಯೆ 1453) ಸೆಲ್ವರಾಣಿ ಅವರಿಗೆ ಹಂಚಿಕೆ ಮಾಡಿದಂತೆ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಆದರೆ, ಇದಕ್ಕೆ ಸಂಬಂಧಿಸಿದ ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರದಲ್ಲಿ (ಎಲ್‌ಎಸ್‌ಡಿಎ) ವಿಭಿನ್ನ ರೀತಿಯ ಛಾಪಾ ಕಾಗದಗಳಿವೆ. ಆಳವಾಗಿ ಪರಿಶೀಲಿಸಿದಾಗ ಈ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಿರುವುದಾಗಿ ಕಂಡುಬಂದಿದೆ. ಈ ನಿವೇಶನಕ್ಕೆ ಸಂಬಂಧಿಸಿದ ನಕಲಿ ದಾಖಲಾತಿಗಳನ್ನು ನಕಲಿ ಎಲ್‌ಎಸ್‌ಡಿಎಯನ್ನು ಸೃಷ್ಟಿಸಿ ಪ್ರಾಧಿಕಾರಕ್ಕೆ ನಷ್ಟ ಉಂಟುಮಾಡಿರುವ ಬಗ್ಗೆ ಕ್ರಮ ವಹಿಸಲು ಬಿಡಿಎ ಲೆಕ್ಕಪರಿಶೋಧನೆಯ ಕರಡು ಟಿಪ್ಪಣಿಯಲ್ಲೂ ಶಿಫಾರಸು ಮಾಡಲಾಗಿತ್ತು.

ಮುಖ್ಯಾಂಶಗಳು

- ಬಿಡಿಎ ನಿವೇಶನ ಹಂಚಿಕೆ ನೋಂದಣಿ ಪುಸ್ತಕದ ದಾಖಲೆ ತಿದ್ದಿ ಅಕ್ರಮ
- ಕೆಎಎಸ್ ಅಧಿಕಾರಿ ಹಾಗೂ ಇಬ್ಬರು ಸಿಬ್ಬಂದಿ ಶಾಮೀಲು
- ಕ್ರಯಪತ್ರದ ಒಂದೊಂದು ಪುಟದಲ್ಲಿ ಒಂದು ರೀತಿಯ ದಿನಾಂಕ ನಮೂದು

ಈ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳಲ್ಲಿ 1983ರ ಮಾರ್ಚ್ 17ರಂದು ₹ 15,181 ಮೊತ್ತವನ್ನು ಪಾವತಿಸಿದ್ದನ್ನು ನಮೂದಿಸಲಾಗಿದೆ. ಅದನ್ನು ತಿದ್ದುಪಡಿ ಮಾಡಿ ₹ 11,646 ಎಂದು ನಮೂದಿಸಿರುವುದು ಕಡತ ಪರಿಶೀಲನೆಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

ಮೂಲ ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರದಲ್ಲಿ (ಎಲ್‌ಎಸ್‌ಡಿಎ) ದಾಖಲೆ (ಸಂಖ್ಯೆ 5135/83-84) ಪ್ರಕಾರ ಈ ನಿವೇಶನವನ್ನು 1984ರ ಫೆ.18ರಂದು ಗುರುನಾವಡಿ ಅವರಿಗೆ ಹಂಚಿಕೆ ಮಾಡಲಾಗಿತ್ತು. ಇದರ ಎಲ್‌ಎಸ್‌ಡಿಎ ನಕಲಿ ಆಗಿರುವುದು ಕಂಡುಬಂದಿರುತ್ತದೆ. ಸೆಲ್ವರಾಣಿ ಅವರು ಒದಗಿಸಿರುವ ಋಣಭಾರರಾಹಿತ್ಯ ಪತ್ರವನ್ನು ಪರಿಶೀಲಿಸಿದಾಗಲೂ ಅದರಲ್ಲಿ ನಮೂದಾಗಿರುವ ವ್ಯವಹಾರಗಳಲ್ಲಿ ಅದರ ಖರೀದಿಯ ವಿವರಗಳಿಲ್ಲ.

ಹಂಚಿಕೆ ನೋಂದಣಿಯ ದಾಖಲೆಗಳನ್ನು ಕೂಡ ನಕಲಿಯಾಗಿ ಸೃಷ್ಟಿಸಿರುವುದು ಕಂಡುಬಂದಿದೆ. ಈ ನಿವೇಶನಕ್ಕೆ ಸಂಬಂಧಿಸಿದಂತೆ ನೋಂದಣಿಯಾಗಿದ್ದ ಎಲ್‌ಎಸ್‌ಡಿಎ ದಾಖಲಾತಿಯ ಕ್ಸೆರಾಕ್ಸ್ ಪ್ರತಿಯ ಒಂದನೇ ಪುಟದ ಹಿಂಭಾಗದಲ್ಲಿ ಖಜಾನೆಗೆ ಸಂಬಂಧಿಸಿದ ಮೊಹರಿನಲ್ಲಿ, ದಿನಾಂಕವು 1983ರ ಸೆ. 23 ಎಂದು, ಎರಡು ಮತ್ತು ಮೂರನೇ ಪುಟಗಳಲ್ಲಿ ದಿನಾಂಕ 1983ರ ಆ 16 ಎಂದು, ನಾಲ್ಕನೇ ಮತ್ತು ಐದನೇ ಪುಟದಲ್ಲಿ ದಿನಾಂಕ 1983ರ ಜುಲೈ 20 ಎಂದು ನಮೂದಾಗಿದೆ. ಒಂದೇ ಕ್ರಯಪತ್ರದಲ್ಲಿ ವಿಭಿನ್ನ ರೀತಿಯಲ್ಲಿ ದಿನಾಂಕಗಳು ಇರುವುದು ಕಂಡುಬಂದಿದೆ.

ನಿವೇಶನ ಹಂಚಿಕೆ ನೋಂದಣಿ ಪುಸ್ತಕಗಳನ್ನು ಪರಿಶೀಲಿಸಿದಾಗ ಪುಟ ಸಂಖ್ಯೆ 90 ರಲ್ಲಿ ಚಂದ್ರಾ ಬಡಾವಣೆಯ ಎರಡನೇ ಹಂತದ ಒಂದನೇ ಹಂತದಲ್ಲಿ 40x60 ಅಡಿ ವಿಸ್ತೀರ್ಣದ ನಿವೇಶನವನ್ನು (ಸಂಖ್ಯೆ 1,453) ಸೆಲ್ವರಾಣಿ ಅವರಿಗೆ ಹಂಚಿಕೆ ಮಾಡಿರುವುದಾಗಿ ಹಾಗೂ ಅವರಿಗೆ 2018ರ ಫೆ 27ರಂದು ಶುದ್ಧ ಕ್ರಯಪತ್ರ ನೀಡಿರುವುದಾಗಿ ನಮೂದಿಸಿರುತ್ತಾರೆ. ಆದರೆ, ಈ ನಿವೇಶನದ ಎಲ್‌ಎಸ್‌ಡಿಎ ನೋಂದಣಿ ಮಾಡಿರುವ ವಿವರ ದಾಖಲಿಸಿಲ್ಲ. ಸೆಲ್ವರಾಣಿ ಅವರ ಹೆಸರಿಗೆ ನೋಂದಣಿಯಾಗಿದ್ದ ಎಲ್‌ಎಸ್‌ಡಿಎಯ ನೋಂದಣಿ ಸಂಖ್ಯೆ 1ನೇ ಪುಸ್ತಕದ ಎಸ್‌ಎಫ್ 1173 ನೇ ಸಂಪುಟದ 127-131 ನೇ ಪುಟಗಳಲ್ಲಿ 1983-84 ನೇ ಇಸವಿಯ ದಾಖಲಾತಿಗಳನ್ನು ದೃಢೀಕರಿಸುವಂತೆ ವಿಜಯನಗರ ಮತ್ತು ಪೀಣ್ಯ ಉಪನೋಂದಣಾಧಿಕಾರಿಗಳ ಕಚೇರಿಗಳನ್ನು ಬಿಡಿಎ ಕೋರಿತ್ತು. ಪೀಣ್ಯ ಉಪ ನೋಂದಣಾಧಿಕಾರಿಯವರ ಕಚೇರಿಯಿಂದ ಬಂದ ಮಾಹಿತಿ ಪ್ರಕಾರ ಎಸ್. ಎಫ್. 1173 ನೇ ಸಂಖ್ಯೆಯ ಸಂಪುಟವೇ ಇರಲಿಲ್ಲ. ಈ ನಿವೇಶನದ ಇನ್ನೊಂದು ದಾಸ್ತವೇಜಿನ (ಸಂಖ್ಯೆ 5135/83-84) ನೋಂದಣಿಯ ದೃಢೀಕೃತ ಪ್ರತಿಯ ಪ್ರಕಾರ ಅದು ಗುರುನಾವಾಡಿ ಅವರಿಗೆ ಹಂಚಿಕೆಯಾಗಿರುವುದು ಕಂಡುಬಂದಿದೆ.

‘ಸೆಲ್ವರಾಣಿ ಅವರಿಗೆ ನಿವೇಶನ ಹಂಚಿಕೆಯ ದಾಖಲಾತಿಗಳು ನಕಲಿ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ. ನಕಲಿ ದಾಖಲೆ ಆಧಾರದಲ್ಲಿ ಅವರ ಹೆಸರಿಗೆ ಶುದ್ಧಕ್ರಯಪತ್ರ ನೀಡಿರುವಲ್ಲಿ ಉಪಕಾರ್ಯದರ್ಶಿ-3 ಆಗಿದ್ದ ಅನಿಲ್ ಕುಮಾರ್, ಅವರ ಕಚೇರಿಯಲ್ಲಿ ವಿಷಯ ನಿರ್ವಾಹಕರಾಗಿದ್ದ ಎಂ.ಕೆ.ಸಂಜಯ್ ಕುಮಾರ್ ಹಾಗೂ ಮೇಲ್ವಿಚಾರಕಿ ಮಹಾದೇವಮ್ಮ ಅವರು ಕರ್ತವ್ಯಲೋಪ ಎಸಗಿರುವುದು ಪ್ರಾಧಿಕಾರದ ವಿಶೇಷ ಕಾರ್ಯಪಡೆ ಮತ್ತು ಜಾಗೃತ ದಳ ನಡೆಸಿದ ಆಂತರಿಕ ತನಿಖೆಯಿಂದ ಕಂಡುಬಂದಿದೆ. ಈ ಅಧಿಕಾರಿ ಹಾಗೂ ನೌಕರರನ್ನು 1988ರ ಭ್ರಷ್ಟಾಚಾರ ತಡೆ ಕಾಯ್ದೆ ಕಲಂ 17 (ಎ) ಅನ್ವಯ ವಿಸ್ತೃತ ವಿಚಾರಣೆಗೆ ಒಳಪಡಿಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಅನುಮತಿ ನೀಡಬಹುದು’ ಎಂದು ಬಿಡಿಎ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ 2022ರ ಜ 17ರಂದು ಬರೆದಿರುವ ಪತ್ರದಲ್ಲಿ ಶಿಫಾರಸು ಮಾಡಿದ್ದಾರೆ ಎಂದು ಗೊತ್ತಾಗಿದೆ.

ನಗರದಲ್ಲಿ ಇಂದು

ಓಬವ್ವ ಆತ್ಮರಕ್ಷಣಾ ಕಲೆ ತರಬೇತಿ ಕಾರ್ಯಕ್ರಮದ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿ–ಸಚಿವ ಕೋಟ ಶ್ರೀನಿವಾಸ ಪೂಜಾರಿ, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಆಯೋಜನೆ–ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಸ್ಥಳ–ವಿಧಾನ ಸೌಧದ ಮುಂಭಾಗ, ಬೆಳಿಗ್ಗೆ 10

ಕವಿ ಜಿ.ಎಸ್.ಶಿವರುದ್ರಪ್ಪ ಅವರ ಜಯಂತಿ: ಉದ್ಘಾಟನೆ–ಸಿ.ಸೋಮಶೇಖರ್, ಜಿಎಸ್‌ಎಸ್ ಕುರಿತು–ಆರ್.ಜಿ.ಹಳ್ಳಿ ನಾಗರಾಜ್, ಅಧ್ಯಕ್ಷತೆ–ಸತೀಶ್‌ಕುಮಾರ್ ಎಸ್.ಹೊಸಮನಿ, ಅತಿಥಿಗಳು–ವಡ್ಡಗೆರೆ ನಾಗರಾಜಯ್ಯ, ಬೀರೂರು ವಿ.ಮೋಹನ್, ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಕೆ.ಎನ್.ನಾಗೇಶ್, ನರಸಿಂಹಮೂರ್ತಿ, ಆಯೋಜನೆ–ಪ್ರೊ.ಜಿ.ಎಸ್.ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್.ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾ ಸಮಿತಿ, ಸ್ಥಳ–ಕಲಾಗ್ರಾಮ, ಜಿಎಸ್‌ಎಸ್ ಪುಣ್ಯಸ್ಥಳ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

‘ನಾವು ಕಾಡುಗೊಲ್ಲರು’ ಸಾಕ್ಷ್ಯ ಚಿತ್ರ ಬಿಡುಗಡೆ: ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ರಾಜ್ಯ ಕಾಡುಗೊಲ್ಲರ ಸಂಘದ ರಾಜ್ಯ ಘಟಕದ ಅಧ್ಯಕ್ಷ ರಾಜಣ್ಣ, ಆಯೋಜನೆ–ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘ, ಸ್ಥಳ–ಶ್ರೀ ಚಾಮುಂಡೇಶ್ವರಿ ಸ್ಟುಡಿಯೊ, ಕನ್ನಿಂಗ್‌ಹ್ಯಾಮ್ ರಸ್ತೆ, ವಸಂತನಗರ, ಬೆಳಿಗ್ಗೆ 11

ಬಸವಲಿಂಗಯ್ಯ ಹಿರೇಮಠ್ ಅವರಿಗೆ ಶ್ರದ್ಧಾಂಜಲಿ: ಸಾನ್ನಿಧ್ಯ–ನಿಜಗುಣಾನಂದ ಸ್ವಾಮೀಜಿ, ಪುಷ್ಪನಮನ–ಗೊ.ರು. ಚನ್ನಬಸಪ್ಪ, ನುಡಿನಮನ–ಲೀಲಾದೇವಿ ಆರ್.ಪ್ರಸಾದ್, ಭೀಮಸೇನ, ಪಿಚ್ಚಳ್ಳಿ ಶ್ರೀನಿವಾಸ್, ಬಿ.ಎಲ್.ಪಾಟೀಲ, ಎ.ಎಂ. ಆರ್.ಕೊಟ್ರಯ್ಯ, ಬಿ.ಆರ್.ಪೊಲೀಸ್ ಪಾಟೀಲ, ಎಸ್.ಮಹದೇವಯ್ಯ, ಕೆ.ವಿ. ನಾಗರಾಜಮೂರ್ತಿ, ಸುಮಾ ವಿಜಯ್, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ನರಹಳ್ಳಿ ಪ್ರಶಸ್ತಿ ಪ್ರದಾನ: ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಿ.ಎನ್.ಶ್ರೀಕೃಷ್ಣ, ಪುರಸ್ಕೃತರು–ಜಿ.ಎನ್. ಉಪಾಧ್ಯ, ಅಧ್ಯಕ್ಷತೆ–ಎಚ್.ಎಸ್. ವೆಂಕಟೇಶಮೂರ್ತಿ, ಆಯೋಜನೆ–ಕನ್ನಡ ಜನಶಕ್ತಿ ಕೇಂದ್ರ, ನರಹಳ್ಳಿ ಪ್ರತಿಷ್ಠಾನ, ಮೈಸೂರು ಅಸೋಸಿಯೇಷನ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಸುಬ್ರಹ್ಮಣ್ಯಸ್ವಾಮಿ ರಥೋತ್ಸವ: ಮುಕ್ತಿ ನಾಗ ಸ್ವಾಮಿಗೆ ಹೂವಿನ ಅಲಂಕಾರ, ಕ್ಷೀರಾಭಿಷೇಕ, ಸ್ಥಳ–ಮುಕ್ತಿನಾಗ ಕ್ಷೇತ್ರ, ರಾಮೋಹಳ್ಳಿ, ಮಧ್ಯಾಹ್ನ 12

‘ಕನ್ನಡ ಸಾಹಿತ್ಯದಲ್ಲಿ ಜಾತಿ–ವರ್ಗ ವಿರೋಧ’ ವಿಚಾರಗೋಷ್ಠಿ: ಮಾತನಾಡುವವರು–ಭಕ್ತರಹಳ್ಳಿ ಕಾಮರಾಜ್, ಪುಷ್ಪಭಾರತಿ, ರಾಜಪ್ಪ ದಳವಾಯಿ, ಆಯೋಜನೆ–ಬಂಡಾಯ ಸಾಹಿತ್ಯ ಸಂಘಟನೆ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)


‘ಪೊಲೀಸ್ ಮತ್ತು ಪಬ್ಲಿಕ್’ ಕುರಿತು ಸಭೆ: ಅತಿಥಿ–ಬೆಂಗಳೂರು ದಕ್ಷಿಣ ಡಿಸಿಪಿ ಹರೀಶ್ ಪಾಂಡೆ, ಆಯೋಜನೆ–ರೋಟರಿ ಬೆಂಗಳೂರು ಹನುಮಂತನಗರ, ರಾತ್ರಿ 7 (ಆನ್‌ಲೈನ್ ಕಾರ್ಯಕ್ರಮ)

ಭರತನಾಟ್ಯ ರಂಗಪ್ರವೇಶ: ಎನ್. ಸುಮನಾ, ಅತಿಥಿಗಳು–ಆರ್. ವಿ.ರಾಘವೇಂದ್ರ, ಪೂರ್ಣಿಮಾ ಗುರುರಾಜ್, ಆಯೋಜನೆ–ಸಾಧನ ಸಂಗಮ ಡ್ಯಾನ್ಸ್ ಸೆಂಟರ್, ಸ್ಥಳ–ತೆಲುಗು ವಿಜ್ಞಾನ ಸಮಿತಿ ಸಭಾಂಗಣ, ಚೌಡಯ್ಯ ಸ್ಮಾರಕ ಭವನದ ಹತ್ತಿರ, ಮಲ್ಲೇಶ್ವರ, ಬೆಳಿಗ್ಗೆ 10.15



ಸುಮನಾ

‘ಸ್ವರ ಸಂಧ್ಯಾ’: ಐಶ್ವರ್ಯ ದೇಸಾಯಿ, ಕೇಶವ ಜೋಶಿ, ಸತೀಶ ಕೊಳ್ಳಿ, ಪ್ರಫುಲ್ಲ ಅಥಲ್ಯೆ ಅವರಿಂದ ಸಂಗೀತ ಕಾರ್ಯಕ್ರಮಗಳು, ಆಯೋಜನೆ–ಸಪ್ತಕ, ಸ್ಥಳ–ಟಿಎಸ್‌ಆರ್ ಹಾಲ್, ಕೆನರಾ ಯೂನಿಯನ್, ಮಲ್ಲೇಶ್ವರ, ಸಂಜೆ 5



ಸ್ವರ ಸಂಧ್ಯಾ–ಪ್ರಫುಲ್ಲ ಅಥಲ್ಯೆ

‘94ಸಿ, 94ಸಿಸಿ ಅಡಿ ಹಕ್ಕುಪತ್ರ ನೋಂದಣಿಗೆ ಕ್ರಮ’

ಬೆಂಗಳೂರು: ‘ಕಂದಾಯ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡವರಿಗೆ 94ಸಿ ಮತ್ತು 94ಸಿಸಿ ಅಡಿ ನೀಡಿದ ಹಕ್ಕುಪತ್ರಗಳ ನೋಂದಣಿಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಈ ಕಲಂಗಳ ಅಡಿಯಲ್ಲಿ ಲಕ್ಷಾಂತರ ಬಡವರಿಗೆ ಹಕ್ಕುಪತ್ರ ನೀಡಲಾಗಿದ್ದು, ಅವರು ಮನೆ ಕಟ್ಟಿಕೊಂಡಿದ್ದಾರೆ. ಆದರೆ, ಕಾವೇರಿ ತಂತ್ರಾಂಶದಲ್ಲಿ 'ಹಕ್ಕುಪತ್ರ' ಎಂದು ಆಯ್ಕೆ ಮಾಡಲು ಅವಕಾಶ ಇರಲಿಲ್ಲ. ಹೀಗಾಗಿ ನೋಂದಣಿ ಆಗದೇ ಇರುವುದು ಗಮನಕ್ಕೆ ಬಂದಿದೆ’ ಎಂದರು.

‘ಸರ್ಕಾರಿ ಜಮೀನಿನಲ್ಲಿ ಹಲವು ವರ್ಷಗಳಿಂದ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂರಹಿತರು, ಸಣ್ಣ ರೈತರುಗಳ ಜಮೀನಿನನ್ನು ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ನಮೂನೆ 50, ನಮೂನೆ 57ರಲ್ಲಿ ಅರ್ಜಿ ಸಲ್ಲಿಸದೇ ಇರುವವರಿಗೆ ಮತ್ತೊಂದು ಅವಕಾಶವನ್ನು ನೀಡುವಂತೆ ಮನವಿ ಬಂದಿದೆ. ಹೀಗಾಗಿ ಇನ್ನೂ ಒಂದು ವರ್ಷದ ಅವಧಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲು ಉದ್ದೇಶಿಸಲಾಗಿದೆ’ ಎಂದೂ ಅವರು ತಿಳಿಸಿದರು.

ಹೆಚ್ಚುವರಿ ಅನುದಾನ ಸಾಧ್ಯವಿಲ್ಲ–ಸಂಗೀತ ವಿ.ವಿಗೆ ಉನ್ನತ ಶಿಕ್ಷಣ ಇಲಾಖೆ ಪತ್ರ

10 ತಿಂಗಳಿಂದ ವೇತನವಿಲ್ಲದೆ ನೌಕರರು ಅತಂತ್ರ

• ಕೆ.ಓಂಕಾರ ಮೂರ್ತಿ

ಪ್ರಜಾವಾಣಿ ವಿಶೇಷ

ಮೈಸೂರು: ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿ ಅನುದಾನ ನೀಡಲು ಸಾಧ್ಯವಿಲ್ಲವೆಂದು ಉನ್ನತ ಶಿಕ್ಷಣ ಇಲಾಖೆ ಪತ್ರ ಬರೆದಿದ್ದು, 10 ತಿಂಗಳಿಂದ ವೇತನವಿಲ್ಲದೆ ತೊಂದರೆಗೆ ಸಿಲುಕಿರುವ 21 ತಾತ್ಕಾಲಿಕ ಗುತ್ತಿಗೆ ನೌಕರರು ಹಾಗೂ 31 ಅತಿಥಿ ಉಪನ್ಯಾಸಕರು ಅತಂತ್ರರಾಗಿದ್ದಾರೆ.

ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಬೋಧಕೇತರ ಸಿಬ್ಬಂದಿ, ಐದು ತಿಂಗಳ ಹಿಂದೆಯೇ ಮನವಿ ಮಾಡಿದ್ದರು. ವಿಶ್ವವಿದ್ಯಾಲಯದ ಕುಲಪತಿ, ಹಣಕಾಸು ಅಧಿಕಾರಿ ಕೂಡ ಮೂರು ಬಾರಿ ಪತ್ರ ಬರೆದಿದ್ದರು. ಬೋಧಕೇತರ ಸಿಬ್ಬಂದಿಗೆ ಹಾಗೂ ಅತಿಥಿ ಉಪನ್ಯಾಸಕರಿಗೆ 10 ತಿಂಗಳಿಂದ ಒಟ್ಟು ₹ 1.88 ಕೋಟಿ ವೇತನ ಪಾವತಿಸಬೇಕಿದೆ.

‘ಪ್ರಸ್ತುತ ಹಂತದಲ್ಲಿ ಹೆಚ್ಚುವರಿ ಅನುದಾನ ಒದಗಿಸಲು ಸಾಧ್ಯವಿಲ್ಲ’ ಎಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಜ.31 ರಂದು ಹಣಕಾಸು ಅಧಿಕಾರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಅಲ್ಲದೇ, ‘ಸರ್ಕಾರದ ಪೂರ್ವಾನುಮೋದನೆ ಪಡೆಯದೆ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ಭರ್ತಿ ಮಾಡಿಕೊಂಡಿರುವ ತಾತ್ಕಾಲಿಕ/ಗುತ್ತಿಗೆ/ಹೊರಗುತ್ತಿಗೆ ನೌಕರರನ್ನು ಕೂಡಲೇ ಬಿಡುಗಡೆ ಮಾಡಬೇಕು. ಅಂಥ ಯಾವುದೇ ನೇಮಕಾತಿಗೆ ಸಹಾಯಾನುದಾನ ಒದಗಿಸುವುದಿಲ್ಲ’ ಎಂದು ಇಲಾಖೆಯು ಈ ಹಿಂದೆ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದಿತ್ತು.

ಸಂಗೀತ ವಿಶ್ವವಿದ್ಯಾಲಯದ ತಾತ್ಕಾಲಿಕ 21 ಬೋಧಕೇತರ ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಆಗ ಸೂಚನೆ ನೀಡಲಾಗಿತ್ತು.

‘ಸರ್ಕಾರದ ಅನುಮೋದನೆ ಇಲ್ಲದೆ ನೇಮಕಾತಿ ಆಗಿರುವುದರಿಂದ ವೇತನ ಮಂಜೂರಾಗಿಲ್ಲ. 2021ರ ಮಾರ್ಚ್‌ವರೆಗೆ ಇಲಾಖೆ ವೇತನ ನೀಡಿತ್ತು. ಕೆಲಸದಿಂದ ಬಿಡುಗಡೆ ಮಾಡುವಂತೆ 2021ರ ಏಪ್ರಿಲ್‌ನಲ್ಲಿ ಸೂಚಿಸಿದ್ದ ವಿಚಾರವನ್ನು ಬೋಧಕೇತರ ಸಿಬ್ಬಂದಿ ಗಮನಕ್ಕೆ ತಂದಿದ್ದೆ. ಆದಾಗ್ಯೂ ಕೆಲವರು ಕೆಲಸದಲ್ಲಿ ಮುಂದುವರಿದಿದ್ದರು. ಪತ್ರ ಬರೆದು ವೇತನ ನೀಡುವಂತೆ ಇಲಾಖೆಯನ್ನು ಕೋರಿದ್ದೆ. ಸದ್ಯ ಪ್ರಕರಣ ನ್ಯಾಯಾಲಯದಲ್ಲಿದ್ದು, ನೋಟಿಸ್ ಜಾರಿ ಮಾಡಿ ನಮ್ಮಿಂದ ಪ್ರತಿಕ್ರಿಯೆ ಪಡೆದಿದೆ. ಈ ಹಂತದಲ್ಲಿ ನಾನು ಏನೂ ಮಾಡಲು ಸಾಧ್ಯವಿಲ್ಲ’ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅತಿಥಿ ಉಪನ್ಯಾಸಕರ ವಿಚಾರದಲ್ಲಿ ಇಲಾಖೆಯ ಆದೇಶ ಅನ್ವಯ ಆಗಲ್ಲ. ಏಕೆಂದರೆ ನಮ್ಮಲ್ಲಿ ಯಾರೂ ಕಾಯಂ ಬೋಧಕರು ಇಲ್ಲದ ಕಾರಣ ಅವರನ್ನು ಮುಂದುವರಿಸುವಂತೆ ಸರ್ಕಾರವೇ ಹೇಳಿತ್ತು. ಅದರೆ, ಅವರಿಗೂ 10 ತಿಂಗಳಿಂದ ವೇತನ ಬಂದಿಲ್ಲ. ಒಟ್ಟು ₹ 62.5 ಲಕ್ಷ ವೇತನ ಬಾಕಿಯಿದ್ದು, ಅನುದಾನ ಕೋರಿ ಸರ್ಕಾರಕ್ಕೆ ಮತ್ತೆ ಪತ್ರ ಬರೆಯುತ್ತೇನೆ’ ಎಂದರು.

ಈ ವಿಶ್ವವಿದ್ಯಾಲಯದಲ್ಲಿ ಕುಲಪತಿ ಹಾಗೂ ಹಣಕಾಸು ಅಧಿಕಾರಿ ಮಾತ್ರ ಕಾಯಂ. ಉಳಿದವರು ಗುತ್ತಿಗೆ ಹಾಗೂ ಅತಿಥಿ ಉಪನ್ಯಾಸಕರು.

ಮುಖ್ಯಾಂಶಗಳು

- 31 ಅತಿಥಿ ಉಪನ್ಯಾಸಕರು, 21 ಬೋಧಕೇತರ ಸಿಬ್ಬಂದಿ
- ಒಟ್ಟು ₹ 1.88 ಕೋಟಿ ವೇತನ ಬಾಕಿ
- ತಾತ್ಕಾಲಿಕ ನೌಕರರ ಬಿಡುಗಡೆಗೆ ಸೂಚಿಸಿದ್ದ ಇಲಾಖೆ

‘ನೃಪತುಂಗ, ರಾಯಚೂರು ವಿ.ವಿಗೆ ಅನುದಾನ’

ಬೆಂಗಳೂರಿನ ನೃಪತುಂಗ ವಿಶ್ವವಿದ್ಯಾಲಯ ಹಾಗೂ ರಾಯಚೂರು ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಈ ಬಾರಿಯ ಬಜೆಟ್‌ನಲ್ಲಿ ಪರಿಶೀಲಿಸಲಾಗುವುದು. ಆದರೆ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಾವೇರಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಾಗೂ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ಅನುದಾನ ಒದಗಿಸಲು ಸಾಧ್ಯವಿಲ್ಲವೆಂದು ಇಲಾಖೆ ಹೇಳಿದೆ.



ಇಲಾಖೆಯ ಪತ್ರ ಕೈಸೇರಿದ್ದು, ಬೋಧಕೇತರ ಸಿಬ್ಬಂದಿ ವೇತನ ವಿಚಾರದಲ್ಲಿ ನಾನು ಅಸಹಾಯಕ. ಅತಿಥಿ ಉಪನ್ಯಾಸಕರಿಗೆ ವೇತನ ಕೊಡಿಸಲು ಪ್ರಯತ್ನಿಸುತ್ತೇನೆ
ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಕುಲಪತಿ, ಸಂಗೀತ ವಿಶ್ವವಿದ್ಯಾಲಯ

‘ವೈಫ್ ಸ್ವಾಪಿಂಗ್’ ದಂಧೆ: ಸಿಕ್ಕಿಬಿದ್ದ ದಂಪತಿ

ವಿಡಿಯೊ ಅಪ್‌ಲೋಡ್ ಮಾಡುತ್ತಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳ ಮೂಲಕ ಗ್ರಾಹಕರನ್ನು ಆಹ್ವಾನಿಸಿ ‘ವೈಫ್ ಸ್ವಾಪಿಂಗ್’ (ಪರಪುರುಷನ ಜೊತೆ ಪತ್ನಿ ವಿನಿಮಯ) ದಂಧೆ ನಡೆಸುತ್ತಿದ್ದ ಆರೋಪದಡಿ ವಿನಯ್ ಹಾಗೂ ಆತನ ಪತ್ನಿಯನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯದ ದಂಪತಿ, ನಗರದ ಎಲೆಕ್ಟ್ರಾನಿಕ್ಸ್ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಪರಸ್ಪರ ಪ್ರೀತಿಸಲಾರಂಭಿಸಿದ್ದ ಅವರಿಬ್ಬರು, 2019ರಲ್ಲಿ ಮದುವೆಯಾಗಿದ್ದರು. ಅದಕ್ಕೆ ಕುಟುಂಬದವರು ವಿರೋಧವಿತ್ತು. ಬಾಡಿಗೆ ಮನೆಯಲ್ಲಿ ವಾಸವಿದ್ದ ದಂಪತಿ, ವೈಫ್ ಸ್ವಾಪಿಂಗ್ ದಂಧೆಯಲ್ಲಿ ತೊಡಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಂಧೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ 14 ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದೂ ತಿಳಿಸಿವೆ.

ಖಾಸಗಿ ಕ್ಷಣಗಳ ವಿಡಿಯೊ ಚಿತ್ರೀಕರಣ: ‘ಅಶ್ಲೀಲ ವಿಡಿಯೊ ಹೆಚ್ಚು ನೋಡುತ್ತಿದ್ದ ದಂಪತಿ, ತಮ್ಮದೇ ಖಾಸಗಿ ಕ್ಷಣಗಳನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುತ್ತಿದ್ದರು. ತಮ್ಮ ಗುರುತು ಸಿಗಬಾರದೆಂದು ಮುಖಕ್ಕೆ ಮಾಸ್ಕ್ ಹಾಗೂ ಬಟ್ಟೆ ಕಟ್ಟಿಕೊಳ್ಳುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಡಿಯೊದಿಂದ ಹಣ ಸಂಪಾದಿಸಬಹುದೆಂದು ಆರೋಪಿ ವಿನಯ್, ಪತ್ನಿಗೆ ಹೇಳುತ್ತಿದ್ದ. ಹೀಗಾಗಿ, ಆಕೆಯೂ ಸಹಕರಿಸುತ್ತಿದ್ದಳು. ಹೆಚ್ಚು ಹಣ ಸಂಪಾದಿಸುವ ಆಲೋಚನೆ ದಂಪತಿಗೆ ಬಂದಿತ್ತು. ಆರೋಪಿ ವಿನಯ್, ವೇಶ್ಯಾವಾಟಿಕೆ ನಡೆಸಲು ಯೋಚಿಸಿದ್ದ.

‘ಪರಪುರುಷನ ಜೊತೆ ಖಾಸಗಿ ಕ್ಷಣಗಳನ್ನು ಕಳೆದರೆ ಹಣ ಹಾಗೂ ಸುಖ ಎರಡೂ ಸಿಗುತ್ತದೆ’ ಎಂಬುದಾಗಿ ಪತ್ನಿಗೆ ಹೇಳಿದ್ದ. ಅದಕ್ಕೆ ಆಕೆಯೂ ಒಪ್ಪಿದ್ದಳು’ ಎಂದೂ ತಿಳಿಸಿವೆ.

‘ಆರಂಭದಲ್ಲಿ ಸ್ನೇಹಿತರನ್ನು ಮನೆಗೆ ಆಹ್ವಾನಿಸಿದ್ದ ಆರೋಪಿ, ಅವರ ಜೊತೆ ಖಾಸಗಿ ಕ್ಷಣ ಕಳೆಯಲು ಪತ್ನಿಯನ್ನು ಕಳುಹಿಸಿದ್ದ. ಸ್ನೇಹಿತರ ಒಪ್ಪಿಗೆ ಪಡೆದು, ವಿಡಿಯೊವನ್ನೂ ಚಿತ್ರೀಕರಿಸಿಟ್ಟುಕೊಂಡಿದ್ದ. ನಂತರ, ಸ್ನೇಹಿತರು ಕೊಟ್ಟಷ್ಟು ಹಣವನ್ನು ಪಡೆದುಕೊಂಡಿದ್ದ.’

‘ಹೆಚ್ಚು ಗ್ರಾಹಕರ ಸೆಳೆಯಲು ಮುಂದಾಗಿದ್ದ ಆರೋಪಿ, ಟೆಲಿಗ್ರಾಂ ಆ್ಯಪ್ ಗ್ರೂಪ್ ಸೃಷ್ಟಿಸಿದ್ದ. ಅದರ ಮೂಲಕ ಗ್ರಾಹಕರನ್ನು ಸಂಪರ್ಕಿಸಿ, ಅವರಿಗೆ ಪತ್ನಿಯ ಫೋಟೊ ಕಳುಹಿಸುತ್ತಿದ್ದ. ಗ್ರಾಹಕರನ್ನು ಮನೆಗೆ ಕರೆಸಿ ವೇಶ್ಯಾವಾಟಿಕೆ ನಡೆಸುತ್ತಿದ್ದ. ಇದೇ ಗ್ರೂಪ್‌ನ ಲಿಂಕ್‌ನ್ನು ಸಾರ್ವಜನಿಕರೊಬ್ಬರು ಪೊಲೀಸ್ ಹಿರಿಯ ಅಧಿಕಾರಿಗೆ ಕಳುಹಿಸಿದ್ದರು. ಅದೇ ಸುಳಿವು ಆಧರಿಸಿ ಗ್ರಾಹಕರ ಸೋಗಿನಲ್ಲೇ ಮನೆಗೆ ಹೋಗಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಕೋವಿಡ್ ಭೀತಿ– ಕ್ಯಾಂಟೀನ್‌ಗೆ ಬರಲು ಗ್ರಾಹಕರ ಹಿಂದೇಟು: ಗುತ್ತಿಗೆದಾರರಿಗೆ ಸಬ್ಸಿಡಿ ಹಣ ಪಾವತಿಸದ ಬಿಬಿಎಂಪಿ

ಗ್ರಾಹಕರಿಲ್ಲದೆ ಭಣಗುಡುತ್ತಿವೆ ಇಂದಿರಾ ಕ್ಯಾಂಟೀನ್

• ಜಿ.ಶಿವಕುಮಾರ

ಬೆಂಗಳೂರು: ದುಡಿಯುವ ವರ್ಗದ ಜನರ ಹಸಿವು ತಣಿಸುತ್ತಿದ್ದ ಇಂದಿರಾ ಕ್ಯಾಂಟೀನ್‌ಗಳು ಈಗ ಗ್ರಾಹಕರಿಲ್ಲದೆ ಭಣಗುಡುತ್ತಿವೆ. ರುಚಿ ಹಾಗೂ ಶುಚಿಯಾದ ಆಹಾರ ಪೂರೈಸಲಾಗುತ್ತಿದ್ದರೂ ಕೋವಿಡ್ ಭೀತಿಯಿಂದಾಗಿ ನಾಗರಿಕರು ಕ್ಯಾಂಟೀನ್‌ಗಳತ್ತ ಸುಳಿಯುತ್ತಿಲ್ಲ.

ನಗರದಲ್ಲಿ ಕ್ಯಾಂಟೀನ್‌ಗಳನ್ನು ಆರಂಭಿಸಿದಾಗ ಪ್ರತಿನಿತ್ಯ ಆಹಾರ ಸೇವಿಸುವವರ ಸಂಖ್ಯೆ 3 ಲಕ್ಷಕ್ಕೂ ಹೆಚ್ಚಿತ್ತು. ಕೋವಿಡ್ ಕಾಣಿಸಿಕೊಂಡ ಬಳಿಕ ಈ ಸಂಖ್ಯೆ ಇಳಿಮುಖವಾಗುತ್ತಾ ಸಾಗಿತ್ತು. 2021ರ ಅಂತ್ಯದ ವೇಳೆಗೆ ಇದು 1 ಲಕ್ಷದ ಆಸುಪಾಸಿಗೆ ಬಂದು ನಿಂತಿದೆ.

‘ಕ್ಯಾಂಟೀನ್‌ಗಳಿಗೆ ಆಧಾರವಾಗಿದ್ದವರೇ ವಲಸೆ ಕಾರ್ಮಿಕರು. ಕೋವಿಡ್ ಕಾಣಿಸಿಕೊಂಡ ನಂತರ ಕಾರ್ಮಿಕರೆಲ್ಲಾ ತಮ್ಮ ಊರುಗಳಿಗೆ ಹೋಗಿದ್ದರಿಂದ ಗ್ರಾಹಕರ ಸಂಖ್ಯೆ ಕ್ಷೀಣಿಸಿತ್ತು. ಈಗ ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ. ಕ್ಯಾಂಟೀನ್‌ಗೆ ಬರುವವರ ಸಂಖ್ಯೆ ನಿಧಾನವಾಗಿ ಏರುತ್ತಿದೆ’ ಎಂದು ಹನುಮಂತನಗರ ವಾರ್ಡ್ ಸಂಖ್ಯೆ 155ರಲ್ಲಿ ಇರುವ ಕ್ಯಾಂಟೀನ್‌ನ ಸಿಬ್ಬಂದಿಯೊಬ್ಬರು ತಿಳಿಸಿದರು.

‘ಲಾಕ್‌ಡೌನ್‌ಗೂ ಮುನ್ನ 300 ರಿಂದ 350 ಮಂದಿ ಉಪಾಹಾರ ಸೇವಿಸುತ್ತಿದ್ದರು. ಲಾಕ್‌ಡೌನ್ ಬಳಿಕ ಈ ಸಂಖ್ಯೆ 100 ರಿಂದ 120ಕ್ಕೆ ಇಳಿದಿತ್ತು. ಈಗ ಮತ್ತಷ್ಟು ಕಡಿಮೆಯಾಗಿದೆ. ಮಧ್ಯಾಹ್ನದ ಊಟಕ್ಕೆ 30ರಿಂದ 40 ಮಂದಿ ಬರುತ್ತಾರೆ. ರಾತ್ರಿ ಊಟಕ್ಕೆ ಬರುವವರ ಸಂಖ್ಯೆ ಕಡಿಮೆ ಇದೆ. ನಿತ್ಯ ಅನ್ನ–ಸಾಂಬಾರ್, ಮೊಸರನ್ನ, ವಾಂಗೀಬಾತ್, ಬಿಸಿಬೇಳೆ ಬಾತ್ ಹೀಗೆ ಬಗೆ ಬಗೆಯ ತಿನಿಸುಗಳನ್ನು ನೀಡುತ್ತಿದ್ದೇವೆ. ಗ್ರಾಹಕರನ್ನು ಆಕರ್ಷಿಸಲು ಬೇಳೆ, ಸಬ್ಬಕ್ಕಿ ಹೀಗೆ ವಿವಿಧ ಬಗೆಯ ಪಾಯಸವನ್ನು ಸೋಮವಾರ ಹಾಗೂ ಗುರುವಾರ ವಿತರಿಸುತ್ತಿದ್ದೇವೆ’ ಎಂದರು.

ಪ್ರಜಾವಾಣಿ ವಿಶೇಷ

‘ಪ್ರತಿ ದಿನವೂ ಒಂದೊಂದು ಬಗೆಯ ಆಹಾರ ವಿತರಿಸಲಾಗುತ್ತದೆ. ಆಹಾರ ರುಚಿಯಾಗಿರುತ್ತದೆ. ₹10ಕ್ಕೆ ಅನ್ನ– ಸಾಂಬಾರ್ ಅಥವಾ ಪಲಾವ್, ವಾಂಗೀಬಾತ್ ನೀಡುತ್ತಾರೆ. ಹೊಟ್ಟೆ ತುಂಬುವಷ್ಟು ಊಟ ಕೊಡುತ್ತಾರೆ’ ಎಂದು ಹನುಮಂತನಗರ ನಿವಾಸಿ ಜಯರಾಮ್ ತಿಳಿಸಿದರು.

‘ಕ್ಯಾಂಟೀನ್‌ಗೆ ಬಂದು ಊಟ, ಉಪಾಹಾರ ಸೇವಿಸಲು ಕೆಲವರಿಗೆ ಸಂಕೋಚ. ಅಂತಹವರು ಇಲ್ಲಿಗೆ ಬರುವುದಿಲ್ಲ. ಆಟೊ ಚಾಲಕರು, ಕೂಲಿ ಕಾರ್ಮಿಕರಿಗೆ ಕ್ಯಾಂಟೀನ್‌ನಿಂದ ತುಂಬಾ ಅನುಕೂಲವಾಗಿದೆ. ನಾನು ಆಗಾಗ ಬಂದು ಇಲ್ಲಿ ಆಹಾರ ಸೇವಿಸಿ ಹೋಗುತ್ತೇನೆ’ ಎಂದರು.

‘ಇಂದಿರಾ ಕ್ಯಾಂಟೀನ್ ಶುರುವಾದ ನಂತರ ನಾನು ಬೇರೆ ಬೇರೆ ಭಾಗಗಳಲ್ಲಿರುವ ಕ್ಯಾಂಟೀನ್‌ಗೆ ಹೋಗಿ ಆಹಾರ ಸೇವಿಸುತ್ತೇನೆ. ಊಟ, ತಿಂಡಿಯೆಲ್ಲಾ ಚೆನ್ನಾಗಿರುತ್ತದೆ. ಕೆಲವೊಮ್ಮೆ ಮನೆಗೆ ಪಾರ್ಸೆಲ್ ಸಹ ಕೊಂಡೊಯ್ಯುತ್ತೇನೆ. ಮಕ್ಕಳು ಹಾಗೂ ಮನೆಯವರೂ ಊಟ ಮಾಡಿ ಖುಷಿಪಟ್ಟಿದ್ದು ಇದೆ’ ಎಂದು ಶ್ರೀನಗರದ ರಾಜು ಹೇಳಿದರು.



ಆಜಾದ್ ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಬೆರಳೆಣಿಕೆಯ ಗ್ರಾಹಕರಷ್ಟೇ ಕಂಡುಬಂದರು —ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಕ್ಯಾಂಟೀನ್ ನಿರ್ವಹಣೆ ಗುತ್ತಿಗೆ ಪಡೆದ ಸಂಸ್ಥೆಗಳು

15 — ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ನ ಅಡುಗೆ ಮನೆಗಳು

96	48	48
ಷೆಫ್‌ಟಾಕ್	ಅದಮ್ಯ ಚೇತನ	ರಿವಾರ್ಡ್ಸ್ ಸಂಸ್ಥೆ

ರಾಗಿ ಮುದ್ದೆ, ಚಪಾತಿ ನೀಡಲು ಚಿಂತನೆ

‘ಈಗ ಕ್ಯಾಂಟೀನ್‌ಗಳಿಗೆ ಮೊದಲಿನಷ್ಟು ಗ್ರಾಹಕರು ಬರುತ್ತಿಲ್ಲ. ವಾರದಲ್ಲಿ ಒಂದೆರಡು ದಿನ ರಾಗಿ ಮುದ್ದೆ, ಸೊಪ್ಪಿನ ಸಾರು, ಚಪಾತಿ ಹಾಗೂ ಪಲ್ಯ ನೀಡಿದರೆ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾಂಟೀನ್‌ಗಳತ್ತ ಮುಖಮಾಡಬಹುದು ಎಂಬ ಆಲೋಚನೆ ಇದೆ. ಬಿಬಿಎಂಪಿ ಅಧಿಕಾರಿಗಳ ಜೊತೆಗೂ ಈ ಕುರಿತು ಚರ್ಚಿಸಿದ್ದೇವೆ’ ಎಂದು ಷೆಫ್‌ಟಾಕ್ ಸಂಸ್ಥೆಯ ಗೋವಿಂದ ಪೂಜಾರಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಎಂಟು ತಿಂಗಳಿನಿಂದ ನಮಗೆ ಸಬ್ಸಿಡಿ ಹಣ ಪಾವತಿಸಿಲ್ಲ. ₹20 ಕೋಟಿ ಬಾಕಿ ಉಳಿಸಿಕೊಂಡಿದ್ದಾರೆ. ಹೀಗಾಗಿ ಕ್ಯಾಂಟೀನ್ ನಿರ್ವಹಣೆ ಕಷ್ಟವಾಗಿದೆ. ಇದರಲ್ಲಿ ಒಂದಷ್ಟು ಮೊತ್ತವನ್ನಾದರೂ ಬಿಡುಗಡೆ ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಕೆಲ ಯಂತ್ರೋಪಕರಣಗಳು ಹಾಳಾಗಿದ್ದು ಅವುಗಳನ್ನೂ ಸರಿಪಡಿಸಿಕೊಟ್ಟಿಲ್ಲ. ಇರುವ ಸಂಪನ್ಮೂಲಗಳನ್ನೇ ಬಳಸಿಕೊಂಡು ಆಹಾರ ಸಿದ್ಧಪಡಿಸಿ ಸರಬರಾಜು ಮಾಡುತ್ತಿದ್ದೇವೆ’ ಎಂದರು.

‘ಬಾಕಿ ಉಳಿಸಿಕೊಂಡಿರುವ ಹಣದ ಪೈಕಿ ಸ್ವಲ್ಪ ಮೊತ್ತವನ್ನಾದರೂ ಬಿಡುಗಡೆ ಮಾಡಿದರೆ ಆಹಾರದ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಬಹುದು. ಕೆ.ಆರ್.ಮಾರುಕಟ್ಟೆ, ಮೆಜೆಸ್ಟಿಕ್ ಹೀಗೆ ಜನ ಹೆಚ್ಚು ಸೇರುವ ಪ್ರದೇಶಗಳಲ್ಲಿರುವ ಕ್ಯಾಂಟೀನ್‌ಗಳಲ್ಲಿ ಹಿಂದೆಲ್ಲಾ ನಿತ್ಯ 1,500 ರಿಂದ 2,000 ಮಂದಿ ಆಹಾರ ಸೇವಿಸುತ್ತಿದ್ದರು. ಈಗ ಅಲ್ಲಿ 700 ಮಂದಿ ಆಹಾರ ಸೇವಿಸಿದರೆ ಹೆಚ್ಚು’ ಎಂದು ಹೇಳಿದರು.

ಗುಣಮಟ್ಟದ ಆಹಾರಕ್ಕೆ ಆದ್ಯತೆ

‘ಬಡವರು ಹಾಗೂ ದುಡಿಯುವ ವರ್ಗದ ಜನರಿಗೆ ಕಡಿಮೆ ದರಕ್ಕೆ ಹೊಟ್ಟೆ ತುಂಬಾ ಊಟ ನೀಡಬೇಕೆಂಬುದು ಇಂದಿರಾ ಕ್ಯಾಂಟೀನ್‌ನ ಉದ್ದೇಶ. ಹೀಗಾಗಿ ಗುಣಮಟ್ಟದ ಆಹಾರ ಪೂರೈಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈ ವಿಚಾರದಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ’ ಎಂದು ಬಿಬಿಎಂಪಿ ವಿಶೇಷ ಆಯುಕ್ತರಾದ (ಹಣಕಾಸು) ತುಳಸಿ ಮದ್ದಿನೇನಿ ಹೇಳಿದರು.

‘ಮಾರ್ಷಲ್‌ಗಳು ನೀಡುವ ವರದಿಯ ಆಧಾರದಲ್ಲಿ ಗುತ್ತಿಗೆದಾರರಿಗೆ ಬಿಲ್ ಮೊತ್ತ ಪೂರೈಸಲಾಗುತ್ತಿದೆ. ಬಾಕಿ ಉಳಿಸಿಕೊಂಡಿರುವ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

ಅನ್ನ, ತರಕಾರಿ ಸಾಂಬಾರ್ ಕೊಡುತ್ತಾರೆ. ಆಹಾರದ ಗುಣಮಟ್ಟ ಚೆನ್ನಾಗಿರುತ್ತದೆ. ಈಗ ಸ್ವಲ್ಪವೇ ಅನ್ನ ಕೊಡುತ್ತಿದ್ದಾರೆ. ಅದರಿಂದ ಹೊಟ್ಟೆ ತುಂಬುವುದಿಲ್ಲ.
ಕೃಷ್ಣಮೂರ್ತಿ, ಕೈಮಗ್ಗ ಕೆಲಸಗಾರ

ಹೋಟೆಲ್‌ಗಳಲ್ಲಿ ₹50, ₹100 ಕೊಟ್ಟು ಊಟ ಮಾಡುವುದು ಕಷ್ಟ. ಮಾಡಿದರೂ ತೃಪ್ತಿಯಾಗುವುದಿಲ್ಲ. ಇಲ್ಲಿ ₹10ಕ್ಕೆ ಊಟ ಕೊಡುತ್ತಾರೆ.
ರಂಗಸ್ವಾಮಿ, ಆಟೊ ಚಾಲಕ

ಐಐಎಂ–ಬಿ ವಿದ್ಯಾರ್ಥಿಗಳಿಗೆ ಹೈಕೋರ್ಟ್ ಕರುಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆನ್ ಲೈನ್ ಪರೀಕ್ಷೆ ವೇಳೆ ಅಕ್ರಮ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ವಜಾಗೊಂಡಿದ್ದ ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆಯ (ಐಐಎಂ-ಬಿ) ಒಂಬತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತಮ್ಮ ತಪ್ಪು ತಿದ್ದಿಕೊಳ್ಳಲು ಅವಕಾಶ ನೀಡಿ’ ಎಂದು ಹೈಕೋರ್ಟ್ ಸಂಸ್ಥೆಗೆ ಸೂಚಿಸಿದೆ.

ವಿದ್ಯಾರ್ಥಿಗಳನ್ನು ವಜಾಗೊಳಿಸಿದ್ದ ಐಐಎಂ–ಬಿ ಆದೇಶವನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ರದ್ದುಪಡಿಸಿತ್ತು. ಈ ಆದೇಶ ಪ್ರಶ್ನಿಸಿದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಈಗ ಎತ್ತಿ ಹಿಡಿದಿದೆ.

‘ವಿದ್ಯಾರ್ಥಿಗಳು ಪರೀಕ್ಷೆ ವೇಳೆ ಅಕ್ರಮ ಎಸಗಿ ತಪ್ಪು ಮಾಡಿರಬಹುದು. ಆದರೆ, ಅವರನ್ನು ವಜಾಗೊಳಿಸಿರುವ ಕ್ರಮ ಸರಿಯಲ್ಲ. ಅವರಿಗೆ ಸಹನೀಯ ಶಿಕ್ಷೆ ನೀಡುವ ಮೂಲಕ ತಪ್ಪು ತಿದ್ದಿಕೊಳ್ಳಲು ಅವಕಾಶ ನೀಡಬೇಕು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ವಿದ್ಯಾರ್ಥಿಗಳು ಪ್ರತಿಷ್ಠಿತ ಸಂಸ್ಥೆಯಲ್ಲಿ ಕಲಿಯುತ್ತಿದ್ದು ಅವರ ಭವಿಷ್ಯ ಅತಂತ್ರಕ್ಕೆ ಸಿಲುಕಿದೆ. ಪರೀಕ್ಷಾ ಅಕ್ರಮ ಎಸಗಿದ ಸೆಮಿಸ್ಟರ್‌ನಲ್ಲಿ ಅವರಿಗೆ ಶೂನ್ಯ ಅಂಕ ನೀಡಿ ಮೃದು ಶಿಕ್ಷೆ ವಿಧಿಸಬಹುದು. ಆದಾಗ್ಯೂ, ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗುವ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಂಸ್ಥೆ ಸ್ವತಂತ್ರವಾಗಿದೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಐಐಎಂ–ಬಿಯಲ್ಲಿ ಸ್ನಾತಕೋತ್ತರ ಪದವಿ ಕಲಿಯುತ್ತಿರುವ 15 ವಿದ್ಯಾರ್ಥಿಗಳು 2021ರ ಆಗಸ್ಟ್‌ನಲ್ಲಿ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ವಿಷಯದ ಆನ್ ಲೈನ್ ಪರೀಕ್ಷೆ ಎದುರಿಸಿದ್ದರು. ಈ ವೇಳೆ ಅವರು ಅಕ್ರಮ ಎಸಗಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು.

ಈ ಕುರಿತು ಸಂಸ್ಥೆ ವಿಚಾರಣೆ ನಡೆಸಿದಾಗ ತಮ್ಮ ತಪ್ಪನ್ನು ಮೊದಲಿಗೆ ನಿರಾಕರಿಸಿದ್ದ ವಿದ್ಯಾರ್ಥಿಗಳು, ಸಾಕ್ಷ್ಯ ಒಪ್ಪಿಸಿದಾಗ ತಪ್ಪೊಪ್ಪಿಕೊಂಡು ಕ್ಷಮೆ ಕೋರಿದ್ದರು. ಆದರೆ, ಐಐಎಂ–ಬಿ ಸಂಸ್ಥೆಯು ಪರೀಕ್ಷಾ ಅಕ್ರಮವನ್ನು ಗಂಭೀರವಾಗಿ ಪರಿಗಣಿಸಿ ಒಂಬತ್ತು ವಿದ್ಯಾರ್ಥಿಗಳನ್ನು ವಜಾ ಮಾಡಿತ್ತು. ಈ ಆದೇಶ ರದ್ದುಗೊಳಿಸಬೇಕು ಎಂದು ಕೋರಿ ವಿದ್ಯಾರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿದ್ಯಾರ್ಥಿಗಳ ಈ ಅರ್ಜಿ ಪುರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠ, ವಿದ್ಯಾರ್ಥಿಗಳಿಗೆ ಮೃದು ಶಿಕ್ಷೆ ನೀಡಲು ಸೂಚಿಸಿ, ವಜಾ ಆದೇಶವನ್ನು ರದ್ದುಗೊಳಿಸಿತ್ತು. ಈ ಆದೇಶವನ್ನು ಐಐಎಂ–ಬಿ ಮೇಲ್ಮನವಿ ಸಲ್ಲಿಸುವ ಮೂಲಕ ವಿಭಾಗೀಯ ನ್ಯಾಯಪೀಠದಲ್ಲಿ ಪ್ರಶ್ನಿಸಿತ್ತು.



ಪ್ರತಿಭಟನೆ ಸಾರಿಗೆ ಇಲಾಖೆಯ ಅಧಿಕಾರಿಗಳು ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಿರುವುದನ್ನು ಖಂಡಿಸಿ ರ್‍ಯಾಪಿಡೊ ಬೈಕ್ ಚಾಲಕರು ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಸಾರಿಗೆ ಇಲಾಖೆ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲೆಂದರಲ್ಲಿ ರಸ್ತೆ ಅಗೆಯುತ್ತಿರುವ ಕಂಪನಿಗಳು

ಕೇಬಲ್ ಅಳವಡಿಕೆ: ಅಗೆದು ಹಾಳಾದ ರಸ್ತೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುಂಡಿಬಿದ್ದ ರಸ್ತೆಗಳು ಒಂದೆಡೆಯಾದರೆ, ನೆಲದೊಳಗೆ ಕೇಬಲ್ ಅಳವಡಿಕೆ ನೆಪದಲ್ಲಿ ರಸ್ತೆಗಳನ್ನು ಅಗೆಯುತ್ತಿರುವುದು ಇನ್ನೊಂದು ಸಮಸ್ಯೆಯನ್ನು ತಂದೊಡ್ಡಿದೆ. ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿನ ಬಹುತೇಕ ರಸ್ತೆಗಳನ್ನು ಅಗೆಯಲಾಗಿದ್ದು, ವಾಹನ ಸವಾರರು ಪರದಾಡುವಂತಾಗಿದೆ.

ಆರ್.ಟಿ.ನಗರ, ಹೆಬ್ಬಾಳ, ಗಂಗಾನಗರ, ಗಂಗೇನಹಳ್ಳಿ, ಮನೋರಾಯನ ಪಾಳ್ಯ ಸೇರಿ 8 ವಾರ್ಡ್‌ಗಳಲ್ಲಿ ಹಲವೆಡೆ ಕೇಬಲ್ ಅಳವಡಿಕೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ರಾತ್ರೋರಾತ್ರಿ ರಸ್ತೆಗಳನ್ನು ಅಗೆದು ಕೇಬಲ್ ಅಳವಡಿಕೆ ಮಾಡಿ ಹಾಗೇ ಬಿಟ್ಟು ಹೋಗುತ್ತಿದ್ದಾರೆ. 2 ಅಡಿ ಅಗಲದ ಬಾಕ್ಸ್‌ಗಳನ್ನು ಅಳವಡಿಕೆ ಮಾಡಲು 6ರಿಂದ 8 ಅಡಿಯಷ್ಟು ಅಗೆದು ರಸ್ತೆಗಳನ್ನು ಹಾಳು ಮಾಡುತ್ತಿದ್ದಾರೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

‘ರಸ್ತೆಗಳನ್ನು ಮಾಡಿಸಲು ಎರಡು ವರ್ಷ ಪರಿಶ್ರಮಪಟ್ಟಿದ್ದೇವೆ. ಸ್ಥಳೀಯರನ್ನು ಒಗ್ಗೂಡಿಸಿಕೊಂಡು ಶಾಸಕರಿಗೆ ಮನವಿ ಮಾಡಿ ರಸ್ತೆ ಮಾಡಿಸಿಕೊಂಡಿದ್ದೆವು. ಹೇಗೋ ರಸ್ತೆ ಸರಿಯಾಗಿದೆ ಎಂದು ನಿಟ್ಟುಸಿರುವ ಬಿಡುವಷ್ಟರಲ್ಲಿ ಎಲ್ಲವನ್ನೂ ಅಗೆದು ಹಾಳು ಮಾಡಿದ್ದಾರೆ’ ಎಂದು ಆರ್.ಟಿ.ನಗರದ ದಾಸಪ್ಪ ಗಾರ್ಡನ್‌ನ ನಂದೀಶ್ ಹೇಳಿದರು.



ಆರ್‌.ಟಿ.ನಗರದಲ್ಲಿ ರಸ್ತೆ ಅಗೆಯುತ್ತಿರುವುದು

‘ರಸ್ತೆ ಅಗೆಯಲು ಬಂದವರನ್ನು ಪ್ರಶ್ನೆ ಮಾಡಿದರೆ, ಬಿಬಿಎಂಪಿಯಿಂದ ಅನುಮತಿ ಪಡೆದಿದ್ದೇವೆ ಎನ್ನುತ್ತಾರೆ. ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಸಿ ರಸ್ತೆ ಮಾಡಿಸಲು ಶ್ರಮ ವಹಿಸುವವರು ನಾವು. ಅದನ್ನು ಅಗೆಯಲು ಬಿಬಿಎಂಪಿ ಅಧಿಕಾರಿಗಳು ಏಕಾಏಕಿ ಅನುಮತಿ ನೀಡುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಅಧಿಕಾರಿಗಳನ್ನು ಕೇಳಿದರೆ ಅನುಮತಿ ನೀಡಿಲ್ಲ ಎಂದು ಹೇಳುತ್ತಾರೆ. ದೂರು ನೀಡಿದಾಗ ಕಾಮಗಾರಿ ಬಂದ್ ಮಾಡಿಸುತ್ತಾರೆ. ಮತ್ತೆ ಅನುಮತಿ ನೀಡಿ ರಾತ್ರೋರಾತ್ರಿ ಕೆಲಸ ಮಾಡಿಸುತ್ತಾರೆ. ಅಭಿವೃದ್ಧಿಪಡಿಸಿದ ರಸ್ತೆಯನ್ನು ಅಗೆಯಲು ಅನುಮತಿ ನೀಡುವುದು ಯಾವ ನ್ಯಾಯ’ ಎಂದು ಪ್ರಶ್ನಿಸಿದರು.

‘ಗಂಗೇನಹಳ್ಳಿಯಲ್ಲಿ ಇತ್ತೀಚೆಗೆ ರಸ್ತೆ ನಿರ್ಮಾಣ ಮಾಡಲಾಗಿದೆ. ಆ ರಸ್ತೆಯನ್ನು ರಾತ್ರೋರಾತ್ರಿ ಅಗೆಯಲಾಗಿದೆ. ರಾತ್ರಿ ವೇಳೆ ಪಾನಮತ್ತರಾಗಿ ಕೆಲಸ ಮಾಡುವವರು ರೌಡಿಗಳಂತೆ ಕಾಣಿಸುತ್ತಾರೆ. ಅವರನ್ನು ಮಾತನಾಡಿಸಿ ಕೇಳಲು ಸ್ಥಳೀಯರು ಭಯಪಡುವ ಸ್ಥಿತಿ ಇದೆ’ ಎಂದು ಗಂಗೇನಹಳ್ಳಿ ಎನ್. ಮಂಜುನಾಥ್ ಹೇಳಿದರು.

ಕಾಮಗಾರಿ ನಡೆಯುತ್ತಿರುವ ಬಗ್ಗೆ ಫಲಕವನ್ನೂ ಹಾಕುವುದಿಲ್ಲ. ಹಿರಿಯ ನಾಗರಿಕರೊಬ್ಬರು ಗುಂಡಿಗೆ ಬಿದ್ದು ಕಾಲು ಮುರಿದುಕೊಂಡಿದ್ದಾರೆ. ಕೇಬಲ್ ಅಳವಡಿಕೆ ಮಾಡುವವರನ್ನು ಪ್ರಶ್ನೆ ಮಾಡುವವರೇ ಇಲ್ಲವಾಗಿದೆ ಎಂದರು.

ಅವೈಜ್ಞಾನಿಕವಾಗಿ ಕಾಮಗಾರಿ ನಿರ್ವಹಿಸುತ್ತಿರುವುದರಿಂದ ಒಳಚರಂಡಿ ಪೈಪ್‌ಲೈನ್‌ಗಳೂ ಹಾಳಾಗುತ್ತಿವೆ. ಒಳಚರಂಡಿ ನೀರು ರಸ್ತೆಗೆ ಹರಿಯಲು ಆರಂಭವಾಗಿದೆ. ರಸ್ತೆ ಅಗೆದು ಹಾಳುವ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವವರೇ ಇಲ್ಲವಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮಾಹಿತಿ ಕೇಳಿದ ಶಾಸಕ ಬೈರತಿ ಸುರೇಶ್

ರಸ್ತೆ ಅಗೆದು ಹಾಳು ಮಾಡಿ ಬಿಟ್ಟು ಹೋಗುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಶಾಸಕ ಬೈರತಿ ಸುರೇಶ್, ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದು ಮಾಹಿತಿ ಕೇಳಿದ್ದಾರೆ.

ಅಗೆದ ರಸ್ತೆಯನ್ನು ಸರಿಯಾಗಿ ಮುಚ್ಚದಿರುವುದರಿಂದ ಸ್ಥಳೀಯರು ತೊಂದರೆ ಅನುಭವಿಸುತ್ತಿದ್ದಾರೆ. ಇಲ್ಲಿನ ಅಧಿಕಾರಿಗಳನ್ನು ಕೇಳಿದರೆ ಸ್ಪಷ್ಟವಾಗಿ ಮಾಹಿತಿ ನೀಡುತ್ತಿಲ್ಲ. ಆದ್ದರಿಂದ ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 2 ವರ್ಷಗಳಲ್ಲಿ ಬೆಸ್ಕಾಂ ಹೊರತುಪಡಿಸಿ ಬೇರೆ ಕೇಬಲ್ ಅಳವಡಿಕೆಗೆ ಅನುಮತಿ ನೀಡಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಿದ್ದಾರೆ.

ಸಾರ್ವಜನಿಕರಿಗೆ ಆಗಿರುವ ತೊಂದರೆಯನ್ನು ಶಾಸಕರು ಶನಿವಾರ ಪರಿಶೀಲನೆ ನಡೆಸಿದರು.

‘ಅಗೆಯದಂತೆ ಸೂಚನೆ’

‘ಕೇಬಲ್ ಅಳವಡಿಕೆ ಮಾಡಲು ಅನುಮತಿ ನೀಡಿದ್ದರೂ, ಹೊಸ ರಸ್ತೆಗಳನ್ನು ಅಗೆಯದಂತೆ ಸೂಚಿಸಲಾಗಿತ್ತು. ಆದರೂ, ರಸ್ತೆ ಅಗೆದಿದ್ದರೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೆಬ್ಬಾಳ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿಶ್ವನಾಥ್ ತಿಳಿಸಿದರು.

‘ನಾಳೆಯಿಂದ ಯಾವುದೇ ರಸ್ತೆಗಳನ್ನು ಅಗೆಯದಂತೆ ಸೂಚಿಸಲಾಗಿದೆ. ಹಾಳಾಗಿರುವ ರಸ್ತೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದರು.

‘ತಾಮ್ರದ ಚೆಂಬು’ ವಂಚನೆ: ₹ 15 ಲಕ್ಷ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ‘ತಾಮ್ರದ ಚೆಂಬು’ ತೋರಿಸಿ ರೈಸ್ ಪುಲ್ಲಿಂಗ್ ಹೆಸರಿನಲ್ಲಿ ಸಾರ್ವಜನಿಕರನ್ನು ವಂಚಿಸುತ್ತಿದ್ದ ಇಬ್ಬರನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದು, ಅವರಿಂದ ₹ 15 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

‘ನಾರಾಯಣ ಹಾಗೂ ವಿಘ್ನೇಶ್ ಬಂಧಿತರು. ವಂಚನೆ ಬಗ್ಗೆ ನಗರದ ಉದ್ಯಮಿಯೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿದ್ದ ಕೆಲವರು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

'ತಾಮ್ರದ ಚೆಂಬು ಸಮೇತ ಜ. 3ರಂದು ಬೆಂಗಳೂರಿಗೆ ಬಂದಿದ್ದ ಆರೋಪಿಗಳು, ಮೈಸೂರು ರಸ್ತೆಯ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿ ಉದ್ಯಮಿ ಹಾಗೂ ಅವರ ಸ್ನೇಹಿತರನ್ನು ಭೇಟಿಯಾಗಿದ್ದರು. ‘ಸಿಡಿಲು ಬಡಿದಿರುವ ಪುರಾತನ ತಾಮ್ರದ ಚೆಂಬು ಇದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಇದೆ’ ಎಂಬುದಾಗಿ ಹೇಳಿದ್ದರು.’

‘ಅಮೆರಿಕದ ನಾಸಾ ಹಾಗೂ ಜಪಾನ್‌ನ ಜಾಕ್ಸಾ ಕಂಪನಿಯವರು ಕೋಟ್ಯಂತರ ರೂಪಾಯಿಗೆ ಚೆಂಬು ಖರೀದಿಸುತ್ತಾರೆ. ಅದಕ್ಕೂ ಮುನ್ನ ಕೆಲ ಪರೀಕ್ಷೆಗಳನ್ನು ಮಾಡಿಸಬೇಕು. ಅದಕ್ಕೆ ಹಣ ಖರ್ಚಾಗುತ್ತದೆ. ನೀವು ₹ 1 ಕೋಟಿ ಹೂಡಿಕೆ ಮಾಡಿದರೆ, ಕೆಲವೇ ದಿನಗಳಲ್ಲಿ ನಿಮಗೆ ₹ 5 ಕೋಟಿ ಮರಳಿ ಕೊಡುತ್ತೇವೆ’ ಎಂಬುದಾಗಿ ಆರೋಪಿಗಳು ತಿಳಿಸಿದ್ದರು. ಅದನ್ನು ನಂಬಿದ್ದ ಉದ್ಯಮಿ, ₹ 48 ಲಕ್ಷ ನೀಡಿದ್ದರು.’

‘ಹಣ ಪಡೆದ ನಂತರ ನಾಪತ್ತೆಯಾಗಿದ್ದ ಆರೋಪಿಗಳು, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದರು. ಆರೋಪಿಗಳದ್ದು ವಂಚನೆ ಜಾಲವೆಂಬುದು ತಿಳಿಯುತ್ತಿದ್ದಂತೆ ಉದ್ಯಮಿ ಠಾಣೆಗೆ ದೂರು ನೀಡಿದ್ದರು’ ಎಂದೂ ಪೊಲೀಸರು ವಿವರಿಸಿದರು.

‘ಐಷಾರಾಮಿ ಜೀವನಕ್ಕೆ ಹಣ ಹೊಂದಿಸಲು ಕೃತ್ಯ ಎಸಗಿರುವುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ’ ಎಂದೂ ಹೇಳಿದರು.

ಬೈಕ್ ಕದಿಯುತ್ತಿದ್ದವರ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ವಾಹನಗಳನ್ನು ಕದಿಯುತ್ತಿದ್ದ ಆರೋಪದಡಿ ಇಬ್ಬರನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

‘ಮುಬಾರಕ್ ಖಾನ್ ಹಾಗೂ ಪಾಷಾ ಬಂಧಿತರು. ಅವರಿಂದ ₹ 1.42 ಲಕ್ಷ ಮೌಲ್ಯದ ಆಟೊ ಹಾಗೂ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಇತ್ತೀಚೆಗೆ ಆಟೊವೊಂದನ್ನು ಆರೋಪಿಗಳು ಕಳವು ಮಾಡಿದ್ದರು. ಆ ಬಗ್ಗೆ ಪ್ರಕರಣ ದಾಖಲಾಗಿತ್ತು’ ಎಂದು ತಿಳಿಸಿದರು.

ಯುವತಿಗೆ ಸಂದೇಶ ಕಳುಹಿಸಿದ್ದಕ್ಕೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹೋದ್ಯೋಗಿ ಯುವತಿ ಮೊಬೈಲ್‌ಗೆ ಸಂದೇಶ ಕಳುಹಿಸಿದರೆಂಬ ಕಾರಣಕ್ಕೆ ಪಿ. ಸುರೇಂದ್ರ ಎಂಬುವರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಲಾಗಿದ್ದು, ಈ ಸಂಬಂಧ ನಾಲ್ವರನ್ನು ಬಾಗಲೂರು ಪೊಲೀಸರು ಬಂಧಿಸಿದ್ದಾರೆ.

‘ಹೊಸಕೋಟೆಯ ಮೋಹನ್ (21), ಯಲಹಂಕದ ರಾಕೇಶ್ (20), ದೇವನಹಳ್ಳಿಯ ವರುಣ್‌ಕುಮಾರ್ (21) ಹಾಗೂ ಸೂರಜ್ (20) ಬಂಧಿತರು. ಅವರಿಂದ ಚಾಕು ಹಾಗೂ 2 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸುರೇಂದ್ರ ಅವರು ಬಾಗಲೂರಿನ ಕಂಪನಿಯೊಂದರ ಉದ್ಯೋಗಿ. ಅದೇ ಕಂಪನಿಯಲ್ಲಿ ಯುವತಿ ಹಾಗೂ ಆರೋಪಿಗಳು ಕೆಲಸ ಮಾಡುತ್ತಿದ್ದರು’ ಎಂದೂ ತಿಳಿಸಿದರು.

‘ಸಹೋದ್ಯೋಗಿ ಯುವತಿ ಮೊಬೈಲ್‌ಗೆ ಸುರೇಂದ್ರ ಇತ್ತೀಚೆಗೆ ಸಂದೇಶ ಕಳುಹಿಸಿದ್ದರು. ಯುವತಿ ಜೊತೆ ಸ್ನೇಹ ಹೊಂದಿದ್ದ ಆರೋಪಿಗಳಿಗೆ ವಿಷಯ ಗೊತ್ತಾಗಿತ್ತು. ಜ. 31ರಂದು ಸುರೇಂದ್ರ ಜೊತೆ ಜಗಳ ತೆಗೆದಿದ್ದ ಆರೋಪಿಗಳು, ಚಾಕುವಿನಿಂದ ಇರಿದು ಪರಾರಿಯಾಗಿದ್ದರು.’

‘ಗಾಯಗೊಂಡ ಸುರೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಅವರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ಪೊಲೀಸರು ಹೇಳಿದರು.

ಸ್ಪಾ ಮೇಲೆ ದಾಳಿ: 13 ಮಹಿಳೆಯರ ರಕ್ಷಣೆ

ನಗರದಲ್ಲಿ ಮೂರು ‘ಸ್ಪಾ ಹಾಗೂ ಸಲೂನ್’ ಮಳಿಗೆಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, 13 ಮಹಿಳೆಯರನ್ನು ರಕ್ಷಿಸಿದ್ದಾರೆ.

‘ರಾಯಲ್ ಸ್ಪಾ ಆ್ಯಂಡ್ ಸಲೂನ್, ಈಸ್ಥೆಟಿಕ್ ಯೂನಿಸೆಕ್ಸ್ ಸಲೂನ್ ಆ್ಯಂಡ್ ಸ್ಪಾ, ನಿಸರ್ಗಾ ಆಯುರ್ವೇದಿಕ್ ಕ್ಲಿನಿಕ್ ಮಳಿಗೆ ಮೇಲೆ ದಾಳಿ ಮಾಡಲಾಗಿದೆ. ಮೂರು ಮಳಿಗೆ ವಿರುದ್ಧ ಎಚ್‌ಎಸ್‌ಆರ್ ಲೇಔಟ್, ಅಶೋಕನಗರ ಹಾಗೂ ಮಡಿವಾಳ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

‘ಮಾನವ ಕಳ್ಳಸಾಗಣೆ ಮೂಲಕ ಮಹಿಳೆಯರನ್ನು ಅಕ್ರಮವಾಗಿ ಕರೆತಂದು, ವೇಶ್ಯಾವಾಟಿಕೆಗೆ ತಳ್ಳುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಅದರನ್ವಯ ಈ ದಾಳಿ ನಡೆಸಲಾಯಿತು’ ಎಂದೂ ತಿಳಿಸಿದರು.

‘ನೇಪಾಳ, ಟರ್ಕಿ, ನಾಗಾಲ್ಯಾಂಡ್, ಅಸ್ಸಾಂ, ದೆಹಲಿ, ಪಶ್ಚಿಮ ಬಂಗಾಳದ ಮಹಿಳೆಯರನ್ನು ರಕ್ಷಿಸಲಾಗಿದೆ. ಅವರನ್ನು ವಾಪಸು ಮನೆಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದೂ ಹೇಳಿದರು.

ನಾಲ್ವರು ಆತ್ಮಹತ್ಯೆ ಮಾಡಿಕೊಂಡಿದ್ದ ಒಂಟಿ ಮನೆಯಲ್ಲಿ ಸಿಕ್ಕಿಬಿದ್ದ ಕಳ್ಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆ ಮಾಡಿಕೊಂಡಿದ್ದ ಮನೆಯಲ್ಲಿ ಕಳ್ಳತನಕ್ಕೆ ಯತ್ನಿಸುತ್ತಿದ್ದ ಆರೋಪಿ ಭರತ್‌ಕುಮಾರ್ ಎಂಬಾತನನ್ನು ಸಾರ್ವಜನಿಕರೇ ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧುರಾಣಿ (33) ಹಾಗೂ ಮಧುಸಾಗರ್ (25) ಕೆಲ ತಿಂಗಳ ಹಿಂದಷ್ಟೇ ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದ ಆರೋಪದಡಿ ಭಾರತಿ ಅವರ ಪತಿ ಹಲ್ಲೇಗೆರೆ ಶಂಕರ್ ಹಾಗೂ ಅಳಿಯಂದಿರನ್ನು ಪೊಲೀಸರು ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ.

'ಆತ್ಮಹತ್ಯೆ ನಂತರ ಮನೆಯಲ್ಲಿ ಯಾರೂ ಇಲ್ಲ. ಜೊತೆಗೆ, ಸ್ಥಳೀಯರೂ ಮನೆ ಬಳಿ ಹೋಗಲು ಭಯಪಡುತ್ತಾರೆ. ಇಂಥ ಸಂದರ್ಭದಲ್ಲೇ ಆರೋಪಿ ಭರತ್‌ಕುಮಾರ್, ರಾತ್ರಿ ಮನೆಯೊಳಗೆ ನುಗ್ಗಿದ್ದ. ಮೊಬೈಲ್ ಟಾರ್ಚ್ ಹಿಡಿದು ಕೊಠಡಿ ಹಾಗೂ ಹಲವೆಡೆ ಹುಡುಕಾಡಿದ್ದ. ಒಂಟಿ ಮನೆಯಲ್ಲಿ ಅಪರಿಚಿತನನ್ನು ಗಮನಿಸಿದ್ದ ಸ್ಥಳೀಯರು, ಭಯಗೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ಕೆಲ ಯುವಕರು, ಮನೆ ಬಳಿ ಹೋಗಿ ನೋಡಿದ್ದರು. ದೇವರ ಕೊಠಡಿ ಸೇರಿದ್ದ ಆರೋಪಿ, ಮನೆಯಲ್ಲಿ ದೆವ್ವ ಇರುವುದಾಗಿ ಕಥೆ ಕಟ್ಟಿದ್ದ. ಸ್ಥಳೀಯರು ಹಿಡಿಯಲು ಹೋದಾಗ, ಮನೆಯಿಂದ ಹೊರಗೆ ಓಡಿದ್ದ. ಸ್ಥಳೀಯರು ಆತನನ್ನು ಹಿಡಿದು ಥಳಿಸಿದ್ದರು. ನಂತರ, ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ವಶಕ್ಕೆ ಆರೋಪಿಯನ್ನು ಒಪ್ಪಿಸಿದ್ದಾರೆ’ ಎಂದೂ ತಿಳಿಸಿದರು. ‘ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆತನ ಪೂರ್ವಾಪರ ಸದ್ಯಕ್ಕೆ ಗೊತ್ತಾಗಿಲ್ಲ’ ಎಂದೂ ಹೇಳಿದರು.

ನಿಧನ ವಾರ್ತೆ

ಗೋವಿಂದಸ್ವಾಮಿ



ಬೆಂಗಳೂರು: ಛಾಯಾಗ್ರಾಹಕ ಗೋವಿಂದಸ್ವಾಮಿ (77) ಅವರು ಶನಿವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ.

ಬಾಣಸವಾಡಿಯಲ್ಲಿ ನೆಲೆಸಿದ್ದ ಅವರು, ಬಹುಅಂಗಾಂಗ ವೈಫಲ್ಯ ಸಮಸ್ಯೆಯಿಂದ ಬಳಲುತ್ತಿದ್ದರು. 15 ವರ್ಷಗಳ ಹಿಂದೆ ಇವರ ಕಾಲಿನಲ್ಲಿ ಗ್ಯಾಂಗ್ರಿನ್ ಕಾಣಿಸಿಕೊಂಡಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ.

ಕ್ರೀಡೆ ಛಾಯಾಗ್ರಹಣದಲ್ಲಿ ಇವರು ವಿಶೇಷ ಪರಿಣತಿ ಹೊಂದಿದ್ದರು. ಛಾಯಾಚಿತ್ರ ಏಜೆನ್ಸಿ ಬಿಎನ್‌ಪಿಯಲ್ಲಿ ಕಾರ್ಯನಿರ್ವಹಿಸಿದ್ದ ಇವರು ಕಪ್ಪು ಬಿಳಪು ಛಾಯಾಚಿತ್ರ ಮುದ್ರಣದಲ್ಲಿ ವಿಶೇಷ ನೈಪುಣ್ಯ ಗಳಿಸಿದ್ದರು. 40 ವರ್ಷಗಳು ಛಾಯಾಚಿತ್ರರಂಗದಲ್ಲಿ ಕೆಲಸ ಮಾಡಿದ್ದಾರೆ. ಇವರು ತೆಗೆದ ಛಾಯಾಚಿತ್ರಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

‘ಶ್ರೀಗಂಧದ ಉಸ್ತುವಾರಿ ತೋಟಗಾರಿಕೆ ಇಲಾಖೆಗೆ ನೀಡಿ’

ಬೆಂಗಳೂರು: ‘ಅರಣ್ಯ ಇಲಾಖೆ ಅಧೀನದಲ್ಲಿರುವ ಶ್ರೀಗಂಧ ತೋಟಗಳ ನಿರ್ವಹಣೆಯನ್ನು 2022–23ನೇ ಸಾಲಿನಿಂದ ತೋಟಗಾರಿಕೆ ಇಲಾಖೆಗೆ ವಹಿಸಬೇಕು’ ಎಂದು ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ಅಮರನಾರಾಯಣ ಆಗ್ರಹಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಶ್ರೀಗಂಧ ಕಟಾವು ಮಾಡಲು ಅರಣ್ಯ ಇಲಾಖೆ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಎಫ್‌ಒ) ಬದಲಿಗೆ ವಲಯ ಅರಣ್ಯಾಧಿಕಾರಿಗಳೇ (ಆರ್‌ಎಫ್‌ಒ) 30 ದಿನಗಳ ಕಾಲಮಿತಿಯೊಳಗೆ ಅನುಮತಿ ನೀಡಬೇಕು. ಕಟಾವಾದ ಶ್ರೀಗಂಧದ ಮರಗಳ ಸಾಗಾಣಿಕೆ ಮತ್ತು ವಿಂಗಡಣೆಯನ್ನು ರೈತರೇ ಮುಕ್ತವಾಗಿ ನಿರ್ವಹಿಸಬೇಕು’ ಎಂದರು.

‘ಶ್ರೀಗಂಧ ಮಾರಾಟ ಮಾಡಲು ಸರ್ಕಾರಕ್ಕೆ ತೆರಿಗೆ ಮತ್ತು ರಾಜಧನ ಪಾವತಿಸುವ ಷರತ್ತನ್ನು ರದ್ದುಪಡಿಸಬೇಕು. ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಮೂಲಕ ಶ್ರೀಗಂಧ ಮಾರಾಟ ಮಾಡುವುದು ಅಥವಾ ಅವುಗಳ ಉಪ ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡಲು ಅವಕಾಶ ಮಾಡಿಕೊಡಬೇಕು’ ಎಂದರು.

‘ಶ್ರೀಗಂಧವನ್ನು ಅರಣ್ಯ ಇಲಾಖೆ ಮತ್ತು ಕರಕುಶಲ ನಿಗಮಕ್ಕೆ ಮಾರಾಟ ಮಾಡಬೇಕು ಎಂಬ ಕಾನೂನಿನ ಬದಲಿಗೆ ಮುಕ್ತ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಬೇಕು. ಈ ಸಂಬಂಧ ಅರಣ್ಯ ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂದರು.

ಪ್ರಧಾನ ಕಾರ್ಯದರ್ಶಿ ಎನ್. ಸದಾಶಿವಯ್ಯ,‘ಶ್ರೀಗಂಧ ಬೆಳೆಗಾರರು ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಳ್ಳಲು 9845386525 ಅಥವಾ sandalfarmers.22@gmail.com ಅನ್ನು ಸಂಪರ್ಕಿಸಬಹುದು’ ಎಂದರು.

ಮಾದಕವಸ್ತು ಕಳ್ಳಸಾಗಣೆ ಜಾಲಪತ್ತೆ: 18 ಕೋಟಿ ಮೌಲ್ಯದ ವಸ್ತುವಶ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಬಾರಾಮುಲ್ಲಾದಲ್ಲಿ ಶನಿವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮಾದಕವಸ್ತು ಕಳ್ಳ ಸಾಗಣೆಯನ್ನು ಜಾಲವನ್ನು ಭೇದಿಸಿದ್ದು, ಇಬ್ಬರನ್ನು ಬಂಧಿಸಿ ₹ 18 ಕೋಟಿ ಮೊತ್ತದ ಮಾದಕ ವಸ್ತು ವಶಪಡಿಸಿಕೊಂಡಿದ್ದಾರೆ.

ಉರಿ ಪಟ್ಟಣ ಸಮೀಪದ ಜಬ್ಲಾ ನಿವಾಸಿ ಮೊಹಮ್ಮದ್ ಸಬೀರ್ ಬರ್ವಾಲ್, ರಾಂಬನ್‌ನ ರಫಿಯಾಬಾದ್‌ನ ಪರ್ವೇಜ್ ಅಹ್ಮದ್ ತಂತ್ರಿ ಬಂಧಿತ ಆರೋಪಿಗಳು.

‘ದಚಿ-ಬಾಸ್‌ಗ್ರಾನ್ ರಸ್ತೆಯಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದಾಗ ದಚಿ ಸಂಪರ್ಕ ರಸ್ತೆಯಲ್ಲಿ ಅನುಮಾನಸ್ಪಾದವಾಗಿ ನಿಂತಿದ್ದ ಎರಡು ವಾಹನಗಳನ್ನು ಪೊಲೀಸರು ತಪಾಸಣೆಗೆ ಮುಂದಾಗುತ್ತಿದ್ದಂತೆ ಎರಡೂ ವಾಹನಗಳ ಚಾಲಕರು ಪರಾರಿಯಾಗಲು ಯತ್ನಿಸಿದರು.ಈ ವೇಳೆ ಪರಿಶೀಲನೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು. ಒಂದು ವಾಹನದಲ್ಲಿ ಮೂರು, ಮತ್ತೊಂದು ವಾಹನದಲ್ಲಿ ಐದು ಪಾಕೆಟ್ ಹೆರಾಯಿನ್ ದೊರೆತಿದ್ದು, ಕಾಳಸಂತೆಯಲ್ಲಿ ಅದರ ಮೌಲ್ಯ ₹ 18 ಕೋಟಿ ಯದ್ದಾಗಿದೆ’ ಎಂದು ಪೊಲೀಸ್ ವಕ್ತಾರರು ತಿಳಿಸಿದರು.

‘ಆರೋಪಿಗಳಿಂದ ಎರಡೂ ವಾಹನ, ಮೊಬೈಲ್, ಬ್ಯಾಂಕ್ ಚೆಕ್‌ಬುಕ್, ಆಧಾರ್ ಕಾರ್ಡ್ ಸೇರಿದಂತೆ ಇತರೆ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

2ನೇ ಡೋಸ್: 2 ಜಿಲ್ಲೆ ಮಾತ್ರ ಗುರಿ ಸಾಧನೆ

ಬೆಂಗಳೂರು: ರಾಜ್ಯದಲ್ಲಿ 18 ವರ್ಷಗಳು ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡುವಿಕೆಯಲ್ಲಿ 24 ಜಿಲ್ಲೆಗಳು ಶೇ 100 ರಷ್ಟು ಗುರಿ ತಲುಪಿವೆ. ಎರಡನೇ ಡೋಸ್ ನೀಡುವಿಕೆಯಲ್ಲಿ ಎರಡು ಜಿಲ್ಲೆಗಳಷ್ಟೇ ಈ ಸಾಧನೆ ಮಾಡಿವೆ. ರಾಜ್ಯದಲ್ಲಿ 18 ವರ್ಷ ಮೇಲ್ಪಟ್ಟ 4.89 ಕೋಟಿ ಮಂದಿಗೆ ಲಸಿಕೆ ನೀಡುವ ಗುರಿ ಇತ್ತು. 4.94 ಕೋಟಿ ಮಂದಿಗೆ ಮೊದಲ ಡೋಸ್ ಲಸಿಕೆ ನೀಡಿದ್ದು, ಶೇ 101 ರಷ್ಟು ಸಾಧನೆ ಆಗಿದೆ. 4.37 ಕೋಟಿ ಮಂದಿ (ಶೇ 89) ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. 10 ಜಿಲ್ಲೆಗಳು ಎರಡನೇ ಡೋಸ್ ನೀಡುವಲ್ಲಿ ರಾಜ್ಯದ ಸರಾಸರಿಗಿಂತ ಹಿಂದುಳಿದಿವೆ. ವಿಜಯಪುರ (ಶೇ 101) ಹಾಗೂ ಬೆಂಗಳೂರು ಗ್ರಾಮಾಂತರ ಶೇ 100 ರಷ್ಟು ಸಾಧನೆ ಮಾಡಿವೆ.

ಕಾರ್ಬೆವ್ಯಾಕ್ಸ್ ಲಸಿಕೆಯ 5 ಕೋಟಿ ಡೋಸ್ ಖರೀದಿಗೆ ಕ್ರಮ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಕೋವಿಡ್ ಲಸಿಕೆ ಕಾರ್ಬೆವ್ಯಾಕ್ಸ್‌ನ 5 ಕೋಟಿ ಡೋಸ್ ಖರೀದಿಸಲಿದ್ದು, ಈ ಬಗ್ಗೆ ಬಯಾಲಾಜಿಕಲ್ ಇ ಸಂಸ್ಥೆಗೆ ಆದೇಶ ನೀಡಿದೆ. ಖರೀದಿ ದರ ಪ್ರತಿ ಡೋಸ್‌ಗೆ ತೆರಿಗೆ ಹೊರತುಪಡಿಸಿ ₹ 145 ಆಗಿರುತ್ತದೆ.

ಈ ಲಸಿಕೆಯನ್ನು ಯಾವ ವರ್ಗದವರಿಗೆ ನೀಡಬೇಕು ಎಂದು ಸರ್ಕಾರ ಇನ್ನಷ್ಟೇ ತೀರ್ಮಾನಿಸಬೇಕಿದೆ. ಮೂಲಗಳ ಪ್ರಕಾರ, ಕೋವಿಡ್‌ನ ಮುಂಚೂಣಿ ಕಾರ್ಯಕರ್ತರು ಮತ್ತು ಹಿರಿಯ ನಾಗರಿಕರಿಗೆ ಮುಂಜಾಗ್ರತೆ ಲಸಿಕೆಯಾಗಿ ನೀಡಲು ಇದನ್ನು ಬಳಸುವ ಕುರಿತು ತಾಂತ್ರಿಕ ಸಮಿತಿ, ಆರೋಗ್ಯ ಸಚಿವಾಲಯವು ಚರ್ಚೆ ನಡೆಸಿದೆ.

ಸಾರ್ವಜನಿಕ ವಲಯದ ಸಂಸ್ಥೆ ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ ಜನವರಿ ಅಂತ್ಯದಲ್ಲಿ ಕೇಂದ್ರ ಆರೋಗ್ಯ ಸಚಿವಾಲಯದ ಪರವಾಗಿ ಲಸಿಕೆ ಖರೀದಿ ಆದೇಶವನ್ನು 'ಬಯಾಲಾಜಿಕಲ್ ಇ' ಸಂಸ್ಥೆಗೆ ನೀಡಿದೆ. ಹೈದರಾಬಾದ್ ಮೂಲದ ಈ ಕಂಪನಿಯು ಫೆಬ್ರುವರಿ ತಿಂಗಳಲ್ಲಿಯೇ ಲಸಿಕೆಯನ್ನು ಪೂರೈಸುವ ನಿರೀಕ್ಷೆಗಳಿವೆ.

ಐದು ಕೋಟಿ ಲಸಿಕೆಯನ್ನು ಪ್ರತಿ ಡೋಸ್‌ಗೆ ₹ 145ರಂತೆ ಖರೀದಿಸಲಾಗಿದೆ. ಜಿಎಸ್‌ಟಿ ಮತ್ತು ಇತರೆ ತೆರಿಗೆಗಳು ಒಳಗೊಂಡು ₹ 725 ಆಗಬಹುದು. ಈ ಅಂದಾಜಿನಲ್ಲಿ 2021ರ ಜೂನ್ 2ರಂದು ಮುಂಗಡವಾಗಿ ₹ 1,500 ಕೋಟಿ ಅನ್ನು ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್‌ಗೆ ಲಸಿಕೆ ಖರೀದಿಗಾಗಿ ಸರ್ಕಾರ ಬಿಡುಗಡೆ ಮಾಡಿದೆ.

ದೇಶಿ ಉತ್ಪಾದನೆಯಾದ ಕಾರ್ಬೆವ್ಯಾಕ್ಸ್ ಲಸಿಕೆಗೆ ಭಾರತ ಔಷಧ ಮಹಾನಿಯಂತ್ರಕರು ಅನುಮೋದನೆ ನೀಡಿದ್ದಾರೆ.

ಇಬ್ರಾಹಿಂ ಸುತಾರ ಅವರ ಪ್ರವಚನ ಕೇಳಿದ್ದ ಜನ ಮನೆ ಕಟ್ಟಿಸಿಕೊಟ್ಟರು!

ಭಾವೈಕ್ಯ ಪಸರಿಸಿದ ಪ್ರವಚನಕಾರ

• ಡಾ.ಬಿ.ಎಂ.ಪಾಟೀಲ



ಮಹಾಲಿಂಗಪುರದಲ್ಲಿ ಇಬ್ರಾಹಿಂ ಸುತಾರ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಸಾರ್ವಜನಿಕರು

ಬಾಗಲಕೋಟೆ: ಅದು 80ರ ದಶಕದ ಕೊನೆಯ ಘಟ್ಟ. ಶ್ರಾವಣದ ಸಂಜೆಗಳಲ್ಲಿ ಮಹಾಲಿಂಗಪುರದ ವೇದಾಂತ ಪರಿಷತ್‌ನ ವೇದಿಕೆಗೆ ಭಜನಾ ತಂಡ ಕಳೆಗಟ್ಟುತ್ತಿತ್ತು. ತಂಡದ ಹಿರಿಯ ಮಲ್ಲಪ್ಪ ಶಿರೋಳ ಸವಾಲು ಹಾಕುತ್ತಿದ್ದರೆ, ಇಬ್ರಾಹಿಂ ಸುತಾರ ಜವಾಬು ಕೊಡುತ್ತಿದ್ದರು. ಈ ಸವಾಲು–ಜವಾಬು ಕೇಳಲು ಜನರು ಕಿಕ್ಕಿರಿದು ಸೇರುತ್ತಿದ್ದರು, ಆದರೆ ಸೂಜಿ ಬಿದ್ದರೂ ಕೇಳುವಷ್ಟು ನಿಶ್ಶಬ್ದ ಆವರಿಸುತ್ತಿತ್ತು.

ಅಲ್ಲಿಯವರೆಗೆ ಭಜನೆ ಅಂದರೆ ತಾಳ, ಲಯಬದ್ಧ ಹಾಡುಗಾರಿಕೆಯ ಮೇಳ. ಅದಕ್ಕೆ ಇಬ್ರಾಹಿಂ ಸುತಾರ ಹಾಗೂ ಮಲ್ಲಪ್ಪ ಶಿರೋಳ ಸೇರಿ ತಾತ್ವಿಕ ಸ್ಪರ್ಶ ನೀಡಿದ್ದರಿಂದ ಸಂವಾದದ ಹೊಸ ರೂಪ ಕಾಣಿಸಿತ್ತು. ಒಬ್ಬರದ್ದು ಪ್ರಶ್ನೆ, ಮತ್ತೊಬ್ಬರದ್ದು ಉತ್ತರ ಬಹಳ ಜನರಿಗೆ ಹಿಡಿಸಿತು. ಜನಸಾಮಾನ್ಯರಲ್ಲಿನ ಗೊಂದಲ, ತೊಳಲಾಟ, ಕ್ಲೀಷೆಗಳು ಸವಾಲು ರೂಪ ತಾಳಿ, ಅದಕ್ಕೆ ಅಲ್ಲಿಯೇ ಸರಳ ಭಾಷೆಯಲ್ಲಿ ಜವಾಬು ಸಿಗುತ್ತಿತ್ತು. ಇದು ಸುತಾರ ಅವರಲ್ಲಿನ ತಿಳಿವಳಿಕೆ ಒರೆಗಚ್ಚಿದ ಮೊದಲ ವೇದಿಕೆ.

ನಾವು ಎಲ್ಲಿಯೇ ಕಾರ್ಯಕ್ರಮಕ್ಕೆ ಹೋದರೂ ಆ ಊರಿನ ಬಸ್‌ಸ್ಟ್ಯಾಂಡ್‌ನಲ್ಲಿ ಇಳಿದಾಗ ಆ ಕಡೆ ಈ ಕಡೆಯಿಂದ ಯಾರಾದರೂ ನಾಲ್ಕಾರು ಜನರು ಬಂದು ಸುತಾರ ಕಾಲಿಗೆ ನಮಸ್ಕರಿಸುತ್ತಿದ್ದರು. ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಶೇಗುಣಸಿಗೆ ನಿರಂತರವಾಗಿ ಪ್ರವಚನಕ್ಕೆ ಹೋಗುತ್ತಿದ್ದರು. ಊರಿನಲ್ಲಿ ಸ್ವಚ್ಛತೆ ಅರಿವು, ರಸ್ತೆ ನಿರ್ಮಾಣಕ್ಕೂ ಇದು ಪ್ರೇರಣೆಯಾಗಿತ್ತು. ಆ ಊರಿನ ಜನರು ಸುತಾರ ಅವರಿಗೆ ಮಹಾಲಿಂಗಪುರದಲ್ಲಿ ಮನೆ ಕಟ್ಟಿಸಿಕೊಟ್ಟರು. ಅದಕ್ಕೆ 'ಭಾವೈಕ್ಯ' ಎಂದೇ ಹೆಸರಿಟ್ಟರು. ಸಾಮಾನ್ಯ ಜನರು ತೋರುತ್ತಿದ್ದ ಪ್ರೀತಿ ಆಶ್ಚರ್ಯ ಮೂಡಿಸಿತ್ತು.

ಬೀದರ್‌ನಲ್ಲಿ ಫ.ಗು. ಹಳಕಟ್ಟಿ ಹೆಸರಿನ ವಚನೋತ್ಸವದಲ್ಲಿ ಇಬ್ರಾಹಿಂ ಸುತಾರ ಲಿಂಗದೀಕ್ಷೆ ಬಗ್ಗೆ ಮಾತಾಡಿದ್ದರು. ನಾನು ಲಿಂಗಾಯತ ಆಗಿಯೂ ಲಿಂಗದೀಕ್ಷೆ ಬಗ್ಗೆ ನನಗಷ್ಟು ಗೊತ್ತಿರಲಿಲ್ಲ. ಆದರೆ ಒಬ್ಬ ಮುಸ್ಲಿಂ ಲಿಂಗದೀಕ್ಷೆ ಬಗ್ಗೆ ಮಾತನಾಡಿ ಲಿಂಗವನ್ನು ಏಕೆ ಕಟ್ಟಿಕೊಳ್ಳುತ್ತಾರೆ? ದೀಕ್ಷೆಯ ಸಂಸ್ಕಾರವೇನು ಎಂದು ಹೇಳಿದಾಗ ಅಲ್ಲಿ ನೆರೆದಿದ್ದ ದೊಡ್ಡ ಸಮುದಾಯ ಹುಚ್ಚೆದ್ದು ಕುಣಿದಿತ್ತು. ಸುತಾರ ಶರಣ ಸಾಹಿತ್ಯ ಮಾತ್ರವಲ್ಲ ದಾಸರ ಕೀರ್ತನೆ, ವೇದ ಉಪನಿಷತ್‌ಗಳ ಸಾರವನ್ನು ಒಂದೂ ಹಾಳೆಯ ನೆರವಿಲ್ಲದೆ ಹೇಳುತ್ತಿದ್ದರು. ಕಲಿತದ್ದು ಉರ್ದು ಮೂರನೇ ಇಯತ್ತೆ. ಕನ್ನಡದ ಬಗ್ಗೆ ಒಲವು ತೆಗೆದುಕೊಂಡು ವೇದ, ಉಪನಿಷತ್ತು, ಸಂಸ್ಕೃತ ಅರ್ಥ ಮಾಡಿಕೊಂಡದ್ದು ನನಗೆ ಅದ್ಭುತ ಅನ್ನಿಸಿತ್ತು. ಶಾಲೆಗೆ ಹೋಗದೇ ಅವರಿಗೆ ಇದು ಸಾಧ್ಯವಾಗಿತ್ತು.

ಪೂರ್ತಿ ತಮ್ಮ ಧರ್ಮವನ್ನು ಬಿಡಲಿಲ್ಲ. ಉಳಿದ ಧರ್ಮಗಳ ಬಗ್ಗೆಯೂ ಆಸಕ್ತಿ ತೆಗೆದುಕೊಂಡು ಸಮಾನವಾಗಿ ಕಂಡರು. ಮಹಾಲಿಂಗ ಪುರದ ಸಹಜಾನಂದ ಸ್ವಾಮೀಜಿ, ಇಬ್ರಾಹಿಂ ಸುತಾರ ಕೋಲಿಯೊಳಗೆ ಒಟ್ಟಿಗೆ ಪ್ರವಚನಕ್ಕೆ ಕೂರುತ್ತಿದ್ದರು. ಸಹಜಾನಂದರು ಒಂದೆಡೆ ಲಿಂಗಾಯತ ಧರ್ಮದ ಬಗ್ಗೆ ಪ್ರವಚನ ಮಾಡುತ್ತಿದ್ದರು. ಇನ್ನೊಂದು ಮೂಲೆಯಲ್ಲಿ ಸುತಾರ ಕುಳಿತು ನಮಾಜ್ ಮಾಡುತ್ತಿದ್ದರು. ಇದು ಅವರ ಭಾವೈಕ್ಯದ ಗುಣ.

ವೇದಾಂತ ಪರಿಷತ್‌ಗೆ ಬೀದರ್‌ನ ಶಿವಕುಮಾರ ಸ್ವಾಮೀಜಿ, ಧರೂರಿನ ಶಂಭುಲಿಂಗ ಸ್ವಾಮೀಜಿ ತಿಂಗಳುಗಟ್ಟಲೇ ಪ್ರವಚನಕ್ಕೆ ಬರುತ್ತಿದ್ದರು. ಇಬ್ರಾಹಿಂ ಸುತಾರ ವೇದಿಕೆಯ ಒಂದು ದಂಡೆಯಲ್ಲಿ ನಿಂತು ಕಾರ್ಯಕ್ರಮ ನಿರ್ವಹಣೆ ಮಾಡುತ್ತಿದ್ದರು. ಅವರಿಬ್ಬರ ಪ್ರಭಾವ, ಸಂಸ್ಕಾರ ಇವರ ಮೇಲೆ ಆಯ್ತು. ಮುಂದೆ ಪ್ರವಚನದಲ್ಲಿ ಅವರನ್ನು ಮೀರಿಸುವಷ್ಟು ಪ್ರವೀಣರಾದರು.

ಇಬ್ರಾಹಿಂ ಸುತಾರ ಅವರಿಗೆ 75 ವರ್ಷ ತುಂಬಿದಾಗ 'ಭಾವೈಕ್ಯ ದರ್ಶನ' ಹೆಸರಿನಲ್ಲಿ 600 ಪುಟದ ಅಭಿನಂದನಾ ಗ್ರಂಥ ಸಿದ್ಧಪಡಿಸಿದ್ದೆನು. ಅದರ ಪ್ರಕಟಣೆಗೆ ಯಾರೋ ಒಬ್ಬರು ₹2.25 ಲಕ್ಷ ಕೊಟ್ಟಿದ್ದರು. ಮಹಾಲಿಂಗಪುರದಲ್ಲಿ ನಡೆದ ಅಭಿನಂದನೆ ವೇಳೆ, 'ಸುತಾರ ಹಳ್ಳಿಯೊಳಗೆಲ್ಲ ಅಡ್ಡಾಡಿ ಪ್ರವಚನ ಮಾಡಿ ಕೊಂಡು ಬರುತ್ತಾರೆ. ಅವರಿಗೆ ಇನ್ನು ವಯಸ್ಸಾಯ್ತು. ಬಸ್ ಹತ್ತಿ ಹೋಗೋದು ಮಾಡೋದು ಸಾಧ್ಯ ಆಗಂಗಿಲ್ಲ. ಒಂದು ಕಾರು ಕೊಡೋಣ' ಎಂದು ವೇದಿಕೆಯಲ್ಲಿ ಹೇಳಿದ್ದೆನು. ಅಭಿಮಾನಿಯೊಬ್ಬರು ಅವರಿಗೆ ಅಲ್ಲಿಯೇ ₹8.5 ಲಕ್ಷ ಮೌಲ್ಯದ ಸ್ವಿಫ್ಟ್ ಕಾರು ಕೊಟ್ಟಿದ್ದರು. ನನಗೆ ಅನ್ನಿಸಿದ ಮಟ್ಟಿಗೆ ಇಡೀ ಕರ್ನಾಟಕದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಗೆ ಸನ್ಮಾನ ಮಾಡಿ ಕಾರು ಕೊಟ್ಟದ್ದು ಅಲ್ಲಿಯೇ ಮೊದಲು.

(ಲೇಖಕರು:ಮಹಾಲಿಂಗಪುರದ ಕೆಎಲ್‌ಇ ಕಾಲೇಜಿನ ಪ್ರಾಚಾರ್ಯ, ಇಬ್ರಾಹಿಂ ಸುತಾರ ಅವರಿಗೆ 36 ವರ್ಷಗಳಿಂದ ಒಡನಾಡಿ)

ನಿರೂಪಣೆ: ವೆಂಕಟೇಶ ಜಿ.ಎಚ್

ಕೋವಿಡ್ ಪ್ರಕರಣ ಮತ್ತಷ್ಟು ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ 12,009 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಈ ಸಂಖ್ಯೆ ಕಳೆದ ತಿಂಗಳು 50 ಸಾವಿರದ ಗಡಿ ದಾಟಿತ್ತು. ಎರಡು ವಾರದಿಂದ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದೆ. ಒಂದು ದಿನದ ಅವಧಿಯಲ್ಲಿ 1.32 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 10ಕ್ಕಿಂತ ಕಡಿಮೆ (ಶೇ 9.04) ವರದಿಯಾಗಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 38.87 ಲಕ್ಷಕ್ಕೆ ಏರಿಕೆಯಾಗಿದೆ.

21 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿ, ಏಳು ಜಿಲ್ಲೆಗಳಲ್ಲಿ ಎರಡು ಅಂಕಿಯಲ್ಲಿ ಇದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 4,532 ಮಂದಿ ಸೋಂಕಿತರಾಗಿದ್ದಾರೆ. ಬೆಳಗಾವಿಯಲ್ಲಿ 1,028 ಹಾಗೂ ಮೈಸೂರಿನಲ್ಲಿ 763 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.

ರಾಜ್ಯದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು (38,60,774 ನಿನ್ನೆಯ ವಿವರ)	38,87,733
ಸಕ್ರಿಯ ಪ್ರಕರಣಗಳು	1,09,203
ಗುಣಮುಖರಾದವರು	37,39,197
ಒಟ್ಟು ಸಾವು	39,300
ದಿನದ ಏರಿಕೆ	
ಹೊಸ ಪ್ರಕರಣ	12,009
ಗುಣಮುಖ	25,854
ಸಾವು	50

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: 1.27 ಲಕ್ಷ ಪ್ರಕರಣ

ನವದೆಹಲಿ (ಪಿಟಿಐ): ದೇಶದಾದ್ಯಂತ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ ಹೊಸದಾಗಿ 1,27,952 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 1,059 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಕೇರಳದಲ್ಲಿ 595 ಹಾಗೂ ಮಹಾರಾಷ್ಟ್ರದಲ್ಲಿ 81 ಜನರು ಅಸುನೀಗಿದ್ದಾರೆ.

ಈವರೆಗೆ ಕೋವಿಡ್‌ನಿಂದಾಗಿ ದೇಶದಲ್ಲಿ 5,01,114 ಸಾವು ಸಂಭವಿಸಿದೆ. ಸದ್ಯ ದೇಶದಲ್ಲಿ 13,31,648 ಸಕ್ರಿಯ ಪ್ರಕರಣಗಳಿದ್ದು, ದೈನಂದಿನ ಪಾಸಿಟಿವಿಟಿ ದರ ಶೇ 7.98ರಷ್ಟಿದೆ.

ಕೋವಿಡ್‌ನಿಂದಾಗಿ ಮೃತಪಟ್ಟವರ ಸಂಖ್ಯೆ ಗುರುವಾರ 5 ಲಕ್ಷ ದಾಟಿತ್ತು.

ಛಾಯಾಗ್ರಾಹಕ ಡಿ.ಸಿ. ನಾಗೇಶ್ ನಿಧನ



ಡಿ.ಸಿ. ನಾಗೇಶ್

ಬೆಂಗಳೂರು: ಸಿನಿಮಾ ರಂಗದಲ್ಲಿ ಗುರುತಿಸಿಕೊಂಡಿದ್ದ ಪತ್ರಿಕಾ ಛಾಯಾಗ್ರಾಹಕ ಡಿ.ಸಿ. ನಾಗೇಶ್ (66) ಅವರು ಶನಿವಾರ ನಗರದ ಬಸವನಗುಡಿಯ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಸಿನಿಮಾ ಮಾತ್ರವಲ್ಲದೆ ಸಾಹಿತ್ಯ, ರಂಗಭೂಮಿಯಂತಹ ಸಾಂಸ್ಕೃತಿಕ ಕ್ಷೇತ್ರಗಳ ಪ್ರಮುಖ ಘಟನಾವಳಿಗಳನ್ನು ಛಾಯಾಚಿತ್ರಗಳಲ್ಲಿ ದಾಖಲಿಸಿದ್ದ ಅವರು, ಖ್ಯಾತನಾಮರ ಹಾವಭಾವಗಳ ಚಿತ್ರ ಸೆರೆ ಹಿಡಿಯುವಲ್ಲಿ ಹೆಸರಾಗಿದ್ದರು. ಸುಮಾರು 4 ದಶಕಗಳಿಗೂ ಹೆಚ್ಚು ಕಾಲ ಛಾಯಾಗ್ರಹಣ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ಕನ್ನಡ ಚಿತ್ರರಂಗದ ಹಳೆಯ ತಲೆಮಾರಿನಿಂದ ಹಿಡಿದು ಇತ್ತೀಚಿನ ಕಲಾವಿದರವರೆಗೂ ನಿಕಟ ನಂಟು ಹೊಂದಿದ್ದ ಅವರು, ಬಹುತೇಕ ನಟ ನಟಿಯರ ವೃತ್ತಿ ಬದುಕಿನ ಮೊದಲ ಛಾಯಾಗ್ರಾಹಕರು ಎಂದೇ ಖ್ಯಾತರಾಗಿದ್ದರು. ಹಲವು ಹೊಸ ಪ್ರತಿಭೆಗಳನ್ನು ಚಿತ್ರರಂಗಕ್ಕೆ ಪರಿಚಯಿಸಲು ನಾಗೇಶ್ ಅವರು ತೆಗೆದ ಛಾಯಾಚಿತ್ರಗಳು ದಾರಿ ಮಾಡಿಕೊಟ್ಟಿದ್ದವು. ಅಷ್ಟೇ ಸರಳ ವ್ಯಕ್ತಿತ್ವದವರಾಗಿದ್ದರು.

ಸುಮಾರು ನಾಲ್ಕು ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಇತ್ತೀಚೆಗಷ್ಟೇ ತುಸು ಚೇತರಿಸಿಕೊಂಡಿದ್ದರು. ತಮ್ಮ ನಿವಾಸದಲ್ಲೇ ಪುಟ್ಟ ಸ್ಟುಡಿಯೊ ಹೊಂದಿದ್ದ ಅವರು, ನಟ ನಟಿಯರ, ಕಲಾವಿದರ ಛಾಯಾಗ್ರಹಣ ಮಾಡುತ್ತಿದ್ದರು. ಚಲನಚಿತ್ರ ಸಂಬಂಧಿಸಿದ ಛಾಯಾಚಿತ್ರಗಳನ್ನು ಪ್ರಮುಖ ಪತ್ರಿಕೆಗಳಿಗೆ ಒದಗಿಸುತ್ತಿದ್ದರು.

2018ನೇ ಸಾಲಿನ ಪ್ರೆಸ್‌ಕ್ಲಬ್ ವಾರ್ಷಿಕ ಪ್ರಶಸ್ತಿಗೂ ನಾಗೇಶ್ ಪಾತ್ರರಾಗಿದ್ದರು. 1956ರ ಫೆ. 5ರಂದು ಜನಿಸಿದ್ದ ಅವರು, ಜನ್ಮದಿನದಂದೇ ನಿಧನರಾಗಿದ್ದಾರೆ.

ಸಿನಿಮಾ, ರಾಜಕೀಯ ಕ್ಷೇತ್ರದ ಪ್ರಮುಖರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಸಂಜೆ ನಗರದ ವಿಲ್ಸನ್ ಗಾರ್ಡನ್‌ನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಎಲ್ಲಾ ಜಿಲ್ಲೆಗಳಲ್ಲಿ ವಕ್ಫ್ ಭವನ ನಿರ್ಮಾಣ: ಜೊಲ್ಲೆ

ಪ್ರಜಾವಾಣಿ ವಾರ್ತೆ

ಶಶಿಕಲಾ ಜೊಲ್ಲೆ

ಬೆಂಗಳೂರು: 'ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಕ್ಫ್ ಭವನ ನಿರ್ಮಿಸಲು ತೀರ್ಮಾನಿಸಲಾಗಿದ್ದು, ಮುಂಬರುವ ಬಜೆಟ್‌ನಲ್ಲಿ ಇದು ಘೋಷಣೆಯಾಗಲಿದೆ' ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಕರ್ನಾಟಕ ವಕ್ಫ್ ಬೋರ್ಡ್ ಅಧ್ಯಕ್ಷ ಮೌಲಾನಾ ಎನ್.ಕೆ. ಷಫಿ ಸಾ-ಆದಿ ಅವರನ್ನೊಳಗೊಂಡ ನಿಯೋಗವು ಸಲ್ಲಿಸಿದ ಸಮುದಾಯದ ಬೇಡಿಕೆಗಳ ಕುರಿತ ಪ್ರಸ್ತಾವನೆ ಸ್ವೀಕರಿಸಿ ಶನಿವಾರ ಮಾತನಾಡಿದರು.

'ಬೆಂಗಳೂರಿನಲ್ಲಿ ₹50 ಕೋಟಿ ವೆಚ್ಚದಲ್ಲಿ ರಾಜ್ಯ ವಕ್ಫ್ ಭವನ ನಿರ್ಮಿಸಲು ಚಿಂತಿಸಲಾಗಿದೆ. ಇದನ್ನು ದೇಶದಲ್ಲೇ ಮಾದರಿ ಭವನವನ್ನಾಗಿ ರೂಪಿಸುವ ಉದ್ದೇಶವಿದೆ. ಇತರ ಜಿಲ್ಲೆಗಳಲ್ಲಿ ತಲಾ ₹2 ಕೋಟಿ ವೆಚ್ಚದಲ್ಲಿ ಭವನ ನಿರ್ಮಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ₹66 ಕೋಟಿ ಅನುದಾನಕ್ಕೆ ಬೇಡಿಕೆ ಇಡಲಾಗಿದೆ' ಎಂದರು.

'ವಕ್ಫ್ ತರಬೇತಿ ಕೇಂದ್ರ ಸ್ಥಾಪಿಸಲು ಹಜ್ ಭವನದಲ್ಲಿ 5 ವರ್ಷದ ಅವಧಿಗೆ ಸ್ಥಳಾವಕಾಶ ನೀಡಲಾಗಿದೆ. ಸದರಿ ಕೇಂದ್ರಕ್ಕೆ ಅಗತ್ಯವಿರುವ ಸೌಕರ್ಯಕಲ್ಪಿಸಲು ವಾರ್ಷಿಕ ₹15 ಕೋಟಿ ಅನುದಾನದ ಅವಶ್ಯಕತೆ ಇದೆ. ವಕ್ಫ್ ಸಂಸ್ಥೆಗಳ ಅಭಿವೃದ್ಧಿಗೆ ₹165 ಕೋಟಿ ಅನುದಾನಕ್ಕೆ ಬೇಡಿಕೆ ಇಡಲಾಗುವುದು' ಎಂದು ತಿಳಿಸಿದರು.

'ಜಿಲ್ಲಾ ವ್ಯಾಪ್ತಿಗಳಲ್ಲಿರುವ ಖಬರಸ್ತಾನಗಳಲ್ಲಿ ವಜೂಖಾನ, ಗುಸುಲ್‌ಖಾನ, ಹೈ ಮಾಸ್ಟ್‌ಲೈಟ್ ಅಳವಡಿಕೆ ಸೇರಿದಂತೆ ಇತರ ಮೂಲ ಸೌಕರ್ಯ ಕಲ್ಪಿಸಲು ₹33 ಕೋಟಿ ಬೇಕಿದೆ. ಮುಸ್ಲಿಂ ಸಮುದಾಯದ ಜನರಲ್ಲಿ ಆಧುನಿಕ ಶಿಕ್ಷಣ ಹಾಗೂ ವೈಜ್ಞಾನಿಕ ಮನೋಭಾವ ಉತ್ತೇಜಿಸಲು 'ಮೌಲಾನಾ ಆಜಾದ್ ಟ್ರಸ್ಟ್' ಸ್ಥಾಪಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ₹25 ಕೋಟಿ ಅನುದಾನ ಕೋರಲಾಗಿದೆ. ವಕ್ಫ್ ಮಂಡಳಿಯ ಗಣಕೀಕರಣ ವ್ಯವಸ್ಥೆ ಅಭಿವೃದ್ಧಿಗೊಳಿಸಲು, ಜಿಲ್ಲಾ ವಕ್ಫ್ ಕಚೇರಿಗಳಿಗೆ ವಾಹನ ಖರೀದಿಸಲು ಕ್ರಮವಾಗಿ ₹1 ಹಾಗೂ ₹3.3 ಕೋಟಿ ಅನುದಾನಕ್ಕೆ ಮನವಿ ಮಾಡಲಾಗಿದೆ' ಎಂದೂ ತಿಳಿಸಿದರು.

ಕಾಶ್ಮೀರ: 5.7 ತೀವ್ರತೆಯ ಭೂಕಂಪನ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಶನಿವಾರ ಭೂಕಂಪ ಸಂಭವಿಸಿದ್ದು, ಯಾವುದೇ ಬಗೆಯ ಹಾನಿ ಕುರಿತು ವರದಿಯಾಗಿಲ್ಲ.

'ಶನಿವಾರ ಬೆಳಿಗ್ಗೆ 9.50ಕ್ಕೆ ಅಫ್ಗಾನಿಸ್ತಾನ-ತಜಕಿಸ್ತಾನ ಗಡಿಯಲ್ಲಿ ಭೂಕಂಪನ ಉಂಟಾಗಿದ್ದು, ಭೂಕಂಪನದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 5.7 ದಾಖಲಾಗಿದೆ. ಅಫ್ಗಾನಿಸ್ತಾನದ ಹಿಂದೂ ಕುಶ್ ಪ್ರದೇಶದ 210 ಕಿ.ಮೀ ಆಳದಲ್ಲಿ ಭೂಕಂಪನ ಕೇಂದ್ರ ಬಿಂದುವನ್ನು ಗುರುತಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

ಕಾಶ್ಮೀರ ಭಾಗದಲ್ಲಿ ಭಾರಿ ಬದಲಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ/ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕ್ಷೇತ್ರ ಪುನರ್ ವಿಂಗಡಣಾ ಆಯೋಗವು ತನ್ನ ಎರಡನೇ ಕರಡು ವರದಿ ಸಿದ್ಧಪಡಿಸಿದ್ದು, ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಹಂಚಿಕೆಯಲ್ಲಿ ಭಾರಿ ಬದಲಾವಣೆ ಮಾಡಿದೆ.

ವರದಿ ಕುರಿತು ಫೆ.14ರ ಒಳಗೆ ಸಲಹೆ ಸೂಚನೆ ನೀಡುವಂತೆ ಕರಡು ವರದಿಯನ್ನು ಶುಕ್ರವಾರ ಆಯೋಗದ ಐವರು ಸಹಸದಸ್ಯರಾದ ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ, ಹಸ್ನೈನ್ ಮಸೂದಿ, ಅಕ್ಬರ್ ಲೋನ್, ಬಿಜೆಪಿಯ ಜಿತೇಂದ್ರ ಸಿಂಗ್ ಮತ್ತು ಜುಗಲ್ ಕಿಶೋರ್ ಅವರಿಗೆ ನೀಡಿದೆ.

ಅನಂತನಾಗ್ ಲೋಕಸಭಾ ಕ್ಷೇತ್ರಕ್ಕೆ ಜಮ್ಮುವಿಗೆ ಸೇರಿದ ರಾಜೌರಿ ಮತ್ತು ಪೂಂಛ್ ಪ್ರದೇಶ ಸೇರ್ಪಡೆಗೊಳಿಸುವುದಲ್ಲದೇ ಕಾಶ್ಮೀರ ಭಾಗದಲ್ಲಿ ಅಪಾರ ಬದಲಾವಣೆಗಳನ್ನು ಮಾಡಿ ವರದಿಯಲ್ಲಿ ಪ್ರಸ್ತಾಪ ಮಾಡಲಾಗಿದೆ. 5 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಬುಡ್ಗಾಮ್ ಜಿಲ್ಲೆಯನ್ನು ವಿಭಜಿಸಿ ಅದನ್ನು ಬಾರಾಮುಲ್ಲಾ ಲೋಕಸಭಾ ಕ್ಷೇತ್ರದ ಜತೆ ಸೇರಿಸಿ, ಕೆಲವು ಪ್ರದೇಶಗಳನ್ನು ಹೊಸದಾಗಿ ಸೃಷ್ಟಿಸಲಾಗಿರುವ ಕುಂಜೇರ್ ಮತ್ತು ಉತ್ತರ ಕಾಶ್ಮೀರ ವಿಧಾನಸಭಾ ಕ್ಷೇತ್ರಗಳಿಗೆ ಸೇರಿಸಲಾಗಿದೆ. ಉತ್ತರ ಕಾಶ್ಮೀರದ ಸಂಗ್ರಾಮ ಕ್ಷೇತ್ರವನ್ನು ಇತರೆ ವಿಧಾನಸಭಾ ಕ್ಷೇತ್ರಗಳ ಜತೆ ಸೇರ್ಪಡೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪಾಠ'ವೇ ಮುಗಿದಿಲ್ಲ; ಪರೀಕ್ಷೆಗೆ ಆತುರ!

ಒಂದನೇ ಪುಟದಿಂದ

ಇನ್ನು ಅತಿಥಿ ಉಪನ್ಯಾಸಕರನ್ನು ವಿಳಂಬವಾಗಿ ನಿಯೋಜಿಸಿಕೊಂಡ ಕಾರಣ ಬಹುತೇಕ ಕಾಲೇಜುಗಳಲ್ಲಿ ಸರಿಯಾಗಿ ತರಗತಿಗಳು ಆರಂಭವೇ ಆಗಿರಲಿಲ್ಲ. ಈ ಮಧ್ಯೆ, ಡಿ. 10ರಿಂದ ಅತಿಥಿ ಉಪನ್ಯಾಸಕರು ಅನಿರ್ದಿಷ್ಟಾವಧಿಗೆ ತರಗತಿ ಬಹಿಷ್ಕರಿಸಿ ಮುಷ್ಕರಕ್ಕೆ ಇಳಿದಿದ್ದರು. ಅನೇಕ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ. ಸರ್ಕಾರ ಮತ್ತು ಅತಿಥಿ ಉಪನ್ಯಾಸಕರ ನಡುವಿನ ತಿಕ್ಕಾಟದಿಂದ ಒಂದೂವರೆ ತಿಂಗಳು (ಜ. 31ರವರೆಗೆ) ಪಾಠ-ಪ್ರವಚನವಿಲ್ಲದೆ ವಿದ್ಯಾರ್ಥಿಗಳು ಬೀದಿಗೆ ಬೀಳುವಂತಾಗಿತ್ತು. ಅದರ ಮಧ್ಯೆಯೇ ಪರೀಕ್ಷೆ ಎದುರಿಸಬೇಕಾದ ಆತಂಕ ವಿದ್ಯಾರ್ಥಿಗಳಿಗೆ ಎದುರಾಗಿದೆ.

ರಾಜ್ಯದಲ್ಲಿ 430 ಪ್ರಥಮ ದರ್ಜೆ ಕಾಲೇಜುಗಳಿವೆ. ಅವುಗಳಲ್ಲಿ ಸುಮಾರು 7 ಸಾವಿರದಷ್ಟು ಕಾಯಂ ಉಪನ್ಯಾಸಕರಿದ್ದಾರೆ. ಉಪನ್ಯಾಸಕರ ಕೊರತೆ ತುಂಬಲು ಕಳೆದ ಸಾಲಿನಲ್ಲಿ 14 ಸಾವಿರ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗಿತ್ತು. ಅಂದರೆ, ಶೇ 70ರಷ್ಟು ತರಗತಿಗಳನ್ನು ಅತಿಥಿ ಉಪನ್ಯಾಸಕರಿಂದ ನಡೆಸಬೇಕಾದ ಅನಿವಾರ್ಯ ಇದೆ. ಕೆಲವು ಕಾಲೇಜುಗಳಲ್ಲಿ ಪ್ರಾಂಶುಪಾಲರನ್ನು ಹೊರತುಪಡಿಸಿದರೆ, ಕಾಯಂ ಉಪನ್ಯಾಸಕರೇ ಇಲ್ಲ. ಕೆಲವಡೆ ಉಪನ್ಯಾಸಕರಿದ್ದರೂ, ಪ್ರಮುಖ ವಿಷಯಗಳ ಉಪನ್ಯಾಸಕರ ಕೊರತೆ ಇದೆ. ಅದರಲ್ಲೂ ಗ್ರಾಮೀಣ ಭಾಗದ ಅನೇಕ ಕಾಲೇಜುಗಳಲ್ಲಿ ಒಂದಿಬ್ಬರು ಕಾಯಂ ಉಪನ್ಯಾಸಕರಿದ್ದರೆ, ಉಳಿದವರು 'ಅತಿಥಿ'ಗಳು!

ಹೊಸ ನೇಮಕಾತಿ ನಿಯಮಗಳಡಿ ಫೆ. 1ರಿಂದ ಹೊಸತಾಗಿ 10,200 ಅತಿಥಿ ಉಪನ್ಯಾಸಕರನ್ನು ಸರ್ಕಾರ ನೇಮಿಸಿಕೊಂಡಿದೆ. ಹೊಸತಾಗಿ ನೇಮಕಗೊಂಡವರು ಪಾಠ ಮಾಡಲು ಆರಂಭಿಸಿದ್ದಾರೆ. ಫೆ. 30ರ ಒಳಗೆ ಮೊದಲ ಸೆಮಿಸ್ಟರ್ ಅಂತ್ಯಗೊಳಿಸಬೇಕಿದೆ. ಆಯಾ ವಿಶ್ವವಿದ್ಯಾಲಯಗಳು ತಮ್ಮ ವ್ಯಾಪ್ತಿಯ ಜಿಲ್ಲೆಯ ಪದವಿ ಕಾಲೇಜುಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸುತ್ತವೆ. ಪ್ರಸಕ್ತ ಸಾಲಿನಿಂದ (ಮೊದಲ ಸೆಮಿಸ್ಟರ್) ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಆಗಿರುವುದರಿಂದ ಏಕರೂಪದಲ್ಲಿ ಪಠ್ಯಕ್ರಮ ಮತ್ತು ಪರೀಕ್ಷೆ ನಡೆಯಬೇಕಿದೆ.

'ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ ಕೋವಿಡ್ ಕಾರಣದಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ತೊಡಕಾಗಿದ್ದರೆ, ಈ ಬಾರಿ ಅತಿಥಿ ಉಪನ್ಯಾಸಕರ ಮುಷ್ಕರದಿಂದ ಸಮಸ್ಯೆ ಆಗಿದೆ. ಕೋವಿಡ್ ಕಾರಣಕ್ಕೆ ಕಳೆದ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಪರೀಕ್ಷೆಯೇ ಇಲ್ಲದೆ ತೇರ್ಗಡೆಯಾದ ವಿದ್ಯಾರ್ಥಿಗಳು ಪದವಿಗೆ ಸೇರಿದ್ದಾರೆ. ಇದೀಗ, ಪದವಿಯಲ್ಲೂ ಸರಿಯಾಗಿ ಪಾಠ-ಪ್ರವಚನ ಸಿಗದೆ ಪರೀಕ್ಷೆಗೆ ತಯಾರಿ ನಡೆಸಬೇಕಾದ ಅನಿವಾರ್ಯತೆಗೆ ಈ ವಿದ್ಯಾರ್ಥಿಗಳು ಸಿಲುಕಿದ್ದಾರೆ. ಅಲ್ಲದೆ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಗೊಂದಲ ಮುಂದುವರಿದಿದ್ದು, ಅನೇಕರಿಗೆ ಈ ನೀತಿ ಇನ್ನೂ ಅರ್ಥವೇ ಆಗಿಲ್ಲ. ಕೆಲವು ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿದರೆ, ಹಲವೆಡೆ ಉಪನ್ಯಾಸಕರಿಗೆ ಕಾರ್ಯಾಗಾರಗಳು ನಡೆದಿಲ್ಲ' ಎಂದು ಪದವಿ ಕಾಲೇಜಿನ ಪ್ರಾಂಶುಪಾಲರೊಬ್ಬರು ತಿಳಿಸಿದರು.

ನಿಧನ ವಾರ್ತೆ

ಬಿಜೆಪಿಯ ಹಿರಿಯ ನಾಯಕ ಸಿ.ಜಂಗಾ ರೆಡ್ಡಿ

ಹೈದರಾಬಾದ್ (ಪಿಟಿಐ): ಬಿಜೆಪಿಯ ಹಿರಿಯ ನಾಯಕ ಚೆಂದುಪಾಟ್ಲ ಜಂಗಾ ರೆಡ್ಡಿ (87) ಅವರು ಶನಿವಾರ ಇಲ್ಲಿನ ಆಸ್ಪತ್ರೆಯಲ್ಲಿ ನಿಧನರಾದರು.

ಅವರು ಶ್ವಾಸಕೋಶಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಬಳಲುತ್ತಿದ್ದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜಂಗಾ ರೆಡ್ಡಿ ಅವರು 1984ರಲ್ಲಿ ಅಂದಿನ ಅವಿಭಜಿತ ಆಂಧ್ರಪ್ರದೇಶದ ತೆಲಂಗಾಣ ಪ್ರದೇಶದ ಹನುಮಕೊಂಡ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ವಿ. ನರಸಿಂಹ ರಾವ್ ಅವರನ್ನು ಸೋಲಿಸಿದ್ದರು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಮರಣದ ನಂತರ 1984ರಲ್ಲಿ ಲೋಕಸಭೆಗೆ ಬಿಜೆಪಿಯಿಂದ ಚುನಾಯಿತರಾದ ಇಬ್ಬರು ಸಂಸದರ ಪೈಕಿ ಜಂಗಾ ರೆಡ್ಡಿ ಒಬ್ಬರಾಗಿದ್ದರು. (ಎ.ಕೆ. ಪಟೇಲ್ ಮತ್ತೊಬ್ಬ ಸಂಸದ). 1980ರಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಬಿಜೆಪಿಯ ಮೊದಲ ಸಂಸದರಾಗಿ ಅವರು ಆಯ್ಕೆಯಾಗಿದ್ದರು.

ಅವಿಭಜಿತ ಆಂಧ್ರಪ್ರದೇಶದ ವಿಧಾನಸಭೆಗೆ ಜಂಗಾರೆಡ್ಡಿ ಅವರು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ವಿದ್ಯಾರ್ಥಿ ದಿನಗಳಿಂದಲೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದ ಜಂಗಾ ರೆಡ್ಡಿ ಅವರು ರಾಮ ಜನ್ಮ ಭೂಮಿ ಚಳವಳಿ ಸೇರಿದಂತೆ ಅನೇಕ ಆಂದೋಲನಗಳಲ್ಲಿ ಭಾಗವಹಿಸಿದ್ದರು ಎಂದು ಪಕ್ಷದ ಮೂಲಗಳು ತಿಳಿಸಿವೆ.



ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 15/2021–22 ದಿನಾಂಕ: 04.02.2022

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1,2,3&4 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ WWW.eproc.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗಳಿಗೆ ಒಂದು ಮತ್ತು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.259.65 ಲಕ್ಷಗಳು. ಕನಿಷ್ಠ ಮೊತ್ತ ರೂ.1.76 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 21.02.2022 ಸಮಯ 17.00 ಗಂಟೆಯವರೆಗೆ, ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/716/2021–22

ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–62/2021–22
ದಿನಾಂಕ:01.02.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ 2020–21 & 2021–22ನೇ ಸಾಲಿನ 15ನೇ ಹಣಕಾಸು ಆಯೋಗ ಅನುದಾನದಡಿ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು KTTP Act –1999 & 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಬೆಂಗಳೂರು ರವರಲ್ಲಿ ನೋಂದಾಯಿತ ಮತ್ತು ಇ–ಪ್ರೊಕ್ಯೂರ್ಮೆಂಟ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು **KW-2** ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಟೆಂಡರ್‌ಗಳನ್ನು ನಿಗಧಿಪಡಿಸಿದ ಅವಧಿಯೊಳಗೆ ಸಲ್ಲಿಸತಕ್ಕದ್ದು. ಕಾಮಗಾರಿಯ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿಕೋಶ ಹಾಗೂ ನಗರಸಭೆ, ಮಂಡ್ಯ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ **www.mandyacity.mrc.gov.in** ನಲ್ಲಿ ವೀಕ್ಷಿಸಬಹುದು. **Visit:https://www.eproc.karnataka.gov.in/**

(1) ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **17.02.2022 upto 5.30 pm.** (2) ಆನ್‌ಲೈನ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ : **19.02.2022 at 11.00 am or any other convenient date notified later.** (3) ಟೆಂಡರ್ ಫಾರಂ ಬೆಲೆ ರೂ.ಗಳಲ್ಲಿ : ಇ–**ಪೋರ್ಟಲ್‌ನಲ್ಲಿರುವಂತೆ.** (4) ಕಾಮಗಾರಿ ಪೂರ್ಣಗೊಳಿಸುವ ಅವಧಿ : **60 ದಿನಗಳು (ಮಳೆಗಾಲ ಹೊರತುಪಡಿಸಿ).**

ಕ್ರ.ಸಂ : **01.** ಇಂಡೆಂಟ್ ಸಂಖ್ಯೆ : **DMA/2021-22/OW/WORK_INDENT127680.** ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : **31.89**. ಇಂ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **63,800**. ಗುತ್ತಿಗೆದಾರರ ದರ್ಜೆ : **3ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್).**

ಸಹಿ/–ಅಧ್ಯಕ್ಷರು, ನಗರಸಭೆ, ಮಂಡ್ಯ.
ಸಹಿ/– ಪೌರಾಯುಕ್ತರು, ನಗರಸಭೆ, ಮಂಡ್ಯ.

ವಾಸಾಸಂಇ/ಸನಿ–ಮಂಡ್ಯ/ಎಂಸಿಎ/595/2021–22

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಖರೀದಿ ಇಲಾಖೆ, ಕೆ.ಹೆಚ್. ರಸ್ತೆ,
ಶಾಂತಿನಗರ, ಬೆಂಗಳೂರು–560 027.
ದೂರವಾಣಿ ಸಂಖ್ಯೆ : 080–22221321 (ವಿಸ್ತರಣೆ:224), ಫ್ಯಾಕ್ಸ್:080–22223424

ಇ–ಆಹ್ವಾನ ಪ್ರಕಟಣೆ

ಕ.ರಾ.ರ.ಸಾ. ನಿಗಮದ ನಿರುಪಯುಕ್ತ ವಾಹನಗಳು ಮತ್ತು ವಸ್ತುಗಳನ್ನು ಮೆ॥ ಎಂ.ಎಸ್.ಟಿ.ಸಿ. (ಭಾರತ ಸರ್ಕಾರದ ಅಧೀನ ಸಂಸ್ಥೆ) ಇವರು ನಡೆಸುವ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ನಿರುಪಯುಕ್ತ ವಾಹನಗಳು ಇ–ಹರಾಜು ಪ್ರಾರಂಭ ದಿನಾಂಕ : **15.02.2022**
ನಿರುಪಯುಕ್ತ ವಸ್ತುಗಳು ಇ–ಹರಾಜು ಪ್ರಾರಂಭ ದಿನಾಂಕ : **22.02.2022**

ಆಸಕ್ತಿಯುಳ್ಳ ಬಿಡ್ಡುದಾರರು ವೆಬ್‌ಸೈಟ್: **www.mstcecommerce.com** ಗೆ ಲಾಗಿನ್ ಆಗಬಹುದು.

ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು. **ಮೆ॥ ಎಂ.ಎಸ್.ಟಿ.ಸಿ. ಲಿಮಿಟೆಡ್,** ನಂ. 19/5, 19/6, ಮೂರನೇ ಮಹಡಿ, ಕರೀಮ್ ಟವರ್, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು – 560 052.
ದೂರವಾಣಿ ಸಂಖ್ಯೆ : 080–22260054, 22266417, 22287356
ಫ್ಯಾಕ್ಸ್ ಸಂಖ್ಯೆ : 080–22256365.
ಕೆ.ಎಸ್.ಆರ್.ಟಿ.ಸಿ. ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ : +91–7760990221/224 080–22221321, ವಿಸ್ತರಣೆ : 298.

ವಾಸಾಸಂಇ/ಬೆಂ.ನ./ಜಿಎ/3230/2021–22 ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
ದೂರವಾಣಿ ಸಂ:08194–220500 Email ID:ubpee07@gmail.com

ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2021–22/26
ದಿನಾಂಕ:01.02.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್; ಚಿತ್ರದುರ್ಗ ಇವರಿಂದ ಶೇಕಡಾವಾರು ಟೆಂಡರನ್ನು ಭದ್ರಾ ಮೇಲ್ದಂಡೆ ಯೋಜನೆಯ ಲೆಕ್ಕಶೀರ್ಷಿಕೆ 4701–TSP ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಏಕ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ **http://www.eproc.karnataka.gov.in** ವೆಬ್‌ಸೈಟ್‌ನಿಂದ ದಿನಾಂಕ:11.02.2022ರ ಸಂಜೆ 17.30 ಗಂಟೆಯ ವರೆಗೆ ಖಾಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್‌ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್ ಅನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ:14.02.2022ರ ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್; ಚಿತ್ರದುರ್ಗ ರವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ: 08194–200187ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

ಕಾಮಗಾರಿಯ ಹೆಸರು:– Construction of C.C road in the S.T Colony of C.N Maalige village of Hiriyur taluk(VJNL/2021-22/RD/WORK_INDENT1988). **ಕಾಮಗಾರಿಯ ಮೊತ್ತ ರೂ.ಗಳಲ್ಲಿ:– 17,68,155.38.** **ಇ.ಎಂ.ಡಿ.ಮೊತ್ತ ರೂ.ಗಳಲ್ಲಿ:– 27,000.00**

DIPR/CTA/MCA/863/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ

An ISO-9001:2015 & 14001:2015 Company

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಶ್ರೀಗಂಧ ನಗರ, ಅಂಚೆ ಪೆಟ್ಟಿಗೆ ಸಂಖ್ಯೆ. 5531, ನಂ. 27, ಕೈಗಾರಿಕಾ ಉಪನಗರ, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560055, ದೂರವಾಣಿ: 22164879,22164886
ಇ–ಮೇಲ್: **ksdl.dgmmtls@gmail.com** ವೆಬ್‌ಸೈಟ್: **http://karnataka.gov.in/mysoresandal**

ಸಂಖ್ಯೆ. ಕೆಎಸ್‌ಡಿಎಲ್/ಡಿಜಿಎಂ(ಎಂಟಿಎಲ್‌ಎಸ್)/2021–22 ದಿನಾಂಕ: 04.02.2022

ಟೆಂಡರ್ ಆಹ್ವಾನ ಪ್ರಕಟಣೆ

ಸರಬರಾಜುದಾರರು/ಗುತ್ತಿಗೆದಾರರುಗಳ ನೋಂದಣಿಗಾಗಿ ಟೆಂಡರ್ ಪ್ರಕಟಣೆ. (2022–2023)

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಬೆಂಗಳೂರು–55. (ಕೆಎಸ್&ಡಿಎಲ್) ಕಂಪನಿಯು ಸಾಬೂನುಗಳು, ಮಾರ್ಜಕಗಳು, ಸೌಂದರ್ಯ ಸಾಧನಗಳು ಮತ್ತು ಅಗರಬತ್ತಿಗಳ ತಯಾರಿಕೆಯಲ್ಲಿ ನಿರತವಾಗಿದೆ. ಸದರಿ ಕಂಪನಿಗೆ ಕೆಳಕಂಡವುಗಳ ಉತ್ಪಾದನೆ, ನಿರ್ವಹಣೆ ಮತ್ತು ಸರ್ವೀಸಿಂಗ್‌ಗಾಗಿ ಹಲವಾರು ಕಚ್ಚಾ ಸಾಮಗ್ರಿಗಳು, ಪ್ಯಾಕಿಂಗ್ ಸಾಮಗ್ರಿಗಳು, ಇಂಜಿನಿಯರಿಂಗ್ ಸ್ಪೇರ್‌ಗಳು, ಲೇಖನ ಸಾಮಗ್ರಿಗಳ ಅಗತ್ಯವಿರುತ್ತದೆ. ಅವುಗಳೆಂದರೆ:

(1)ಡಿಎಫ್ಎ ಸೋಪ್ ನೂಡಲ್ಸ್, ಕೊಬ್ಬರಿ ಎಣ್ಣೆ (2) ಸುಗಂಧ ರಾಸಾಯನಿಕಗಳು, ಎಸೆನ್ಸಿಯೆಲ್ ಆಯಿಲ್‌ಗಳು ಮತ್ತು ಇತರೆ ಸುಗಂಧ ಸಾಮಗ್ರಿಗಳು (3) ಮಾರ್ಜಕಗಳು, ಸೌಂದರ್ಯ ಸಾಧನಗಳ ಕಚ್ಚಾ ಸಾಮಗ್ರಿಗಳು (4) ಪ್ಯಾಕಿಂಗ್ ಸಾಮಗ್ರಿಗಳಾದ ಕಾಗದ ಮತ್ತು ಪೇಪರ್ ಬೋರ್ಡ್ ಉತ್ಪನ್ನಗಳು, ಪ್ರಿಂಟೆಡ್ ಕಾರ್ಟನ್‌ಗಳು, ರ್‍ಯಾಪರ್‌ಗಳು, ಪಾಲಿ ಬ್ಯಾಗ್‌ಗಳು, ಕಾರುಗೇಟೆಡ್ ಬಾಕ್ಸ್‌ಗಳು ಮತ್ತು PET/HDPE Bottles ಇತ್ಯಾದಿ (5) ರಾಸಾಯನಿಕಗಳಾದ LABSA, Soda Ash, Caustic Soda Lye ಮುಂತಾದವುಗಳು (6) 8" ಮತ್ತು 9"ನ ಕಚ್ಚಾ ಅಗರಬತ್ತಿ ಮತ್ತು ಅಗರಬತ್ತಿ ಪ್ಯಾಕಿಂಗ್ ಸಾಮಗ್ರಿಗಳು (7) ಹೊರ ಗುತ್ತಿಗೆ ಆಧಾರದ ಮೇಲೆ ಟೂತ್‌ಪೇಸ್ಟ್ ಮತ್ತು ಸ್ಯಾನಿಟರಿ ನ್ಯಾಪ್‌ಕಿನ್ ಪೂರೈಕೆ (8) ಮಾನವಸಂಪನ್ಮೂಲವನ್ನು ಗುತ್ತಿಗೆ ಆಧಾರದ ಮೇಲೆ ಹೊರಗುತ್ತಿಗೆ ನೀಡುವುದು.(9) ಬಿಡಿಭಾಗಗಳು, ಇಂಜಿನಿಯರಿಂಗ್ ಐಟಂಗಳು, ಯಂತ್ರೋಪಕರಣಗಳು ಮತ್ತು ಬಳಕೆ ಸಾಮಗ್ರಿಗಳು, ಲೇಖನಸಾಮಗ್ರಿ ಐಟಂಗಳು (10) ಭಾರತದಾದ್ಯಂತ ಇರುವ ನಮ್ಮ ವಿವಿಧ ಶಾಖೆಗಳಿಗೆ ಸಿದ್ಧಪಡಿಸಿದ ಉತ್ಪನ್ನಗಳ ಸಾಗಾಣಿಕೆ. (11) ಸೋಪುಗಳ ತಯಾರಿಕೆಗೆ ಹೊರಗುತ್ತಿಗೆಗೆ ನೀಡುವುದು (12) ಸಿವಿಲ್ ಕಾಮಗಾರಿಗಳು (13) ವಿವಿಧ ದೇಶಗಳಿಗೆ ಉತ್ಪನ್ನವಾರು ಆಮದು ಮತ್ತು ರಫ್ತು ಬಗ್ಗೆ ಕ್ಲಿಯರಿಂಗ್ ಮತ್ತು ಫಾರ್ವರ್ಡಿಂಗ್ ಏಜೆಂಟ್ (14) ಜಾಹೀರಾತುಗಳು (15) ಸಾಬೂನುಗಳು (ಪ್ರೀಮಿಯಂ, ಪಾಪ್ಯೂಲರ್), ಮಾರ್ಜಕಗಳು, ಸೌಂದರ್ಯ ಸಾಧನಗಳು, ಅಗರಬತ್ತಿಗಳ ರಫ್ತು (16) ಶ್ರೀಗಂಧದೆಣ್ಣೆ ಮತ್ತು ಇತರೆ ಸಾಮಗ್ರಿಗಳು ಮತ್ತು ಸೇವೆಗಳು ಇತ್ಯಾದಿ.

ಸಾಮಗ್ರಿಯ ಬೆಲೆ ಪ್ರತಿ ಖರೀದಿಗೆ ರೂ. 1.00 ಲಕ್ಷ ಮತ್ತು ಅದಕ್ಕೂ ಹೆಚ್ಚಿದ್ದರೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗುತ್ತದೆ.. ಈ ಸಂಬಂಧವಾಗಿ ನಿಮ್ಮ ಕಂಪನಿಯನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಇಲಾಖೆಯಲ್ಲಿ ನೋಂದಣಿ ಮಾಡಿಸಬೇಕಾಗಿ ಕೋರುತ್ತೇವೆ. ಹೆಚ್ಚಿನ ವಿವರಗಳಿಗಾಗಿ ನೀವು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನ್ನು ವೀಕ್ಷಿಸಬಹುದಾಗಿದೆ.

ಸದರಿ ಸಾಮಗ್ರಿಗಳ ಸರಬರಾಜುದಾರರು/ಗುತ್ತಿಗೆದಾರರುಗಳು ಇದುವರೆಗೆ ಕೆಎಸ್&ಡಿಎಲ್‌ನಲ್ಲಿ ನೋಂದಣಿ ಮಾಡಿಸಿರದಿದ್ದಲ್ಲಿ ಕೆಎಸ್ &ಡಿಎಲ್‌ನ ಸಾಮಗ್ರಿ ವಿಭಾಗ, ಅಂಚೆ ಪೆಟ್ಟಿಗೆ ಸಂಖ್ಯೆ. 5531, ಶ್ರೀಗಂಧದ ನಗರ, ನಂ. 27, ಕೈಗಾರಿಕಾ ಉಪನಗರ, ಬೆಂಗಳೂರು – ಪುಣೆ ಹೆದ್ದಾರಿ, ರಾಜಾಜಿನಗರ, ಬೆಂಗಳೂರು–560055 ಇಲ್ಲಿಂದ ನಗದಾಗಿ ಅಥವಾ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಬೆಂಗಳೂರು–55. ಇವರ ಪರವಾಗಿ ಪಡೆದ ಡಿಡಿ ರೂಪದಲ್ಲಿ ರೂ.615/– ಮೊತ್ತದ ನಿಗದಿತ ಶುಲ್ಕ ಪಾವತಿ ಮಾಡಿ ನಿಗದಿತ ನಮೂನೆ ಪಡೆದು ಸ್ವತಃ ನೋಂದಣಿ ಮಾಡಿಸಿಕೊಳ್ಳುವುದು. ಭರ್ತಿ ಮಾಡಿದ ನೋಂದಣಿ ನಮೂನೆಯನ್ನು ಸಂಬಂಧಿಸಿದ ದಾಖಲೆ ಪತ್ರಗಳೊಡನೆ ಅರ್ಜಿ ಪಡೆದುಕೊಂಡ ಕೂಡಲೇ ಕಂಪನಿಗೆ ಸಲ್ಲಿಸತಕ್ಕದ್ದು. ಇದನ್ನು **e-Procurement/**ಕಂಪನಿಯ ಖರೀದಿ ಕೈಪಿಡಿ ಉಪಬಂಧಗಳ ಅನ್ವಯ ನೋಂದಣಿ ಮಾಡಲಾಗುವುದು. ಆಸಕ್ತಿಯುಳ್ಳ ವ್ಯಕ್ತಿಗಳು ಈ ಸಂಬಂಧ ಯಾವುದೇ ಸ್ಪಷ್ಟನೆಗಳು ಬೇಕಿದ್ದಲ್ಲಿ ಉಪ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿಗಳು), ಕೆಎಸ್&ಡಿಎಲ್ ಇವರನ್ನು ಸಂಪರ್ಕಿಸಬಹುದು.

ತಯಾರಕರುಗಳಿಗೆ (Direct Manufacturers) ಆದ್ಯತೆ ನೀಡಲಾಗುವುದು. ಆದ್ದರಿಂದ ಆಸಕ್ತಿಯುಳ್ಳ ತಯಾರಕರು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಮೂಲಕ ನಮ್ಮ ಟೆಂಡರಿನಲ್ಲಿ ಭಾಗವಹಿಸಬಹುದು.

ಸಹಿ/–ಉಪ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, 2ನೇ ಮತ್ತು 4ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಹೆಚ್‌ಎಂಟಿ ಬಡಾವಣೆ, ಬಿಡಬ್ಲ್ಯೂಎಸ್‌ಎಸ್‌ಬಿ ನೀರಿನ ಟ್ಯಾಂಕ್ ಹತ್ತಿರ, ನಾಗಸಂದ್ರ ಅಂಚೆ, ಬೆಂಗಳೂರು–73.

ಸಂಖ್ಯೆ:ಬೃಬೆಂಮಪಾ/ಕಾಅ/ದಾವಿ/ಟೆಂಡರ್/23/2021–22 ದಿನಾಂಕ: 03–02–2022

ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ಅಲ್ಪಾವಧಿ ಟೆಂಡರ್ ಪ್ರಕಟಣೆ)
(ದ್ವಿ ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ಕೆಡಬ್ಲ್ಯೂ 3 ಮತ್ತು 4

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳತಿಳಿಸಿದ ಕಾಮಗಾರಿಗಳನ್ನು ನಿರ್ವಹಿಸಲು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.ಲಕ್ಷಗಳಲ್ಲಿ
1)	ವಾರ್ಡ್ ನಂ.12ರ ಶೆಟ್ಟಿಹಳ್ಳಿ ಉಪ-ವಿಭಾಗದ ಶೆಟ್ಟಿಹಳ್ಳಿ ಪ್ರದೇಶದ ಒಳಚರಂಡಿಗಳ ಹೂಳು ತೆಗೆಯುವುದು ಹಾಗೂ ಮರುಹೊಂದಿಸುವುದು ಮತ್ತು ರಸ್ತೆಗಳ ಮರು ಡಾಂಬರೀಕರಣ ಕಾಮಗಾರಿ.	100.00	200000.00
2)	ವಾರ್ಡ್ ನಂ.12ರ ಶೆಟ್ಟಿಹಳ್ಳಿ ಉಪ-ವಿಭಾಗದ ಚಿಕ್ಕಸಂದ್ರ ಪ್ರದೇಶದಲ್ಲಿ ಒಳಚರಂಡಿಗಳ ಹೂಳು ತೆಗೆಯುವುದು ಹಾಗೂ ಮರುಹೊಂದಿಸುವುದು ಮತ್ತು ರಸ್ತೆಗಳ ಮರು ಡಾಂಬರೀಕರಣ ಕಾಮಗಾರಿ.	100.00	200000.00
3)	ವಾರ್ಡ್ ನಂ.12ರ ಶೆಟ್ಟಿಹಳ್ಳಿ ಉಪ-ವಿಭಾಗದಲ್ಲಿ ಕೊಳವೆಬಾವಿ ಕೊರೆಯುವುದು ಮತ್ತು ನೀರು ಸರಬರಾಜು ಸೌಕರ್ಯ ಒದಗಿಸುವುದು.	55.00	110000.00
4)	ವಾರ್ಡ್ ನಂ.13ರ ಶೆಟ್ಟಿಹಳ್ಳಿ ಉಪ-ವಿಭಾಗದ ರವೀಂದ್ರ ನಗರ ಕೆರೆಕಟ್ಟೆ ಪ್ರದೇಶದ ಉಳಿಕೆ ಭಾಗದ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ.	100.00	200000.00
5)	ವಾರ್ಡ್ ನಂ.13ರ ಶೆಟ್ಟಿಹಳ್ಳಿ ಉಪ-ವಿಭಾಗದಲ್ಲಿ ಕೊಳವೆಬಾವಿ ಕೊರೆಯುವುದು ಮತ್ತು ನೀರು ಸರಬರಾಜು ಸೌಕರ್ಯ ಒದಗಿಸುವುದು.	55.00	110000.00
6)	ವಾರ್ಡ್ ನಂ.14ರ ಶೆಟ್ಟಿಹಳ್ಳಿ ಉಪ-ವಿಭಾಗದಲ್ಲಿ ಕೊಳವೆಬಾವಿ ಕೊರೆಯುವುದು ಮತ್ತು ನೀರು ಸರಬರಾಜು ಸೌಕರ್ಯ ಒದಗಿಸುವುದು.	55.00	110000.00
7)	ವಾರ್ಡ್ ನಂ.15ರ ದಾಸರಹಳ್ಳಿ ಉಪ-ವಿಭಾಗದ ಕಲಾಸ್ತ್ರಿ ನಗರದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿ.	90.85	181700.00
8)	ವಾರ್ಡ್ ನಂ.39ರ ಶೆಟ್ಟಿಹಳ್ಳಿ ಉಪ-ವಿಭಾಗದಲ್ಲಿ ಕೊಳವೆಬಾವಿ ಕೊರೆಯುವುದು ಮತ್ತು ನೀರು ಸರಬರಾಜು ಸೌಕರ್ಯ ಒದಗಿಸುವುದು.	55.00	110000.00
9)	ವಾರ್ಡ್ ನಂ.39ರ ಪೀಣ್ಯಾ ಕೈಗಾರಿಕಾ ಪ್ರದೇಶ ಉಪ-ವಿಭಾಗದ ಚೊಕ್ಕಸಂದ್ರದಲ್ಲಿರುವ ಹೆಚ್‌ಎಂಟಿ ಬಡಾವಣೆಯ ರಸ್ತೆಗಳ ಮರು ಡಾಂಬರೀಕರಣ ಮತ್ತು ಸುಧಾರಣಾ ಕಾಮಗಾರಿ.	300.00	450000.00
10)	ವಾರ್ಡ್ ನಂ.41ರ ಪೀಣ್ಯಾ ಕೈಗಾರಿಕಾ ಪ್ರದೇಶ ಉಪ-ವಿಭಾಗದ ಗಣಪತಿ ನಗರ, ದುಗ್ಗಲಮ್ಮ ಬಡಾವಣೆ ಹಾಗೂ ಸುತ್ತಲಿನ ಪ್ರದೇಶದ ಒಳಚರಂಡಿಗಳ ಹೂಳು ತೆಗೆಯುವುದು ಹಾಗೂ ಮರು ಹೊಂದಿಸುವುದು ಮತ್ತು ರಸ್ತೆಗಳ ಮರು ಡಾಂಬರೀಕರಣ.	100.00	200000.00
11)	ವಾರ್ಡ್ ನಂ.41ರ ಪೀಣ್ಯಾ ಕೈಗಾರಿಕಾ ಪ್ರದೇಶ ಉಪ-ವಿಭಾಗದ ಪಾರ್ವತಿ ನಗರ ಹಾಗೂ ಸುತ್ತಲಿನ ಪ್ರದೇಶದ ಒಳಚರಂಡಿಗಳ ಹೂಳು ತೆಗೆಯುವುದು ಹಾಗೂ ಮರು ಹೊಂದಿಸುವುದು ಮತ್ತು ರಸ್ತೆಗಳ ಮರು ಡಾಂಬರೀಕರಣ.	100.00	200000.00
12)	ವಾರ್ಡ್ ನಂ.41ರ ಪೀಣ್ಯಾ ಕೈಗಾರಿಕಾ ಪ್ರದೇಶ ಉಪ-ವಿಭಾಗದ ಪಾರ್ವತಿ ನಗರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ.	200.00	300000.00
13)	ವಾರ್ಡ್ ನಂ.41ರ ಶೆಟ್ಟಿಹಳ್ಳಿ ಉಪ-ವಿಭಾಗದಲ್ಲಿ ಕೊಳವೆಬಾವಿ ಕೊರೆಯುವುದು ಮತ್ತು ನೀರು ಸರಬರಾಜು ಸೌಕರ್ಯ ಒದಗಿಸುವುದು.	55.00	110000.00
14)	ವಾರ್ಡ್ ನಂ.41ರ ಪೀಣ್ಯಾ ಕೈಗಾರಿಕಾ ಪ್ರದೇಶ ಉಪ-ವಿಭಾಗದ ಒಳಚರಂಡಿಗಳ ಹೂಳು ತೆಗೆಯುವುದು ಹಾಗೂ ಮರುಹೊಂದಿಸುವುದು ಮತ್ತು ರಸ್ತೆಗಳ ಮರು ಡಾಂಬರೀಕರಣ.	100.00	200000.00
15)	ವಾರ್ಡ್ ನಂ.41ರ ಪೀಣ್ಯಾ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು.	100.00	200000.00
16)	ವಾರ್ಡ್ ನಂ.41ರ ರಾಜಗೋಪಾಲನಗರ ಮುಖ್ಯರಸ್ತೆಯ ಪಶ್ಚಿಮ ಭಾಗ ಹಾಗೂ ಸುತ್ತಲಿನ ಪ್ರದೇಶಗಳ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ.	100.00	200000.00
17)	ವಾರ್ಡ್ ನಂ.41ರ ಪೀಣ್ಯಾ ಕೈಗಾರಿಕಾ ಪ್ರದೇಶ ಉಪ-ವಿಭಾಗದ ರಾಜಗೋಪಾಲನಗರ ಮುಖ್ಯರಸ್ತೆಯ ಪಶ್ಚಿಮ ಭಾಗ ಹಾಗೂ ಸುತ್ತಲಿನ ಪ್ರದೇಶಗಳ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ.	100.00	200000.00
18)	ವಾರ್ಡ್ ನಂ.41ರ ಪೀಣ್ಯಾ ಕೈಗಾರಿಕಾ ಪ್ರದೇಶ ಉಪ-ವಿಭಾಗದ ರಾಜಗೋಪಾಲನಗರದ ಉಪರಸ್ತೆಗಳು ಹಾಗೂ ಸುತ್ತಲಿನ ಪ್ರದೇಶಗಳ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿ.	100.00	200000.00
19)	ವಾರ್ಡ್ ನಂ.70ರ ಹೆಗ್ಗನಹಳ್ಳಿ ಉಪ-ವಿಭಾಗದ ರಾಜಗೋಪಾಲನಗರದಲ್ಲಿ ಕೊಳವೆ ಬಾವಿಯನ್ನು ಕೊರೆಯುವುದು ಮತ್ತು ನೀರು ಸರಬರಾಜು ಸೌಕರ್ಯ ಒದಗಿಸುವುದು.	55.00	110000.00
20)	ವಾರ್ಡ್ ನಂ.71ರ ಹೆಗ್ಗನಹಳ್ಳಿ ಉಪ-ವಿಭಾಗದ ಸೊಲ್ಲಾಪುರದಮ್ಮ ದೇವಸ್ಥಾನದ ಮತ್ತು ಸುತ್ತಲಿನ ಪ್ರದೇಶಗಳ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ.	70.00	140000.00
21)	ವಾರ್ಡ್ ನಂ.71ರ ಹೆಗ್ಗನಹಳ್ಳಿ ಉಪ-ವಿಭಾಗದ ಲಕ್ಷ್ಮಣ ನಗರದಲ್ಲಿ ಒಳಚರಂಡಿಗಳ ಹೂಳು ತೆಗೆಯುವುದು ಹಾಗೂ ಮರುಹೊಂದಿಸುವುದು ಮತ್ತು ರಸ್ತೆಗಳ ಮರು ಡಾಂಬರೀಕರಣ.	100.00	200000.00

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 21–02–2022 ರಿಂದ ಡೌನ್‌ಲೋಡ್ ಮಾಡಬಹುದು. 2) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ: 03–03–2022ರ ಸಂಜೆ 4:00 ಗಂಟೆ ಅಥವಾ ಅದಕ್ಕೂ ಮುಂಚಿತವಾಗಿ. 3) ಪೂರ್ವ-ಬಿಡ್ ಸಭೆಯು (ದ್ವಿ ಲಕೋಟೆ ಟೆಂಡರ್‌ಗಳಿಗೆ) ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ, ಬೃಬೆಂಮಪಾ ಇಲ್ಲಿ ದಿನಾಂಕ: 25–02–2022 ಬೆಳಗ್ಗೆ 11:30 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04–03–2022ರ ಸಂಜೆ 4:30 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 05–03–2022ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಬೆಂಮಪಾ.

ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಜಾಟ್ ಸಮುದಾಯದ ಬೆಂಬಲ ಕೈತಪ್ಪುವ ಸಾಧ್ಯತೆ

ಜಯಂತ್ ವಿರುದ್ಧ ವಾಗ್ದಾಳಿ: ಬಿಜೆಪಿಗೆ ಹಿನ್ನಡೆ?

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಪಕ್ಷದ ಮುಖ್ಯಸ್ಥ ಜಯಂತ್ ಚೌಧರಿ ಅವರ ವಿರುದ್ಧ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ನಿರಂತರವಾಗಿ ವಾಗ್ದಾಳಿ ನಡೆಸುತ್ತಿರುವುದು ಜಾಟ್ ಸಮುದಾಯದ ಪ್ರಾಬಲ್ಯವಿರುವ ರಾಜ್ಯದ ಪಶ್ಚಿಮ ಭಾಗದಲ್ಲಿ ಬಿಜೆಪಿಗೆ ಹಿನ್ನಡೆ ತರುವ ಸಾಧ್ಯತೆಯಿದೆ. ಈ ಭಾಗದಲ್ಲಿ ಫೆ. 10 ಹಾಗೂ 14ರಂದು ಮತದಾನ ನಡೆಯಲಿದೆ.

ಶನಿವಾರ ಮಥುರಾದಲ್ಲಿ ಚುನಾವಣಾ ಸಭೆ ಉದ್ದೇಶಿಸಿ ಮಾತನಾಡಿದ ಜಯಂತ್, 'ಆದಿತ್ಯನಾಥ ಅವರು ನನ್ನನ್ನು ಗೂಂಡಾ ಮತ್ತು ಗಲಭೆಕೋರ ಎಂದು ಕರೆಯುವ ಮೂಲಕ ನನ್ನನ್ನು ಬಲಿಪಶು ಮಾಡುತ್ತಿದ್ದಾರೆ. ಬಾಬಾ (ಆದಿತ್ಯನಾಥ) ಅವರು ನನ್ನನ್ನು ಗೂಂಡಾ ಎಂದು ಪರಿಗಣಿಸಿದ್ದಾರೆ. ಆದರೆ, ನನ್ನ ತಾತ ಚೌಧರಿ ಚರಣ್ ಸಿಂಗ್ ಅವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಗೂಂಡಾ ಕಾಯ್ದೆ ಜಾರಿಗೆ ಬಂದಿತ್ತು ಎಂಬುದನ್ನು ನಾನು ಆದಿತ್ಯನಾಥ ಅವರಿಗೆ ನೆನಪಿಸ ಬಯಸುತ್ತೇನೆ' ಎಂದು ಜಯಂತ್ ತಿರುಗೇಟು ನೀಡಿದ್ದಾರೆ.


ಜಯಂತ್ ಚೌಧರಿ

ಕೆಲವು ದಿನಗಳ ಹಿಂದೆ ಬಾಗ್‌ಪತ್‌ನಲ್ಲಿ ಜನರೊಂದಿಗೆ ಸಂವಾದದ ಸಂದರ್ಭದಲ್ಲಿ, 'ಈ ಇಬ್ಬರು ಹುಡುಗರು ರಾಜ್ಯದಲ್ಲಿ ಗಲಭೆಗಳಿಗೆ ಕೈಜೋಡಿಸಿದ್ದಾರೆ' ಎಂಬ ಆದಿತ್ಯನಾಥ ಅವರ ಟೀಕೆಗಳಿಗೆ ಜಯಂತ್ ಅವರು ಈ ಸ್ಪಷ್ಟನೆ ನೀಡಿದ್ದಾರೆ.

ತಾವು ಮಥುರಾ ಲೋಕಸಭಾ ಕ್ಷೇತ್ರದ ಸಂಸದನಾಗಿದ್ದಾಗ ಯಾವುದೇ ಕೋಮು ಘರ್ಷಣೆಗಳು ನಡೆದಿರಲಿಲ್ಲ ಎಂದು ಚುನಾವಣಾ ರ‍್ಯಾಲಿಗಳಲ್ಲಿ ಅವರು ಹೇಳಿದ್ದರು.

ಜಯಂತ್ ಅವರ ಕುರಿತು ಯೋಗಿ ಆದಿತ್ಯನಾಥ ಅವರು ಮಾತನಾಡುತ್ತಿರುವ ರೀತಿಗೂ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾತನಾಡುತ್ತಿರುವ ರೀತಿಗೂ ವ್ಯತ್ಯಾಸವಿದೆ. ಶಾ ಅವರು ಜಯಂತ್ ಅವರನ್ನು ಉತ್ತಮ ರೀತಿಯಲ್ಲಿ ನಡೆಸಿಕೊಳ್ಳುವ ಹಾಗೆ ತೋರುತ್ತಿದ್ದಾರೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಚುನಾವಣಾ ಸಭೆಗಳಲ್ಲಿ ಅವರ ಮೇಲೆ ಟೀಕಾಪ್ರಹಾರಕ್ಕೆ ಇಳಿದಿಲ್ಲ.

ಜಾಟ್ ನಾಡಿನಲ್ಲಿ ಜಯಂತ್ ವಿರುದ್ಧ ವಾಗ್ದಾಳಿಗೆ ಇಳಿಯುವುದು ಬಿಜೆಪಿಗೆ ಮುಳುವಾಗುವ ಸಾಧ್ಯತೆಯಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಜಾಟ್ ಸಮುದಾಯದ ಪ್ರಬಲ ನಾಯಕರೆನಿಸಿರುವ ಜಯಂತ್, ಸಮುದಾಯದಿಂದ ಗಮನಾರ್ಹ ಬೆಂಬಲ ಪಡೆದಿದ್ದಾರೆ. ರೈತರ ಪ್ರತಿಭಟನೆಯ ಬಳಿಕ ಅವರು ದೊಡ್ಡ ನಾಯಕರಾಗಿ ಹೊರಹೊಮ್ಮಿದ್ದಾರೆ. ಇಂತಹ ನಾಯಕನನ್ನು ಗೂಂಡಾ, ಗಲಭೆಕೋರ ಎಂದು ಕರೆಯುವುದು ಸಮುದಾಯದ ಆಕ್ರೋಶಕ್ಕೆ ಕಾರಣವಾಗಬಹುದು ಎಂದು ವಿಶ್ಲೇಷಿಸಿದ್ದಾರೆ.

ಬಿಜೆಪಿಯಲ್ಲೇ ಅಸಮಾಧಾನ

ಜಯಂತ್ ಚೌಧರಿ ಅವರ ಮೇಲಿನ ನಿರಂತರ ವೈಯಕ್ತಿಕ ದಾಳಿಯು ಉತ್ತರ ಪ್ರದೇಶದ ಪಶ್ಚಿಮ ಭಾಗದ ಹಲವು ಮುಖಂಡರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಬಿಜೆಪಿಯ ಮೂಲಗಳು ತಿಳಿಸಿವೆ. ಪಕ್ಷದ ಉಮೇದುವಾರರು ಈಗಾಗಲೇ ಹಳ್ಳಿಗಳಲ್ಲಿ ರೈತರು ಮತ್ತು ಯುವಕರ ಕೋಪವನ್ನು ಎದುರಿಸುತ್ತಿದ್ದಾರೆ ಎಂದು ಬಿಜೆಪಿ ಮುಖಂಡರೊಬ್ಬರು ಹೇಳಿದ್ದಾರೆ. 'ನಾವು ಅಖಿಲೇಶ್ ಮೇಲೆ ಟೀಕೆ ಮಾಡಬೇಕು, ಆದರೆ ಜಯಂತ್ ಅವರನ್ನು ಗುರಿಯಾಗಿ ಇಟ್ಟುಕೊಳ್ಳುವುದನ್ನು ನಿಗ್ರಹಿಸಿಕೊಳ್ಳಬೇಕು' ಎಂದು ಅವರು ಹೇಳಿದ್ದಾರೆ.

> **ಜಯಂತ್ ಮೇಲೆ ಟೀಕಾಪ್ರಹಾರ ನಡೆಸುವುದರಿಂದ ರಾಜ್ಯದ ಪಶ್ಚಿಮ ಭಾಗದಲ್ಲಿ ಪಕ್ಷಕ್ಕೆ ಸಹಾಯ ಮಾಡಿದಂತಾಗುತ್ತದೆ. ಟೀಕೆ ಹೆಚ್ಚಾದಂತೆ, ಬೆಂಬಲ ಹೆಚ್ಚಲಿದೆ**
> **ಆರ್‌ಎಲ್‌ಡಿ ಮುಖಂಡ**

> **ಜಯಂತ್ ಮೇಲಿನ ವೈಯಕ್ತಿಕ ದಾಳಿಯಿಂದ ಚುನಾವಣೆಯಲ್ಲಿ ನಮಗೆ ನಷ್ಟವಾಗಬಹುದು. ಏಕೆಂದರೆ ಜಾಟ್ ಸಮುದಾಯದವರು ಈ ವಾಗ್ದಾಳಿಗಳನ್ನು ಇಷ್ಟಪಡದೇ ಇರಬಹುದು**
> **ಮೀರತ್‌ನ ಬಿಜೆಪಿ ಮುಖಂಡ**

ಆರ್‌ಎಲ್‌ಡಿ ಅಭ್ಯರ್ಥಿ ವಿರುದ್ಧ ದೇಶದ್ರೋಹ ಪ್ರಕರಣ

ಬಿಜ್ನೋರ್ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪದ ಮೇಲೆ ಬಿಜ್ನೋರ್ ಕ್ಷೇತ್ರದಿಂದ ಸ್ಪರ್ಧಿಸಿರುವ ಆರ್‌ಎಲ್‌ಡಿ ಪಕ್ಷದ ಅಭ್ಯರ್ಥಿ ನೀರಜ್ ಚೌಧರಿ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಾಗಿದೆ.

ಕೆಲವು ದಿನಗಳ ಹಿಂದೆ ಚೌಧರಿ ಅವರು ನಡೆಸಿದ ಮನೆ-ಮನೆ ಚುನಾವಣಾ ಪ್ರಚಾರದ ವಿಡಿಯೊ ವೈರಲ್ ಆಗಿತ್ತು. ಇದರಲ್ಲಿ ಕೆಲವರು ಪಾಕಿಸ್ತಾನ್ ಜಿಂದಾಬಾದ್ ಘೋಷಣೆಗಳನ್ನು ಕೂಗಿದ್ದರು ಎಂದು ಆರೋಪಿಸಲಾಗಿದೆ.

'ಚೌಧರಿ ಅವರು ಮನೆಗಳಿಗೆ ತೆರಳಿ ಪ್ರಚಾರ ಮಾಡುವ ವೇಳೆ ಅವರ ಜೊತೆಗಿದ್ದ ಕೆಲವರು ಪಾಕಿಸ್ತಾನ ಪರವಾದ ಘೋಷಣೆಗಳನ್ನು ಕೂಗಿದ್ದಾರೆ ಎಂಬ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಕೊತ್ವಾಲಿ ಎಸ್‌ಎಚ್‌ಒ ರಾಧೇಶ್ಯಾಮ್ ಮಾಹಿತಿ ನೀಡಿದ್ದಾರೆ.

ದೇಶದ್ರೋಹ (124ಎ), ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವ ಮೂಲಕ ಯಾವುದೇ ವರ್ಗದ ಧಾರ್ಮಿಕ ಭಾವನೆಗಳನ್ನು ಪ್ರೇರೇಪಿಸುವ ದುರುದ್ದೇಶ (295ಎ) ಸೇರಿದಂತೆ ವಿವಿಧ ಕಲಂ ಅಡಿಯಲ್ಲಿ ಚೌಧರಿ ಹಾಗೂ ಅವರ ಜೊತೆಗಿದ್ದ 25 ಜನರ ವಿರುದ್ಧ ಗುರುವಾರ ಪ್ರಕರಣ ದಾಖಲಾಗಿದೆ.

ವೈರಲ್ ಆಗಿರುವ ಆಡಿಯೊ ಹಾಗೂ ವಿಡಿಯೊ ಪರಿಶೀಲನೆ ನಡೆಯುತ್ತಿದ್ದು, ಪ್ರಕರಣ ಕುರಿತಂತೆ ಯಾರನ್ನೂ ಈವರೆಗೆ ಬಂಧಿಸಿಲ್ಲ ಎಂದು ಅವರು ತಿಳಿಸಿದ್ದಾರೆ.

> **ನಮ್ಮ ಬಿಜ್ನೋರ್ ಅಭ್ಯರ್ಥಿ ಚೌಧರಿ ಒಬ್ಬ ವೈದ್ಯ. ಅವರೊಬ್ಬ ಉತ್ತಮ ವ್ಯಕ್ತಿ. ಈ ಮೂರ್ಖರು ವಿಡಿಯೊವನ್ನು ಹರಿಬಿಡುವ ಮೂಲಕ ಅವರನ್ನು ದೇಶದ್ರೋಹಿ ಎಂದು ಸಾಬೀತುಪಡಿಸಲು ಪ್ರಯತ್ನಿಸುತ್ತಿದ್ದಾರೆ**
> **ಜಯಂತ್ ಚೌಧರಿ,** ಆರ್‌ಎಲ್‌ಡಿ ಮುಖ್ಯಸ್ಥ

ಯೋಗಿ ಬಳಿ ₹1 ಲಕ್ಷದ ರಿವಾಲ್ವರ್, ₹ 80 ಸಾವಿರದ ರೈಫಲ್

ಗೋರಖಪುರ (ಪಿಟಿಐ): ಗೋರಖಪುರ ನಗರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿದಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಅಭ್ಯರ್ಥಿ ಯೋಗಿ ಆದಿತ್ಯನಾಥ ಅವರು ₹1.54 ಕೋಟಿ ಆಸ್ತಿ ಘೋಷಿಸಿದ್ದಾರೆ. ಈ ಪೈಕಿ ₹1 ಲಕ್ಷ ಮೌಲ್ಯದ ರಿವಾಲ್ವರ್ ಹಾಗೂ ₹80 ಸಾವಿರ ಮೌಲ್ಯದ ರೈಫಲ್ ಸೇರಿವೆ. ನಾಮಪತ್ರದ ಜೊತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಮ್ಮಲ್ಲಿರುವ ಆಸ್ತಿ ಹಾಗೂ ಶಸ್ತ್ರಾಸ್ತ್ರಗಳ ಮಾಹಿತಿಯನ್ನು ಅವರು ಒದಗಿಸಿದ್ದಾರೆ.

ಗೋರಖಪುರದಿಂದ ಐದು ಬಾರಿ ಸಂಸದರಾಗಿ ಆಯ್ಕೆಯಾಗಿರುವ ಯೋಗಿ ಆದಿತ್ಯನಾಥ ಅವರು ಇದೇ ಮೊದಲ ಬಾರಿಗೆ ವಿಧಾನಸಭಾ ಚುನಾವಣಾ ಕಣಕ್ಕೆ ಧುಮುಕಿದ್ದು, ಅವೇದ್ಯನಾಥ ಅವರು ತಮ್ಮ ತಂದೆ, ಗುರು ಎಂದು ಉಲ್ಲೇಖಿಸಿದ್ದಾರೆ. ಅವರ ಬಳಿ ಇರುವುದೆಲ್ಲವೂ ಚರಾಸ್ತಿ ಮಾತ್ರ. ಸ್ಥಿರಾಸ್ತಿಗಳ ವಿಭಾಗದಲ್ಲಿ 'ಅನ್ವಯಿಸುವುದಿಲ್ಲ' ಎಂದು ಅವರು ನಮೂದಿಸಿದ್ದಾರೆ.

ಪ್ರಮಾಣಪತ್ರದ ದಾಖಲೆಯ ಪ್ರಕಾರ, ಮುಖ್ಯಮಂತ್ರಿ ಬಳಿ 20 ಗ್ರಾಂ ತೂಕದ ಚಿನ್ನದ 'ಕುಂಡಲ' ಇದೆ. ಖರೀದಿಸುವ ಸಮಯದಲ್ಲಿ ಇದರ ಮೌಲ್ಯ ₹49,000 ಇತ್ತು ಎಂದು ತಿಳಿಸಲಾಗಿದೆ. ₹20,000 ಮೌಲ್ಯದ 10 ಗ್ರಾಂ ತೂಕದ ಚಿನ್ನದ ಸರದಲ್ಲಿ ರುದ್ರಾಕ್ಷ ಮಾಲೆ, ₹12,000 ಮೌಲ್ಯದ ಮೊಬೈಲ್ ಫೋನ್ ಅವರ ಬಳಿಯಿದೆ. 1992ರಲ್ಲಿ ಶ್ರೀನಗರದ ಬಹುಗುಣ ವಿಶ್ವವಿದ್ಯಾಲಯದಿಂದ ಬಿಎಸ್‌ಸಿ ಪದವಿ ಪಡೆದಿರುವುದಾಗಿ ಮಾಹಿತಿ ಒದಗಿಸಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ತಮ್ಮ ಗಳಿಕೆಯ ಬಗ್ಗೆ ಅಫಿಡವಿಟ್‌ನಲ್ಲಿ ಯೋಗಿ ವಿವರಿಸಿದ್ದಾರೆ. 2020-21ನೇ ಹಣಕಾಸು ವರ್ಷದಲ್ಲಿ ₹ 13.20 ಲಕ್ಷ, 2019-20ನೇ ಸಾಲಿನಲ್ಲಿ ₹15.68 ಲಕ್ಷ, 2018-19ನೇ ಸಾಲಿನಲ್ಲಿ ₹18.27 ಲಕ್ಷ, 2017-18ರಲ್ಲಿ ₹ 14.38 ಲಕ್ಷ ಮತ್ತು 2016-17ರಲ್ಲಿ ₹8.40 ಲಕ್ಷ ಆದಾಯ ಬಂದಿದೆ ಎಂದು ಘೋಷಿಸಿದ್ದಾರೆ. ಯೋಗಿ ಬಳಿ ಯಾವುದೇ ಕೃಷಿ ಜಮೀನು ಇಲ್ಲ ಹಾಗೂ ಅವರು ಸಾಲ ಪಡೆದಿಲ್ಲ.

ಗೋರಖಪುರ ನಗರ ಕ್ಷೇತ್ರಕ್ಕೆ ಮಾರ್ಚ್ 3ರಂದು ಮತದಾನ ನಡೆಯಲಿದೆ.



ರೋಡ್ ಶೋ...

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಉತ್ತರ ಪ್ರದೇಶದ ಅಲಿಗಡದಲ್ಲಿ ಶನಿವಾರ ರೋಡ್‌ಶೋ ನಡೆಸಿದರು–ಪಿಟಿಐ ಚಿತ್ರ

ಪಂಜಾಬ್: ತಾರಾ ಪ್ರಚಾರಕರ ಪಟ್ಟಿಯಿಂದ ತಿವಾರಿ ಹೊರಕ್ಕೆ

ಕಾಂಗ್ರೆಸ್ ಭಿನ್ನಮತ ಬಹಿರಂಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆಗೆ ಮುನ್ನ ಕಾಂಗ್ರೆಸ್ ಭಿನ್ನಾಭಿಪ್ರಾಯ ಬಹಿರಂಗವಾಗಿದೆ. ಸಂಸದ ಮನೀಶ್ ತಿವಾರಿ ಅವರನ್ನು ತಾರಾ ಪ್ರಚಾರಕರ ಪಟ್ಟಿಯಿಂದ ಹೊರಗಿಟ್ಟಿರುವುದು ಚರ್ಚೆಗೆ ಗ್ರಾಸವಾಗಿದೆ. ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಪುತ್ರ ಅಭಿಜಿತ್ ಮುಖರ್ಜಿ ಅವರು ಈ ಕುರಿತು ಮಾಡಿರುವ ಟ್ವೀಟ್ ಚರ್ಚೆ ಹುಟ್ಟುಹಾಕಿದೆ. ಅಭಿಜಿತ್ ಅವರು ಕಳೆದ ವರ್ಷ ಕಾಂಗ್ರೆಸ್ ತೊರೆದು ಟಿಎಂಸಿ ಸೇರಿದ್ದರು.


ಮನೀಶ್ ತಿವಾರಿ

'ಹಿರಿಯ ನಾಯಕ ತಿವಾರಿ ಅವರನ್ನು ಕೈಬಿಟ್ಟಿರುವುದು ಪಂಜಾಬ್ ಕಾಂಗ್ರೆಸ್ ಘಟಕದ ದುಸ್ಥಿತಿ ತೋರಿಸುತ್ತದೆ. ಇಂತಹ ಸಂಕುಚಿತ ಮನಸ್ಥಿತಿಗಳು ಕಾಂಗ್ರೆಸ್‌ಗೆ ಚುನಾವಣೆಗಳನ್ನು ಗೆಲ್ಲಲು ಎಂದಿಗೂ ಸಹಾಯ ಮಾಡುವುದಿಲ್ಲ' ಎಂದು ಅಭಿಜಿತ್ ಟ್ವೀಟ್ ಮಾಡಿದ್ದಾರೆ.

ಪಂಜಾಬ್‌ನ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಬಗ್ಗೆ ತಿವಾರಿ ಅವರು ಭಿನ್ನ ಅಭಿಪ್ರಾಯ ಹೊಂದಿದ್ದರು ಎನ್ನಲಾಗಿದೆ. ಸಿಧು ವಿರುದ್ಧವೂ ಅವರು ಟೀಕೆ ಮಾಡಿದ್ದರು.

ವರ್ಚಸ್ವಿ ನಾಯಕ ಬೇಕು: ಸಿಧು

ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದರ ಮೇಲೆ ಬಹುಮತಕ್ಕೆ ಬೇಕಿರುವ 59 ಶಾಸಕರ ಆಯ್ಕೆ ನಿರ್ಧಾರವಾಗುತ್ತದೆ ಎಂದು ಪಂಜಾಬ್ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಹೇಳಿದ್ದಾರೆ. ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆಗೆ ಮುನ್ನ ಅವರು ಈ ಹೇಳಿಕೆ ನೀಡಿದ್ದು, ಯಾರ ಹೆಸರನ್ನೂ ಉಲ್ಲೇಖಿಸಿಲ್ಲ.

ಸ್ವಚ್ಛ ಹಾಗೂ ವರ್ಚಸ್ಸು ಇರುವವರನ್ನೇ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಹಾಲಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಂಬಂಧಿಯೊಬ್ಬರನ್ನು ಶುಕ್ರವಾರ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ಸಿಧು ಅವರ ಈ ಮಾತು ಮಹತ್ವ ಪಡೆದಿದೆ.

ಉತ್ತರಾಖಂಡ ರ‍್ಯಾಲಿಯಲ್ಲಿ ಪ್ರಧಾನಿ ವಿರುದ್ಧ ವಾಗ್ದಾಳಿ

'ಭಾರತದಲ್ಲಿ ಇರುವುದು ಪ್ರಧಾನಿಯಲ್ಲ, ರಾಜ'

ಉಧಾಮ್‌ಸಿಂಗ್ ನಗರ (ಉತ್ತರಾಖಂಡ) (ಪಿಟಿಐ): ಸದ್ಯ ಭಾರತದಲ್ಲಿ ಪ್ರಧಾನಮಂತ್ರಿಯಿಲ್ಲ, ಅವರ ಬದಲಾಗಿ ರಾಜ ಇದ್ದಾನೆ. ತಾನು ತೆಗೆದುಕೊಳ್ಳುವ ನಿರ್ಧಾರಗಳನ್ನು ಜನರು ಸುಮ್ಮನೆ ಒಪ್ಪಿಕೊಳ್ಳಬೇಕು ಎಂಬುದು ರಾಜನ ಬಯಕೆಯಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಉತ್ತರಾಖಂಡದ ಕಿಚ್ಚಾ ಎಂಬಲ್ಲಿ ಶನಿವಾರ ನಡೆದ ಉತ್ತರಾಖಂಡ್ ಕಿಸಾನ್ ಸ್ವಾಭಿಮಾನ ಸಂವಾದ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನಿ ವಿರುದ್ಧ ವಾಗ್ದಾಳಿ ನಡೆಸಿದರು.

'ಪ್ರಧಾನಿ ಮೋದಿ ಅವರು ಕೋವಿಡ್ ಉಲ್ಬಣವಾಗಿದ್ದ ಅವಧಿಯಲ್ಲಿ ಪ್ರತಿಭಟನಾನಿರತ ರೈತರನ್ನು ಒಂದು ವರ್ಷ ರಸ್ತೆಯಲ್ಲಿ ಇರುವಂತೆ ಮಾಡಿದರು. ಆದರೆ ಕಾಂಗ್ರೆಸ್ ಪಕ್ಷ ಹಾಗೆ ಎಂದಿಗೂ ಮಾಡುವುದಿಲ್ಲ' ಎಂದರು.

ರೈತರನ್ನು ಮೋದಿ ಸರ್ಕಾರ ನಡೆಸಿಕೊಂಡ ರೀತಿಯನ್ನು ರಾಹುಲ್ ಖಂಡಿಸಿದ್ದಾರೆ. 'ಮೋದಿ ಸರ್ಕಾರವು ರೈತರನ್ನು ನಡೆಸಿಕೊಂಡಂತೆ ನಮ್ಮ ಪಕ್ಷ ಎಂದಿಗೂ ನಡೆಸಿಕೊಳ್ಳುವುದಿಲ್ಲ. ಕಾಂಗ್ರೆಸ್ ಅಧಿಕಾರದಲ್ಲಿರುವಾಗ ಎಂದಿಗೂ ರೈತರಿಗೆ ಬಾಗಿಲು ಮುಚ್ಚುವುದಿಲ್ಲ. ನಾವು ರೈತರು, ಬಡವರು ಮತ್ತು ಕಾರ್ಮಿಕರೊಂದಿಗೆ ಸಹಭಾಗಿತ್ವದಲ್ಲಿ ಕೆಲಸ ಮಾಡಲು ಬಯಸುತ್ತೇವೆ' ಎಂದಿದ್ದಾರೆ.

ಕೇಂದ್ರ ಸರ್ಕಾರವು ತನ್ನ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಮಾಡಿದ ರೈತರ ಕೆಚ್ಚೆದೆಯ ಹೋರಾಟವನ್ನು ಅವರು ಶ್ಲಾಘಿಸಿದ್ದಾರೆ.

ಎರಡು ರೀತಿಯ ಭಾರತ: ರಾಹುಲ್ ಪುನರುಚ್ಚಾರ

'ಇಂದು ಎರಡು ರೀತಿಯ ಭಾರತ ಅಸ್ತಿತ್ವದಲ್ಲಿವೆ, ಒಂದು ಶ್ರೀಮಂತರಿಗೆ ಮತ್ತು ಒಂದು ಬಡವರಿಗೆ' ಎಂದು ರಾಹುಲ್ ಪುನರುಚ್ಚರಿಸಿದರು.

ದೇಶದ ಆಯ್ದ 100 ಜನರು ಭಾರತದ ಜನಸಂಖ್ಯೆಯ ಶೇ 40ರಷ್ಟು ಸಂಪತ್ತನ್ನು ಹೊಂದಿದ್ದಾರೆ. ಇಂತಹ ಆದಾಯದ ಅಸಮಾನತೆಯು ಬೇರೆಲ್ಲಿಯೂ ಕಂಡುಬರುವುದಿಲ್ಲ ಎಂದು ಅವರು ಹೇಳಿದರು.

ರೈತರು ಹಾಗೂ ಕಾರ್ಮಿಕರು ದೇಶದ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು, ಆದರೆ ಕೈಗಾರಿಕೋದ್ಯಮಿಗಳು ಹಾಗೆ ಮಾಡಲಿಲ್ಲ ಎಂದು ರಾಹುಲ್ ವಿವರಿಸಿದರು.

ರಾಹುಲ್ ಅವರ ಎರಡು ರೀತಿಯ ಭಾರತ ಹೇಳಿಕೆಗೆ ಲೋಕಸಭೆಯಲ್ಲಿ ಬಿಜೆಪಿಯಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.



> **ಎಲ್ಲರಿಗಾಗಿ ಕೆಲಸ ಮಾಡಲಾಗದವರು ಪ್ರಧಾನಿಯಾಗಲು ಸಾಧ್ಯವಿಲ್ಲ. ಈ ಅರ್ಥದಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿ ಅಲ್ಲ.**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

54 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದ ಬಿಎಸ್‌ಪಿ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗಾಗಿ 54 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಬಿಡುಗಡೆ ಮಾಡಿದೆ. ಗೋರಖಪುರ ನಗರ ಕ್ಷೇತ್ರದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಎದುರು ಖ್ವಾಜಾ ಸಂಸುದ್ದೀನ್ ಅವರನ್ನು ಪಕ್ಷ ಕಣಕ್ಕಿಳಿಸಿದೆ. ಈ ಪಟ್ಟಿಯಲ್ಲಿ ಏಳು ಮುಸ್ಲಿಂ ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ.

ಸಮಾಜವಾದಿ ಪಕ್ಷದ ಅಭ್ಯರ್ಥಿ ಹಾಗೂ ಬಿಎಸ್‌ಪಿ ಮಾಜಿ ನಾಯಕ ಸ್ವಾಮಿ ಪ್ರಸಾದ್ ಮೌರ್ಯ ಅವರ ಎದುರು ಸಂತೋಷ್ ತಿವಾರಿ ಅವರನ್ನು ಪಕ್ಷ ಕಣಕ್ಕಿಳಿಸಿದೆ. ಪ್ರತೀಕ್ ಪಾಂಡೆ ಮತ್ತು ಚಂದ್ರ ಪ್ರಕಾಶ್ ವರ್ಮಾ ಅವರನ್ನು ಕ್ರಮವಾಗಿ ಕಾಟೆಹರಿ ಮತ್ತು ಅಕ್ಬರ್‌ಪುರ್ ಕ್ಷೇತ್ರದಲ್ಲಿ ಕಣಕ್ಕಿಳಿಸಿದೆ.

ಅಜಯ್ ಮಿಶ್ರಾ ವಿರುದ್ಧ ಲಖೀಂಪುರ ಖೇರಿ ಸಂತ್ರಸ್ತನ ಮಗ ಸ್ಪರ್ಧೆ

ಲಖೀಂಪುರ ಖೇರಿ (ಉತ್ತರ ಪ್ರದೇಶ) (ಪಿಟಿಐ): ಲಖೀಂಪುರ ಖೇರಿಯಲ್ಲಿ ನಡೆದ ಹಿಂಸಾಚಾರದಲ್ಲಿ ಮೃತಪಟ್ಟ ರೈತರೊಬ್ಬರ ಮಗ 2024ರ ಲೋಕಸಭಾ ಚುನಾವಣೆಯಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾ ವಿರುದ್ಧ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

'ಈ ಬಾರಿಯ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಧೌರಹರ ಕ್ಷೇತ್ರದಿಂದ ಸ್ಪರ್ಧಿಸುವಂತೆ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ಕೇಳಿಕೊಂಡವು. ಆದರೆ ನಾನು ಆ ಪ್ರಸ್ತಾಪವನ್ನು ತಿರಸ್ಕರಿಸಿದೆ. ಮುಂಬರಲಿರುವ ಲೋಕಸಭಾ ಚುನಾವಣೆಯಲ್ಲಿ ಅಜಯ್ ಮಿಶ್ರಾ ಎದುರು ಕಣಕ್ಕಿಳಿಸುವಂತೆ ಕೇಳಿಕೊಂಡೆ' ಎಂದು ಮೃತ ರೈತ ನಚ್ಚಾತಾರ್ ಸಿಂಗ್ ಅವರ ಮಗ ಜಗದೀಪ್ ಸಿಂಗ್ (31) ಹೇಳಿದ್ದಾರೆ.

> **ನಾನು ಚಿಕ್ಕ ಯುದ್ಧದಲ್ಲಿ ಪಾಲ್ಗೊಳ್ಳುವುದಿಲ್ಲ. ನಾನು ಅಜಯ್ ಮಿಶ್ರಾ ಅವರ ವಿರುದ್ಧ ದೊಡ್ಡ ಯುದ್ಧದಲ್ಲಿ ನೇರವಾಗಿ ಹೋರಾಡುತ್ತೇನೆ**
> **ಜಗದೀಪ್ ಸಿಂಗ್**
> ಮೃತ ರೈತ ನಚ್ಚಾತಾರ್ ಸಿಂಗ್ ಅವರ ಮಗ

'ನಮ್ಮ ಕುಟುಂಬದಲ್ಲಿ ಯಾರಿಗೂ ರಾಜಕೀಯ ಹಿನ್ನೆಲೆ ಇಲ್ಲ. ನಾನು ಎಸ್‌ಪಿ, ಬಿಎಸ್‌ಪಿ ಅಥವಾ ಕಾಂಗ್ರೆಸ್ ಬೆಂಬಲಿಗನಲ್ಲ. ಆದರೆ ಈ ಸಂದರ್ಭದಲ್ಲಿ ನಾವು ರೈತ ನಾಯಕ ತೇಜಿಂದರ್ ಸಿಂಗ್ ವಿರ್ಕ್ ಜೊತೆ ಇದ್ದೇವೆ' ಎಂದು ಹೇಳಿದರು.

ವಿರ್ಕ್ ಅವರು ಇತ್ತೀಚೆಗೆ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಜೊತೆ ಕಾಣಿಸಿಕೊಂಡಿದ್ದರು.

'ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಸ್ಥಾನದಿಂದ ಮಿಶ್ರಾ ಅವರನ್ನು ತೆಗೆದುಹಾಕದಿರುವುದು ಬಹಳ ದೊಡ್ಡ ಚುನಾವಣಾ ವಿಚಾರವಾಗಿದ್ದು, ಬ್ರಾಹ್ಮಣರ ಮತಗಳು ಕೈತಪ್ಪುತ್ತವೆ ಎಂಬ ಭಯದಿಂದ ಸರ್ಕಾರ ಹೀಗೆ ಮಾಡುತ್ತಿದೆ. ಅವರು ಗೃಹ ಖಾತೆಯಲ್ಲಿ ಇರುವವರೆಗೂ ನಮಗೆ ನ್ಯಾಯ ಸಿಗುವುದಿಲ್ಲ' ಎಂದು ಜಗದೀಪ್ ಹೇಳಿದ್ದಾರೆ.


ಲಖೀಂಪುರ ಖೇರಿ ಬಳಿ ಪ್ರತಿಭಟನನಿರತ ರೈತರ ಮೇಲೆ ಎಸ್‌ಯುವಿ ವಾಹನ ಹರಿಸಿ ಎಂಟು ಜನರ ಸಾವಿಗೆ ಕಾರಣವಾದ ಘಟನೆಯಲ್ಲಿ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರ ಪಾತ್ರ ಇದೆ ಎಂದು ಆರೋಪಿಸಲಾಗಿದೆ. ಆದರೂ ಅಜಯ್ ಮಿಶ್ರಾ ವಿರುದ್ಧ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.



ಗಂಗಾ ಸ್ನಾನ

ವಸಂತ ಪಂಚಮಿ ಪ್ರಯುಕ್ತ ಪ್ರಯಾಗರಾಜ್‌ನ ಸಂಗಮದಲ್ಲಿ ಶನಿವಾರ ಲಕ್ಷಾಂತರ ಭಕ್ತರು ಗಂಗಾ ಸ್ನಾನ ಮಾಡಿದರು –ಪಿಟಿಐ ಚಿತ್ರ

ನುಡಿ-ಕಿಡಿ



ಹುಸಿ ಜಾತ್ಯತೀತತೆ ಮತ್ತು ತುಷ್ಟೀಕರಣ ರಾಜಕಾರಣವನ್ನು ಬಿಜೆಪಿ ಸೋಲಿಸಿದ್ದು, ಎಲ್ಲರೂ ಘನತೆಯಿಂದ ಬಾಳುವ ಸಂಕಲ್ಪ ಮಾಡಿದೆ. ಮೋದಿ-ಯೋಗಿ ಜೋಡಿಯು, ಈ ಹಿಂದಿನ ಮುಸ್ಲಿಂ-ಯಾದವ್ ಜೋಡಿಯನ್ನು ಬದಲಿಸಿದೆ

ಮುಕ್ತಾರ್ ಅಬ್ಬಾಸ್ ನಖ್ವಿ, ಬಿಜೆಪಿ ನಾಯಕ



ರಾಹುಲ್ ಗಾಂಧಿ ಅವರು ಚೀನಾದ ಪತ್ರಿಕೆಗಳನ್ನು ಹೆಚ್ಚಾಗಿ ನಂಬುತ್ತಾರೆ. ಭಾರತೀಯ ಸೈನಿಕರ ಧೈರ್ಯ ಮತ್ತು ಶೌರ್ಯದ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಾರೆ. ಅವರು ಸಂಸತ್ತಿನಲ್ಲಿ ಕುಳಿತು ದೇಶದ ಜನರನ್ನು ದಾರಿ ತಪ್ಪಿಸುವ ಮಾತು ಹೇಳಿದಾಗ ನೋವುಂಟಾಗುತ್ತದೆ. ಅಖಿಲೇಶ್ ಓಲೈಕೆ ರಾಜಕರಾಣವನ್ನೂ ಬಿಜೆಪಿ ಒಪ್ಪುವುದಿಲ್ಲ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

'ಮಣಿಪುರದಲ್ಲಿ ಆಫ್‌ಸ್ಪಾ ವಾಪಸ್‌ಗೆ ಒತ್ತಾಯ'

ಪ್ರಜಾವಾಣಿ ವಾರ್ತೆ

ಗುವಾಹಟಿ: ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ (ಆಫ್‌ಸ್ಪಾ) 1958 ಅನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದಾಗಿ ಮಣಿಪುರ ಕಾಂಗ್ರೆಸ್ ಘಟಕ ಭರವಸೆ ನೀಡಿದೆ. ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ ಪ್ರಕಟಿಸಿದ್ದು, ಸಾಂಸ್ಕೃತಿಕ ವೈವಿಧ್ಯತೆ ಕಾಪಾಡಿಕೊಳ್ಳಲು ನೀತಿ ರೂಪಿಸುವುದಾಗಿ ವಾಗ್ದಾನ ನೀಡಿದೆ. ಜೊತೆಗೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವುದಾಗಿ ಪ್ರಣಾಳಿಕೆಯಲ್ಲಿ ತಿಳಿಸಿದೆ.

ರಾಜ್ಯದ ಸಾಮಾಜಿಕ ಶಾಂತಿ ಮತ್ತು ಸೌಹಾರ್ದಕ್ಕೆ ಕೆಲ ವರ್ಷಗಳಿಂದ ಧಕ್ಕೆ ಉಂಟಾಗಿದೆ. ಅದನ್ನು ಕಾಪಾಡಲು ಕಾಂಗ್ರೆಸ್ ಬದ್ಧವಾಗಿದೆ. ಮಣಿಪುರದ ಎಲ್ಲಾ ಸಮುದಾಯಗಳ ಭಾವನೆಗಳಿಗೆ ಸೂಕ್ಷ್ಮವಾಗಿ ಸ್ಪಂದಿಸುವುದು ಹಾಗೂ ಅವರ ಎಲ್ಲ ಆಶೋತ್ತರಗಳನ್ನು ಈಡೇರಿಸಲಾಗುವುದು ಎಂದು ಮಾತು ಕೊಟ್ಟಿದೆ.

ರಾಜ್ಯದ ಸುಸ್ಥಿರ ಆರ್ಥಿಕ ಬೆಳವಣಿಗೆಗೆ ಬೆಂಬಲ ನೀಡಲಾಗುವುದು. ಇದಕ್ಕಾಗಿ ಪ್ರದೇಶಗಳನ್ನು ಗುರುತಿಸಲಾಗಿದೆ. ರಾಜ್ಯದ ಐತಿಹಾಸಿಕ ಅಂತಾರಾಷ್ಟ್ರೀಯ ಗಡಿಗಳನ್ನು ಮತ್ತು ರಾಜ್ಯದ ಆಂತರಿಕ ಗಡಿಗಳನ್ನು ಕಾಪಾಡಲು ಗಮನ ನೀಡಲಾಗುವುದು. ರಾಜ್ಯದ ಅರಣ್ಯ ಪ್ರದೇಶ, ರಾಷ್ಟ್ರೀಯ ಅಭಯಾರಣ್ಯಗಳು, ವನ್ಯಮೃಗ ಧಾಮಗಳು ಮತ್ತು ಜೈವಿಕ ವೈವಿಧ್ಯ ಹೊಂದಿರುವ ಪ್ರದೇಶಗಳನ್ನು ಸಂರಕ್ಷಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ.

ರಾಜ್ಯದ ಯುವಕರಿಗಾಗಿ ಪ್ರತಿವರ್ಷ 50,000 ಹೊಸ ಉದ್ಯೋಗಗಳನ್ನು ಸೃಷ್ಟಿಸಲಾಗುವುದು. ಪ್ರತಿವರ್ಷ ಐದು ಲಕ್ಷ ಪ್ರವಾಸಿಗರು ಮಣಿಪುರಕ್ಕೆ ಭೇಟಿ ನೀಡುವಂತೆ ಕ್ರಮ ಕೈಗೊಳ್ಳಲಾಗುವುದು. ವಿದ್ಯುತ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಮತ್ತು ರಾಜ್ಯಕ್ಕೆ ಬೇಕಾಗುವಷ್ಟು ಭತ್ತ ಬೆಳೆಯಲು ಯೋಜನೆ ರೂಪಿಸಲಾಗುವುದು ಎನ್ನಲಾಗಿದೆ.

ರಾಜ್ಯದ ನಾಲ್ಕು ಸಮಾನ ಮನಸ್ಕ ಪಕ್ಷಗಳ ಜೊತೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ. ಫೆ.27 ಮತ್ತು ಮಾ.3ರಂದು ಮಣಿಪುರದಲ್ಲಿ ಮತದಾನ ನಡೆಯಲಿದೆ.

ಪ್ರಧಾನಿ ಭೇಟಿ ವೇಳೆ ಕೆಸಿಆರ್ ಗೈರು: ಬಿಜೆಪಿ ತರಾಟೆ

ಹೈದರಾಬಾದ್: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭೇಟಿ ಸಂದರ್ಭದಲ್ಲಿ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಗೈರುಹಾಜರಾಗಿದ್ದು, ಈ ಧೋರಣೆಗಾಗಿ ವಿರೋಧಪಕ್ಷ ಬಿಜೆಪಿ ತೀವ್ರವಾಗಿ ಟೀಕಿಸಿದೆ.

ಶ್ರಿರಾಮಾನುಜಾಚಾರ್ಯರ 216 ಅಡಿ ಎತ್ತರದ ಪ್ರತಿಮೆ ಅನಾವರಣ ಸೇರಿ ವಿವಿಧ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಲು ಪ್ರಧಾನಿ ಮೋದಿ ರಾಜ್ಯಕ್ಕೆ ಒಂದು ದಿನದ ಭೇಟಿ ನೀಡಿದ್ದರು.

ಜ್ವರದ ಕಾರಣ ನೀಡಿದ್ದ ಮುಖ್ಯಮಂತ್ರಿ ಅವರು ತಮ್ಮ ಪರವಾಗಿ ಸಚಿವ ತಲಸಾನಿ ಶ್ರೀನಿವಾಸ ಯಾದವ್ ಅವರನ್ನು ಪ್ರಧಾನಿ ಭೇಟಿ ಕಾರ್ಯಕ್ರಮಕ್ಕೆ ನಿಯೋಜಿಸಿದ್ದರು.

ಕೆ.ಚಂದ್ರಶೇಖರರಾವ್ ಅವರು ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರದ ಜೊತೆಗೆ ಸಂಘರ್ಷ ನಡೆಸಿದ್ದು, ಭತ್ತ ಖರೀದಿಗೆ ನಿರಾಕರಣೆ, ವಿವಿಧ ಕ್ಷೇತ್ರಗಳಲ್ಲಿ ನೆರವು ನೀಡದ ಕಾರಣಕ್ಕೆ ತೀವ್ರ ತರಾಟೆಗೆ ತೆಗೆದುಕೊಂಡಿದ್ದರು.


ಕೆ.ಚಂದ್ರಶೇಖರ ರಾವ್

ಕೇಂದ್ರ ಬಜೆಟ್ ನಂತರವೂ ಟೀಕಾಪ್ರಹಾರ ಮಾಡಿದ್ದು, ತಾವು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರೊಂದಿಗೆ ಸಂಪರ್ಕದಲ್ಲಿದ್ದು, ಶೀಘ್ರವೇ ಅವರನ್ನು ಭೇಟಿ ಆಗುವುದಾಗಿಯೂ ಹೇಳಿದ್ದರು.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಹತ್ತಿಕ್ಕುತ್ತಿದೆ. ದೇಶಕ್ಕೆ ಹೊಸ ಸಂವಿಧಾನದ ಅಗತ್ಯವಿದೆ ಎಂದು ಅವರು ಖಾರವಾಗಿ ಪ್ರತಿಕ್ರಿಯಿಸಿದ್ದರು. ಬಿಜೆಪಿ ಈ ಹೇಳಿಕೆಯ ವಿರುದ್ಧ ಪ್ರತಿಭಟನೆಯನ್ನೂ ನಡೆಸಿತ್ತು.

216 ಅಡಿ ಎತ್ತರದ ಪ್ರತಿಮೆ • ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಗಿ

ಹೈದರಾಬಾದ್‌ನಲ್ಲಿ 'ಸಮಾನತೆಯ ಪ್ರತಿಮೆ' ಅನಾವರಣ

• ಸಚ್ಚಿದಾನಂದ ಕುರಗುಂದ

ಹೈದರಾಬಾದ್: ನಗರದ ಹೊರವಲಯದ 108 ಭವ್ಯ ದೇಗುಲಗಳ ಆವರಣದಲ್ಲಿ ನಿರ್ಮಿಸಲಾಗಿರುವ 216 ಅಡಿ ಎತ್ತರದ ಸಂತ ರಾಮಾನುಜಾಚಾರ್ಯರ ಪ್ರತಿಮೆಯನ್ನು (ಸಮಾನತೆಯ ಪ್ರತಿಮೆ) ಪ್ರಧಾನಿ ನರೇಂದ್ರ ಮೋದಿ ಅವರು ದೇಶಕ್ಕೆ ಶನಿವಾರ ಸಮರ್ಪಿಸಿದರು.

'ಸಮಾನತೆಯ ಪ್ರತಿಮೆ' ಎಂದು ಹೆಸರಿಸಲಾಗಿರುವ ಈ ಪ್ರತಿಮೆಯು ಪಂಚ ಲೋಹಗಳಿಂದ ಕೂಡಿದೆ. ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ ಮತ್ತು ತವರಗಳಿಂದ ಕೂಡಿದ ಪಂಚಲೋಹದಿಂದ ಈ ಪ್ರತಿಮೆಯನ್ನು ತಯಾರಿಸಲಾಗಿದೆ. ಇದು ಕುಳಿತ ಭಂಗಿಯಲ್ಲಿರುವ ವಿಶ್ವದ ಅತಿ ಎತ್ತರದ ಲೋಹದ ಪ್ರತಿಮೆಯಾಗಿದೆ.


ಈ ಪ್ರತಿಮೆಯನ್ನು 34 ಎಕರೆ ಪ್ರದೇಶದಲ್ಲಿ, 54 ಅಡಿ ಎತ್ತರದ ವೇದಿಕೆ ಮೇಲೆ ಸ್ಥಾಪಿಸಲಾಗಿದೆ. 'ವೈದಿಕ ಡಿಜಿಟಲ್ ಲೈಬ್ರರಿ' ಮತ್ತು ಸಂಶೋಧನಾ ಕೇಂದ್ರ, ರಂಗಮಂದಿರ, ರಾಮಾನುಜಾಚಾರ್ಯರ ಅನೇಕ ಕೃತಿಗಳು ಹಾಗೂ ಪ್ರಾಚೀನ ಭಾರತೀಯ ಗ್ರಂಥಗಳನ್ನು ಹೊಂದಿರುವ ಶೈಕ್ಷಣಿಕ ಗ್ಯಾಲರಿಗಳಿಗೆ ಮೀಸಲಾದ ಮಹಡಿಗಳನ್ನು ಇದು ಒಳಗೊಂಡಿದೆ. ಎರಡನೇ ಮಹಡಿಯಲ್ಲಿ 120 ಕೆ.ಜಿ. ತೂಕದ ಚಿನ್ನದ ಪ್ರತಿಮೆ ಸ್ಥಾಪಿಸಲಾಗಿದೆ.

ಮುಖ್ಯಾಂಶಗಳು

- 45 ಎಕರೆ ಪ್ರದೇಶದಲ್ಲಿ ದೇವಸ್ಥಾನಗಳ ಸಂಕೀರ್ಣ
- ಫೆ.2ರಿಂದ 12 ದಿನಗಳ 'ರಾಮಾನುಜ ಸಹಸ್ರಬ್ದಿ ಸಮಾರೋಹಣ' ಕಾರ್ಯಕ್ರಮ

ಈ ಪ್ರತಿಮೆಯನ್ನು ರಾಮಾನುಜಾಚಾರ್ಯ ಆಶ್ರಮದ ಚಿನ್ನಜೀಯರ್ ಸ್ವಾಮೀಜಿ ಪರಿಕಲ್ಪನೆ ಆಧಾರದ ಮೇಲೆ ರೂಪಿಸಲಾಗಿದೆ. ಚಿನ್ನ ಜೀಯರ್ ಸ್ವಾಮೀಜಿ ಅವರು ಪ್ರತಿಮೆಗೆ 2014ರಲ್ಲಿ ಶಂಕು ಸ್ಥಾಪನೆ ನೆರವೇರಿಸಿದ್ದರು. ಚೀನಾದ ಏರೊಸನ್ ಕಾರ್ಪೋರೇಷನ್ ಈ ಪ್ರತಿಮೆಯನ್ನು ನಿರ್ಮಿಸಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ರಾಮಾನುಜಾಚಾರ್ಯರ ಜೀವನ ಚರಿತ್ರೆ ಮತ್ತು ಬೋಧನೆಯ ಕುರಿತು 3ಡಿ ಪ್ರದರ್ಶಿಸಲಾಯಿತು. ರಾಮಾನುಜಾಚರ್ಯರ 1,000ನೇ ಜನ್ಮ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿರುವ 12 ದಿನಗಳ ಕಾರ್ಯಕ್ರಮಗಳ ಭಾಗವಾಗಿ ಪ್ರತಿಮೆ ಉದ್ಘಾಟನೆ ನಡೆಯಿತು.


ರಾಮಾನುಜಾಚಾರ್ಯರ ಪ್ರತಿಮೆ

ಸಮಾನತೆ ಪ್ರತಿಪಾದಿಸಿದ್ದ ರಾಮಾನುಜಾರ್ಯರು, ಲಿಂಗ, ಜನಾಂಗ, ಜಾತಿಯನ್ನು ಲೆಕ್ಕಿಸದೆ, ಪ್ರತಿಯೊಬ್ಬ ಮನುಷ್ಯನು ಸಮಾನರು ಎಂಬ ನಂಬಿಕೆಯ ಆಧಾರದ ಮೇಲೆ ಅವರು ಜನರನ್ನು ಒಗ್ಗೂಡಿಸುವ ಕಾರ್ಯ ಕೈಗೊಂಡಿದ್ದರು ಎಂದು ಸಂಘಟಕರು ತಿಳಿಸಿದ್ದಾರೆ.


'ಸಹಬಾಳ್ವೆ, ಸಮಾನತೆ ಸಂದೇಶ ಸಾರಿದ ರಾಮಾನುಜಾಚಾರ್ಯರು'

'ದಲಿತರು, ಹಿಂದುಳಿದರನ್ನು ಅಪ್ಪಿಕೊಳ್ಳುವ ಮೂಲಕ ಸಹಬಾಳ್ವೆ ಮತ್ತು ಸಮಾನತೆಯ ಸಂದೇಶವನ್ನು ಸಂತ ರಾಮಾನುಜಾರ್ಯರು ಸಾರಿದ್ದರು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸಂತ ರಾಮಾನುಜಾಚಾರ್ಯರ ಸಮಾನತೆಯ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಅವರು, 'ಡಾ.ಬಿ.ಆರ್. ಅಂಬೇಡ್ಕರ್ ಅವರು ರಾಮಾನುಜಾಚಾರ್ಯರ ಸಂದೇಶಗಳ ಬಗ್ಗೆ ಅಪಾರ ಪ್ರಶಂಸೆ ವ್ಯಕ್ತಪಡಿಸಿದ್ದರು. ರಾಮಾನುಜಾಚಾರ್ಯರ ಸಂದೇಶಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದ್ದರು' ಎಂದು ವಿವರಿಸಿದರು.

'ಕನಕದಾಸರು, ಕಬೀರದಾಸರು, ತುಳಸಿದಾಸರು ಸಹ ರಾಮಾನುಜಾಚಾರ್ಯರ ಸಂದೇಶಗಳನ್ನು ಬಿತ್ತರಿಸಿದ್ದರು. ಸಮಾನತೆಯ ಪ್ರತಿಮೆಯು ಜ್ಞಾನ, ವೈರಾಗ್ಯ ಮತ್ತು ಆದೇಶದ ಪ್ರತೀಕವಾಗಿದೆ. ರಾಮಾನುಜಾಚಾರ್ಯರು ಭಕ್ತಿ ಮಾರ್ಗ ತೋರಿಸಿದ್ದರು. ಜತೆಗೆ, ಕಾಯಕದ ಮಹತ್ವದ ಬಗ್ಗೆ ಅರಿವು ಮೂಡಿಸಿದ್ದರು' ಎಂದರು.

'ಈ ಪ್ರತಿಮೆ ಮುಂದಿನ ಪೀಳಿಗೆಗೂ ಸ್ಫೂರ್ತಿ ನೀಡಲಿದೆ. ಭಾಗ್ಯನಗರದ ಭಾಗ್ಯದಾತ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ. ವಲ್ಲಭಭಾಯಿ ಪಟೇಲ್ ಅವರ ಏಕತಾ ಪ್ರತಿಮೆ ಸ್ಥಾಪಿಸಲಾಗಿದೆ. ಅದೇ ರೀತಿ ಇಲ್ಲಿ ಸಮಾನತೆಯ ಪ್ರತಿಮೆ ಸ್ಥಾಪಿಸಲಾಗಿದೆ' ಎಂದರು.


ಸಾಂಪ್ರದಾಯಿಕ ರೇಷ್ಮೆ ವಸ್ತ್ರ ಧರಿಸಿ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಧಾನಿ

'ತಾರತಮ್ಯ ಮಾಡದೆಯೇ ಅಭಿವೃದ್ಧಿ ಸಾಧಿಸಬೇಕು. ಬದಲಾಗುತ್ತಿರುವ ಭಾರತದಲ್ಲಿ ಸರ್ಕಾರ ಯೋಜನೆಗಳನ್ನು ಭೇದ ಭಾವ ಇಲ್ಲದೆಯೇ ರೂಪಿಸಿ ಸಮಾಜದ ಎಲ್ಲ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ' ಎಂದರು.

'ತೆಲುಗು ಸಿನಿಮಾಗಳು ವಿಶ್ವದಾದ್ಯಂತ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಒಟಿಟಿ ವೇದಿಕೆಯಲ್ಲೂ ಮುಂಚೂಣಿಯಲ್ಲಿದೆ' ಎಂದು ಪ್ರಧಾನಿ ಶ್ಲಾಘಿಸಿದರು.

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್: ಜೇಮ್ಸ್ ರೀವ್, ಜೇಮ್ಸ್ ಸೇಲ್ಸ್ ಹೋರಾಟ

ರಾಜ್, ರವಿ ಅಮೋಘ ಬೌಲಿಂಗ್

ನಾರ್ತ್‌ಸೌಂಡ್, ಆಂಟಿಗಾ (ಪಿಟಿಐ): ರಾಜ್ ಬಾವಾ ಮತ್ತು ರವಿಕುಮಾರ್ ಅವರ ಅಮೋಘ ಬೌಲಿಂಗ್ ಮುಂದೆ ಇಂಗ್ಲೆಂಡ್ ತಂಡಕ್ಕೆ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿ ಫೈನಲ್‌ನಲ್ಲಿ ದೊಡ್ಡ ಮೊತ್ತ ಕಲೆಹಾಕಲು ಸಾಧ್ಯವಾಗಲಿಲ್ಲ.

ಶನಿವಾರ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಮಾಡಿತು. ರಾಜ್ (31ಕ್ಕೆ5)ಮತ್ತು ರವಿ (34ಕ್ಕೆ4) ದಾಳಿಗೆ ನಲುಗಿದ ತಂಡವು 91 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು.

ಆದರೆ, ಮಧ್ಯಮಕ್ರಮಾಂಕದ ಬ್ಯಾಟರ್ ಜೇಮ್ಸ್ ರೀವ್ (95; 116ಎ, 4X12) ಮತ್ತು ಕೆಳಕ್ರಮಾಂಕದ ಆಟಗಾರ ಜೇಮ್ಸ್ ಸೇಲ್ಸ್ (ಔಟಾಗದೆ 34) ಅವರ ಆಸರೆಯಾದರು. ಇದರಿಂದಾಗಿ ತಂಡವು 44.5 ಓವರ್‌ಗಳಲ್ಲಿ 189 ರನ್ ಗಳಿಸಿತು.

ಗುರಿ ಬೆನ್ನತ್ತಿದ ಭಾರತ ತಂಡ 40 ಓವರ್‌ಗಳಲ್ಲಿ 4ಕ್ಕೆ 146 ರನ್ ಗಳಿಸಿದೆ.

ಭಾರತ ತಂಡವು ಸತತ ನಾಲ್ಕನೇ ಬಾರಿ ಫೈನಲ್ ಪ್ರವೇಶಿಸಿದೆ. ಇಡೀ ಟೂರ್ನಿಯಲ್ಲಿ ಉತ್ತಮವಾಗಿ ಆಡುತ್ತಿರುವ ಮಧ್ಯಮವೇಗಿ ಇನಿಂಗ್ಸ್‌ನಲ್ಲಿ ರವಿಕುಮಾರ್ ಮೊದಲ ವಿಕೆಟ್ ಬೇಟೆಯಾಡಿದರು.

ಎರಡನೇ ಓವರ್‌ನಲ್ಲಿಯೇ ಇಂಗ್ಲೆಂಡ್‌ಗೆ ಆಘಾತವಾಯಿತು. ತಮ್ಮ ಇನ್ನೊಂದು ಓವರ್‌ನಲ್ಲಿ ನಾಯಕ ಟಾಮ್ ಪ್ರಿಸ್ಟ್ ವಿಕೆಟ್ ಗಳಿಸಿದ ರವಿ ಸಂಭ್ರಮಿಸಿದರು. ಟಾಮ್ ಈ ಟೂರ್ನಿಯಲ್ಲಿ ಇಂಗ್ಲೆಂಡ್ ಪರ ಅತಿ ಹೆಚ್ಚು ರನ್ ಗಳಿಸಿರುವ ಆಟಗಾರ. ಇನ್ನೊಂದೆಡೆಯಿಂದ ಅಮೋಘ ದಾಳಿ ಮಾಡಿದ ರಾಜ್ ಕೂಡ ಬೇಟೆ ಶುರು ಮಾಡಿದರು.

11ನೇ ಓವರ್‌ನಲ್ಲಿ ಜಾರ್ಜ್ ಥಾಮಸ್(27) ವಿಕೆಟ್ ಕಬಳಿಸಿದರು. ನಂತರ ವಿಲಿಯಂ ಲಕ್ಸನ್, ಜಾರ್ಜ್ ಬೆಲ್ ಮತ್ತು ರೆಹಾನ್ ಅಹಮದ್ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ಆದರೆ ಈ ದಾಳಿಯನ್ನು ಜೇಮ್ಸ್ ಜೋಡಿ ಎದುರಿಸಿ ನಿಂತಿತು. ಎಂಟನೇ ವಿಕೆಟ್ ಜೊತೆಯಾಟದಲ್ಲಿ 93 ರನ್‌ಗಳನ್ನು ಸೇರಿಸಿದರು.

ಈ ಪಾಲುದಾರಿಕೆಯಾಟವನ್ನೂ ರವಿಕುಮಾರ್ ಮುರಿದರು. 44ನೇ ಓವರ್‌ನಲ್ಲಿ ಜೇಮ್ಸ್ ರೀವ್ ವಿಕೆಟ್ ಗಳಿಸಿದ ರವಿ ತಂಡವು ಇನ್ನೂರರ ಮೊತ್ತ ದಾಟದಂತೆ ನೋಡಿಕೊಂಡರು. ರೀವ್ ಕೇವಲ ಐದು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಇನಿಂಗ್ಸ್‌ನ ಕೊನೆಯ ವಿಕೆಟ್ ಗಳಿಸಿದ ರಾಜ್ ಐದು ವಿಕೆಟ್ ಗೊಂಚಲು ಸಾಧಿಸಿದರು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 44.5 ಓವರ್‌ಗಳಲ್ಲಿ 189 (ಜೇಮ್ಸ್ ರಿವ್ 95, ಜೇಮ್ಸ್ ಸೇಲ್ಸ್ ಔಟಾಗದೆ 34, ರವಿಕುಮಾರ್ 34ಕ್ಕೆ4, ರಾಜ್ ಬಾವಾ 31ಕ್ಕೆ5); **ಭಾರತ:** 40 ಓವರ್‌ಗಳಲ್ಲಿ 4ಕ್ಕೆ 146 (ಶೇಕ್ ರಶೀದ್ 50, ನಿಶಾಂತ್ ಸಿಂಧು ಔಟಾಗದೆ 31) ವಿವರ ಅಪೂರ್ಣ


ವಿಕೆಟ್ ಗಳಿಸಿದ ಭಾರತದ ರವಿಕುಮಾರ್ ಸಂಭ್ರಮಿಸಿದ ಪರಿ

ಬೆಂಗಳೂರು ಓಪನ್: ಜಿರಿ, ಸ್ಟೆಫನೊಗೆ ಅಗ್ರ ಶ್ರೇಯಾಂಕ

ದಿವಿಜ್, ಯೂಕಿಗೆ ವೈಲ್ಡ್ ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಿಜ್ ಶರಣ್ ಮತ್ತು ಯೂಕಿ ಭಾಂಬ್ರಿ ಅವರಿಗೆ ಸೋಮವಾರ ಆರಂಭವಾಗಲಿರುವ ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ವೈಲ್ಡ್ ಕಾರ್ಡ್ ಪ್ರವೇಶ ನೀಡಲಾಗಿದೆ. ಆದಿಲ್ ಕಲ್ಯಾಣ್‌ಪುರ ಮತ್ತು ಮುಕುಂದ್ ಶಶಿಕುಮಾರ್ ಅವರಿಗೂ ಈ ಮೂಲಕ ಪ್ರವೇಶ ಲಭಿಸಿದೆ.

ಡಬಲ್ಸ್ ವಿಭಾಗದಲ್ಲಿ ಭಾರತದ ಜೀವನ್ ನೆಡುಂಚೆಳಿಯನ್ ಮತ್ತು ಪೂರವ್ ರಾಜಾ ಜೋಡಿ ಅಗ್ರ ಶ್ರೇಯಾಂಕ ಪಡೆದುಕೊಂಡಿದ್ದಾರೆ.

'ಟೂರ್ನಿಯ ಮೊದಲ ವಾರದಲ್ಲಿ ಅತ್ಯಂತ ಕಠಿಣ ಪೈಪೋಟಿ ಕಂಡುಬರುವ ಸಾಧ್ಯತೆ ಇದೆ. ಆಟಗಾರರು, ವಿಶೇಷವಾಗಿ ಭಾರತದವರು ಉತ್ತಮ ಸಾಧನೆ ಮಾಡುವ ಸಾಧ್ಯತೆ ಇದ್ದು ರ‍್ಯಾಂಕಿಂಗ್‌ನಲ್ಲಿ ಏರಿಕೆ ಕಾಣುವ ಸಾಧ್ಯತೆ ಇದೆ' ಎಂದು ಟೂರ್ನಿಯ ನಿರ್ದೇಶಕ ಸುನಿಲ್ ಯಜಮಾನ್ ತಿಳಿಸಿದರು.

'ಒಟ್ಟು ಸಾಮರ್ಥ್ಯದ ಅರ್ಧದಷ್ಟು ಆಸನಗಳಲ್ಲಿ ಮಾತ್ರ ಭರ್ತಿ ಮಾಡಲು ಅವಕಾಶವಿದೆ. ಆದರೂ ಟೆನಿಸ್ ಪ್ರೇಮಿಗಳು ಅತ್ಯುತ್ಸಾಹದಿಂದ ಪಂದ್ಯ ವೀಕ್ಷಿಸುವ ನಿರೀಕ್ಷೆ ಇದೆ. ಕ್ರೀಡಾಂಗಣ ಪ್ರವೇಶಿಸುವವರು ಎರಡು ಡೋಸ್ ಲಸಿಕೆ ಕಡ್ಡಾಯ' ಎಂದು ಸುನಿಲ್ ವಿವರಿಸಿದರು.


ಡ್ರಾ ಸಮಾರಂಭದ ಸಂದರ್ಭದಲ್ಲಿ ಆಟಗಾರರಾದ ಯೂಕಿ ಭಾಂಬ್ರಿ (ಎಡದಿಂದ ಎರಡನೆಯವರು), ಪ್ರಜ್ನೇಶ್ ಗುಣೇಶ್ವರನ್ ಹಾಗೂ ದಿವಿಜ್ ಶರಣ್ ಜೊತೆ ಟೂರ್ನಿಯ ನಿರ್ದೇಶಕ ಸುನಿಲ್ ಯಜಮಾನ್ (ಎಡದಿಂದ ಮೊದಲನೆಯವರು) ಮತ್ತು ಕೆಎಸ್‌ಎಲ್‌ಟಿಎ ಗೌರವ ಕಾರ್ಯದರ್ಶಿ ಮಹೇಶ್ವರ್ ರಾವ್ (ಬಲದಿಂದ ಮೊದಲನೆಯವರು)

ಜೊಹಾಗ್‌ಗೆ 'ಮೊದಲ' ಚಿನ್ನದ ಪದಕದ ಸಂಭ್ರಮ

ಬೀಜಿಂಗ್ (ಎಎಫ್‌ಪಿ/ಎಪಿ): ನಾರ್ವೆಯ ಕ್ರಾಸ್ ಕಂಟ್ರಿ ಸ್ಕೀಯಿಂಗ್ ಪಟು ಥೆರೆಜ್ ಜೊಹಾಗ್ ಅವರು ಚಳಿಗಾಲದ ಒಲಿಂಪಿಕ್ಸ್‌ನ ಮೊದಲ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಕೋವಿಡ್–19 ಮತ್ತು ವಿವಾದಗಳ ಬಿಸಿಯೊಂದಿಗೆ ಶನಿವಾರ ಆರಂಭಗೊಂಡ ಒಲಿಂಪಿಕ್ಸ್‌ನ ಸ್ಪರ್ಧೆಯಲ್ಲಿ ಮಹಿಳೆಯರ 7.5–ಪ್ಲಸ್ 7.5 ಕಿಲೋಮೀಟರ್ ಸ್ಕಿಯಾಥ್ಲಾನ್‌ನಲ್ಲಿ ಮೊದಲಿಗರಾದರು. ಇದು, ಚಳಿಗಾಲದ ಒಲಿಂಪಿಕ್ಸ್‌ನ ಕ್ರಾಸ್ ಕಂಟ್ರಿಯಲ್ಲಿ ನಾರ್ವೆಗೆ ಲಭಿಸಿದ ಮೊದಲ ಚಿನ್ನವಾಗಿದೆ. ಉದ್ಘಾಟನಾ ಸಮಾರಂಭದಲ್ಲಿ ಜ್ಯೋತಿ ಬೆಳಗಿದವರ ಪೈಕಿ ಒಬ್ಬರಾದ 20 ವರ್ಷದ ದಿನಿಗ್ಲ್ ಯಿಲಾಮುಜಿಯಾನ ಸ್ಕಿಯಾಥ್ಲಾನ್ ರೇಸ್‌ನಲ್ಲಿ 43ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಹಿರಿಯ ಕ್ರೀಡಾಪಟು ಕ್ಲಾಡಿಯಾ: ಜರ್ಮನಿಯ ಕ್ಲಾಡಿಯಾ ಪೆಚ್‌ಸ್ಟೀನ್ ಅವರು ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಅತಿ ಹಿರಿಯ ಮಹಿಳಾ ಕ್ರೀಡಾಪಟು ಎನಿಸಿಕೊಂಡರು. ಶನಿವಾರ ನಡೆದ ಸ್ಪೀಡ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ 49 ವರ್ಷ 348 ದಿನ ವಯಸ್ಸಿನ ಕ್ಲಾಡಿಯಾ ಪಾಲ್ಗೊಂಡರು.


ಚಿನ್ನ ಗೆದ್ದ ಥೆರೆಜ್ ಜೊಹಾಗ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1295 (1290)
ಸೂರ್ಯಕಾಂತಿ (ರಿಫೈನ್ಡ್)	₹1300 (1300)
ಪಾಮೋಲಿನ್	₹1245 (1245)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8946-9000
ತುಮಕೂರು	₹---
ತುರುವೇಕೆರೆ	₹17700-17700

ಎಲ್‌ಐಸಿಯಿಂದ ರದ್ದಾದ ಪಾಲಿಸಿ ನವೀಕರಣ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ, ರದ್ದಾಗಿರುವ ವಿಮೆ ಯೋಜನೆಯನ್ನು ನವೀಕರಿಸುವ 'ವಿಶೇಷ ನವೀಕರಣ ಅಭಿಯಾನ' ಆರಂಭಿಸಿದೆ.

ಈ ವಿಶೇಷ ಅಭಿಯಾನವು ಫೆಬ್ರವರಿ 7 ರಿಂದ ಮಾರ್ಚ್ 25ರವರೆಗೆ ಇರಲಿದೆ ಎಂದು ಪತ್ರಿಕಾ ಪ್ರಕಟಣೆಯು ಶನಿವಾರ ತಿಳಿಸಿದೆ.

ಪ್ರೀಮಿಯಂ ಪಾವತಿಸುವ ಅವಧಿಯಲ್ಲಿ ರದ್ದಾಗಿರುವ ಮತ್ತು ಪಾಲಿಸಿ ಅವಧಿಯನ್ನು ಪೂರ್ಣಗೊಳಿಸದಿರುವ ಪಾಲಿಸಿಗಳು ಈ ಅಭಿಯಾನದಲ್ಲಿ ನವೀಕರಿಸಲು ಅರ್ಹವಾಗಿವೆ.

ಟರ್ಮ್ ಅಶ್ಯೂರೆನ್ಸ್ ಮತ್ತು ಹೈ ರಿಸ್ಕ್ ಪ್ಲಾನ್‌ಗಳನ್ನು ಹೊರತುಪಡಿಸಿ, ಪಾವತಿಸದೇ ಇರುವ ಒಟ್ಟು ಪ್ರೀಮಿಯಂ ಪರಿಗಣಿಸಿ ವಿಳಂಬ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಅರ್ಹ ಆರೋಗ್ಯ ಮತ್ತು ಕಿರು ವಿಮಾ ಯೋಜನೆಗಳು ವಿಳಂಬ ಶುಲ್ಕದಲ್ಲಿ ರಿಯಾಯಿತಿ ಪಡೆಯಬಹುದು ಎಂದು ಮಾಹಿತಿ ನೀಡಿದೆ.

ನಿರ್ದಿಷ್ಟ ಅರ್ಹ ಯೋಜನೆಗಳ ಪಾಲಿಸಿಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು, ಮೊದಲ ಬಾರಿಗೆ ಪಾವತಿಸದೇ ಇರುವ ಪ್ರೀಮಿಯಂ ದಿನಾಂಕದಿಂದ ಐದು ವರ್ಷಗಳ ಒಳಗೆ ನವೀಕರಿಸಬಹುದು ಎಂದು ಎಲ್‌ಐಸಿಯು ತನ್ನ ಪ್ರಕಟಣೆ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕ

ಎಸ್‌ಬಿಐ ಲಾಭ ಶೇ 62ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 8,432 ಕೋಟಿಗಳಷ್ಟಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿದ್ದ ₹ 5,196 ಕೋಟಿಗೆ ಹೋಲಿಸಿದರೆ ಈ ಬಾರಿ ಲಾಭವು ಶೇ 62ರಷ್ಟು ಹೆಚ್ಚಾಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ತಿಳಿಸಿದೆ.

ತ್ರೈಮಾಸಿಕವೊಂದರ ಅತ್ಯಂತ ಗರಿಷ್ಠ ಮಟ್ಟದ ನಿವ್ವಳ ಲಾಭ ಇದಾಗಿದೆ ಎಂದು ಹೇಳಿದೆ. ಒಟ್ಟು ವರಮಾನವು ₹ 75,981 ಕೋಟಿಗಳಿಂದ ₹ 78,352 ಕೋಟಿಗಳಿಗೆ ಏರಿಕೆ ಅಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 4.77 ರಿಂದ ಶೇ 4.5ಕ್ಕೆ ಇಳಿಕೆ ಆಗಿದೆ. ಇದರಿಂದಾಗಿ ಬ್ಯಾಂಕ್‌ನ ಆಸ್ತಿ ಗುಣಮಟ್ಟವು ಸುಧಾರಿಸಿದೆ ಎಂದು ತಿಳಿಸಿದೆ. ಆದರೆ, ನಿವ್ವಳ ಎನ್‌ಪಿಎ ಶೇ 1.23 ರಿಂದ ಶೇ 1.34ಕ್ಕೆ ಏರಿಕೆ ಆಗಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹ 10,342 ಕೋಟಿಗಳಿಂದ ₹ 6,974 ಕೋಟಿಗಳಿಗೆ ಇಳಿಕೆ ಆಗಿದೆ. ನಿವ್ವಳ ತೆರಿಗೆ ವರಮಾನ ಶೇ 6.48ರಷ್ಟು ಹೆಚ್ಚಾಗಿದ್ದು ₹ 30,687 ಕೋಟಿಗಳಿಗೆ ತಲುಪಿದೆ.

ಬಡ್ಡಿ ವರಮಾನ ಉತ್ತಮವಾಗಿದೆ. ಟ್ರೆಷರಿ ವರಮಾನ ಸಂಗ್ರಹದಲ್ಲಿ ಸ್ವಲ್ಪ ಸಮಸ್ಯೆಯಾಗಿದ್ದರೂ ಇತರೆ ವರಮಾನ ಸಂಗ್ರಹದಲ್ಲಿ ಉತ್ತಮ ಬೆಳವಣಿಗೆ ಕಂಡುಬಂದಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ದಿನೇಶ್ ಖಾರಾ ಹೇಳಿದ್ದಾರೆ.

ಮಡಗಾಸ್ಕರ್‌ಗೆ ಚಂಡಮಾರುತದ ಭೀತಿ

ಜಿನಿವಾ (ರಾಯಿಟರ್ಸ್): ದ್ವೀಪ ರಾಷ್ಟ್ರ ಮಡಗಾಸ್ಕರ್‌ಗೆ ಭೀಕರ ಚಂಡಮಾರುತದ ಭೀತಿ ಎದುರಾಗಿದೆ.

ಜನವರಿ 20ರಂದು 'ಅನಾ' ಚಂಡಮಾರುತದ ಹೊಡೆತಕ್ಕೆ ಸಿಲುಕಿದ್ದ ಮಡಗಾಸ್ಕರ್, ತೀವ್ರ ಹಾನಿ ಅನುಭವಿಸಿತ್ತು. ಸುಮಾರು 58 ಜನರು ಮೃತಪಟ್ಟಿದ್ದರು. ಇದೀಗ 'ಅನಾ'ಗಿಂತಲೂ ಹಲವು ಪಟ್ಟು ಪ್ರಬಲವಾದ, ಭೀಕರ 'ಬಟ್ಸಿರಾಯ್' ಚಂಡಮಾರುತ ಮಡಗಾಸ್ಕರ್ ಕಡೆಗೆ ಧಾಂಗುಡಿ ಇಟ್ಟಿದೆ.

ಗಂಟೆಗೆ 200 ಕಿ.ಮೀ ವೇಗದಲ್ಲಿ, ಭಾರೀ ಮಳೆ, ಗಾಳಿಯೊಂದಿಗೆ 'ಬಟ್ಸಿರಾಯ್' ಮಡಗಾಸ್ಕರ್‌ಗೆ ಅಪ್ಪಳಿಸಲಿದೆ ಎಂದು ಹವಾಮಾನ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಜನವರಿಯಲ್ಲಿ ಬಂದ 'ಅನಾ' ಚಂಡಮಾರುತದಿಂದ 1,30,000 ಜನ ವಸತಿ ಕಳೆದುಕೊಂಡಿದ್ದರು.

ಪಿಎನ್‌ಬಿ–ಪತಂಜಲಿ ಕೊ ಬ್ರ್ಯಾಂಡೆಡ್ ಕಾಂಟ್ಯಾಕ್ಟ್‌ಲೆಸ್ ಕ್ರೆಡಿಟ್ ಕಾರ್ಡ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಮತ್ತು ಪತಂಜಲಿ ಆಯುರ್ವೇದ ಲಿಮಿಟೆಡ್ ಜೊತೆಗೂಡಿ ಕಾಂಟ್ಯಾಕ್ಟ್‌ಲೆಸ್ ಕ್ರೆಡಿಟ್ ಕಾರ್ಡ್‌ಗಳನ್ನು ಬಿಡುಗಡೆ ಮಾಡಿವೆ.

ರಾಷ್ಟ್ರೀಯ ಪಾವತಿ ನಿಗಮದ (ಎನ್‌ಪಿಸಿಐ) ಪಾಲುದಾರಿಕೆಯೊಂದಿಗೆ 'ಪಿಎನ್‌ಬಿ ರುಪೇ ಪ್ಲಾಟಿನಂ' ಮತ್ತು 'ಪಿಎನ್‌ಬಿ ರುಪೇ ಸೆಲೆಕ್ಟ್' ಎಂಬ ಎರಡು ಕೊ–ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್‌ಗಳನ್ನು ಬಿಡುಗಡೆ ಮಾಡಲಾಗಿದ್ದು, ಎನ್‌ಸಿಪಿಐನ ರುಪೇ ವೇದಿಕೆಯಲ್ಲಿ ಇವು ಲಭ್ಯವಿವೆ.

ಈ ಕಾರ್ಡ್‌ಗಳು ಗ್ರಾಹಕರಿಗೆ ಆಕರ್ಷಕ ಪ್ರಯೋಜನಗಳನ್ನು ನೀಡುತ್ತವೆ. ಕ್ಯಾಷ್ ಬ್ಯಾಕ್, ಲಾಯಲ್ಟಿ ಪಾಯಿಂಟ್‌ಗಳು, ವಿಮಾ ರಕ್ಷಣೆಯಲ್ಲದೆ ದಿನನಿತ್ಯದ ಪತಂಜಲಿ ಉತ್ಪನ್ನಗಳನ್ನು ಖರೀದಿಸಲು ಕ್ರೆಡಿಟ್ ಸೇವೆಯನ್ನು ಪಡೆಯಬಹುದು.

ಕಾರ್ಡ್‌ದಾರರು ₹ 2,500 ಮತ್ತು ಅದಕ್ಕಿಂತ ಹೆಚ್ಚಿನ ವಹಿವಾಟುಗಳಿಗೆ ಶೇ 2ರಷ್ಟು ಕ್ಯಾಷ್‌ಬ್ಯಾಕ್ ಪಡೆಯಬಹುದು. ಪತಂಜಲಿ ಸ್ಟೋರ್‌ಗಳಲ್ಲಿ ಪ್ರತಿ ವಹಿವಾಟಿಗೆ ₹ 50 ರ ಮಿತಿಗೆ ಈ ಕ್ಯಾಷ್‌ಬ್ಯಾಕ್ ಒಳಪಟ್ಟಿರುತ್ತದೆ.

'ಎರಡು ಮತ್ತು ಮೂರನೇ ಶ್ರೇಣಿಯ ಮಾರುಕಟ್ಟೆಗಳಲ್ಲಿ ಡಿಜಿಟಲ್ ಪಾವತಿಗಳ ಅಳವಡಿಕೆಗೆ ವೇಗ ನೀಡಲು ಈ ಪಾಲುದಾರಿಕೆಯು ಸಹಾಯ ಮಾಡುತ್ತದೆ' ಎಂದು ಪತಂಜಲಿ ಆಯುರ್ವೇದ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಹೇಳಿದ್ದಾರೆ.

'ಈ ಸಹಯೋಗವು ಗ್ರಾಹಕರು ಮತ್ತು ಸಾರ್ವಜನಿಕರಿಗೆ ಉತ್ತಮವಾದ ಪ್ರಯೋಜನಗಳನ್ನು ವಿಸ್ತರಿಸುವ ನಿರೀಕ್ಷೆಯಿದೆ' ಎಂದು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅತುಲ್ ಕುಮಾರ್ ತಿಳಿಸಿದ್ದಾರೆ.



ಪತಂಜಲಿ ಆಯುರ್ವೇದ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಮತ್ತು ಬಾಬಾ ರಾಮ್‌ದೇವ್ ಅವರು ಕಾಂಟ್ಯಾಕ್ಟ್‌ಲೆಸ್ ಕ್ರೆಡಿಟ್ ಕಾರ್ಡ್‌ಗಳನ್ನು ಪ್ರದರ್ಶಿಸಿದರು

ಕೆನರಾ ಬ್ಯಾಂಕ್: ಸಾಲದ ಬಡ್ಡಿದರ ಯಥಾಸ್ಥಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಎಂಸಿಎಲ್‌ಆರ್ ಆಧರಿಸಿದ ಎಲ್ಲ ಅವಧಿಗಳ ಸಾಲಗಳ/ ಮುಂಗಡಗಳ ಮೇಲಿನ ಬಡ್ಡಿ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಫೆಬ್ರುವರಿ 7 ರಿಂದ ಮುಂದಿನ ಪರಿಷ್ಕರಣೆಯವರೆಗೆ ಇದೇ ದರ ಇರಲಿದೆ.

ಒಂದು ತಿಂಗಳ ಎಂಸಿಎಲ್‌ಆರ್ ಶೇಕಡ 6.55ರಷ್ಟು, ಮೂರು ತಿಂಗಳ ಎಂಸಿಎಲ್‌ಆರ್ ಶೇ 6.85ರಷ್ಟು, ಆರು ತಿಂಗಳ ಎಂಸಿಎಲ್‌ಆರ್ ಶೇ 7.20ರಷ್ಟು ಹಾಗೂ ಒಂದು ವರ್ಷದ ಎಂಸಿಎಲ್‌ಆರ್ ಶೇ 7.25ರಷ್ಟೇ ಮುಂದುವರಿಯಲಿದೆ ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ರೆಪೊ ದರದ ಜೊತೆ ಜೋಡಿಸಿರುವ ಸಾಲದ ಬಡ್ಡಿದರಗಳು ಶೇ 6.90ರಷ್ಟೇ ಮುಂದುವರಿಯಲಿದೆ ಎಂದು ಬ್ಯಾಂಕ್ ಮಾಹಿತಿ ನೀಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಜೊಳೆ	430-450
ಬಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಸರಡಿ	750-800
ಕರಿಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಎಪಿ	45619-46029

ಬೆಟ್ಟೆ	36210-36669
ಕೆಂಪುಗೋಟು	31600-32000
ರಾಶಿ	45139-45559
ಪುತ್ತೂರು	
ಹೊಸತು	27500-43000
ಸಿದ್ದಾಪುರ	
ಬಿಳಿಗೋಟು	21699-29899
ಚಾಲಿ	46099-46599
ಕೋಕ	20199-26819

ಹೊಸಚಾಲಿ	35899-40639
ಕೆಂಪುಗೋಟು	29889-32689
ರಾಶಿ	44699-47099
ತಟ್ಟಿಬೆಟ್ಟೆ	35382-45399
ಶಿರಸಿ	
ಬೆಟ್ಟೆ	40209-44099
ಬಿಳಿಗೋಟು	22019-32099
ಚಾಲಿ	31009-44599
ರಾಶಿ	43299-47461

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15850	15800	15950	241.85 ಸೆಂಟ್ಸ್
ಎಸಿ	7560	7250	7375	
ಆರ್‌ಪಿ	7300	7200	7500	ಲಂಡನ್
ಆರ್‌ಸಿ	4050	3900	4000	2229 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 5-2-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1250 (1235)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,975 (48,150)
ಬೆಳ್ಳಿ ಕೆ.ಜಿ	60,750 (60,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ಭಾಗವತರ 'ಅಶ್ವತ್ಥಾಮ' 13



ಕರುಳ ಕುಡಿ ಮುರುಟಿ ಹೋದಾಗ..

ಕುರುಡು ಅಧಿಕಾರ ಕುಣಿಯುತಲಿತ್ತು...

ಗೋರಖಪುರ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ದುರಂತ ಸಂಭವಿಸಿದಾಗ 'ಮಲಗಿರುವ ಕೂಸು ಮಲಗಿರಲಿ ಅಲ್ಲೆ, ಮುಂದಿನದು ಸರ್ಕಾರದ ಚಿತ್ತ' ಎಂದೇನೂ ಅಲ್ಲಿನ ವೈದ್ಯ ಡಾ. ಕಫೀಲ್ ಖಾನ್ ಕೈಕಟ್ಟಿ ಕುಳಿತವರಲ್ಲ. ಸ್ವಂತ ಖರ್ಚಿನಿಂದ ಆಮ್ಲಜನಕ ಸಿಲಿಂಡರ್ ತಂದು ಹಸುಗೂಸುಗಳ ಜೀವ ಉಳಿಸಲು ಹೆಣಗಿದವರು. ಅವರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ ಉತ್ತರಪ್ರದೇಶ ಸರ್ಕಾರ, ಸೇವೆಯಿಂದಲೂ ವಜಾ ಮಾಡಿದೆ. ದುರಂತದ ಕುರಿತು ಖಾನ್ ಇತ್ತೀಚೆಗಷ್ಟೆ ಹೊರತಂದಿರುವ ಕೃತಿ, ಅಂದಿನ ಪ್ರತಿಯೊಂದು ಘಟನೆಯನ್ನೂ ಎಳೆ ಎಳೆಯಾಗಿ ಬಿಡಿಸಿಡುತ್ತದೆ. ಪ್ರಭುತ್ವದ ಪ್ರಭಾವದ ಕುರಿತೂ ಅಲ್ಲಿನ ವಿವರಗಳು ಮಾತನಾಡುತ್ತವೆ...



ಕೈ ತಣ್ಣಗಾಗದಿರಲಿ, ಉಸಿರಾಡು ಮಗುವೇ... ಗೋರಖಪುರ ಆಸ್ಪತ್ರೆಯ ತುರ್ತುನಿಗಾ ಘಟಕದಲ್ಲಿ ಕಂದಮ್ಮವೊಂದು ಕೃತಕ ಉಸಿರಾಟ ವ್ಯವಸ್ಥೆಯಲ್ಲಿರುವುದು. ಸರಣಿ ಸಾವುಗಳ ದುರಂತದ ಮಾರನೇ ದಿನದ ಚಿತ್ರಣವಿದು ಚಿತ್ರ: ಸಂಜಯ್ ಕನೋಜಿಯಾ

ಪ್ರೊ.ಬಿ.ಕೆ. ಚಂದ್ರಶೇಖರ್

ಈ ಕಥೆಯನ್ನು ಹೇಗೆ ಆರಂಭಿಸುವುದು? ಬೆಳೆದು ಬಾಳಿ ಬದುಕಬೇಕಾದ ಕಂದಮ್ಮಗಳು ಹೃದಯಹೀನ ಪ್ರಭುತ್ವವೊಂದರ ಹೊಣೆಗೇಡಿತನದ ವರ್ತನೆಯಿಂದ ಜೀವ ಕಳೆದುಕೊಂಡ ದುರಂತ ಘಟನೆಯಿಂದಲೋ? ದೇಶದ ಸರ್ಕಾರಿ ಆಸ್ಪತ್ರೆಗಳ ದಯನೀಯ ಸ್ಥಿತಿಯಿಂದ ಆಗುತ್ತಿರುವ ಎಡವಟ್ಟುಗಳಿಂದಲೋ? ದುರ್ಘಟನೆಯೊಂದು ನಡೆದಾಗ –ಅದರಿಂದ ಆಡಳಿತ ವ್ಯವಸ್ಥೆಯು ಪಾಠ ಕಲಿಯುವ ಬದಲು– ಸತ್ಯವನ್ನೇ ಮರೆಮಾಚಲು ನಡೆಸಿದ ಸರ್ಕಸ್‌ನ ಚಿತ್ರಣದಿಂದಲೋ? ಇಲ್ಲವೆ ಹಸುಗೂಸುಗಳ ಪ್ರಾಣ ಕಾಪಾಡಲು ಹೆಣಗಾಡಿದ ವೈದ್ಯನನ್ನೇ ಬಲಿಪಶು ಮಾಡಲಾದ ಘಟನೆಯಿಂದಲೋ?

ಉತ್ತರಪ್ರದೇಶದ ಗೋರಖಪುರ ಆಸ್ಪತ್ರೆಯ ದುರಂತ ಕಥೆಯ ಆರಂಭಿಕ ಬಿಂದುವಾಗಿ ಯಾವುದನ್ನೇ ಆಯ್ಕೆ ಮಾಡಿಕೊಂಡರೂ ವಿವರಗಳು ಬಿಚ್ಚಿಕೊಳ್ಳುತ್ತಾ ಸಾಗಿದಂತೆ ಕೊನೆಗೆ ಉಳಿಯುವುದು ವಿಷಾದವೊಂದೇ. ನನ್ನ ಇತ್ತೀಚಿನ ಓದಿನಲ್ಲಿ ತುಂಬಾ ಗಾಢವಾಗಿ ತಟ್ಟಿದ ಕೃತಿ ಡಾ. ಕಫೀಲ್ ಖಾನ್ ಅವರ 'ದಿ ಗೋರಖ್‌ಪುರ್ ಹಾಸ್ಪಿಟಲ್ ಟ್ರ್ಯಾಜಿಡಿ: ಎ ಡಾಕ್ಟರ್ಸ್ ಮೆಮೋರ್ ಆಫ್ ಎ ಡೆಡ್ಲಿ ಮೆಡಿಕಲ್ ಕ್ರೈಸಿಸ್' (ಇದಕ್ಕೂ ಮುನ್ನ ನನ್ನ ಗಮನಸೆಳೆದ ವೈದ್ಯಕೀಯ ಕೃತಿಯೆಂದರೆ ಗೆಳೆಯ ಎನ್. ರಾಮ್ ಕೊಟ್ಟಿದ್ದ ಡಾ. ಅತುಲ್ ಗಾವಂಡೆ ಅವರ 'ಕಾಂಪ್ಲಿಕೇಷನ್ಸ್'. ವೈದ್ಯರು ಎದುರಿಸುವ ಸವಾಲುಗಳನ್ನು ಆ ಕೃತಿ ಅತ್ಯಂತ ಸಮರ್ಥವಾಗಿ ಕಟ್ಟಿಕೊಟ್ಟಿತ್ತು. ಅವರ 'ಬೆಟರ್', 'ದಿ ಚೆಕ್‌ಲಿಸ್ಟ್ ಮೆನಿಫೆಸ್ಟೊ' ಮತ್ತು 'ಬೀಯಿಂಗ್ ಮಾರ್ಟಲ್' ಕೃತಿಗಳನ್ನೂ ಓದಿರುವೆ). ಬಾಬಾ ರಾಘವ ದಾಸ್ (ಬಿಆರ್‌ಡಿ) ವೈದ್ಯಕೀಯ ಕಾಲೇಜಿನ ಆಡಳಿತಕ್ಕೆ ಒಳಪಟ್ಟಿರುವ ನೆಹರೂ ಆಸ್ಪತ್ರೆಯಲ್ಲಿ 2017ರ ಆಗಸ್ಟ್ 10ರಂದು ದ್ರವೀಕೃತ ಆಮ್ಲಜನಕದ ಸಂಗ್ರಹ ತೀರಿದ ಬಳಿಕ ಸಂಭವಿಸಿದ ದುರಂತದಲ್ಲಿ 63 ಕಂದಮ್ಮಗಳು ಅಸುನೀಗಿದ್ದು ನನ್ನ ಹೃದಯವನ್ನು ಬಹುವಾಗಿ ಕಲಕಿತ್ತು. ಘಟನೆಗೆ ಸಂಬಂಧಿಸಿದಂತೆ ಮುಂದೆ ನಡೆದ ಬೆಳವಣಿಗೆಗಳ ಮೇಲೂ ನನ್ನದೊಂದು ಚಿಕಿತ್ಸಕ ಕಣ್ಣು ನೆಟ್ಟಿತ್ತು. ಖಾನ್ ಅವರ ಕೃತಿಯನ್ನು ಓದಿದ ಮೇಲೆ ನನ್ನ ಬಹುತೇಕ ಪ್ರಶ್ನೆಗಳಿಗೆ ಉತ್ತರಗಳು ಸಿಕ್ಕಿವೆ.

ಆಸ್ಪತ್ರೆಯಲ್ಲಿ, ಆ ಸರಿರಾತ್ರಿಯಲ್ಲಿ ಆಮ್ಲಜನಕದ ಸಂಗ್ರಹ ತೀರಿದ ಬಳಿಕ ದುರಂತದ ಘಟನಾವಳಿಗಳು ಹೇಗೆ ಬಿಚ್ಚಿಕೊಳ್ಳುತ್ತಾ ಸಾಗಿದವು, ಕರ್ತವ್ಯದ ಮೇಲಿದ್ದ ವೈದ್ಯರು ಜೀವಗಳನ್ನು ಉಳಿಸಲಾಗದೆ ಹೇಗೆ ಅಸಹಾಯಕರಾಗಿ ಕೈಚೆಲ್ಲಿದರು, ಕಂದಮ್ಮಗಳು ಒಂದೊಂದಾಗಿ ಹೇಗೆ ಕಣ್ಮುಚ್ಚಿದವು, ಮೇಲಧಿಕಾರಿಗಳು ಹೇಗೆ ಹೊಣೆಗೇಡಿತನದಿಂದ ನುಣುಚಿಕೊಂಡರು, 'ಅಪರಾಧಿ' ಸ್ಥಾನದಲ್ಲಿ ನಿಲ್ಲಬೇಕಿದ್ದ ಆಡಳಿತ ವ್ಯವಸ್ಥೆಯನ್ನು ಪಾರುಮಾಡಲು ಅದರ ಪರವಾಗಿ ದಾಖಲೆಗಳನ್ನು ಹೇಗೆ ತಿರುಚಲಾಯಿತು ಹಾಗೂ ಸ್ವಂತ ಖರ್ಚಿನಿಂದ ಪ್ರಾಣವಾಯುವಿನ ವ್ಯವಸ್ಥೆ ಮಾಡಿದ್ದ ವೈದ್ಯನನ್ನೇ ಹೇಗೆ ಆರೋಪಿ ಸ್ಥಾನದಲ್ಲಿ ನಿಲ್ಲಿಸಲಾಯಿತು ಎಂಬುದನ್ನು ದಾಖಲೆಗಳ ಮೂಲಕ– ಅದೂ 'ಟೈಮ್‌ಲೈನ್' ಸಹಿತ– ಖಾನ್ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ನಿರಪರಾಧಿಯಾದ ವೈದ್ಯನನ್ನು (ಡಾ. ಖಾನ್) 'ತಪ್ಪಿತಸ್ಥ'ನೆಂದು ರುಜುವಾತು ಮಾಡಲು ಪಣತೊಟ್ಟ ಇಡೀ ಆಡಳಿತ ವ್ಯವಸ್ಥೆ, ಆತನನ್ನು ಹೇಗೆ ಅಟ್ಟಾಡಿಸಿಕೊಂಡು ಹೋಗಿ ಬಲಿಪಶು ಮಾಡಿತು ಎಂಬ ವಿವರಗಳಂತೂ ದಿಗ್ಭ್ರಮೆ ಮೂಡಿಸುತ್ತವೆ. ಪ್ರಭುತ್ವವೊಂದು ಪ್ರಾಪ್ತ ಅಧಿಕಾರವನ್ನೆಲ್ಲ ತನ್ನ ಮೂಗಿನ ನೇರಕ್ಕೆ ಘಟನೆಯ ವಿವರಗಳನ್ನು ತಿರುಚಲು Aದಿಂದ Zವರೆಗೂ ಪ್ರಯೋಗಿಸಿದ ಅತ್ಯಂತ ಕೆಟ್ಟ ನಿದರ್ಶನ ಇದು.


ಖಾನ್ ಅವರು ದುರಂತ ಘಟನೆಗಳ ಕುರಿತು ನೀಡುವ ವಿವರಗಳಿಗೆ ಬರುವ ಮುನ್ನ ಅವರ ಹಿನ್ನೆಲೆಯನ್ನೊಮ್ಮೆ ನೋಡೋಣ. ಗೋರಖಪುರದ್ದೇ ಮೂಲದ ಕುಟುಂಬ ಅವರದು. ಅವರ ತಂದೆ ಶಕೀಲ್ ಖಾನ್, ನೀರಾವರಿ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿದ್ದವರು. ಈಗಲೂ ಅವರ ಮನೆ ಇರುವುದು ಅದೇ ಗೋರಖಪುರದ ಬಸಂತಪುರ ಬಡಾವಣೆಯಲ್ಲಿ. ಎಲ್ಲ ಜಾತಿ, ಸಮುದಾಯ, ವರ್ಗಗಳ ಕುಟುಂಬಗಳಿಗೆ ನೆಲೆ ಒದಗಿಸಿದ ಪ್ರದೇಶ ಅದು.

'ದಲಿತರು, ಯಾದವರು, ಕುಂಬಾರರು, ಕ್ರಿಶ್ಚಿಯನ್ನರು ಮಾತ್ರವಲ್ಲದೆ ಬ್ರಾಹ್ಮಣ ಸಮುದಾಯದ ಗೆಳೆಯರನ್ನೂ ನಾನು ಹೊಂದಿದ್ದೆ. ಹೋಳಿ ಹಬ್ಬವನ್ನು ನಾವೆಲ್ಲ ಒಟ್ಟಾಗಿ ಆಚರಿಸುತ್ತಿದ್ದೆವು. ಈದ್ ದಿನ ನಮ್ಮ ಮನೆಗೆ ಇತರ ಸಮುದಾಯಗಳ ಅತಿಥಿಗಳನ್ನೂ ಔತಣಕ್ಕೆ ಕರೆಯುತ್ತಿದ್ದೆವು. ದೀಪಾವಳಿಗೆ ನೆರೆಹೊರೆಯವರು ಕೊಟ್ಟ ಸಿಹಿ ತಿಂಡಿ ಎಷ್ಟಿರುತ್ತಿತ್ತೆಂದರೆ ಮುಂದೆ ವಾರವಿಡೀ ಶಾಲೆಯ ಊಟದ ಡಬ್ಬಿಯಲ್ಲಿ ಆ ತಿಂಡಿಗಳನ್ನೇ ತುಂಬಿಸಿಕೊಂಡು ಹೋಗುತ್ತಿದ್ದೆವು' ಎಂದು ಖಾನ್ ಬರೆಯುತ್ತಾರೆ. ಮುಸ್ಲಿಂ ಪ್ರಾಬಲ್ಯದ ಪ್ರದೇಶದಲ್ಲಿ ಅವರು ಬೆಳೆದವರಲ್ಲ ಎನ್ನುವುದನ್ನು ನಾವು ಗಮನಿಸಬೇಕು.

ಖಾನ್ ಅವರು ಎಂಬಿಬಿಎಸ್ ಓದಿದ್ದು ನಮ್ಮ ರಾಜ್ಯದ ಮಣಿಪಾಲ ವೈದ್ಯಕೀಯ ಕಾಲೇಜಿನಲ್ಲಿ. 'ರೋಗಿಗಳ ಧರ್ಮ, ಜಾತಿ, ಲಿಂಗ, ಆರ್ಥಿಕ ಹಿನ್ನೆಲೆ ಯಾವುದೂ ಮುಖ್ಯವಲ್ಲ. ಅವರ ಕಾಯಿಲೆಯ ಸ್ವರೂಪ ಎಂತಹದ್ದು ಮತ್ತು ಅವರನ್ನು ಚೇತರಿಕೆಯ ಹಾದಿಯಲ್ಲಿ ಹೇಗೆ ತಂದು ನಿಲ್ಲಿಸಬಹುದು ಎಂಬ ಯೋಚನೆಯಷ್ಟೇ ಮುಖ್ಯವಾಗಬೇಕು ಎಂಬ ಪಾಠವನ್ನು ನಾನಲ್ಲಿ ಕಲಿತೆ' ಎಂದು ಅವರು ವಿವರಿಸುತ್ತಾರೆ. ಖಾನ್ ಅವರ ವೃತ್ತಿಪರ ಬದ್ಧತೆಯ ಕುರಿತು ಸಂಶಯದಿಂದ ನೋಡುವ ಅಗತ್ಯವೇ ಇಲ್ಲ ಎನ್ನುವುದನ್ನು ಮೇಲಿನ ವಿವರಗಳು ಬಲು ಸ್ಪಷ್ಟವಾಗಿ ಹೇಳುತ್ತವೆ.

ಗ್ಯಾಂಗ್‌ಟಕ್‌ನ ಮಣಿಪಾಲ ಕಾಲೇಜಿನಲ್ಲಿ ಕೆಲವು ವರ್ಷ ಕೆಲಸ ಮಾಡಿದ ಅವರು, ಮುಂದೆ ತಮ್ಮದೇ ಊರಿನ ಬಿಆರ್‌ಡಿ ವೈದ್ಯಕೀಯ ಕಾಲೇಜಿನ ಚಿಕ್ಕಮಕ್ಕಳ ಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಉದ್ಯೋಗ ಪಡೆದರು. ಅಲ್ಲಿನ ಆಸ್ಪತ್ರೆಯಲ್ಲಿ ದುರಂತ ಘಟನೆ ಸಂಭವಿಸಿದಾಗ ಅವರು ಅಲ್ಲಿ ಉದ್ಯೋಗಕ್ಕೆ ಸೇರಿ ಒಂದು ವರ್ಷದ ಮೇಲೆ ಎರಡು ದಿನಗಳಾಗಿದ್ದವಷ್ಟೆ.

ಇನ್ನು 2017ರ ಆಗಸ್ಟ್ 10ರಂದು ನಡೆದ ಆ ಘಟನೆಗೆ ಬರೋಣ. ಕಂಬನಿಯ ಕುಯಿಲಿಗೆ ಕಾರಣವಾದ ಆ ದುರಂತ ರಾತ್ರಿಯಲ್ಲಿ ಕಾಲೇಜಿನ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಂದೇಶವೊಂದು ಬರುತ್ತದೆ. 'ತುರ್ತುಚಿಕಿತ್ಸಾ ಘಟಕಕ್ಕೆ ಆಮ್ಲಜನಕ ಪೂರೈಕೆ ಆಗುತ್ತಿಲ್ಲ. ಸಿಲಿಂಡರ್‌ಗಳ ದಾಸ್ತಾನು ಕೂಡ ಮುಗಿದಿದೆ' ಎಂದು ಅದರಲ್ಲಿ ಬರೆದಿರುತ್ತದೆ. ಒಮನ್‌ನಿಂದ ಬಂದಿದ್ದ ಸಹೋದರಿ ಜತೆ ಕಾಲ ಕಳೆಯಲು ಅಂದು ರಜೆ ಹಾಕಿದ್ದ ಖಾನ್, ಆ ಸಂದೇಶ ನೋಡಿದವರೇ ಆಸ್ಪತ್ರೆಗೆ ಹೊರಟು ನಿಲ್ಲುತ್ತಾರೆ. ದಾರಿಯಲ್ಲಿ ಹೋಗುತ್ತಿರುವಾಗಲೇ ವಿಭಾಗದ ಮುಖ್ಯಸ್ಥರಿಗೆ, ಕಾಲೇಜಿನ ಹಲವು ಮೇಲಧಿಕಾರಿಗಳಿಗೆ ಅವರು ಕರೆ ಮಾಡುತ್ತಾರೆ. ಬಹುತೇಕ ಕರೆಗಳಿಗೆ ಯಾವುದೇ ಪ್ರತಿಕ್ರಿಯೆ ಬರುವುದಿಲ್ಲ. ಕರೆ ಸ್ವೀಕರಿಸಿದವರೂ ಪರಿಸ್ಥಿತಿಯ ತೀವ್ರತೆಯನ್ನು ಗ್ರಹಿಸಲು ವಿಫಲರಾಗುತ್ತಾರೆ.



ಡಾ. ಕಫೀಲ್ ಖಾನ್

ಚಿಕ್ಕಮಕ್ಕಳ ವಾರ್ಡ್‌ನಲ್ಲಿ ಅಂದಿನ ಪರಿಸ್ಥಿತಿ ಹೇಗಿತ್ತು ಎನ್ನುವುದರ ವಿವರವಾದ ಮಾಹಿತಿಯನ್ನೂ ಖಾನ್ ಒದಗಿಸುತ್ತಾರೆ. ಒಂದೆಡೆ, ಜೀವನ್ಮರಣದ ನಡುವೆ ಹೋರಾಟ ನಡೆಸಿದ ಕಂದಮ್ಮಗಳು, ಇನ್ನೊಂದೆಡೆ, ಕಣ್ಣೆದುರಿಗೆ ಜೀವ ಕಳೆದುಕೊಳ್ಳುತ್ತಿರುವ ಕುಡಿಗಳಿಂದ ಶೋಕಸಾಗರದಲ್ಲಿ ಮುಳುಗಿದ್ದ ಪಾಲಕರು, ಮತ್ತೊಂದೆಡೆ, ವ್ಯವಸ್ಥೆಯ ವಿರುದ್ಧ ರೊಚ್ಚಿಗೆದ್ದು, ಜಗಳಕ್ಕಿಳಿದ ಸಂಬಂಧಿಗಳು, ಇದೆಲ್ಲದರ ಮಧ್ಯೆ ಅಸಹಾಯಕರಾಗಿದ್ದ ಕಿರಿಯ ವೈದ್ಯರು, ನರ್ಸ್‌ಗಳು ಹಾಗೂ ವಾರ್ಡ್ ಬಾಯ್‌ಗಳು. ಆ ದಿನ, ಚಿಕ್ಕಮಕ್ಕಳ ಹಾಗೂ ನವಜಾತ ಶಿಶುಗಳ ಚಿಕಿತ್ಸಾ ವಿಭಾಗದಲ್ಲಿ 313 ಕಂದಮ್ಮಗಳು ದಾಖಲಾಗಿದ್ದವು. ರಾತ್ರಿ 7.30ರ ಸುಮಾರಿಗೆ ಆಮ್ಲಜನಕದ ಅಭಾವ ಸೃಷ್ಟಿಯಾಯಿತು. ಆಮ್ಲಜನಕದ ಪೂರೈಕೆ ನಿಲ್ಲುತ್ತಿರುವ ಸದ್ದು ಮೊಳಗತೊಡಗಿತು. ತಕ್ಷಣ ತುರ್ತು ಸನ್ನಿವೇಶಕ್ಕಾಗಿ ಮೀಸಲಿಟ್ಟಿದ್ದ 52 ಸಿಲಿಂಡರ್‌ಗಳನ್ನು ಅಳವಡಿಸಲಾಯಿತು. ಕೇವಲ ನಾಲ್ಕೇ ಗಂಟೆಗಳಲ್ಲಿ ಅವುಗಳೂ ಖಾಲಿಯಾಗಿ ಪುಟ್ಟ ಪುಟ್ಟ ಎದೆಗೂಡುಗಳಿಗೆ ಪ್ರಾಣವಾಯುವೇ ಇಲ್ಲವಾಯಿತು. ಖಾನ್ ಅವರು ಆಸ್ಪತ್ರೆ ತಲುಪುವ ವೇಳೆಗೆ ಎಂಟು ಕಂದಮ್ಮಗಳು ಸಾವನ್ನಪ್ಪಿದ್ದವು.

ವಾರ್ಡ್‌ನಲ್ಲಿ ದಾಖಲಾಗಿದ್ದ ಮಕ್ಕಳ ಸ್ಥಿತಿಯನ್ನು ನೋಡಿ, ತುಂಬಾ ಜರೂರು ಇರುವ ಮಕ್ಕಳ ಮೂಗಿನ ಮೇಲೆ ಖಾನ್ ಅವರ ತಂಡ ಬ್ಯಾಗ್ ವಾಲ್ವ್ ಮಾಸ್ಕ್ (ಅಂಬು ಬ್ಯಾಗ್) ಇಟ್ಟು, ಗಾಳಿಯನ್ನು ಕೈಯಿಂದ ಪಂಪ್ ಮಾಡತೊಡಗಿತು. ಮೂರು ವರ್ಷದ ಹುಡುಗಿಯೊಬ್ಬಳ ಸ್ಥಿತಿ ಚಿಂತಾಜನಕವಾಗಿತ್ತು. ಅಂಬು ಬ್ಯಾಗ್‌ನಿಂದ ಎಷ್ಟೇ ಆಮ್ಲಜನಕವನ್ನು ಪಂಪ್ ಮಾಡಲು ಯತ್ನಿಸಿದರೂ ಅವಳನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಆಮ್ಲಜನಕದ ಕೊರತೆ ಇರುವುದು ಗಮನಕ್ಕೆ ಬಂದ ಮಕ್ಕಳ ಪಾಲಕರ ಆಕ್ರಂದನ ಮುಗಿಲುಮುಟ್ಟಿತ್ತು. ಈ ಮಧ್ಯೆ, ಖಾನ್ ಅವರ ಮುಂದೆ ಎರಡು ಸವಾಲುಗಳಿದ್ದವು. ಒಂದು, ಕಂದಮ್ಮಗಳು ಸಾವಿನ ಮನೆಯ ಕದ ತಟ್ಟದಂತೆ ತಡೆಯುವುದು, ಮತ್ತೊಂದು, ಆಮ್ಲಜನಕ ಸಿಲಿಂಡರ್‌ಗಳ ವ್ಯವಸ್ಥೆ ಮಾಡುವುದು.


ಸಿಲಿಂಡರ್ ಪೂರೈಸಬೇಕಾಗಿದ್ದ ಫೈಜಾಬಾದ್‌ನ ಇಂಪೆರಿಯಲ್ ಗ್ಯಾಸ್ ಲಿಮಿಟೆಡ್‌ನ ಲಾರಿಯ ಸುಳಿವೇ ಇರಲಿಲ್ಲ. ಪಕ್ಕದ ಆಸ್ಪತ್ರೆಯಿಂದ ತಮ್ಮದೇ ಕಾರಿನಲ್ಲಿ ಮೂರು ಸಿಲಿಂಡರ್‌ಗಳನ್ನು ಖಾನ್ ಕೇಳಿ ತಂದಿದ್ದರು. ಇನ್ನೂ ಎಂಟು ಆಸ್ಪತ್ರೆಗಳನ್ನು ಅವರು ಸಂಪರ್ಕಿಸಿದ್ದರು. ಎನ್ಸೆಪಾಲಿಟಿಸ್ (ಮಿದುಳಿನ ಉರಿಯೂತ) ಕಾಯಿಲೆಯಿಂದ ಬಳಲುತ್ತಿದ್ದ ಮಕ್ಕಳ ವಾರ್ಡ್‌ಗೆ ಪ್ರತೀ ಮುಕ್ಕಾಲು ಗಂಟೆಗೆ 16 ಸಿಲಿಂಡರ್‌ಗಳು ಬೇಕಿದ್ದವು. ಸ್ಥಳೀಯ ಜಿಡಾ ಎಂಬ ಸಿಲಿಂಡರ್ ಪೂರೈಕೆ ಸಂಸ್ಥೆಯನ್ನೂ ಅವರು ಸಂಪರ್ಕಿಸಿದ್ದರು. ತಮ್ಮ ಸಂಸ್ಥೆಯ ಜತೆಗಿದ್ದ ಒಪ್ಪಂದವನ್ನು ಕಾಲೇಜು ರದ್ದುಗೊಳಿಸಿ, ಫೈಜಾಬಾದ್ ಸಂಸ್ಥೆಯ ಜತೆ ಒಪ್ಪಂದ ಮಾಡಿಕೊಂಡಿದ್ದರಿಂದ ಜಿಡಾ ಸಂಸ್ಥೆ ಸಿಲಿಂಡರ್ ಪೂರೈಸಲು ಒಪ್ಪಲಿಲ್ಲ. ಖಾನ್ ಜೇಬಿನಿಂದ ₹ 20 ಸಾವಿರ ವ್ಯಯಿಸಿ ಖಲೀಲಾಬಾದ್‌ನಿಂದ ಸಿಲಿಂಡರ್‌ಗಳನ್ನು ತರಿಸಲು ವ್ಯವಸ್ಥೆ ಮಾಡಿದರು. ಸಿಲಿಂಡರ್‌ಗಳನ್ನು ತರಲು ವಾಹನಗಳು ಸಿಗದಾದಾಗ ಸಶಸ್ತ್ರ ಸೀಮಾ ದಳದ (ಎಸ್‌ಎಸ್‌ಬಿ) ಮುಖ್ಯಸ್ಥರನ್ನು ಸಂಪರ್ಕಿಸಿ, ಮಿಲಿಟರಿ ಟ್ರಕ್‌ನ ಸೇವೆಯನ್ನೂ ಪಡೆದುಕೊಂಡರು. ಟ್ರಕ್ ಜತೆಗೆ 12 ಜವಾನರನ್ನೂ ಎಸ್‌ಎಸ್‌ಬಿ ಕಳುಹಿಸಿಕೊಟ್ಟಿತು. ಈ ಎಲ್ಲ ವಿವರಗಳನ್ನೂ ಖಾನ್ ವಿವರವಾಗಿ ದಾಖಲಿಸಿದ್ದಾರೆ.

ಸಿಲಿಂಡರ್ ತರಿಸಿಕೊಳ್ಳಲು ನಡೆಸಿದ ಎಲ್ಲ ಯತ್ನಗಳ ನಡುವೆ ಮಾರನೇ ದಿನದ ಬೆಳಗಿನ ಹತ್ತರೊಳಗೆ 23 ಮಕ್ಕಳು, 18 ಹಿರಿಯರು ಪ್ರಾಣವಾಯು ಇಲ್ಲದೆ ಪ್ರಾಣ ತೆತ್ತರು. ಜಿಲ್ಲಾಧಿಕಾರಿ ರಾಜೀವ್ ರೌತೇಲಾ ಅವರು ಆಗಸ್ಟ್ 11ರಂದು ಖಾನ್ ಅವರನ್ನು ಸಂಪರ್ಕಿಸಿ, ಘಟನೆಯ ಸಂಪೂರ್ಣ ಮಾಹಿತಿ ಪಡೆದಿದ್ದಲ್ಲದೆ ಸಿಲಿಂಡರ್‌ಗಳನ್ನು ಪೂರೈಸುವ ಭರವಸೆ ನೀಡಿದರು. ಮೊದಲು ಸಿಲಿಂಡರ್ ಪೂರೈಸಲು ನಿರಾಕರಿಸಿದ್ದ ಜಿಡಾ ಸಂಸ್ಥೆಯು ತಾತ್ಕಾಲಿಕವಾಗಿ ಆಮ್ಲಜನಕದ ವ್ಯವಸ್ಥೆ ಮಾಡಿತು. ಬಳಿಕ ಫೈಜಾಬಾದ್‌ನಿಂದಲೂ ಸಿಲಿಂಡರ್‌ಗಳನ್ನು ಹೊತ್ತ ಟ್ರಕ್ ಬಂತು. ವಿಷಯ ಮಾಧ್ಯಮಗಳಿಗೆ ಗೊತ್ತಾಗಿ, ವರದಿಗಾರರು ಆಸ್ಪತ್ರೆಗೆ ಮುತ್ತಿಗೆ ಹಾಕಿದರು. ಖಾನ್ ಅವರ ಪ್ರಯತ್ನಗಳ ಕುರಿತು ಗೊತ್ತಾಗಿ, ಅವರನ್ನು ಹೆಚ್ಚಿನ ಪ್ರಾಣಹಾನಿ ತಪ್ಪಿಸಿದ ಹೀರೊ ಎಂದು ಕೊಂಡಾಡಿ ಬರೆದರು.

11ನೇ ಪುಟಕ್ಕೆ...

ಪ್ಲೂಟೊ 'ತೋರಿಸಿದ' ಕೇತ್ಕರ್ 'ನಕ್ಷತ್ರ'

ಇಂದಿಗೆ ನೂರು ವರ್ಷಗಳ ಹಿಂದೆಯೇ ಧಾರವಾಡದ ಶಿಕ್ಷಕ ವೆಂಕಟೇಶ ಬಾಪೂಜಿ ಕೇತ್ಕರ್ ಅವರು ಪ್ಲೂಟೊ ಗ್ರಹದ ಸ್ಥಾನ ವಿವರಗಳನ್ನು ಪ್ರಕಟಿಸಿದ್ದರು. ಅವರ ಲೆಕ್ಕ, ಅಮೆರಿಕನ್ನರ ಲೆಕ್ಕಕ್ಕಿಂತ ನಿಖರವಾಗಿತ್ತು. ಆದರೆ ಯಾರ ಮನ್ನಣೆಯನ್ನೂ ಪಡೆಯದ ಅವರ ಈ ಆವಿಷ್ಕಾರ ಭಾರತೀಯ ಖಗೋಳ ವಿಜ್ಞಾನದ ಇತಿಹಾಸದಲ್ಲಿಯೂ ಎಲ್ಲೂ ದಾಖಲಾಗದೆ ಹೋಯಿತು.



ಕಲೆ: ಗುರು ನಾವಳ್ಳಿ

ಬಿ.ಎಸ್.ಶೈಲಜಾ

ಈಗ್ಗೆ ಸುಮಾರು ನೂರು ವರ್ಷಗಳ ಹಿಂದೆ ಆಲೂರು ವೆಂಕಟರಾಯರು 'ಜಯ ಕರ್ನಾಟಕ' ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದರ ಪಾತ್ರ ಬಹು ದೊಡ್ಡದು. ಅದೃಷ್ಟವಶಾತ್ ಅದರ ಕೆಲವು ಸಂಪುಟಗಳು ಈಗಲೂ ನೋಡಲು ಲಭ್ಯವಿವೆ. ಹಾಗೊಂದು ಸಂಚಿಕೆಯಲ್ಲಿ 'ಅಧಿಕಮಾಸವೂ 33 ಬಾಗಿಣಗಳೂ' ಎಂಬುದೊಂದು ಲೇಖನವೂ ಕಣ್ಣಿಗೆ ಬಿದ್ದಿತು. ಇದು ವಾಸ್ತವದಲ್ಲಿ ಒಂದು ಸಂಭಾಷಣಾ ಪ್ರಧಾನವಾದ ಬರಹ; ನಾಟಕ ಎನ್ನಬಹುದು. ಅಧಿಕಮಾಸದಲ್ಲಿ ಬಾಗಿನ ಕೊಡುವುದೇತಕ್ಕೆ ಎಂಬುದನ್ನು ವಿವರಿಸಲು ಹೊರಟು ಅಧಿಕ ಮಾಸಗಳ ಖಗೋಳ ಕಲ್ಪನೆಯನ್ನೇ ವಿವರಿಸಿರುವ ಅತ್ಯುತ್ತಮ ಬರಹ. ಒಂದು ಚಿತ್ರವನ್ನೂ ರಚಿಸಿ ಬಹಳ ಅಚ್ಚುಕಟ್ಟಾಗಿ ವಿವರಿಸಲಾಗಿದೆ.

'ಜಯಕರ್ನಾಟಕ' ಪತ್ರಿಕೆಯ 1923ರ ಜೂನ್ 28ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಲೇಖನದಲ್ಲಿ ಟಿಳಕ ಸುರಪುರ, ರಿತ್ತಿ ಎಂಬ ಹೆಸರುಗಳ ಜೊತೆಗೆ ಕೇತಕೀ ಪಂಚಾಂಗ ಎಂಬ ಹೆಸರನ್ನು ಓದಿದ ನನಗೆ ಇದರ ಮೂಲ ಹುಡುಕುವ ಪ್ರಶ್ನೆ ಎದುರಾಯಿತು. ಆಗ ಕೇತ್ಕರ್ ಎಂಬ ಉತ್ತರ ಸಿಕ್ಕಿತು. ಖಭೌತ ವಿಜ್ಞಾನಿ ಜಯಂತ್ ನಾರ್ಳೀಕರ್ ಅವರು ತಮ್ಮ ಒಂದು ಉಪನ್ಯಾಸದಲ್ಲಿ 'ಪ್ಲೂಟೊ ಗ್ರಹದ ಸ್ಥಾನವನ್ನು ಬಹಳ ನಿಖರವಾಗಿ ಲೆಕ್ಕ ಹಾಕಿ ಹೇಳಿದ್ದವರು ವೆಂಕಟೇಶ ಬಾಪೂಜಿ ಕೇತ್ಕರ್' ಎಂದು ಹೇಳಿದ್ದರು. ಆಗ ಇವರ ಬಗ್ಗೆ ಆಸಕ್ತಿ ಮೂಡಿತು.

ಕೇತ್ಕರ್ ಅವರು ಗಣಿತ ಮತ್ತು ಖಗೋಳ ಶಾಸ್ತ್ರದಲ್ಲಿ ಪರಿಣತಿ ಪಡೆದಿದ್ದವರು. ಸಂಸ್ಕೃತ ಮಾತ್ರವಲ್ಲದೆ ಮರಾಠಿ, ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ್ದರು. ಯೂರೋಪಿಯನ್ ಪದ್ಧತಿಯನ್ನೂ ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಭಾರತೀಯ ಪಂಚಾಂಗಕ್ಕೂ ಅದಕ್ಕೂ ಹೊಂದಿಕೆಯಾಗುವಂತೆ ಅದರ ಪರಿಷ್ಕರಣೆ ಮಾಡಿದ್ದರು; ಕೇತಕೀ ಪಂಚಾಂಗ ಎಂಬ ಹೆಸರಿನಿಂದ ಅದು ಭಾರತದಲ್ಲಿ ಪ್ರಖ್ಯಾತವಾಗಿತ್ತು. ಮೈಸೂರಿನಲ್ಲಿ 1918ರಲ್ಲಿ ಚಿಕ್ಕಣ್ಣ ಎಂಬುವರು ರಚಿಸಿ ಪ್ರಕಟಿಸಿದ ಒಂದು ಪಂಚಾಂಗ ಇವರ ವಿಧಾನವನ್ನೇ ಅನುಸರಿಸಿ ಈ ತಿದ್ದುಪಡಿಯ ಅನ್ವಯ ಲೆಕ್ಕಗಳು ನಿಖರವಾಗಿವೆ ಎಂದು ನಿರೂಪಿಸಿತ್ತು. ಮಹಾರಾಷ್ಟ್ರ ಮತ್ತು ತೆಲಂಗಾಣದಲ್ಲೂ ಪ್ರಚಲಿತವಾಗಿತ್ತು.

ಯೂರೋಪಿಯನ್ ಖಗೋಳ ವಿಜ್ಞಾನವನ್ನೂ ತಿಳಿದಿದ್ದ ಅವರು ಅನೇಕ ಕ್ಲಿಷ್ಟ ಸಮಸ್ಯೆಗಳ ಕುರಿತು ಸರ್ ಸೈಮನ್ ನ್ಯೂಕೂಂಬ್ ಮೊದಲಾದ ವಿಖ್ಯಾತ ಗಣಿತಜ್ಞರೊಡನೆ ಪತ್ರವ್ಯವಹಾರ ನಡೆಸುತ್ತಿದ್ದರು. ಕೇತ್ಕರ್ ಅವರು ಕರ್ನಾಟಕದ ನರಗುಂದದಲ್ಲಿ ಜನಿಸಿದರು. ಸಣ್ಣ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು 3 ರೂಪಾಯಿ ವಿದ್ಯಾರ್ಥಿ ವೇತನದಿಂದ ಬಾಗಲಕೋಟೆ ಮತ್ತು ಬೆಳಗಾವಿಯಲ್ಲಿ ಶಿಕ್ಷಣ ಪಡೆದರು. ಬಾಂಬೆ ಸರ್ಕಾರಕ್ಕೆ ಸೇರಿದ್ದ ಕರ್ನಾಟಕದ ಈ ಭಾಗದ ಬೇರೆ ಬೇರೆ ಊರುಗಳಲ್ಲಿ ಶಾಲಾ ಶಿಕ್ಷಕರಾದರು. ಜೊತೆಯಲ್ಲಿಯೇ ಖಗೋಳ ಮತ್ತು ಗಣಿತದ ಅಧ್ಯಯನವನ್ನೂ ಮುಂದುವರಿಸಿದರು. ಸೈದ್ಧಾಂತಿಕ ಮಾಹಿತಿ ಅವರಲ್ಲಿತ್ತು. ವೀಕ್ಷಣೆಗಳ ಕುರಿತು ಅಂದಿನ ದಿನಗಳ ಆಗುಹೋಗುಗಳನ್ನೂ ತಿಳಿದುಕೊಂಡಿದ್ದರು.

ಕೇತ್ಕರ್ ಅವರು ಒಂಬತ್ತನೆಯ ಗ್ರಹದ ಬಗ್ಗೆ 100 ವರ್ಷಗಳ ಹಿಂದೆಯೇ ಮುನ್ಸೂಚನೆ ನೀಡಲು ಬಳಸಿದ್ದ ತರ್ಕ ಬಹಳ ಸ್ವಾರಸ್ಯಕರವಾಗಿದೆ. ಆಗ ಯುರೇನಸ್ ಮತ್ತು ನೆಪ್ಚ್ಯೂನ್ ಎರಡರ ಸ್ಥಾನಗಳಲ್ಲಿ ಸಣ್ಣ ಪಲ್ಲಟಗಳನ್ನು ಗಮನಿಸಿ ಅದನ್ನು ವಿವರಿಸಲು ಹೊಸ ಗ್ರಹವೊಂದರ ಹುಡುಕಾಟ ನಡೆಯುತ್ತಿತ್ತು. ಇದರ ಹಿನ್ನೆಲೆಯಲ್ಲಿ ಅಡಗಿದ್ದ ತರ್ಕ ಹೀಗಿದೆ. ವಿಲಿಯಂ ಹರ್ಷೆಲ್, ಯುರೇನಸ್ ಗ್ರಹವನ್ನು ಕಂಡುಹಿಡಿದ ಮೇಲೆ ಅದರ ಸ್ಥಾನ ವಿವರಗಳನ್ನು ದೂರದರ್ಶಕದ ಸಹಾಯದಿಂದ ದಾಖಲಿಸುತ್ತಾ ಬಂದ ವೀಕ್ಷಕರಿಗೆ ಅದು ಲೆಕ್ಕ ಸೂಚಿಸಿದ ಸ್ಥಳದಿಂದ ಸ್ವಲ್ಪ ಮುಂದೆಯೇ ಇರುತ್ತಿದ್ದುದು ಒಂದು ತಲೆನೋವಾಗಿತ್ತು. ಕೆಲವು ವರ್ಷಗಳ ನಂತರ ಲೆಕ್ಕ ಹಾಕಿದ ಸ್ಥಳದಿಂದ ಅದು ಹಿಂದೆ ಬೀಳತೊಡಗಿತು. ಈ ಪಲ್ಲಟದಿಂದ ನೆಪ್ಚ್ಯೂನ್ ಗ್ರಹದ ಅಸ್ತಿತ್ವವನ್ನು ಊಹಿಸಿ ಅದನ್ನು ಕಂಡುಹಿಡಿದದ್ದು ಇತಿಹಾಸ.

ಈಗ ಯುರೇನಸ್ ಮತ್ತು ನೆಪ್ಚ್ಯೂನ್‌ಗಳೆರಡೂ ಪಲ್ಲಟವನ್ನು ತೋರಿಸತೊಡಗಿದ್ದರಿಂದ ಇನ್ನೂ ಒಂದು ಗ್ರಹ ಇರಬಹುದು ಎಂದು ಅದೇ ವಿಧಾನವನ್ನು ಅನುಸರಿಸಿ ಲೆಕ್ಕ ಮಾಡಲಾಗುತ್ತಿತ್ತು. ಅಮೆರಿಕದ ಎಡ್ವರ್ಡ್ ಪಿಕರಿಂಗ್ ಮತ್ತು ಪರ್ಸಿವೆಲ್ ಲೊವೆಲ್ ಇವರು ಈ ಲೆಕ್ಕಗಳನ್ನು ಮಾಡಿ ಒಂಬತ್ತನೆಯ ಗ್ರಹದ ಮುನ್ಸೂಚನೆ ನೀಡಿದ್ದರು. ಅದರ ಅನುಸಾರ ದೊಡ್ಡ ದೂರದರ್ಶಕಗಳಿಂದ ಹುಡುಕಾಟ ನಡೆಯುತ್ತಿತ್ತು. ಕೇತ್ಕರ್ ಅವರು ಹೊಸದೊಂದು ವಿಧಾನವನ್ನು ಬಳಸಿದರು.

12ನೇ ಪುಟಕ್ಕೆ...



ಜುರಿಜುರಿ ಕಾಲ್ಮರಿ

ರಶ್ಮಿ ಎಸ್.

ನಾಗವಲ್ಲಿಯ ಕಾಡಿಗೆ ಕಪ್ಪು ಕಣ್ಣುಗಳು, ವಿಷ್ಣುವರ್ಧನ್ ಅವರ ಚೊರಚೊರ ಸದ್ದು ಮಾಡುವ ನಡಿಗೆಯ ಚಡಾವುಗಳು.

ಹುಬ್ಬಳ್ಳಿ–ಧಾರವಾಡದ ಸುತ್ತ ಈ ಚೊರ ಚೊರ ಸದ್ದು ಕೇಳಿದ್ರ ಸಾಕು, ಗೌಡರು ಬಂದರು ಅಂತಾರ.

ಒಂದು ಕಾಲಕ್ಕ ಜಾತಿ ದ್ಯೋತಕವಾಗಿದ್ವು ಈ ಜುರಕಿ ಕಾಲ್ಮರಿಗಳು.

ಜುರಿಜುರಿ ಸದ್ದು ಬರೂದ್ರಿಂದ ಆ ಹೆಸರು ಬಂತು.

ಕಾಲು ಮರಿ (ಮುಚ್ಚುವುದರಿಂದ) ಮಾಡುವುದರಿಂದ ಚಪ್ಪಲಿಗೆ ಕಾಲ್ಮರಿ ಅಂತ ಕರೀತಾರ.

ಈ ಕಾಲ್ಮರಿಯ ಬೆನ್ನು ಹತ್ತಿ ಹೋದಾಗ ನಾವು ತಲುಪಿದ್ದು, ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಮಿಶ್ರಿಕೋಟಿಗೆ. ಇಲ್ಲಿಯ ಶ್ರೀಧರ್ ದೊಡ್ಡವಾಡ ಮತ್ತು ಅವರ ಚಿಕ್ಕಪ್ಪ ಅವರ ಎರಡೇ ಎರಡು ಕುಟುಂಬಗಳು ಈ ಚಪ್ಪಲಿಗಳನ್ನು ಸಿದ್ಧಪಡಿಸ್ತಾವ.

ಕೊಲ್ಹಾಪುರಿ ಚಪ್ಪಲಿಯಂತೆ ಕಂಡರೂ ಈ ಕಾಲ್ಮರಿಗಳ ಗತ್ತೇ ಗತ್ತು. ನಾವು ಜುರುಜುರು ಸದ್ದು ಬರುವ ಚಪ್ಪಲಿ ಕೊಡಿ ಅಂತ ಪಡೆದು, ಅಲುಗಾಡಿಸಿ ನೋಡಿದೆವು. ಕೈಯಿಂದ ಒತ್ತಿ ನೋಡಿದೆವು... ಯಾವ ಸದ್ದೂ ಇಲ್ಲ.

13ನೇ ಪುಟಕ್ಕೆ...

ಜಟಾಯು ಇಳಿದ ಜಟಂಗಿ ಏರಿ...

ಚಿತ್ರ-ಲೇಖನ: ಜಿ.ನಾಗೇಂದ್ರ ಕಾವೂರು


ಪ್ರವಾಸ


ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕು, ಕೈಮಗ್ಗಗಳಿಂದ ತಯಾರಾಗುವ ರೇಷ್ಮೆ ಸೀರೆಗಳಿಗೆ ಖ್ಯಾತಿ ಪಡೆದಿರುವಂತೆಯೇ, ದೇವಸಮುದ್ರ ಗ್ರಾಮದಲ್ಲಿರುವ ಪುರಾಣ ಪ್ರಸಿದ್ಧ ಜಟಂಗಿ ರಾಮೇಶ್ವರ ಬೆಟ್ಟ, ಬ್ರಹ್ಮಗಿರಿ ಬೆಟ್ಟ ಹಾಗೂ ಚಕ್ರವರ್ತಿ ಅಶೋಕನ ಶಾಸನವಿರುವ ಅಶೋಕ ಸಿದ್ದಾಪುರದಿಂದ ಐತಿಹಾಸಿಕವಾಗಿಯೂ ಪ್ರಸಿದ್ಧಿ ಪಡೆದಿದೆ. ಚಿತ್ರದುರ್ಗ ಜಿಲ್ಲೆಯ ಅತಿ ಎತ್ತರದ ಬೆಟ್ಟಗಳ ಶ್ರೇಣಿಯೆಂದು ಪರಿಗಣಿಸಲಾಗಿರುವ, ಇಲ್ಲಿನ ಬೆಟ್ಟಗಳನ್ನು ಚಿಕ್ಕ ಜಟಂಗಿ ಮತ್ತು ದೊಡ್ಡ ಜಟಂಗಿ ಬೆಟ್ಟಗಳೆಂದು ಕರೆಯುತ್ತಾರೆ. ಚಿಕ್ಕ ಜಟಂಗಿ ಬೆಟ್ಟದ ಮೇಲೆ ನೆಲೆನಿಂತಿರುವ ಶ್ರೀರಾಮೇಶ್ವರ ದೇವಾಲಯದಿಂದಾಗಿ, 'ಜಟಂಗಿ ರಾಮೇಶ್ವರ ಬೆಟ್ಟ' ಎಂದೇ ಇದು ಹೆಸರುವಾಸಿಯಾಗಿದೆ.

ಜಟಂಗಿ ರಾಮೇಶ್ವರ ದೇವಾಲಯವು ಪೌರಾಣಿಕ ಹಿನ್ನೆಲೆಯನ್ನು ಹೊಂದಿದ್ದು, ಸೀತಾಪಹರಣ ಘಟನೆಯೊಂದಿಗೆ ನಂಟು ಹೊಂದಿದೆ. ರಾವಣ ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಅಪಹರಿಸಿಕೊಂಡು ಹೋಗುವ ಸಮಯದಲ್ಲಿ ಜಟಾಯು ಪಕ್ಷಿ ಹೋರಾಟ ನಡೆಸುತ್ತದೆ. ಇದೇ ಸಮಯದಲ್ಲಿ ಪಕ್ಷಿಯ ರೆಕ್ಕೆಯನ್ನು ರಾವಣ ಕತ್ತರಿಸುತ್ತಾನೆ. ಗಾಯಗೊಂಡ ಜಟಾಯು ಪಕ್ಷಿ ಬೆಟ್ಟದ ಮೇಲೆ ಬೀಳುತ್ತದೆ. ಕೆಲವು ದಿನಗಳ ನಂತರ ಶ್ರೀರಾಮಚಂದ್ರನು ಸೀತೆಯನ್ನು ಹುಡುಕಿಕೊಂಡು ಇದೇ ಮಾರ್ಗದಲ್ಲಿ ಬಂದಾಗ, ರಾವಣ, ಸೀತೆಯನ್ನು ಅಪಹರಿಸಿಕೊಂಡು ಹೋದ ಮಾರ್ಗವನ್ನು ಜಟಾಯು ಪಕ್ಷಿ ಶ್ರೀರಾಮನಿಗೆ ತಿಳಿಸುತ್ತದೆ. ಆ ಪಕ್ಷಿಯ ಭಕ್ತಿಗೆ ಮೆಚ್ಚಿದ ರಾಮನು ಅದಕ್ಕೆ ಮೋಕ್ಷವನ್ನು ಕರುಣಿಸುತ್ತಾನೆ ಹಾಗೂ ಅದರ ಕೋರಿಕೆಯಂತೆ ಬೆಟ್ಟದಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ ಎಂದು ಪ್ರತೀತಿ.

> ಕೋಟೆ ನಾಡು ಚಿತ್ರದುರ್ಗದ ಮೊಳಕಾಲ್ಮುರು ತಾಲ್ಲೂಕು ಕೈಮಗ್ಗಗಳಿಗಷ್ಟೇ ಅಲ್ಲ, ಪುರಾಣ ಪ್ರಸಿದ್ಧ ಜಟಂಗಿ ರಾಮೇಶ್ವರ ಬೆಟ್ಟ, ಬ್ರಹ್ಮಗಿರಿ ಬೆಟ್ಟದಿಂದಲೂ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಜಟಂಗಿ ಬೆಟ್ಟದ ಮೇಲಿರುವ ಜಟಾಯು ಸಮಾಧಿ ಪೌರಾಣಿಕ ಕಥೆ ನೆನಪಿಸುತ್ತದೆ...


ದೊಡ್ಡ ಜಟಂಗಿ ಬೆಟ್ಟದ ಮೇಲೆ ಜಟಾಯು ಸಮಾಧಿ


ಸಾಮ್ರಾಟ ಅಶೋಕ ಚಕ್ರವರ್ತಿಯ ಶಿಲಾಶಾಸನವಿರುವ ಬಂಡೆ


ದೇವಸ್ಥಾನದ ಸುತ್ತಮುತ್ತಲಿರುವ ಕೆತ್ತನೆಗಳು

ಅನಾಯಾಸವಾಗಿ ಜಟಂಗಿ ಬೆಟ್ಟವನ್ನೇರಲು ಮೆಟ್ಟಿಲುಗಳು ಹಾಗೂ ನಡುವೆ ಕಬ್ಬಿಣದ ಪೈಪುಗಳ ರೇಲಿಂಗ್ ಅಳವಡಿಸಲಾಗಿದೆ. ಬೆಟ್ಟದ ತುದಿಯಲ್ಲಿ ಸುತ್ತಲೂ ಕಲ್ಲಿನ ಕೋಟೆಯನ್ನು ನಿರ್ಮಿಸಲಾಗಿದ್ದು, ಒಳ ಹೋಗುತ್ತಿದ್ದಂತೆ ಮೆಟ್ಟಿಲುಗಳು ಕಾಣಸಿಗುತ್ತವೆ. ಮೆಟ್ಟಿಲುಗಳ ಇಕ್ಕೆಲಗಳಲ್ಲಿರುವ ಪಟ್ಟಿಕೆಗಳಲ್ಲಿ ಒಂದು ಕಡೆ ಆನೆಗಳ ಸಾಲು ಹಾಗೂ ಮತ್ತೊಂದು ಕಡೆ ಸುಂದರವಾದ ಹೂವಿನ ಸಾಲಿನ ಕೆತ್ತನೆಗಳಿವೆ. ಮೆಟ್ಟಿಲುಗಳನ್ನೇರಿ ಮುಂದೆ ಸಾಗಿದಂತೆ, ಮಹಾದ್ವಾರವಿದ್ದು ಇಕ್ಕೆಲಗಳಲ್ಲಿ ಈಶ್ವರನ ಪುಟ್ಟ ಗುಡಿಗಳಿವೆ. ಇಲ್ಲಿಂದಲೇ ಜಟಂಗಿ ರಾಮೇಶ್ವರ ದೇವಾಲಯದ ಬಂಗಾರ ವರ್ಣದ ಗೋಪುರ ಕಾಣಿಸುತ್ತದೆ.

ದೇವಾಲಯದ ಪ್ರಾಂಗಣವನ್ನು ತಲುಪುತ್ತಿದ್ದಂತೆ ಹಲವಾರು ಉಪ ದೇಗುಲಗಳ ದರ್ಶನವಾಗುತ್ತದೆ. ಸೂರ್ಯನಾರಾಯಣ, ಗಣೇಶ ದೇವರುಗಳ ಗುಡಿಗಳಲ್ಲದೆ, ಈಶ್ವರನ ವಿವಿಧ ರೂಪಗಳಾದ ವೀರಭದ್ರ, ಮಹಾಬಲೇಶ್ವರ, ಚಂದ್ರಮೌಳೀಶ್ವರ, ಚಂಡಿಕೇಶ್ವರ, ಆರ್ಕೇಶ್ವರ, ಜಂಬುಕೇಶ್ವರ, ವಿರೂಪಾಕ್ಷೇಶ್ವರ, ಕಾಲಭೈರವ, ಸೋಮೇಶ್ವರ ಮೊದಲಾದ ದೇವರುಗಳ ಗುಡಿಗಳಿವೆ. ಪುಟ್ಟ ಗುಡಿಗಳ ಮಧ್ಯಭಾಗದಲ್ಲಿ ರಾಮೇಶ್ವರ ದೇವಾಲಯವಿದ್ದು ಗರ್ಭಗೃಹ, ಅಂತರಾಳ, ನವರಂಗಗಳಿರುವ ದೇವಾಲಯದ ಮುಂಭಾಗದಲ್ಲಿ ಸುಮಾರು 40 ಅಡಿ ಎತ್ತರವುಳ್ಳ ಏಕಶಿಲಾ ದೀಪಸ್ತಂಭವಿದೆ. ದೇವಾಲಯದ ಮುಂಭಾಗದಲ್ಲಿರುವ ಸೂರ್ಯನಾರಾಯಣ ಗುಡಿಯ ಇಕ್ಕೆಲಗಳಲ್ಲಿ ನಾಗರ ಕಲ್ಲುಗಳು ಹಾಗೂ ಶಿಲಾಶಾಸನಗಳಿವೆ.

ದೇವಾಲಯದ ಎಡ ಹಿಂಬದಿಯಲ್ಲಿ ಸೀತಾಕೊಳ, ತಾವರೆ ಕೊಳ ಹಾಗೂ ಏಕಾಂತ ತೀರ್ಥವೆಂಬ ನೀರಿನ ಕೊಳಗಳು ಹಾಗೂ ಶಿಲ್ಪಗಳ ಅವಶೇಷಗಳನ್ನೂ ಕಾಣಬಹುದಾಗಿದೆ, ಕೊಳದ ಬಳಿ ಆರು ಹೆಜ್ಜೆಯ ಗುರುತುಗಳಿದ್ದು, ಇವುಗಳನ್ನು ಜಟಾಯು ಪಕ್ಷಿ ಪಾದದ ಗುರುತುಗಳೆಂದು ಸ್ಥಳೀಯರು ಹೇಳುತ್ತಾರೆ.

ಪ್ರಾಚೀನ ಕಾಲದಿಂದಲೂ ಈ ಪರಿಸರದ ಜನರು ಜಟಂಗಿ ರಾಮೇಶ್ವರರನ್ನು ಪೂಜಿಸುತ್ತಿದ್ದ ದಾಖಲೆಗಳಿವೆ. ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ವಿವಿಧ ಅರಸ ಸಾಮಂತರು ದಾನದತ್ತಿ ನೀಡಿದ ಹಾಗೂ ಜೀರ್ಣೋದ್ಧಾರ ಮಾಡಿದ ವಿವರಗಳಿವೆ. ಶಾಸನಗಳಲ್ಲಿ ಬಲ್ಗೋಡಿ ತೀರ್ಥದ ಶ್ರೀರಾಮೇಶ್ವರ, ಜಟಾಂಗಿ ರಾಮಯದೇವ, ಜಟಂಗೆ ರಾಮಯದೇವ, ಜೆಟೋಗಿ ರಾಮಯದೇವ ಮಂತಾದ ಹೆಸರುಗಳ ಉಲ್ಲೇಖಗಳಿವೆ.

ಬಂಡೆಯ ಮೇಲೆ ಪಾಳಿ ಭಾಷೆಯಲ್ಲಿ ಕೆತ್ತಲಾದ ಸಾಮ್ರಾಟ ಅಶೋಕ ಚಕ್ರವರ್ತಿಯ ಶಿಲಾಶಾಸನವಿದ್ದು, ಇದರ ಸುತ್ತಲೂ ಕಟಕಟೆಯನ್ನು ನಿರ್ಮಿಸಲಾಗಿದೆ. ವೀರಗಲ್ಲು ಮುಂತಾದ ಚಾರಿತ್ರಿಕ ಕುರುಹುಗಳೂ ಬೆಟ್ಟದ ಮೇಲಿವೆ. ಈ ಹಿಂದೆ ಶ್ರೀರಾಮೇಶ್ವರ ದೇವಾಲಯವನ್ನು ಇಟ್ಟಿಗೆಗಳಿಂದ ನಿರ್ಮಿಸಲಾಗಿದ್ದು, ದೇವಾಲಯ ಶಿಥಿಲಾವಸ್ಥೆಯಲ್ಲಿದ್ದಾಗ ಕಲ್ಲುಗಳಿಂದ ನಿರ್ಮಿಸಲಾಯಿತಂತೆ.

ಚಿಕ್ಕ ಮತ್ತು ದೊಡ್ಡ ಜಟಂಗಿ ಬೆಟ್ಟದ ಮೇಲಿಂದ ಪರಿಸರದ ಸೊಬಗನ್ನು ಆಸ್ವಾದಿಸಬಹುದು. ಬೆಟ್ಟಕ್ಕೆ ಹೊಂದಿಕೊಂಡಿರುವ ದೊಡ್ಡ ಜಟಂಗಿ ಬೆಟ್ಟ, ಕೆಳಭಾಗದಲ್ಲಿರುವ ಎರಡು ಪುಟ್ಟ ಬೆಟ್ಟಗಳು, ಹೊಲ, ಗದ್ದೆಗಳು, ದೂರದಲ್ಲಿ ಕಾಣುವ ರಾಂಪುರದ ಪರಿಸರ, ಕೆರೆ, ಅಂಕುಡೊಂಕಾಗಿ ಹಾವಿನಂತೆ ಕಾಣುವ ರಸ್ತೆಗಳು, ನೀರಿನಿಂದ ತುಂಬಿರುವ ಹಳ್ಳಗಳು ಮನಸಿಗೆ ಮುದನೀಡುತ್ತವೆ.

ಜಟಂಗಿ ರಾಮೇಶ್ವರ ಬೆಟ್ಟವನ್ನು ಹೊಂದಿಕೊಂಡು ಜಟಾಯು ಪಕ್ಷಿಯ ಸಮಾಧಿಯಿರುವ ದೊಡ್ಡ ಜಟಂಗಿ ಬೆಟ್ಟವಿದೆ. ಬೆಟ್ಟವನ್ನೇರಲು ಮೆಟ್ಟಿಲುಗಳಿಲ್ಲದ ಕಾರಣ ಕಲ್ಲು ಬಂಡೆಗಳ ಮೇಲೆ ನಡೆದುಕೊಂಡು, ಕೆಲವು ಕಡೆ ತೆವಳಿಕೊಂಡು ಹೋಗಬೇಕಾಗುತ್ತದೆ. ಹೆಚ್ಚಾಗಿ ಚಾರಣಿಗರು ಮಾತ್ರ ಈ ಬೆಟ್ಟವನ್ನೇರುವ ಸಾಹಸ ಮಾಡುತ್ತಾರೆ. ಮಕ್ಕಳು ಮತ್ತು ಮಹಿಳೆಯರು ಬೆಟ್ಟವನ್ನೇರಲಾರರು. ಬೆಟ್ಟದ ತುದಿಯಲ್ಲಿ ಜಟಾಯು ಪಕ್ಷಿಯ ಸಮಾಧಿಯಿದ್ದು, ಮೇಲೆ ಕಲ್ಲಿನಿಂದ ಕೆತ್ತಲಾದ ಶಿವಲಿಂಗವನ್ನಿಡಲಾಗಿದೆ. ಸಮಾಧಿಯ ಸುತ್ತಲೂ ಕಲ್ಲಿನ ರಚನೆಯಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಶಿವಲಿಂಗವಿರುವ ಪುಟ್ಟ ಗುಡಿಯಿದೆ, ಸೋಮವಾರ ಹಾಗೂ ವಿಶೇಷ ದಿನಗಳಲ್ಲಿ ಭಕ್ತರು ಇಲ್ಲಿಗೆ ಬಂದು ಪೂಜೆ ಸಲ್ಲಿಸುತ್ತಾರೆ.

ಪ್ರತಿನಿತ್ಯ ಜಟಂಗಿ ರಾಮೇಶ್ವರ ದೇವಾಲಯಕ್ಕೆ ಪ್ರವಾಸಿಗರ ಭೇಟಿ ವಿರಳ. ಸೋಮವಾರ, ಅಮಾವಾಸ್ಯೆ ದಿನಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪೂಜೆ ಸಲ್ಲಿಸುತ್ತಾರೆ. ಯುಗಾದಿಯಂದು ಜರುಗುವ ಜಟಂಗಿ ರಾಮೇಶ್ವರ ಜಾತ್ರಾ ಮಹೋತ್ಸವದಂದು ಜಿಲ್ಲೆಯ ಭಕ್ತರಲ್ಲದೆ ಹೊರರಾಜ್ಯಗಳಿಂದಲೂ ಭಕ್ತರು ಆಗಮಿಸಿ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಮಹಾಶಿವರಾತ್ರಿ ಮತ್ತು ಕಾರ್ತಿಕ ಮಾಸದಲ್ಲಿ ದೇವರಿಗೆ ವಿಶೇಷ ಪೂಜೆಗಳನ್ನು ಮಾಡುತ್ತಾರೆ.

ಬಳ್ಳಾರಿಯಿಂದ 40 ಕಿ.ಮೀ, ಮೊಳಕಾಲ್ಮೂರುನಿಂದ 30 ಕಿ.ಮೀ ದೂರದಲ್ಲಿರುವ ಜಟಂಗಿ ರಾಮೇಶ್ವರ ಬೆಟ್ಟದ ಸಮೀಪಕ್ಕೆ ಸಾರ್ವಜನಿಕ ಸಾರಿಗೆ ವಿರಳವಾಗಿರುವುದರಿಂದ ಸ್ವಂತ ಅಥವಾ ಬಾಡಿಗೆ ವಾಹನಗಳಲ್ಲಿ ತೆರಳುವುದು ಉತ್ತಮ. ಹತ್ತಿರದಲ್ಲಿ ಹೋಟೆಲ್‌ಗಳು ಇಲ್ಲ. ನೀರು, ಊಟ, ತಿಂಡಿ ವ್ಯವಸ್ಥೆಯನ್ನು ಮಾಡಿಕೊಂಡು ಹೋಗುವುದು ಉತ್ತಮ.


ಬಂಗಾರ ವರ್ಣದ ಗೋಪುರದೊಂದಿಗೆ ಕಂಗೊಳಿಸುವ ಜಟಂಗಿ ರಾಮೇಶ್ವರ ದೇವಸ್ಥಾನ

ಮುನ್ನೋಟ 06-02-2022 ರಿಂದ 12-02-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಮುನ್ನಡೆಯನ್ನು ಕಾಣಬಹುದು. ಮರಮುಟ್ಟುಗಳ ವ್ಯಾಪಾರಸ್ಥರಿಗೆ ಹೆಚ್ಚಿನ ವ್ಯಾಪಾರವಾಗಿ ಉತ್ತಮ ಲಾಭವಿರುತ್ತದೆ. ನಿಮ್ಮ ಸತತ ಪ್ರಯತ್ನಗಳಿಗೆ ನಿಧಾನವಾದರೂ ಪ್ರತಿಫಲ ಸಿಗುತ್ತದೆ. ಮಾತನಾಡುವಾಗ ಒರಟುತನ ಖಂಡಿತ ಬೇಡ. ಆಶ್ಚರ್ಯಕರ ರೀತಿಯಲ್ಲಿ ಅನಿರೀಕ್ಷಿತ ಮೂಲದಿಂದ ಧನ ಸಹಾಯ ಒದಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಆತ್ಮಾಭಿಮಾನ ಸ್ವಲ್ಪ ಹೆಚ್ಚಿಗೆ ಇರುತ್ತದೆ. ಮನೆಯ ನವೀಕರಣ ಅಥವಾ ವಿಸ್ತರಣೆಯನ್ನು ಮಾಡುವ ಸಾಧ್ಯತೆ ಇದೆ. ನಿಮ್ಮ ವಿಚಾರಗಳನ್ನು ಸಾರ್ವಜನಿಕವಾಗಿ ಮಂಡಿಸಿ ಜನರ ಮನಸ್ಸನ್ನು ಗೆಲ್ಲುವಿರಿ. ಗೆಳೆಯರೊಂದಿಗೆ ಪ್ರವಾಸ ಹೋಗಲು ನಿರ್ಧಾರ ಮಾಡುವಿರಿ. ವಿದೇಶಿ ಕಮಿಷನ್ ವ್ಯವಹಾರ ಮಾಡುವವರಿಗೆ ಹೆಚ್ಚು ಸಂಪಾದನೆ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಿಲಾಸಿ ಜೀವನದಿಂದ ಸ್ವಲ್ಪಮಟ್ಟಿಗೆ ದೂರವಿರುವುದು ಬಹಳ ಒಳ್ಳೆಯದು. ಕಬ್ಬಿಣ ಮತ್ತು ಸಿಮೆಂಟ್ ತಯಾರಕರಿಗೆ ಮತ್ತು ಮಾರಾಟಗಾರರಿಗೆ ಉತ್ತಮ ವ್ಯವಹಾರವಿರುತ್ತದೆ. ಮನೆಯಲ್ಲಿ ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ದ್ರವರೂಪದ ವಸ್ತುಗಳನ್ನು ವ್ಯಾಪಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಸ್ನೇಹಿತರಿಂದ ವ್ಯವಹಾರದಲ್ಲಿ ಸಾಕಷ್ಟು ತಿಳಿವಳಿಕೆ ಮತ್ತು ಎಚ್ಚರಿಕೆ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಾಲ್ಕು ಕಾಲಿನ ಪ್ರಾಣಿಗಳನ್ನು ಸಾಕಾಣಿಕೆ ಮಾಡಿ ಮಾರುವವರಿಗೆ ಲಾಭವಿರುತ್ತದೆ. ಧನ ಆದಾಯವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಬಂಧು-ಮಿತ್ರರಿಂದ ಆಯೋಜಿಸಲ್ಪಟ್ಟ ಕುಟುಂಬ ಮಿಲನದಲ್ಲಿ ಭಾಗವಹಿಸುವಿರಿ. ತರಕಾರಿ ಮಾರಾಟ ಮಾಡುವವರಿಗೆ ಆದಾಯದಲ್ಲಿ ಸಾಕಷ್ಟು ಹೆಚ್ಚಳವಿರುತ್ತದೆ. ಪತ್ರಿಕೋದ್ಯಮಿಗಳಿಗೆ ಬಿಡುವಿಲ್ಲದ ಕೆಲಸವಿರುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಸ್ವಲ್ಪ ದಿನದ ಮಟ್ಟಿಗೆ ದೂರಪ್ರಯಾಣವನ್ನು ಮುಂದೂಡುವುದು ಒಳ್ಳೆಯದು. ವಿವಾಹ ಅಪೇಕ್ಷಿತರಿಗೆ ವಿವಾಹ ಸಂಬಂಧ ಒದಗುವ ಸಂದರ್ಭವಿದೆ. ವೃತ್ತಿಯಲ್ಲಿ ಸ್ಥಾನ ಬದಲಾವಣೆಯ ಸಾಧ್ಯತೆಯನ್ನು ಕಾಣಬಹುದು. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಹೆಚ್ಚಿನ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ಆಸ್ತಿ ಮಾರಾಟದಿಂದ ಹೆಚ್ಚಿನ ಲಾಭ ಬರುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಮಿತ್ರರಿಂದ ನಿಮ್ಮ ವ್ಯವಹಾರಗಳಿಗೆ ಸಾಕಷ್ಟು ಸಹಕಾರ ದೊರೆಯುತ್ತದೆ. ಆರ್ಥಿಕತೆಯು ಚೇತರಿಕೆಯತ್ತ ಸಾಗುತ್ತದೆ. ವೃತ್ತಿಯಲ್ಲಿ ಸ್ಥಾನಮಾನದ ಬಗ್ಗೆ ಹಿರಿಯ ಅಧಿಕಾರಿಗಳೊಡನೆ ಚರ್ಚೆ ಮಾಡುವಿರಿ. ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ವಿಸ್ತರಣೆಯಾಗುತ್ತದೆ. ಸ್ಥಗಿತಗೊಂಡಿರುವ ಅಧ್ಯಯನವನ್ನು ಈಗ ಪುನಃ ಆರಂಭಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಆರಕ್ಷಕ ಠಾಣೆಯಲ್ಲಿರುವ ಕೆಲವರಿಗೆ ಬಡ್ತಿ ದೊರೆಯಬಹುದು. ಕ್ರೀಡಾಪಟುಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಯಂತ್ರೋಪಕರಣಗಳ ಬಿಡಿ ಭಾಗಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಹಿರಿಯ ಆಡಳಿತಗಾರರು ತಮ್ಮ ಸುತ್ತಮುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಮುಂದುವರಿಯುವುದು ಉತ್ತಮ. ಉದ್ದಿಮೆಯ ಅಭಿವೃದ್ಧಿಗಾಗಿ ಕಾರ್ಮಿಕರ ಜೊತೆ ಮಾತುಕತೆ ನಡೆಸಿ ಉತ್ತಮ ಫಲಿತಾಂಶವನ್ನು ಕಾಣುವಿರಿ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ದೂರದೂರಿಗೆ ನಿಮ್ಮ ವ್ಯವಹಾರ ವಿಸ್ತರಣೆಯ ಸಲುವಾಗಿ ಮಾಡುವ ಪ್ರಯಾಣ ಉತ್ತಮ ಫಲಿತಾಂಶವನ್ನು ಕೊಡುತ್ತದೆ. ರಾಸಾಯನಿಕ ಮತ್ತು ಔಷಧಿ ವ್ಯಾಪಾರವನ್ನು ಮಾಡುವವರ ವ್ಯವಹಾರದಲ್ಲಿ ಹೆಚ್ಚಳವನ್ನು ಕಾಣಬಹುದು. ಚಿನ್ನದ ಆಭರಣಗಳನ್ನು ಮಾರಾಟ ಮಾಡುವವರ ವ್ಯವಹಾರ ಹೆಚ್ಚುತ್ತದೆ. ಭವಿಷ್ಯದ ಯೋಜನೆಗಳ ಬಗ್ಗೆ ಪೂರ್ವ ತಯಾರಿ ನಡೆಸುವಿರಿ. ದಿನಸಿ ವ್ಯಾಪಾರಿಗಳಿಗೆ ಸಾಕಷ್ಟು ವ್ಯಾಪಾರ ಇರುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಇಷ್ಟದಂತೆ ಕೆಲಸ ಕಾರ್ಯಗಳು ಆಗುವುದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಸದ್ಯದಲ್ಲೇ ಅನಿವಾರ್ಯವಾಗಿ ನಿಮ್ಮ ಸ್ನೇಹಿತನ ಬೆನ್ನಿಗೆ ನೀವು ನಿಲ್ಲಬೇಕಾದ ಸಂದರ್ಭ ಬರುತ್ತದೆ. ಕೃಷಿಕರ ಆದಾಯದಲ್ಲಿ ಸಾಕಷ್ಟು ಹೆಚ್ಚಳವನ್ನು ಕಾಣಬಹುದು. ಸ್ಥಿರ ಆಸ್ತಿಯ ವಿಷಯದಲ್ಲಿ ದೃಢ ನಿರ್ಧಾರವನ್ನು ತೆಗೆದುಕೊಳ್ಳುವಿರಿ. ಹಿರಿಯರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಾಣಿಜ್ಯ ಬೆಳೆಗಳನ್ನು ಬೆಳೆಯುವವರಿಗೆ ಹೆಚ್ಚಿನ ಹಣ ಬರುತ್ತದೆ. ಮಕ್ಕಳು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿಯನ್ನು ತೋರುವರು. ಸಂಶೋಧನಾ ವೃತ್ತಿಯಲ್ಲಿರುವವರಿಗೆ ಗೌರವಾದರಗಳು ದೊರಕುವ ಸಾಧ್ಯತೆಗಳಿವೆ. ನೌಕರಿಯಲ್ಲಿ ಶುಭ ಸಮಾಚಾರವನ್ನು ಕೇಳುವಿರಿ. ವಿಮಾನ ತಂತ್ರಜ್ಞರಿಗೆ ಬೇಡಿಕೆ ಇರುವುದು. ಸಹೋದ್ಯೋಗಿಗಳ ನೆರವಿನಿಂದ ಕೆಲಸ ಕಾರ್ಯಗಳು ಸುಗಮವಾಗಿ ಆಗುತ್ತವೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬದುಕಿಗೊಂದು ಹೊಸ ಆಯಾಮವನ್ನು ಕಂಡುಕೊಳ್ಳುವಿರಿ. ನಿಮ್ಮ ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಇರುತ್ತದೆ. ವ್ಯಾಜ್ಯವೊಂದರ ಇತ್ಯರ್ಥಕ್ಕಾಗಿ ಮಧ್ಯಸ್ಥಿಕೆಯನ್ನು ವಹಿಸಬೇಕಾದ ಅನಿವಾರ್ಯತೆ ಇರುತ್ತದೆ. ಹಣಕಾಸಿನ ಅಡಚಣೆಗಳು ಸ್ವಲ್ಪ ಕಡಿಮೆ ಅನಿಸುತ್ತವೆ. ಹಿರಿಯರಿಗಾಗಿ ಹೆಚ್ಚಿನ ಹಣ ಖರ್ಚು ಮಾಡುವಿರಿ. ತಾಯಿಯ ಜೊತೆ ಸಂಬಂಧ ಸುಧಾರಿಸಬಹುದು. ಹೈನುಗಾರಿಕೆ ಮಾಡುವವರಿಗೆ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ಅಪೇಕ್ಷಿತರಿಗೆ ಸಂತಾನ ಭಾಗ್ಯ ಆಗುವ ಸಾಧ್ಯತೆಗಳಿವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ದೈನಂದಿನ ವ್ಯವಹಾರಗಳಲ್ಲಿ ಪ್ರಗತಿಯನ್ನು ಕಾಣುವಿರಿ. ಆದಾಯಕ್ಕಿಂತ ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ವ್ಯವಹಾರಗಳಲ್ಲಿ ತಪ್ಪು ತೀರ್ಮಾನಗಳಿಂದ ವೈಮನಸ್ಯ ಉಂಟಾಗಬಹುದು. ಸ್ಟೇಷನರಿ ಮಾರಾಟಗಾರರಿಗೆ ಸಾಮಾನ್ಯ ವ್ಯಾಪಾರ ಇರುತ್ತದೆ. ದಿನಬಳಕೆ ವಸ್ತುಗಳ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಸಂಗಾತಿಯ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ. ಕಿರುಪ್ರವಾಸದ ಯೋಜನೆ ಒಂದನ್ನು ಹಾಕುವಿರಿ.

ಪದಬಂಧ 2725



ಮೇಲಿನಿಂದ ಕೆಳಕ್ಕೆ

1. ತೀವ್ರವಾದ ಸಿಟ್ಟು 4
2. ತಿಂಗಳ ಹದಿಮೂರನೆ ದಿನ 4
3. ಅಂಬು ಸಿಗದ ಅಡುಗೆಯವ 4
4. ಪುರಾಣದ ಪ್ರಸಂಗಗಳನ್ನು ಶ್ರೋತೃಗಳ ಮನಮುಟ್ಟುವಂತೆ ಹೇಳುವ ಕಲೆ 4
7. ಯುದ್ಧದಲ್ಲಿ ಮೈಗೆ ಪೆಟ್ಟು ತಾಗದಂತೆ ಕಾಪಾಡುವ ಲೋಹದಂಗಿ 5
8. ಕೊಡುವ ಕೈ ಒಂದೆಡೆ ರಕ್ಷಣೆಯ ಕೈ ಮತ್ತೊಂದೆಡೆ 5
9. ಸಿನಿಮಾಗಳಿಗಿಂತ ಹಿಂದೆ ದೃಶ್ಯ ಮಾಧ್ಯಮದ ವೇದಿಕೆ 5
10. ಅನುಕಂಪದಿಂದ ಮೂಡಿದ ಸಂತೋಷ 5
12. ವಾಯುವಿನಿಂದ ಉಂಟಾದ ಮೈ ಬಿಸಿ 4
13. ಒಂದರಲ್ಲೊಂದು ಸೇರಿಹೋಗುವ ಸಿದ್ಧಾಂತದ ಗುಣ 4
15. ತೊಂದರೆ ಕಿರಿಕಿರಿಯ ಪುನರಾವರ್ತನೆ ಕೆಳಗಿನಿಂದ ಮೇಲೆ 4
16. ಮಹಾಶಿವನೆಂಬ ದೈವ 5

ಎಡದಿಂದ ಬಲಕ್ಕೆ

1. ಕೈಯಿಂದ ಕೈಗೆ ಕೊಡುವ ಕಾಗದ 4
3. ಮೊಗಲರಿಗೆ ಪ್ರಿಯವಾದ ಸಿಹಿ ಅವರ ಹೆಸರನ್ನೊಳಗೊಂಡಿದೆ 4
5. ಆಸನ ಪ್ರಣಾಯಾಮ ಜ್ಞಾನದ ಭೋಧನೆ ಕಲಿಕೆ 5
6. ಅತಿ ಶ್ರೇಷ್ಠನಾದ ಈಶ್ವರ 5
7. ನಗರೀಕರಣದಿಂದ ಬೆಳೆದ ಸಮಾಜದ ಗುಣ ಲಕ್ಷಣ 5
11. ವರ ಪ್ರಸಾದಿಸುವವ ಆದಾಯದಲ್ಲಿ ಪಾಲು ಕೊಡುತ್ತಾನೆ 3
12. ಪತ್ರಿಕೆ, ಪುಸ್ತಕಗಳನ್ನು ಓದಲು ಪ್ರೇರಿಪಿಸುವ ಮಂದಿರ 5
14. ರೆಕ್ಕೆ ಬಿಚ್ಚಿ ಮೇಲೆ ಹಾರಲು ತಯಾರಾಗು 5
17. ಬಯಕೆಯ ವಾಸನೆಯ ಸುವಾಸಿತ ಗಿಡ 5
18. ಯುದ್ಧದ ವೀರ ಈ ಕಂಠೀರವ 4
19. ಕಳ್ಳನಿಗೆ ಸಿಗುವ ಚಿಕ್ಕ ಕಾರಣ 4

ಪದಬಂಧ ಉತ್ತರ -2724

ಮೇಲಿಂದ ಕೆಳಕ್ಕೆ

1. ಗಣರಾಜ್ಯೋತ್ಸವ 2.ಖಿನ್ನತೆ 3.ಕಡಪಾ 4. ಸಿಗಡಿಮೀನು 6.ಕರಮ 8.ವಧೂವರರು 10. ನಿರಹಂಕಾರ 12. ಯಮಗಂಡಕಾಲ 14.ಸಿಡುಕು 17.ಮಾಮರ 18.ಲಕ್ಷ್ಮೀಶ

ಎಡದಿಂದ ಬಲಕ್ಕೆ

1. ಗಗನಸಖಿ 3.ಕಸ್ತೂರಿ 4.ಸಿತಾರಾ 5.ತೆಲುಪಾಕ 7.ಜ್ಯೋತಿರ್ದೇವ 9.ಮನಿ 11.ವಸುದೇವತನಯ 13.ನುಸಿ 15.ರುದ್ರನಾಗಂ 16. ಕುಮಾರಿಲ 19. ಡಬರಿ 20.ಸಂಸಾರ 21.ಶರೀರಬಲ

ಕುರುಡು ಅಧಿಕಾರ ಕುಣಿಯುತಲಿತ್ತು...

10ನೇ ಪುಟದಿಂದ...

ಆಗಸ್ಟ್ 12ರಂದು ಆಸ್ಪತ್ರೆಗೆ ಧಾವಿಸಿದ ರಾಜ್ಯ ಆರೋಗ್ಯ ಸಚಿವ ಸಿದ್ಧಾರ್ಥನಾಥ ಸಿಂಗ್ ಮತ್ತು ವೈದ್ಯಕೀಯ ಸಚಿವ ಆಶುತೋಷ್ ಟಂಡನ್, 'ಆಮ್ಲಜನಕದ ಕೊರತೆಯಿಂದ ಮಕ್ಕಳ ಸಾವು ಸಂಭವಿಸಿಲ್ಲ. ಮಿದುಳಿನ ಉರಿಯೂತದಿಂದ ಆಗಸ್ಟ್‌ನಲ್ಲಿ ಪ್ರತಿವರ್ಷ ಮಕ್ಕಳ ಸಾವುಗಳು ಸಂಭವಿಸುವುದು ಮಾಮೂಲಿ' ಎಂದು ತಿಪ್ಪೆ ಸಾರಿಸಿಬಿಟ್ಟರು. ಆಮೇಲೆ ಬಂದ ಆಗಿನ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಕೂಡ ಆಮ್ಲಜನಕದ ಕೊರತೆ ಎದುರಾಗಿದ್ದನ್ನು ಮರೆಮಾಚಿಸಿಬಿಟ್ಟರು.

ಈ ಮಧ್ಯೆ, ಆಗಸ್ಟ್ 13ರಂದು ದ್ರವೀಕೃತ ಆಮ್ಲಜನಕದ ಟ್ಯಾಂಕರ್ ಸಹ ಬಂತು. ಆಮ್ಲಜನಕ ಪೂರೈಕೆ ಮತ್ತೆ ಯಥಾಪ್ರಕಾರ ಶುರುವಾಯಿತು. 48 ಗಂಟೆಗಳ ಕಾಲ ಆಸ್ಪತ್ರೆಯಲ್ಲೇ ಇದ್ದು, ಎಲ್ಲ ವ್ಯವಸ್ಥೆ ಮಾಡಿದ್ದ ಖಾನ್ ಮನೆಗೆ ಹೊರಟರು. ಆದರೆ, ಬೆಳಿಗ್ಗೆ ಎದ್ದು ಪತ್ರಿಕೆಗಳ ಮೇಲೆ ಕಣ್ಣು ಹಾಯಿಸಿದರೆ ಘಟನೆಯ ಕುರಿತು ಹೊಸ ಸಂಕಥನವನ್ನೇ ಕಟ್ಟಲಾಗಿತ್ತು. ಕೆಲವು ಪುಟ್ಟ ಜೀವಗಳನ್ನಾದರೂ ಉಳಿಸಲು ಹೆಣಗಿದ ಖಾನ್ ಅವರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗಿತ್ತು. ಪ್ರಭುತ್ವದ ಪುಂಗಿಯ ನಾದಕ್ಕೆ ತಕ್ಕಂತೆ ಮಾಧ್ಯಮ ಕೂಡ ಹೆಡೆಯಾಡಿಸಿತು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಂದು ಆಸ್ಪತ್ರೆಗೆ ಭೇಟಿ ನೀಡಿದ್ದರು. ಜತೆಗೆ ನಡ್ಡಾ ಅವರೂ ಇದ್ದರು. ಖಾನ್ ಅವರಿಗೆ ಮುಖ್ಯಮಂತ್ರಿ ಅವರನ್ನು ಕಾಣಲು ಬುಲಾವ್ ಬಂತು. ಶಹಬ್ಬಾಷ್‌ಗಿರಿ ಸಿಗಬಹುದು ಅಂದುಕೊಂಡು ಬಂದಿದ್ದ ಖಾನ್ ಅವರಿಗೆ ಶಾಕ್ ಕಾದಿತ್ತು. ಮುಂದಿನ ಘಟನೆಯನ್ನು ಅವರ ವಿವರಣೆಯಲ್ಲೇ ಕೇಳಿ:

ಮುಖ್ಯಮಂತ್ರಿ ಪ್ರಶ್ನಿಸಿದರು– 'ನೀನೇ ಏನು ಡಾ. ಕಫೀಲ್ ಖಾನ್?'

'ಹೌದು ಸರ್'

'ಸಿಲಿಂಡರ್ ವ್ಯವಸ್ಥೆ ಮಾಡಿದ್ದು ನೀನೇ ಏನು?'

'ಹೌದು ಸರ್'

'ಆ 4-5 ಸಿಲಿಂಡರ್ ತಂದು ನೀನು ಎಷ್ಟು ಜೀವ ಉಳಿಸಿದೆ? ಸಿಲಿಂಡರ್ ವ್ಯವಸ್ಥೆ ಮಾಡಿದ ಮೇಲೆ ಹೀರೊ ಆದೆ ಎಂದು ನೀನು ಭಾವಿಸಿರಬಹುದು. ನಿನ್ನನ್ನು ಆಮೇಲೆ ನೋಡಿಕೊಳ್ಳುವೆ'


ಮತ್ತೇನು ಕಾದಿದೆಯೋ... ಗೋರಖಪುರ ಆಸ್ಪತ್ರೆಯ ತುರ್ತುನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳನ್ನು ಗಾಜಿನ ಗೋಡೆಯ ಮೂಲಕ ಹೊರಗಿನಿಂದಲೇ ಆತಂಕದಿಂದ ನೋಡುತ್ತಿರುವ ಮಹಿಳೆ –ರಾಯಿಟರ್ಸ್ ಚಿತ್ರ/ ಕ್ಯಾತಲ್ ಮೆಕ್‌ನಾಟನ್

ಖಾನ್, ಆ ಕ್ಷಣದಲ್ಲೇ ಖಳನಾಯಕನಾಗಿ ಪ್ರತಿಬಿಂಬಿತವಾಗಿಬಿಟ್ಟಿದ್ದರು. ಆಮ್ಲಜನಕ ಅಭಾವದ ಸುದ್ದಿಯನ್ನು ಮಾಧ್ಯಮಕ್ಕೆ ಸೋರಿಕೆ ಮಾಡಿದ ಆಪಾದನೆಯನ್ನೂ ಅವರ ಮೇಲೆ ಹೊರಿಸಲಾಗಿತ್ತು. ಸ್ಪಷ್ಟನೆ ನೀಡಲು ಮುಂದಾದ ಅವರನ್ನು ಹಿರಿಯ ಅಧಿಕಾರಿಗಳು ತಡೆದಿದ್ದರು. ಆದರೆ, ಖಾನ್ ಅವರನ್ನು ತಪ್ಪಿತಸ್ಥ ಎಂದು ಬಿಂಬಿಸಲು ಹೊರಟ ಯತ್ನಗಳೆಲ್ಲ ವಿಫಲವಾಗಿದ್ದವು. ಮೊದಲ ತನಿಖಾ ವರದಿಯಲ್ಲಿ ಖಾನ್ ಅವರಿಂದ ಪ್ರಮಾದವಾದ ಕುರಿತು ಯಾವ ಉಲ್ಲೇಖವೂ ಇರಲಿಲ್ಲ. ಆದರೆ, ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿಯು ಖಾನ್ ಸೇರಿದಂತೆ ಒಂಬತ್ತು ಜನ ತಪ್ಪಿತಸ್ಥರು ಎಂದು ವರದಿ ನೀಡಿತು. ಮಿಕ್ಕ ಎಂಟು ಜನರನ್ನು ಬಿಟ್ಟು, ಇವರ ವಿರುದ್ಧವಷ್ಟೇ ಕ್ರಮ ಕೈಗೊಳ್ಳಲು ಉತ್ಸಾಹ ತೋರಲಾಯಿತು. ಎಫ್‌ಐಆರ್ ಕೂಡ ದಾಖಲಾಯಿತು. ಖಾನ್ ಅವರನ್ನು ಬಂಧಿಸಿ ಜೈಲಿಗೂ ಅಟ್ಟಲಾಯಿತು. ಆದರೆ, ಕೋರ್ಟ್‌ಗಳಲ್ಲಿ ಅವರ ವಿರುದ್ಧದ ಒಂದೂ ಆರೋಪ ನಿಲ್ಲಲಿಲ್ಲ. ಸಾಕ್ಷ್ಯಾಧಾರಗಳನ್ನು ಸಲ್ಲಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಕೊನೆಗೆ ದೇಶದ್ರೋಹಿ (ಕೋರ್ಟ್‌ನಲ್ಲಿ ಆ ಆರೋಪ ಕೂಡ ನಿಲ್ಲಲಿಲ್ಲ) ಎಂದು ಹಣೆಪಟ್ಟಿ ಕಟ್ಟಿ ಸೇವೆಯಿಂದ ವಜಾ ಮಾಡಲಾಯಿತು.

ಜೈಲಿನಲ್ಲಿ ಈ ವೈದ್ಯ ಕಂಡುಂಡ ಅನುಭವಗಳ ವಿವರ ನೋಡಿದರೆ, ಅದು ನಮ್ಮ ಪರಪ್ಪನ ಅಗ್ರಹಾರ ಜೈಲಿನ ವಾತಾವರಣವನ್ನು ನೆನಪಿಸುತ್ತದೆ. ಜೈಲಿನಿಂದ ಹೊರಬಂದ ಮೇಲೆ ಸ್ಮೈಲ್ ಫೌಂಡೇಷನ್ ಸ್ಥಾಪಿಸಿದ ಅವರು 'ಹೆಲ್ತ್ ಫಾರ್ ಆಲ್' ಆಂದೋಲನ ಕಟ್ಟಿದರು. 'ಡಾಕ್ಟರ್ ಆನ್ ರೋಡ್' ಯೋಜನೆ ಮೂಲಕ ಕುಗ್ರಾಮಗಳಲ್ಲಿ ನರಳುತ್ತಿರುವ ರೋಗಿಗಳಿಗೂ ಚಿಕಿತ್ಸೆ ಕಲ್ಪಿಸಿದರು. ಅವರ ಆ ಕೈಂಕರ್ಯ ಈಗಲೂ ನಡೆಯುತ್ತಿದೆ.

ದುರಂತ ಕಥೆಯನ್ನು ಓದಿದ ಮೇಲೆ ನನ್ನನ್ನು ಕಾಡುತ್ತಿರುವ ಪ್ರಶ್ನೆಗಳಿವು:

1. ಬಿಆರ್‌ಡಿ ವೈದ್ಯಕೀಯ ಕಾಲೇಜಿನ ಅತ್ಯಂತ ಕಿರಿಯ ಅಧಿಕಾರಿ ಖಾನ್. ಅವರಿಗೆ ಆಡಳಿತಾತ್ಮಕ ಇಲ್ಲವೆ ಆರ್ಥಿಕ ಅಧಿಕಾರಗಳೆರಡೂ ಇರಲಿಲ್ಲ. ಕರ್ತವ್ಯಲೋಪ ಎಸಗಿದ ಮೇಲಧಿಕಾರಿಗಳನ್ನು ಬಿಟ್ಟು ನಿರಪರಾಧಿಯಾದ ಖಾನ್ ಅವರನ್ನು ಬಲಿಪಶು ಮಾಡಿದ್ದೇಕೆ?

2. ಮುಖ್ಯಮಂತ್ರಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಲ್ಲದೆ ಆರೋಗ್ಯ ಇಲಾಖೆಯ ಹಲವು ಹಿರಿಯ ಅಧಿಕಾರಿಗಳು, ಕಾಲೇಜಿನ ಪ್ರಾಚಾರ್ಯರು, ವಿಭಾಗದ ಮುಖ್ಯಸ್ಥರನ್ನೆಲ್ಲ ಹೆಸರಿಸಿಯೇ ಖಾನ್, ಅವರ ಮೇಲೆ ಹಲವು ಗುರುತರ ಆರೋಪ ಮಾಡಿದ್ದಾರೆ. ತಾವೇನೂ ತಪ್ಪು ಮಾಡಿಲ್ಲ ಎಂದಾದರೆ ಮಾನನಷ್ಟ ಮೊಕದ್ದಮೆ ಹೂಡದೆ ಅವರೆಲ್ಲ ತೆಪ್ಪಗಿರುವುದೇಕೆ?

3. ಬೆನ್ನಿನ ಮೂಳೆಯೇ ಇಲ್ಲದಂತೆ ಉತ್ತರ ಪ್ರದೇಶದ ಅಷ್ಟೂ ಐಎಎಸ್ ಅಧಿಕಾರಿಗಳು ಸರ್ಕಾರದ ಸಂಕಥನಕ್ಕೆ ಜೋತುಬಿದ್ದು, ಖಾನ್ ವಿರುದ್ಧ ಚಿತಾವಣೆ ಮಾಡಿದ್ದೇಕೆ? ಖಾನ್ ಮಾಡಿದ ಮಾನವೀಯ ಕಾರ್ಯಕ್ಕಾಗಿ ಮೊದಲು ಅವರನ್ನು ಹಾಡಿಹೊಗಳಿದ ಮಾಧ್ಯಮ, ಊಸರವಳ್ಳಿಯಂತೆ ಬಣ್ಣ ಬದಲಾಯಿಸಿ, ಅವರನ್ನು ಖಳನಾಯಕನಂತೆ ಬಿಂಬಿಸಿದ್ದೇಕೆ?

4. ಬಾಯಿತೆರೆದರೆ 'ಉತ್ತರಪ್ರದೇಶ ಸರ್ಕಾರ ಎಲ್ಲರನ್ನೂ ಸುರಕ್ಷಿತವಾಗಿಟ್ಟಿದೆ' ಎಂದು ಹೇಳುವ ಪ್ರಧಾನಿಗೆ, ಮಕ್ಕಳು ಅನ್ಯಾಯವಾಗಿ ಜೀವ ಬಿಡುವಂತಾಗಿದ್ದು, ನಿರಪರಾಧಿಯು ಜೈಲು ಪಾಲಾಗುವಂತಾಗಿದ್ದು ಕಣ್ಣಿಗೆ ಕಾಣಲೇ ಇಲ್ಲವೇ?

5. 'ನನ್ನ ಜಾಗದಲ್ಲಿ ಯಾರೇ ಇದ್ದರೂ ಇದೇ ಗತಿ ಆಗುತ್ತಿತ್ತು' ಎಂದೇನೋ ಖಾನ್ ಹೇಳಿದ್ದಾರೆ. ಆದರೆ, ಅವರು ಮುಸ್ಲಿಂ ಎನ್ನುವ ಕಾರಣಕ್ಕೇ ಸರ್ಕಾರ ಈ ಸೇಡಿನ ಕ್ರಮ ಕೈಗೊಂಡಿತಲ್ಲವೇ?

ಚುನಾವಣೆಯ ಅಬ್ಬರದಲ್ಲಿ ಉತ್ತರಪ್ರದೇಶ ರಾಜ್ಯವೇ ಮುಳುಗಿ ಹೋಗಿರುವ ಈ ಹಂತದಲ್ಲಿ ಮೇಲಿನ ಪ್ರಶ್ನೆಗಳು ಯಾರ ಕಿವಿಯನ್ನು ತಲುಪಬಲ್ಲವು? ಉತ್ತರ ಹೇಳುವವರು ಯಾರಿದ್ದಾರೆ?

ನಿರೂಪಣೆ: ಪ್ರವೀಣ ಕುಲಕರ್ಣಿ

ಮಕ್ಕಳ ತಾತ್ವಿಕ ಚಿಂತನೆಗೆ ದಾರಿದೀಪ

ಎನ್.ಎಸ್.ಗುಂಡೂರ

ವಿಮರ್ಶೆ

ನಮ್ಮ ಮಕ್ಕಳು ರ್‍ಯಾಂಕ್ ಪಡೆಯದಿದ್ದರೂ ಅಡ್ಡಿ ಇಲ್ಲ, ಚೆಂದಾಗಿ ಆಲೋಚನೆ ಮಾಡಲು ಕಲಿತರೆ ಸಾಕು ಎನ್ನುವುದಾದರೆ ನಾವು ಓದಲೇಬೇಕಾದ ಪುಸ್ತಕವಿದು. ಈ ಪುಸ್ತಕದ ಲೇಖಕರಾದ ಸುಂದರ್ ಸರುಕ್ಕೈ ಅವರನ್ನು ದಿನನಿತ್ಯ ಜೀವನದ ತತ್ವಶಾಸ್ತ್ರಜ್ಞರೆಂದೇ ಕರೆಯಬಹುದು. ಅವರು ತತ್ವಶಾಸ್ತ್ರದ ಕುರಿತು ನಮಗಿರುವ ತಪ್ಪು ಕಲ್ಪನೆಗಳನ್ನು ನಿವಾರಿಸುತ್ತ, ತಾತ್ವಿಕ ಚಿಂತನೆಯು ಸಾಮಾನ್ಯವಾದುದೆಂದು ಸಾರ್ವಜನಿಕರಿಗೆ ಮುಟ್ಟಿಸುವ ಕೆಲಸ ಮಾಡುತ್ತಿದ್ದಾರೆ.

ತಮ್ಮ 'ಬೇರ್ ಫುಟ್ ಫಿಲಾಸಫರ್ಸ್' https://www.barefootphilosophers.com/ ಯೋಜನೆ ಅಡಿಯಲ್ಲಿ ಸುಂದರ್ ಅವರು ತತ್ವ ಚಿಂತನೆಯನ್ನು ಸಮಾಜಮುಖಿಯಾಗಿಸುತ್ತಿದ್ದಾರೆ. ಅಂಕುಡೊಂಕಾಗಿ ದೇಶದುದ್ದಕ್ಕೂ ಅಲೆದಾಡುತ್ತಿರುವ ಅವರು, ಸ್ಪಷ್ಟ ಗುರಿ ಹೊಂದಿರುವ ಸಂಚಾರಿ ಚಿಂತಕರ ಚಾವಡಿಯನ್ನು ರೂಪಿಸುತ್ತಿದ್ದಾರೆ. ಅದರ ಭಾಗವಾಗಿ ಮಕ್ಕಳಿಗಾಗಿ ತತ್ವಶಾಸ್ತ್ರದ ಹಲವು ಕಾರ್ಯಾಗಾರಗಳನ್ನು ಮಾಡಿ, ಅವುಗಳ ಯಶಸ್ಸಿನ ಫಲವಾಗಿ ಅವರು ಫಿಲಾಸಫಿ ಫಾರ್ ಕಿಡ್ಸ್ ಎಂಬ ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ರಚಿಸಿದ್ದಾರೆ. ಅದು ಈಗ ಹಲವು ಭಾರತೀಯ ಭಾಷೆಗಳಿಗೆ ಅನುವಾದಗೊಳ್ಳುತ್ತಿದ್ದು, ಈಗ ಕನ್ನಡದಲ್ಲೂ ಲಭ್ಯ. ಇದರಿಂದ ಕನ್ನಡದ ಮಕ್ಕಳಿಗಂತೂ ಹೆಚ್ಚಿನ ಪ್ರಯೋಜನವಾಗಲಿದೆ.

ಈ ಪುಸ್ತಕವನ್ನು ನಿರ್ಮಿಸಿದ ಮನಸ್ಸುಗಳ ಹಿಂದೆ ಹಲವು ಕಾಳಜಿಗಳಿವೆ: ಇಂದಿನ ಚಿಂತನಹೀನ ಶೈಕ್ಷಣಿಕ ವ್ಯವಸ್ಥೆ ಜ್ಞಾನವೆಂದರೆ 'ವಿಜ್ಞಾನ', ಶಿಕ್ಷಣವೆಂದರೆ ಒತ್ತಡ, ಭಯ, ಸ್ಪರ್ಧೆ ಎಂಬಂತೆ ಮಾಡಿದೆ. ಅರ್ಥಪೂರ್ಣವಾಗಿ, ತೃಪ್ತಿಕರ ಜೀವನ ನಡೆಸಲು ಬೇಕಾದ ಜ್ಞಾನ ಮತ್ತು ಕೌಶಲಗಳು ಮಕ್ಕಳಿಗೆ ದೊರಕದಂತೆಯೂ ಈ ವ್ಯವಸ್ಥೆ ಮಾಡಿದೆ ಎಂದು ಪುಸ್ತಕದ ಪ್ರಸ್ತಾವನೆಯಲ್ಲಿ ಸುಂದರ್ ಸರಿಯಾಗಿ ಗುರುತಿಸುತ್ತಾರೆ. ಇಂತಹ ಸಂಕಟಕರ ಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು, 'ತತ್ವಶಾಸ್ತ್ರೀಯ ಚಿಂತನೆಯು ವಿದ್ಯಾರ್ಥಿಗಳಿಗೆ ಹೆಚ್ಚು ಸ್ವತಂತ್ರರೂ ವಿಮರ್ಶಾ ಪ್ರವೃತ್ತಿಯವರೂ ಸೃಜನಶೀಲರೂ ಆಗಲು ಬೇಕಾದ ಕೌಶಲಗಳನ್ನು ಕಲಿಸಿ ಅವರನ್ನು ಸಬಲರನ್ನಾಗಿಸುತ್ತದೆ' ಎಂಬ ನಂಬಿಕೆಯಿಂದ ಅವರು ಈ ಕೆಲಸಕ್ಕೆ ಕೈಹಾಕಿರುವುದಾಗಿ ಹೇಳುತ್ತಾರೆ. ಅವರ ಇನ್ನೊಂದು ನಂಬಿಕೆ, 'ಒತ್ತಡಗಳಿಲ್ಲದೇ ಕಲಿಕೆಯ ಸುಖವನ್ನು ಮಕ್ಕಳು ಮರಳಿ ಪಡೆಯಲು ಸಾಧ್ಯವಾದರೆ ಅವರು ತಮ್ಮ ಜೀವನದುದ್ದಕ್ಕೂ ಸಮರ್ಥರಾಗಿರುತ್ತಾರೆ' ಎಂಬುದು. ಕಲಿಕೆಯು ಸಂತೋಷದ ಸವಾರಿಯನ್ನು ಮಾಡಬೇಕು ಎಂದುಕೊಂಡು ಬರೆದ ಪುಸ್ತಕವಿದು.

ಇದು ತತ್ವಶಾಸ್ತ್ರದ ಪುಸ್ತಿಕೆ ಅಲ್ಲ, ತತ್ವಶಾಸ್ತ್ರಜ್ಞರು ಏನೇನು ಹೇಳಿದ್ದಾರೆ ಎಂದು ಹೇಳುವ ಹೊತ್ತಿಗೆಯೂ ಅಲ್ಲ. ಬದಲಾಗಿ ತಾತ್ವಿಕವಾಗಿ ಯೋಚನೆ ಮಾಡುವುದನ್ನು ಕಲಿಸುವ ಪುಸ್ತಿಕೆ. ತತ್ವಶಾಸ್ತ್ರವೆಂದರೆ ಘನ ಪಂಡಿತರಷ್ಟೇ ಮಾಡುವ ಅಧ್ಯಯನವಲ್ಲ, ಅದು ನಮ್ಮ ದಿನನಿತ್ಯದ ಕಲಿಕೆಯ ಭಾಗವೆಂದು ಇದು ತೋರಿಸುತ್ತದೆ. ಹಾಗಾಗಿ ಇದು ಮಾಹಿತಿಯನ್ನು ಕೊಡುವ ಪುಸ್ತಕವಾಗದೆ, ನಮ್ಮ ಜೊತೆ ಮಾತನಾಡುತ್ತ ಯೋಚನೆಯನ್ನು ಕಲಿಸುವ ಸಾಮಗ್ರಿಯಾಗಿದೆ.



ಮಕ್ಕಳಿಗಾಗಿ ತತ್ವಚಿಂತನೆ
ಲೇ: ಸುಂದರ್ ಸರುಕ್ಕೈ
ಅನುವಾದ: ಮಾಧವ ಚಿಪ್ಪಳಿ
ಚಿತ್ರಗಳು: ಪ್ರಿಯಾ ಕುರಿಯನ್
ಪ್ರ: ಅಕ್ಷರ ಪ್ರಕಾಶನ
ಸಂ: 9980800993
ಪು: 80 ₹260

ಒಟ್ಟು ಎಂಟು ಸಾಧನಗಳ ಮೂಲಕ ಇಲ್ಲಿ ತತ್ವ ಚಿಂತನೆ ಮಾಡುವುದನ್ನು ಕಲಿಯಬಹುದು: 'ನೋಡುವುದು' (ಸೀಯಿಂಗ್), 'ಯೋಚಿಸುವುದು', 'ಓದುವುದು', 'ಬರೆಯುವುದು', 'ಗಣಿತ', 'ಕಲೆ', 'ಒಳ್ಳೆಯವರಾಗುವುದು' (ಬೀಯಿಂಗ್ ಗುಡ್) ಮತ್ತು 'ಕಲಿಯುವುದು'. ಪ್ರತೀ ವಿಭಾಗದಲ್ಲಿ ಆಯಾ ವಿಷಯಕ್ಕೆ ತಕ್ಕುದಾದ ನಿರೂಪಣೆಯ ತಂತ್ರಗಳನ್ನು ರೂಪಿಸಲಾಗಿದೆ; ಸರಳ ಚಟುವಟಿಕೆಗಳನ್ನು ಕೊಡುವುದರ ಮೂಲಕ, ಪ್ರಶ್ನೆಗಳನ್ನು ಕೇಳುವುದರ ಮೂಲಕ, ಉದಾಹರಣೆ ಕೊಟ್ಟು ವಿವರಿಸುವ ಮೂಲಕ ಲೇಖಕರು ಇಲ್ಲಿ ವಿಷಯಗಳನ್ನು ಮನನ ಮಾಡಿಸುತ್ತಾರೆ.

ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಬಹುದೇನೋ. ಯೋಚನೆ ಮಾಡುವುದು ಹೇಗೆ ಎಂದು ಕಲಿಸುವ ಅಧ್ಯಾಯದಲ್ಲಿ ಈ ರೀತಿ ಪ್ರಶ್ನೆಗಳನ್ನು ಕೇಳುತ್ತಾರೆ: 'ಈ ಪ್ರಶ್ನೆಗಳಿಗೆ ಉತ್ತರಿಸಿದರೆ ಯೋಚನೆಯ ಬಗ್ಗೆ ಏನು ಅರ್ಥವಾಗುತ್ತದೆ ಗಮನಿಸಿ- ಯೋಚನೆ ಮಾಡುವಾಗ ಕಣ್ಣು ಮುಚ್ಚಿಕೊಳ್ಳುತ್ತೀರಾ? ಕಿವಿಗಳನ್ನು ಮುಚ್ಚಿಕೊಂಡು ಯೋಚನೆ ಮಾಡಲು ಸಾಧ್ಯವೇ? ಯೋಚನೆ ಮಾಡುತ್ತಿರುವಾಗ ನಿಮಗೆ ಸುತ್ತಲಿನ ಶಬ್ದಗಳು ಕೇಳಿಸುತ್ತವೆಯೇ? ಯೋಚನೆ ಮಾಡಲಿಕ್ಕೆ ನಿಮಗೆ ಭಾಷೆ ಬೇಕೆ? ಕನ್ನಡ? ಇಂಗ್ಲಿಷ್? ಇತ್ಯಾದಿ'. ಹಾಗೆಯೇ ಯೋಚನೆಯ ಬಗ್ಗೆ, ಅದರ ಪ್ರಯೋಜನದ ಬಗ್ಗೆ ಹೇಳುತ್ತ, ಅದನ್ನು ಕೈಗೊಳ್ಳುವುದು ಹೇಗೆ ಎನ್ನುವುದನ್ನು ಈ ಭಾಗ ಕಲಿಸುತ್ತದೆ.

ಓದಿನ ಬಗ್ಗೆ ಕಲಿಸುತ್ತ, 'ಓದಿನ ಮೂಲಕ ಪಠ್ಯಗಳನ್ನು ಅರ್ಥಮಾಡಿಕೊಳ್ಳಲು ಕೇವಲ ಪದಗಳ ಅರ್ಥ ಗೊತ್ತಿದ್ದರೆ ಸಾಕಾಗುವುದಿಲ್ಲ, ವಾಕ್ಯಗಳಿಗೆ ಅವುಗಳದೇ ಬೇರೆ ಅರ್ಥ ಇರುತ್ತದೆ' ಎಂದು ತೋರಿಸಿ, ಗುಲಾಬಿ ಬಣ್ಣದ ಅಕ್ಷರಗಳಲ್ಲಿ ಚಟುವಟಿಕೆಯೊಂದನ್ನು ಕೊಡಲಾಗಿದೆ: 'ಈ ಮಾವಿನ ಹಣ್ಣು ಹಳದಿ ಇದೆ ಮತ್ತು ಸಿಹಿ ಆಗಿದೆ' ಎನ್ನುವ ವಾಕ್ಯದ ಪದಗಳನ್ನು ಇಟ್ಟುಕೊಂಡು ಎಷ್ಟು ಹೊಸ ವಾಕ್ಯಗಳನ್ನು ಮಾಡಲಿಕ್ಕೆ ಸಾಧ್ಯ? ಅವುಗಳಲ್ಲಿ ಎಷ್ಟು ವಾಕ್ಯಗಳಿಗೆ ಅರ್ಥ ಇದೆ? ಹೀಗೆ ಹಲವು ಚಟುವಟಿಕೆಗಳನ್ನೊಳಗೊಂಡ ಪುಸ್ತಕದ ವಿನ್ಯಾಸವು ಓದುಗರನ್ನು ಎಂಗೇಜ್ ಮಾಡುತ್ತದೆ.

ವಿವರಣೆ ಕೊಟ್ಟು ಕಲಿಸುವ ಒಂದು ಉದಾಹರಣೆಯನ್ನು ನೋಡೋಣ. ಇದು 'ಗಣಿತ' ಎಂಬ ಅಧ್ಯಾಯದಲ್ಲಿದೆ: 'ಒಂದು ಕತೆಯನ್ನು ಓದುವಾಗ ಅಥವಾ ಬರೆಯುವಾಗ ಏನು ಮಾಡುತ್ತೀರೋ ಗಣಿತವು ಅದಕ್ಕಿಂತ ಭಿನ್ನವೇನಲ್ಲ. ಛೋಟಾ ಭೀಮನ ಒಂದು ಕತೆ ಇದೆ ಎಂದುಕೊಳ್ಳೋಣ. ಅವನೊಬ್ಬ ಕತೆ ಪುಸ್ತಕದಲ್ಲಿರುವ ಸಣ್ಣ ಹುಡುಗ. ಅವನಿಗೆ ಕೆಲವು ಗುಣಗಳಿದ್ದಾವೆ. ಅವನು ಯಾವದೋ ರೀತಿ ಕಾಣುತ್ತಾನೆ, ಅವನು ಎಷ್ಟೋ ಎತ್ತರ ಇದ್ದಾನೆ, ಇತ್ಯಾದಿ. ಮರದಂತೆ ಛೋಟಾ ಭೀಮ್ ನಿಜವಾದ ವಸ್ತುವಲ್ಲ, ಆದರೆ ಅವನಿಗೆ ಈ ಗುಣಗಳಿದ್ದಾವೆ. ಅದೇ ರೀತಿ, ಸಂಖ್ಯೆಗಳು ಮರದಂತೆ ಇರುವ ವಸ್ತುಗಳಲ್ಲ, ಆದರೆ ಅವುಗಳಿಗೆ ಗುಣಗಳಿವೆ. ಉದಾಹರಣೆಗೆ, $1+1=2$.'

ಇಲ್ಲಿ ವಿಷಯದ ನಿರೂಪಣೆ ಹೇಗಿದೆ ಎಂದರೆ ಒಬ್ಬ ಮಾಸ್ತರ ನಮ್ಮ ಮುಂದೆ ನಿಂತು ಚಿಂತನೆ ಮಾಡುವುದನ್ನು ಕಲಿಸುತ್ತಿದ್ದಾರೇನೋ ಎನ್ನುವ ಅನುಭವ ಕೊಡುತ್ತದೆ. ಒಟ್ಟಾರೆ ಸುಂದರ್ ಅವರ ಬರವಣಿಗೆಯ ಶೈಲಿಯೇ ಹಾಗೆ; ಅವರ ಪಠ್ಯಗಳು ನಮ್ಮ ಜೊತೆ ಮಾತನಾಡುತ್ತವೆ. ಮಕ್ಕಳನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಬರೆದುದರಿಂದ ಇಲ್ಲಿ ಭಾಷೆಯೂ ಸರಳವಾಗಿದೆ. ಪ್ರಿಯಾ ಕುರಿಯನ್ ಅವರು ಬಿಡಿಸಿದ ಚಿತ್ರಗಳು, ಬಣ್ಣ ಬಣ್ಣದ ವಿನ್ಯಾಸ ಮಕ್ಕಳ ಕಲಿಕೆಗೆ ಪೂರಕವಾಗಲಿವೆ. ಮೂಲ ಪಠ್ಯದ ಸರಳತೆ, ಸ್ಪಷ್ಟತೆ ಉಳಿಸಿಕೊಂಡಿರುವ ಮಾಧವ ಚಿಪ್ಪಳಿ ಅವರ ಅನುವಾದ ಕನ್ನಡಕ್ಕೆ ಒಗ್ಗಿದೆ. ಭಾಷಾಂತರ ಸೋತಿದೆಯೆಂಬ ಉದಾಹರಣೆಗಳು ಅತಿ ವಿರಳ.

ನಿಷ್ಠುರವಾದ ಮಾತೆಂದರೆ, ನಾವು ಸಮಕಾಲಿನ ಸಂದರ್ಭದಲ್ಲಿ ಅಷ್ಟೊಂದು ತಾತ್ವಿಕರಾಗುತ್ತಿಲ್ಲವೇನೋ! ತತ್ವಪದಕಾರರನ್ನ ಕಂಡ ಸಂಸ್ಕೃತಿ ನಮ್ಮದು. ತಾತ್ವಿಕತೆ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿತ್ತು. ಈಗ ನಾವು ಆಧುನಿಕಪೂರ್ವ ತತ್ವಚಿಂತನೆಯನ್ನು ಕಳೆದುಕೊಂಡು, ಆಧುನಿಕ ತತ್ವಶಾಸ್ತ್ರವನ್ನೂ ಅರಗಿಸಿಕೊಳ್ಳದೆ ಟೊಳ್ಳಾಗಿಬಿಟ್ಟಿದ್ದೇವೇನೋ!

ಪ್ರಬುದ್ಧ ಜೀವನದ ದೃಷ್ಟಿಕೋನಕ್ಕೆ ತತ್ವಚಿಂತನೆಯು ತಳಪಾಯವಾಗುತ್ತದೆ ಎನ್ನುವುದಾದರೆ, ಪ್ರಸ್ತುತ ಪುಸ್ತಕ ನಾವು ಕಳೆದುಕೊಳ್ಳುತ್ತಿರುವ ನಮ್ಮ ತತ್ವಚಿಂತನೆಯನ್ನು ನೆನಪಿಸಿಕೊಳ್ಳಲು ಸಂದರ್ಭವೊಂದನ್ನು ಒದಗಿಸಿದೆ. ಮತ್ತೆ ಇಂತಹ ಪುಸ್ತಕಗಳು ಅನುವಾದಗಳ ಮೂಲಕ ನಮ್ಮನ್ನು ತಲುಪುವುದರ ಜೊತೆಗೆ, ನಮ್ಮ ಭಾಷೆಯಲ್ಲಿಯೂ ಇವು ಮೂಡಿಬರುವುದು ಉಚಿತವಲ್ಲವೇ?

ಮೊದಲ ಓದು

ಏಳು ಕೋಣೆಗಳಲ್ಲಡಗಿದ ಕಥಾಗುಚ್ಛ

ಸುತ್ತಮುತ್ತಲು ನಡೆಯುವ ಘಟನೆಗಳೇ ಹಲವು ಕಥೆಗಾರರಿಗೆ ಕಥೆ ಹೆಣೆಯಲು ಪ್ರೇರಣೆಯಾಗುವುದು ಸಹಜ. ಸಾಗರದಾಚೆ ತಾವು ಅನುಭವಿಸದೇ ಇರುವ, ಕಾಣದೇ ಇರುವ ಘಟನೆಗಳು, ವ್ಯಕ್ತಿಗಳನ್ನು ರಂಗು ರಂಗಾಗಿ ಕಾಲ್ಪನಿಕವಾಗಿ ಸೃಷ್ಟಿಸಿ ಕಥೆ ಹೆಣೆಯುವುದೂ ಕೆಲವರ ಕೈಚಳಕ. ಇಲ್ಲಿ ವಿದುಷಿ ನಂದಿನಿ ನಾರಾಯಣ್ ಅವರು ಜರ್ಮನಿಯ ಫ್ರಾಂಕ್‌ಫರ್ಟ್‌ನ ಒಡಲಾಳದ ನೈಜ ಕಥನವನ್ನು '7 ರೂಮ್ಸ್' ಮುಖಾಂತರ ತೆರೆದಿಟ್ಟಿದ್ದಾರೆ.

ಇದು ನಂದಿನಿ ನಾರಾಯಣ್ ಅವರ ಚೊಚ್ಚಲ ಕಥಾಸಂಕಲನ. ಜರ್ಮನಿ ದೇಶದ ಫ್ರಾಂಕ್‌ಫರ್ಟ್ ನಗರದ 'ಮುನ್ಷೆನರ್ ಸ್ಟ್ರಾಸ್'ನಲ್ಲಿರುವ ಥ್ರಿ ಸ್ಟಾರ್ ಹೋಟೆಲ್‌ಗೆ ಬಂದು ನೆಲೆಸಿದಂತ ಅತಿಥಿಗಳು ಬಚ್ಚಿಟ್ಟ ಭಾವನೆಗಳನ್ನು ಬಿಚ್ಚಿಟ್ಟಾಗ ತೆರೆದುಕೊಂಡಿದ್ದು ಈ '7 ರೂಮ್ಸ್'.



7 ರೂಮ್ಸ್–ಕಥಾಸಂಕಲನ
ಲೇ: ನಂದಿನಿ ನಾರಾಯಣ್(ಸಿಹಿಮೊಗೆ)
ಪ್ರ: ಸ್ನೇಹ ಬುಕ್ ಹೌಸ್
ಸಂ: 9845031335
ಪು: 100 ₹100

'ವಿಂಡೋ ಶಾಪಿಂಗ್'ನಂತೆ ವಿದೇಶಗಳಿಗೆ ಪ್ರವಾಸ ಕೈಗೊಂಡವರಿಗೆ ಆ ಜಗತ್ತು ಕಾಣುವುದು ಕಿಟಕಿಯ ಒಳಗಿನಿಂದಷ್ಟೆ. ಅದೇ ರೀತಿ ಜರ್ಮನಿಯ ಹಲವು ವಿಷಯಗಳು ಓದುಗರಿಗೆ ಪರಿಚಯವಿದ್ದರೂ, ಅಲ್ಲಿನ ಒಡಲಾಳದ ನೈಜ ಬಣ್ಣವನ್ನು ಲೇಖಕಿ ದಾಖಲಿಸಲು ಪ್ರಯತ್ನಿಸಿದ್ದಾರೆ.


ಲೇಖಕಿಯೇ ಹೇಳುವಂತೆ 'ಕೆಲವರು ನಗು ನಗುತ್ತಾ...ಕೆಲವರು ಭಾವುಕರಾಗಿ ಜರ್ಮನಿಯಲ್ಲಿ ನೆಲೆಸಿದ ಹೃದಯಗಳು ಹಂಚಿಕೊಂಡ ಜೀವನಕಥೆಗಳೇ ಈ ಕಥಾಸಂಕಲನ'.

ಇಲ್ಲಿ ಕಲ್ಲುಪ್ಪಿನ ಬ್ರೆಡ್‌ನಿಂದ ಹಿಡಿದು ಪ್ರೇಮ ಪರ್ವದವರೆಗೆ ಏಳು ಕೋಣೆಗಳಿದ್ದು (ಅಧ್ಯಾಯಗಳು), ಒಂದೊಂದು ಕೋಣೆಯಲ್ಲೂ ವಿಭಿನ್ನ ಕಥೆಗಳಿವೆ. ಹೋಟೆಲ್ ರಿಸೆಪ್ಷನಿಸ್ಟ್ ಮಾತುಗಳಲ್ಲೇ ಹಲವು ಕಥೆಗಳು ಸಾಗುತ್ತವೆ. ಪತ್ನಿ, ಮಕ್ಕಳಿಂದ ದೂರವಾಗಿ 'ಭಿಕ್ಷೆ' ಬೇಡುವುದನ್ನೂ ಕೆಲಸವಾಗಿ ನೋಡಿದ ಕಪ್ಪು ಕೋಟು ಧರಿಸಿದ್ದ ವ್ಯಕ್ತಿಯಿಂದ ಹಿಡಿದು ಕೆಲ ಪಾತ್ರಗಳು ಓದುಗರಿಗೆ ಹಲವು ಪಾಠ ಕಲಿಸುತ್ತವೆ. 'ಅಲೆಮಾರಿ ಮಮತೆ'ಯಲ್ಲಿ, ಭಾರತದಲ್ಲಾಗುವಂತೇ ಸಾಗರದಾಚೆಗಿನ ದೇಶಗಳಲ್ಲೂ ಸರ್ಕಾರದ ಯೋಜನೆಗಳು ಹೇಗೆ ದುರುಪಯೋಗವಾಗುತ್ತವೆ ಎನ್ನುವ ಘಟನೆಗಳೂ ಇಲ್ಲಿ ಅಡಕವಾಗಿವೆ. ಪ್ರತಿ ಕಥೆಯ ಆರಂಭಕ್ಕೂ ಮುನ್ನದ ಅಚ್ಚುಕಟ್ಟಾದ ಪೀಠಿಕೆ ಕಥಾಪ್ರವೇಶಕ್ಕೆ ಸೂಕ್ತ ವೇದಿಕೆ ಒದಗಿಸಿದೆ. ಕಥಾಸಂಕಲನ ಓದಿದ ಬಳಿಕ ಕೆಲವು ಜರ್ಮನ್ ಪದಗಳೂ ಓದುಗರ ರತ್ನಕೋಶ ಸೇರಿಕೊಳ್ಳುತ್ತವೆ.

ಕಥೆಗಳು ಓದಿಸಿಕೊಂಡು ಹೋದರೂ, ಭಿಕ್ಷೆ–ಬಿಕ್ಷೆಯಾಗಿ, ರಂಬೆ–ರೆಂಬೆಯಾಗಿ, ನೋಡುತ್ತಿದ್ದೆ–ನೀಡುತ್ತಿದ್ದೆಯಾಗಿ, ಸುದ್ದಿ–ಸುದ್ಧಿಯಾಗಿ, ರೂಮ್–ರೋಮ್ ಆಗಿ... ಹೀಗೆ ಹಲವು ಅಕ್ಷರ ತಪ್ಪುಗಳು ಸರಾಗ ಓದಿಗೆ ಕಿರಿಕಿರಿ ಉಂಟುಮಾಡುತ್ತವೆ.

ಸಿದ್ಧಾಂತಗಳ ಹಂಗಿಲ್ಲದ 'ದೇವ್ರು'

ಕನ್ನಡದಲ್ಲಿ ಕಾದಂಬರಿಗಳು ನಿರಂತರವಾಗಿ ಪ್ರಕಟವಾಗುತ್ತಲೇ ಇವೆ. ತರುಣಾವಸ್ಥೆಯ ಕಾದಂಬರಿಕಾರರ ಸಂಖ್ಯೆ ಹೆಚ್ಚುತ್ತಿರುವುದು ಕೂಡ ಗಮನಾರ್ಹ. ಇದಕ್ಕೆ ಹೊಸ ಸೇರ್ಪಡೆ ಪದ್ಮನಾಭ ಭಟ್ ಶೇವ್ಕಾರ ಅವರ 'ದೇವ್ರು'. 'ಕೇಪಿನ ಡಬ್ಬಿ', 'ಕನ್ನಡಿ ಹರಳು'ವಿನಂತಹ ಕಥಾ ಸಂಕಲನಗಳಿಂದ ಈಗಾಗಲೇ ಗಮನ ಸೆಳೆದಿದ್ದ ಅವರು, ಈಗ ಮೊದಲ ಕಾದಂಬರಿಯ ಮೂಲಕವೇ ಕಾದಂಬರಿಕಾರರಾಗಿಯೂ ಗಮನ ಸೆಳೆದಿದ್ದಾರೆ.



ದೇವ್ರು
ಲೇ: ಪದ್ಮನಾಭ ಭಟ್ ಶೇವ್ಕಾರ
ಪ್ರ: ಅಂಕಿತ ಪುಸ್ತಕ
ಸಂ: 080-2661 7100
ಪು: 360 ₹350

ಉತ್ತರ ಕನ್ನಡ ಜಿಲ್ಲೆಯ ಒಂದು ಸಣ್ಣ ಹಳ್ಳಿಯ ಜನಜೀವನವನ್ನು ವಸ್ತುವನ್ನಾಗಿಸಿಕೊಂಡಿರುವ 'ದೇವ್ರು', ನಮ್ಮ ಸಮಕಾಲೀನ ಸಮಾಜದ ಹಲವು ತಲ್ಲಣಗಳನ್ನು ಸೂಕ್ಷ್ಮವಾಗಿ ತನ್ನಲ್ಲಿ ಅಡಗಿಸಿಕೊಂಡಿದೆ. ಬದುಕಿನ ಸೌಂದರ್ಯವನ್ನೂ ಕುರೂಪವನ್ನೂ ಅನಾವರಣ ಮಾಡುತ್ತ ಸಾಗುತ್ತದೆ. ಆದರೆ ಕಾದಂಬರಿಕಾರ ಈ ಸೊಗಸನ್ನು ರಮಿಸುತ್ತ ಮೈ ಮರೆಯುವುದೂ ಇಲ್ಲ; ಸಮಸ್ಯೆಗಳಿಗೆ ಪರಿಹಾರವನ್ನು ಘೋಷಿಸಲು ತವಕಿಸುವುದೂ ಇಲ್ಲ. ಇದು ಒಳ್ಳೆಯ ಪಾತ್ರ, ಇದು ಕೆಟ್ಟ ಪಾತ್ರ – ಎಂಬ ವಿಂಗಡಣೆಯಲ್ಲಿ ಯಾವುದೋ ಪ್ರಚ್ಛನ್ನ ಸಿದ್ಧಾಂತವನ್ನು ಮಂಡಿಸುವ ಉತ್ಸಾಹ ಈ ಕಾದಂಬರಿಗೆ ಇಲ್ಲದಿರುವುದೇ ಇದರ ವಿಶೇಷ.

ಬರಹದಲ್ಲಿ ಕಾದಂಬರಿಕಾರ ಸಾಧಿಸಿರುವ ಸಂಯಮವೇ ಕಾದಂಬರಿಯು ಜೀವನಕ್ಕೆ ಕಲಿಸುತ್ತಿರುವ ಪಾಠ ಎಂಬಂತೆ ರೂಪ–ಸ್ವರೂಪಗಳ ಐಕ್ಯವನ್ನು ಈ ಕೃತಿಯಲ್ಲಿ ಕಾಣಬಹುದು. 'ಜಗತ್ತಿಗೆ ಕೊಡುವಂಥದ್ದು ನನ್ನಲ್ಲಿ ಏನೇನೋ ಇದೆ' ಎಂಬ ಪ್ರದರ್ಶನಕ್ಕೆ ತುತ್ತಾಗದೆ, ಇಡಿಯ ಲೋಕವನ್ನು ತನ್ನಲ್ಲಿ ತುಂಬಿಸಿಕೊಂಡು ವಿಸ್ತಾರವಾಗಬೇಕೆಂಬ ಧ್ಯಾನಸ್ಥ ಸ್ಥಿತಿಯೊಂದನ್ನು ಕಾದಂಬರಿಯ ಉದ್ದಕ್ಕೂ ಕಾಣುತ್ತೇವೆ.

ಕಾದಂಬರಿಯ ಆರಂಭ ಮತ್ತು ಮುಕ್ತಾಯ ಸಣ್ಣ ಹಳ್ಳಿಯಲ್ಲಿ ನಡೆಯುತ್ತದೆ; ನಡುವೆ ನಗರದೊಂದಿಗೂ ನಂಟನ್ನು ಹೊಂದುತ್ತದೆ. ಹೀಗಿದ್ದರೂ ಭೌಗೋಳಿಕವಾಗಿ ತುಂಬ ವಿಸ್ತಾರವೇನೂ ಕಥಾಹಂದರದಲ್ಲಿಲ್ಲ. ಆದರೆ ಅಗಾಧವಾಗಿ ಹರಡಿಕೊಂಡಿರುವ ಮನುಷ್ಯನ ಅಂತರಂಗದ ನೂರಾರು ಭಾವಗಳ ದರ್ಶನವನ್ನು ಇದು ಕಟ್ಟಿಕೊಡುತ್ತದೆ. ಒಂದೊಂದು ದೃಶ್ಯದ ವಿವರವೂ ಸೂಕ್ಷ್ಮವಾಗಿ ಕಂಡರಿಸಲ್ಪಟ್ಟಿದೆಯಾದರೂ, ಎಲ್ಲೂ ಅಲಂಕಾರಗಳ ಮೇಲಾಟ ಇಲ್ಲ. ಹೀಗಾಗಿ ಕಾದಂಬರಿಕಾರನಲ್ಲಿ ರಂಜನೆಯ ಹುರುಪು ಕಾಣಿಸದು. ಹೌದು, ಕೊನೆಯ ಕೆಲವು ಭಾಗಗಳನ್ನು ಇನ್ನಷ್ಟು ವಿಸ್ತರಿಸಲು ಅವಕಾಶ ಇತ್ತೆಂದು ಅನಿಸುತ್ತದೆ. ಆದರೆ ಸಂಯಮ ಎಂಬ ಸ್ಥಾಯಿಭಾವ ಎಲ್ಲೂ ಮುಕ್ಕಾಗಿಲ್ಲ ಎಂಬುದು ಗಮನೀಯ.

'ದೇವ್ರು' ಕೃತಿಯನ್ನು ಓದಿದ ಬಳಿಕ 'ಪದ್ಮನಾಭ ಅವರಿಂದ ಇನ್ನಷ್ಟು ಕಾದಂಬರಿಗಳು ಬರಲಿ' ಎಂದು ಮನಸ್ಸು ಹಾರೈಸುವುದು ಖಂಡಿತ.

ಮಾನವತೆಯ ಫಸಲು ತೆಗೆದ 'ರಾಗಿಕಾಳು'


ಎಚ್. ದಂಡಪ್ಪ

ಒಳನೋಟ

ಈಗಾಗಲೇ ಮೂರು ಕವನ ಸಂಕಲನಗಳನ್ನು ಕೊಟ್ಟಿರುವ ಚೀಮನಹಳ್ಳಿ ರಮೇಶಬಾಬು ಅವರು 'ರಾಗಿಕಾಳು' ಎಂಬ ಮತ್ತೊಂದು ಸಂಕಲನವನ್ನು ಪ್ರಕಟಿಸಿದ್ದಾರೆ. ಈ ಸಂಕಲನದಲ್ಲಿ 38 ಕವಿತೆಗಳಿವೆ. ಈ ಕವಿತೆಗಳಲ್ಲಿ ಕಾವ್ಯಕ್ಕೆ ಅತ್ಯಗತ್ಯವಾದ ಭಾಷಾ ಬಳಕೆ ನಮ್ಮ ಗಮನ ಸೆಳೆಯುತ್ತದೆ.

ಜನಭಾಷೆ ಮತ್ತು ಪ್ರಕೃತಿಭಾಷೆ ಎರಡನ್ನೂ ಸೇರಿಸಿ ವಿಶಿಷ್ಟವಾದ ಭಾಷೆಯೊಂದನ್ನು ಇಲ್ಲಿ ರೂಪಿಸಿಕೊಳ್ಳಲಾಗಿದೆ. ರೂಪಕಗಳು, ಪ್ರತಿಮೆಗಳು, ಪ್ರತೀಕಗಳು, ಚಿತ್ರಗಳು, ನುಡಿಗಟ್ಟುಗಳು ಕವಿತೆಗೆ ಅನಂತ ಅರ್ಥ ಸಾಧ್ಯತೆಗಳನ್ನು ಒಳಗೊಳ್ಳಲು ಸಾಧ್ಯವಾಗಿರುವುದನ್ನು ಇಲ್ಲಿನ ಕವಿತೆಗಳಲ್ಲಿ ಕಾಣಬಹುದು. ಭಾಷೆ ಮನುಷ್ಯನ ಸಂಬಂಧಗಳನ್ನು ಬೆಸೆಯುವುದರಿಂದ ಕಾವ್ಯದ ಭಾಷೆಯೂ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸಿ ಮಾನವೀಯ ಮೌಲ್ಯಗಳನ್ನು ಬಿತ್ತಿ ಅವನನ್ನು ವಿಶ್ವಮಾನವನನ್ನಾಗಿಸುವ ಶಕ್ತಿಯನ್ನು ಪಡೆಯುತ್ತದೆ. ಈ ಬಗೆಯ ಶಕ್ತಿಯನ್ನು ಇಲ್ಲಿನ ಕವಿತೆಗಳಲ್ಲಿ ಕಾಣಬಹುದು.

ನಿದರ್ಶನಕ್ಕಾಗಿ 'ಸೂರ್ಯನ ಪಾದ' ಎಂಬ ಕವಿತೆಯಲ್ಲಿನ ಈ ಸಾಲುಗಳನ್ನು ಗಮನಿಸಬಹುದು. 'ತುಳಿವ ಮನುಷ್ಯನ ಪಾದಗಳಿಗೆ/ಮರದಡಿಯ ನಕ್ಷತ್ರಗಳ ಸೋಂಕು ತಗಲಲಿ ಗುರುವೆ/ ಬಾಂಬುಗಳೆಲ್ಲಾ ಒಂಟಿ ಮರದ ಕಾಯಿಗಳಾಗಿ/ ನೂರು ದಿಕ್ಕಿಗೆ ಸಿಡಿಯಲಿ ಗುರುವೆ/.' ಇಡೀ ಕವಿತೆಯನ್ನು ಓದಿದಾಗ ಈ ಸಾಲುಗಳ ಅರ್ಥ ಮತ್ತಷ್ಟು ಸ್ಪಷ್ಟವಾಗುವುದಲ್ಲದೆ ಅದರಲ್ಲಿರುವ ಧ್ವನಿಸಾಧ್ಯತೆಗಳ ಅರಿವುಂಟಾಗುತ್ತದೆ. ಜೊತೆಗೆ ಭಾಷೆಯಲ್ಲಿ ಒಂದು ವಿಚಾರ, ವಸ್ತು, ತಾತ್ವಿಕತೆಯನ್ನು ಹಿಡಿದಿಡುವಾಗ ಕಥನಾತ್ಮಕವೆನ್ನಬಹುದಾದ ಆವರಣವೊಂದು ಸೃಷ್ಟಿಯಾಗುತ್ತದೆ. ಇದು ತಾತ್ವಿಕತೆಯನ್ನು ಬೆಳೆಸುತ್ತಾ ಮಾನವೀಯವಾಗುತ್ತಾ ಓದುಗನನ್ನು ಅರಿವಿನತ್ತ ಸೆಳೆದುಕೊಳ್ಳುತ್ತಾ ಹೋಗುತ್ತದೆ. ಇದು ಇಲ್ಲಿನ ಕವಿತೆಗಳ ಶಕ್ತಿಯೆಂದೇ ಹೇಳಬಹುದು.



ರಾಗಿಕಾಳು
ಲೇ: ಚೀಮನಹಳ್ಳಿ ರಮೇಶಬಾಬು
ಪ್ರ: ಅನಿಮ ಪುಸ್ತಕ
ಸಂ: 9845875423
ಪು: 220 ₹150

ಇಲ್ಲಿನ ಬಹುತೇಕ ಕವಿತೆಗಳಲ್ಲಿ ಪ್ರಕೃತಿ ಮಾನವ ಜಗತ್ತಿಗೆ ಪೂರಕವಾಗಿ ಬರುತ್ತದೆ. ವಿಜ್ಞಾನವು ಪ್ರಕೃತಿಯನ್ನೇ ಬಳಸಿಕೊಂಡು ಮಾನವನ ಬದುಕಿಗೆ ಪೂರಕವಾಗಿ ಕೆಲಸ ಮಾಡುವಂತೆ ಕಾವ್ಯವೂ ಪ್ರಕೃತಿಯನ್ನು ಬಳಸಿಕೊಂಡು ಮಾನವನ ಬದುಕನ್ನು ಪ್ರಗತಿಯತ್ತ ಕೊಂಡೊಯ್ಯುವ ಮಾರ್ಗಗಳನ್ನು ಸೂಚಿಸುತ್ತದೆ.

ಇಲ್ಲಿನ ಕವನಗಳಲ್ಲಿ ಬರುವ ಗಾಳಿ, ನೀರು, ನಕ್ಷತ್ರ, ಚಂದ್ರ, ಸೂರ್ಯ, ಸಸ್ಯ, ಮಣ್ಣು, ದಿನ, ರಾತ್ರಿ, ಆಕಾಶ, ಇಡೀ ಬ್ರಹ್ಮಾಂಡವೇ ಮನುಷ್ಯನ ಉನ್ನತಿಗಾಗಿಯೇ ಕ್ರಿಯಾಶೀಲವಾಗಿವೆ ಎಂಬುದು ಮನವರಿಕೆಯಾಗುವಂತೆ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ. ಭೌತಿಕವಾದ ಜಗತ್ತು ಮತ್ತು ಜೀವದ ಲೋಕವು ಲಯಬದ್ಧವಾದ ಛಂದೋಬದ್ಧವಾದ ನಡಿಗೆ ಹಾಗೂ ಶಿಸ್ತನ್ನು ರೂಪಿಸಿಕೊಂಡಿದೆ. ಕಾಲ ಋತುಗಳ ಬದಲಾವಣೆ ಇವೆಲ್ಲಾ ಒಂದು ಲಯದಲ್ಲಿ ಸಾಗಿದರೇನೇ ಮನುಷ್ಯನ ಬದುಕೂ ಸುಗಮವಾಗಿರುತ್ತದೆ ಎಂಬ ತಾತ್ವಿಕ ವಿಚಾರವನ್ನು ಅಷ್ಟೇ ತನ್ಮಯತೆಯಿಂದ ಭಾಷಾಲಯಗಳಲ್ಲಿ ಹಿಡಿದಿಟ್ಟಿರುವುದು ಈ ಸಂಕಲನದ ಕವಿತೆಗಳ ವೈಶಿಷ್ಟ್ಯವಾಗಿದೆ.

ಕಾವ್ಯದ ಶಕ್ತಿ ಎಂದರೆ ಪರಿಣಾಮಕಾರಿಯಾದ ಭಾಷಾಬಳಕೆ. ನಂತರದ್ದು ತಾತ್ವಿಕತೆ. ಇದಕ್ಕೆ ಕವಿತೆಗಳಲ್ಲಿನ ಕೆಲವು ಸಾಲುಗಳನ್ನು ಗಮನಿಸಬಹುದು. 'ಕತ್ತಿ ಕಮಲ ಬಂದೂಕು ಬಾಂಬುಗಳು ಇವೆ/ಹೃದಯಬೇನೆ ಹಾಲೆದೆಯ ಭೂಮಿಗೆ'. 'ಬೀಜಗಳು ಮೊಳೆತು ತಲೆಯೊಂದು ಅಖಂಡ ಭೂಮಿಯಾಗಲಿ ಗುರುವೆ'. 'ಮಾತು ಉಳುಮೆಯ ಜೀವ ಸಂಬಂಧ'. 'ಬೆಳಕೆಂದರೆ ಬೆಂದ ಜೀವದ ಸಂಬಂಧ'. 'ಕೆಲವರಿಗೆ ಹಿಂಸೆಯೆಂದರೆ ಬೆಳಗುವ ದೀಪ'... ಇತ್ಯಾದಿ.

ಪಾದಗಳು ನಡಿಗೆಗೆ ಸಾಧನ. ಆದರೆ ಅವು ಕವಿತೆಗಳಲ್ಲಿ ಶೋಷಣೆಗೆ, ತುಳಿತಕ್ಕೆ ಸಾಧನವೂ ಆಗುತ್ತವೆ. 'ಎದೆಯ ಮೇಲಿನ ನಡಿಗೆ' ಇದನ್ನು ಸೂಚಿಸುತ್ತದೆ. 'ಪಾದಗಳ ಲೋಕ' ಕವಿತೆಯಲ್ಲಿ ಸಂಸ್ಕೃತಿ, ಚರಿತ್ರೆ ಇದೆ. ಬದುಕಿನ ಅನಾವರಣ ಇದೆ. ಪಾದಗಳು, ನಡಿಗೆ, ಪಯಣ ಈ ಸಂಕಲನದಲ್ಲಿ ಪದೇ ಪದೇ ಕಾಣಿಸಿಕೊಳ್ಳುವ Motifs(ಆಶಯ). ಇವುಗಳ ಮೂಲಕ ಮನುಷ್ಯನ ಬದುಕಿನ, ಸಂಸ್ಕೃತಿಯ, ನಾಗರಿಕತೆಯ ಕ್ರಿಯಾಶೀಲ ಬೆಳವಣಿಗೆಯ ಇತಿಹಾಸದ ಸ್ವರೂಪ ಇರುವುದನ್ನು ಗುರುತಿಸಬಹುದು. ಕಪ್ಪು ಬಿಳುಪಿನ ಬಗ್ಗೆಯೂ ಕವಿತೆಗಳಲ್ಲಿ ಜಿಜ್ಞಾಸೆ ಇದೆ. ಜೀವಪೋಷಕವಾದ ರಾಗಿ ಬೆಳೆಯುವ ಮಣ್ಣು ಕೂಡ ಕಪ್ಪು. ಕಪ್ಪು ಸಾಮಾನ್ಯರ ಕೆಳವರ್ಗ/ವರ್ಣದ ಮತ್ತು ಫಲವತ್ತತೆಯ ಸಂಕೇತವಾಗಿ ಬಂದಿದ್ದು, ಇವರೇ ಸಮೃದ್ಧತೆಗೆ ಕಾರಣರೆಂಬ ತಿಳಿವನ್ನು ಓದುಗರಿಗೆ ಮೂಡಿಸುತ್ತಾರೆ. ಶ್ರೇಷ್ಠ ಕವಿತೆ ಹೌದೋ ಅಲ್ಲವೋ ಎಂಬುದನ್ನು ತಿಳಿಯಲು ಸಾಹಿತ್ಯಕ ಮತ್ತು ಸಾಹಿತ್ಯೇತರ ಮಾನದಂಡಗಳನ್ನು ಅನ್ವಯಿಸಿ ಓದಿದಾಗ ಅವುಗಳ ಯಶಸ್ಸು ನಮಗೆ ಗೊತ್ತಾಗುತ್ತದೆ. ಈ ಎರಡೂ ಮಾನದಂಡಗಳನ್ನು ಬಳಸಿ ಅಧ್ಯಯನ ಮಾಡಿದಾಗ ಇಲ್ಲಿನ ಬಹಳಷ್ಟು ಕವಿತೆಗಳಿಗೆ ಮೌಲ್ಯ ಗೊತ್ತಾಗಬಹುದು.

ಪ್ಲೂಟೊ 'ತೋರಿಸಿದ' ಕೇತ್ಕರ್ 'ನಕ್ಷತ್ರ'

10ನೇ ಪುಟದಿಂದ...

ಗುರುಗ್ರಹದ ನಾಲ್ಕು ಉಪಗ್ರಹಗಳ ಅನುರಣನೆಯ ತತ್ವವನ್ನು ಆಧರಿಸಿ ಖ್ಯಾತ ಗಣಿತಜ್ಞ ಲೆಪ್ಲಾಸ್ ಅವರು ಅವುಗಳ ಪರಿಭ್ರಮಣಾವಧಿಯಲ್ಲಿ ಒಂದು ನಿರ್ದಿಷ್ಟ ಅನುಪಾತ ಇರುವುದನ್ನು ತೋರಿಸಿಕೊಟ್ಟಿದ್ದರು. ಕೇತ್ಕರ್ ಇದೇ ತತ್ವವನ್ನು ಬಳಸಿದರು.

ಲೆಪ್ಲಾಸ್ ಅವರು ಮೂರು ಕಾಯಗಳ ಗುರುತ್ವಬಲದ ಅಂತರಕ್ರಿಯೆಗಳ ಒಂದು ವಿಶೇಷ ಸವಾಲಿನ ವಿವರಣೆಗೆ ಇಯೋ, ಯುರೋಪಾ, ಗೆನಿಮೀಡ್ ಇವುಗಳನ್ನು ಬಳಸಿದ್ದರು. ಪರಿಭ್ರಮಣಾವಧಿಗಳು 1, 2, 4 ಈ ಅನುಪಾತದಲ್ಲಿರುವುದನ್ನು ಲೆಕ್ಕಾಚಾರಗಳಿಗೆ ಬಳಸಿದ್ದರು. ಎರಡರ ಯುತಿ (ಅಂದರೆ ಗುರುಗ್ರಹದ ನೇರಕ್ಕೆ ಬರುವುದು) ಮೂರನೆಯದರ ಸ್ಥಾನವನ್ನು ನಿರ್ಧರಿಸುತ್ತದೆ ಎಂಬುದೇ ಇದರ ಗುಟ್ಟು. ಕೇತ್ಕರ್ ಅವರು ಇದೇ ತತ್ವದಿಂದ ಮಾಡಿದ ಕೈಬರಹದ ಲೆಕ್ಕಗಳನ್ನು ಅವರ ವಂಶಜರು ಕಾಪಾಡಿಕೊಂಡಿದ್ದಾರೆ.



ತಮ್ಮ ಲೆಕ್ಕಗಳಿಗೆ ಕೇತ್ಕರ್ ಅವರು 1911 ಇಸವಿಯನ್ನು ಆರಿಸಿಕೊಂಡರು. ಆಗ ಯುರೇನಸ್ ಮತ್ತು ನೆಪ್ಚ್ಯೂನ್‌ಗಳೆರಡೂ ಸೂರ್ಯನ ಇಕ್ಕೆಲಗಳಲ್ಲಿದ್ದವು. ಹಾಗಾಗಿ ಮೂರನೆಯದಾದ ಹೊಸ ಗ್ರಹ ಎಲ್ಲಿರಬೇಕು ಎಂಬುದನ್ನು ಲೆಕ್ಕ ಮಾಡುವುದು ಸುಲಭವಾಗುತ್ತಿತ್ತು.

ಲೆಕ್ಕದ ಪ್ರಕಾರ, ಎರಡು ಗ್ರಹಗಳಿರಬಹುದಾದ ಸಾಧ್ಯತೆಯೂ ಇತ್ತು. ಈ ಎರಡು ಗ್ರಹಗಳನ್ನು ಅವರು ಬ್ರಹ್ಮ ಮತ್ತು ವಿಷ್ಣು ಎಂದು ಕರೆದರು. ಬ್ರಹ್ಮ ಎಂಬುದು ಪ್ಲೂಟೊದ ವಿವರಗಳೊಂದಿಗೆ - ಅಂದರೆ ಪರಿಭ್ರಮಣಾವಧಿ 242 ವರ್ಷಗಳು, ದೂರ 39 ಖಗೋಳಮಾನ (ಖಗೋಳಮಾನ ಎಂದರೆ ಭೂಮಿ- ಸೂರ್ಯರ ಅಂತರ 150 ಮಿಲಿಯನ್ ಕಿಲೊ ಮೀಟರ್) - ಈಗ ದಾಖಲಾಗಿರುವ ಸಂಖ್ಯೆಗಳೊಡನೆ (ಲೋವೆಲ್ ಮತ್ತು ಪಿಕರಿಂಗ್ ಅವರದ್ದಕ್ಕಿಂತ ಉತ್ತಮವಾಗಿ) ಕರಾರುವಾಕ್ಕಾಗಿ ಹೊಂದುತ್ತದೆ. ಹೊಸಗ್ರಹದ ಕಾರಣ ಧೂಮಕೇತುಗಳ ಕಕ್ಷೆ ಪಲ್ಲಟವಾಗುವುದನ್ನೂ ಅವರು ಗಣನೆಗೆ ತೆಗೆದುಕೊಂಡಿದ್ದರು.

ವಿಷ್ಣು ಎಂಬುದು ಇನ್ನೂ ಬಹಳ ದೂರದಲ್ಲಿ (59 ಖಗೋಳ ಮಾನ) 458 ವರ್ಷಗಳ ಅವಧಿಯಲ್ಲಿ ಸುತ್ತುತ್ತಿರಬೇಕು ಎಂಬುದೂ ಒಂದು ಸಾಧ್ಯತೆ. ಲೋವೆಲ್ ಮತ್ತು ಪಿಕರಿಂಗ್ ಅವರು ಕೂಡ ಒಂದಕ್ಕಿಂತ ಹೆಚ್ಚು ಗ್ರಹಗಳಿರಬಹುದೆಂದು ಲೆಕ್ಕ ಹಾಕಿದ್ದರು. ತಮ್ಮ ಫಲಿತಾಂಶಗಳನ್ನು ಕೇತ್ಕರ್ ಅವರು ಫ್ರೆಂಚ್ ಖಗೋಳ ಸಂಸ್ಥೆಗೆ ಧಾರವಾಡದಿಂದ ವರದಿ ಮಾಡಿದ್ದರು; ಅದು 1911ರ ಜೂನ್‌ನಲ್ಲಿಯೇ ಪ್ರಕಟವಾಯಿತು. ಆದರೆ ಅವರ ಫಲಿತಾಂಶಕ್ಕೆ ಮನ್ನಣೆ ದೊರೆಯಲಿಲ್ಲ.

ಎರಡು ದಶಕಗಳ ಹುಡುಕಾಟದ ನಂತರ ಕ್ಲೈಡ್ ಟಾಂಬೊ ಅದನ್ನು ಕಂಡುಹಿಡಿದರು. ಅದೇ ಪ್ಲೂಟೊ. ದೂರದರ್ಶಕದಿಂದ ತೆಗೆದ ಚಿತ್ರಗಳಲ್ಲಿ ಸ್ಥಾನ ಬದಲಿಸುವ ಸಣ್ಣ ಚುಕ್ಕೆಯೊಂದನ್ನು ಹುಡುಕಿದರು. ಇದಕ್ಕೆ ಬ್ಲಿಂಕ್ ಕಂಪರೇಟರ್ ಎಂಬ ವಿಶೇಷ ಉಪಕರಣವನ್ನು ಬಳಸಿದರು. (ಈಗ ಈ ತತ್ವದ ಡಿಜಿಟಲ್ ಆವೃತ್ತಿ ಎಲ್ಲರಿಗೂ ಲಭ್ಯವಿದ್ದು ಶಾಲಾ ಮಕ್ಕಳೂ ಹೊಸ ಕಾಯಗಳನ್ನು ಕಂಡು ಹಿಡಿಯುತ್ತಿದ್ದಾರೆ). 1930ರಲ್ಲಿ ಟಾಂಬೊ ಒಂಬತ್ತನೆಯ ಗ್ರಹದ ಆವಿಷ್ಕಾರವನ್ನು ಪ್ರಕಟಿಸಿದಾಗ ಕೇತ್ಕರ್ ಅಸ್ವಸ್ಥರಾಗಿದ್ದರು. ಕೆಲವೇ ತಿಂಗಳುಗಳಲ್ಲಿ ತೀರಿಕೊಂಡರು. ಅವರ ಮುನ್ಸೂಚನೆಯ ವಿವರಗಳು ಬೆಳಕಿಗೆ ಬರಲೇ ಇಲ್ಲ.

ಕೇತ್ಕರ್ ಅವರ ಈ ಆವಿಷ್ಕಾರವನ್ನು ಪಿ. ಹರಿಹರ ಭಟ್ ಅವರು 1953ರಲ್ಲಿ ಅಹ್ಮದಾಬಾದ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದರು. ಅದಾದ ನಂತರ ಪ್ರೊಫೆಸರ್ ಶಕ್ತಿಧರ್ ಶರ್ಮ ಅವರು ವಿಶೇಷ ಆಸಕ್ತಿ ವಹಿಸಿ 80ರ ದಶಕದಲ್ಲಿ ಎರಡು ಪ್ರಬಂಧಗಳಲ್ಲಿ ಕೇತ್ಕರ್ ಅವರ ಫಲಿತಾಂಶಗಳನ್ನು ಪ್ರಕಟಿಸಿದರು.

ಇವರ ಜೀವನದ ವಿವರಗಳನ್ನು ವಿಜ್ಞಾನ ಪ್ರಸಾರ್ ಸಂಸ್ಥೆ ಕನ್ನಡದಲ್ಲಿಯೂ ಪ್ರಕಟಿಸಿದೆ. ಇವರು ತಮ್ಮ ಜೀವನದ ಕೊನೆಯ ದಿನಗಳನ್ನು ವಿಜಯಪುರದಲ್ಲಿ ಕಳೆದರು. ಕನ್ನಡದಲ್ಲಿಯೂ ಗ್ರಂಥ ರಚನೆ ಮಾಡಿರಬಹುದು. ಅವು ಅವರ ಬಂಧುಮಿತ್ರರ ಬಳಿ ಇದ್ದರೂ ಇರಬಹುದು. ಏಕೆಂದರೆ ಸಂತ ಜ್ಞಾನೇಶ್ವರರ ರಚನೆಗಳಲ್ಲಿ ಕನ್ನಡ ಶಬ್ದಗಳನ್ನು ಹುಡುಕಿ (ಮರಾಠಿಯಲ್ಲಿ) ಲೇಖನ ಬರೆದಿದ್ದಾರೆ. ಕಲ್ಯಾಣ ಕರ್ನಾಟಕದ ಭಾಗಗಳಲ್ಲಿ ಅವರು ಶಿಕ್ಷಕರಾಗಿದ್ದರಿಂದ ಅಲ್ಲಿ ಅವರ ಇತರ ರಚನೆಗಳೂ ಇರಬಹುದು. ಅವನ್ನು ಈಗಲಾದರೂ ಬೆಳಕಿಗೆ ತರುವುದು ಸಾಧ್ಯವಾಗಲಿ ಎಂಬುದೇ ಈ ಲೇಖನದ ಆಶಯ.


ವಿಮೋಚನಾ ಹೋರಾಟದ ಕಥನ

ಆನಂದಿನಿ

ಅವಲೋಕನ

ಇಡೀ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಒಂದು ವರ್ಷ, ಒಂದು ತಿಂಗಳು, ಎರಡು ದಿನಗಳಾದ ಮೇಲೆ ಸಾವಿರಾರು ಜನರ ತ್ಯಾಗ ಬಲಿದಾನಗಳಿಂದ ಕೂಡಿದ ಮತ್ತೊಂದು ವಿಮೋಚನಾ ಹೋರಾಟದ ನಂತರವೇ ಹೈ.ಕ. (ಈಗ ಕಲ್ಯಾಣ ಕರ್ನಾಟಕ) ಪ್ರಾಂತ್ಯಕ್ಕೆ ಸ್ವಾತಂತ್ರ್ಯದ ಬೆಳಕು ಕಂಡಿತು. ಇದನ್ನೊಂದು ವರದಿ ಮಾತ್ರವಾಗಿ ಓದಿದ ಇತರೆ ಭಾಗದ ಜನರಿಗೆ ಈ ಪ್ರಾಂತ್ಯದ ಹಿಂದುಳಿದಿರುವಿಕೆಯ ಕಾರಣಗಳು ಹೊಳೆಯುವುದು ಕಷ್ಟವೇ. ಈ ವಿಮೋಚನಾ ಹೋರಾಟದ ಭೀಕರತೆಯನ್ನು ಒಂದು ಕಾದಂಬರಿಯ ಹದಕ್ಕೆ ಒಗ್ಗಿಸಿ ಮರುಸೃಷ್ಟಿಸಿದ ಗ್ರಾಮಭಾರತದ ಕಥನವೇ 'ಹಾವಳಿ'.

ಶಾಂತರಸರ 'ಉರಿದ ಬದುಕು', ಜಂಬಣ್ಣ ಅಮರಚಿಂತರ 'ಬೂಟುಗಾಲಿನ ಸದ್ದು' ಕೃತಿಗಳನ್ನು ಬಿಟ್ಟರೆ ವಿಮೋಚನಾ ಹೋರಾಟದ ಕಥೆ ಇಷ್ಟು ಸಮಗ್ರವಾಗಿ, ಈ ಪರಿಪ್ರೇಕ್ಷ್ಯದಲ್ಲಿ ಬೇರೆಲ್ಲೂ ದಾಖಲಾದಂತಿಲ್ಲ. ಹಿಂಸೆಯ ಕಾರಣವನ್ನು ವ್ಯಕ್ತಿಯಲ್ಲಿ ಹುಡುಕದೆ ಸಮುದಾಯದಲ್ಲಿ ಮತ್ತು ಸಮಾಜೋ-ರಾಜಕೀಯ ಸಂದರ್ಭದಲ್ಲಿ ಹುಡುಕುವ ಈ ಕಾದಂಬರಿಯು, ಸಾಮರಸ್ಯದ ನೆಲೆಗಳಾದ ಹಳ್ಳಿಗಳು ರಜಾಕಾರರ ಹಾವಳಿಯ ಸಂದರ್ಭದಲ್ಲಿ ಕೋಮು ಆಧಾರಿತ ವಿಭಜನೆಗೆ ಒಳಗಾಗದೆ ನಿಜಾಮನ ಪರ ಮತ್ತು ಭಾರತದ ಪರ ಎಂಬ ನೆಲೆಯಲ್ಲಿ ವಿಭಜನೆ ಹೊಂದುವುದನ್ನು ಹಿಡಿದಿಟ್ಟಿದೆ. ಸ್ವಾತಂತ್ರ್ಯ ಬಂದು ಇಷ್ಟು ಅವಧಿಯ ನಂತರವೂ ಈ ಭಾಗದಿಂದ ಒಂದೇ ಒಂದು ಕೋಮುಗಲಭೆ ವರದಿಯಾಗಿಲ್ಲದರ ಹಿಂದೆ ಕೂಡ ಇದೇ ಸಮಚಿತ್ತ ಮನೋಧರ್ಮದ ಬೀಜವು ಕೆಲಸ ಮಾಡಿರುವುದನ್ನು ಗ್ರಹಿಸಲು ನೆರವಾಗುವಂತೆ ಈ ಕೃತಿ ಮೈದಾಳಿದೆ.



ಹಾವಳಿ (ಕಾದಂಬರಿ)
ಲೇ: ಮಲ್ಲಿಕಾರ್ಜುನ ಹಿರೇಮಠ
ಪ್ರ: ಮನೋಹರ ಗ್ರಂಥಮಾಲಾ ಧಾರವಾಡ
ಸಂ: 9845447002
ಪು: 406 ₹400

ಇತ್ತಂಡಗಳಿಂದಲೂ ಆರೋಗ್ಯಕರ ಸುದೂರ ಕಾಪಾಡಿಕೊಂಡು, ತೀರ್ಮಾನಗಳನ್ನೆಲ್ಲ ಓದುಗರಿಗೇ ಬಿಟ್ಟು, ಬಹುಮುಖಿಯಾದ ಈ ಸಂಕೀರ್ಣ ಕಥೆಯನ್ನು, ಕಾಲಬದ್ಧವಾಗಿದ್ದೂ ಕಾಲಾತೀತವಾಗುವಂತೆ ಕಟ್ಟಿಕೊಡಲಾಗಿದೆ. ಇದು ಸಂಕೀರ್ಣವೇಕೆಂದರೆ ಮೇಲ್ನೋಟಕ್ಕೆ ಭಾರತದ ರಾಜಕೀಯ ಇತಿಹಾಸದ ಒಂದು ಮುಖ್ಯ ವಿದ್ಯಮಾನದ ದಾಖಲೆಯಂತಿರುವ ಇದು; ಆಳದಲ್ಲಿ ಪ್ರೇಮ, ಸಂಬಂಧ, ಮನುಷ್ಯತ್ವ, ಸಣ್ಣತನ, ಅಧಿಕಾರಲಾಲಸೆಗಳ ಜಾಲವಾದ ಬಸಾಪುರವೆಂಬ ಗ್ರಾಮದ ಸಾವಯವ ಸಂಬಂಧಗಳ ಕಥನವೂ ಆಗಿ ರೂಪುಗೊಂಡಿದೆ.

ವಿಭಜನೆಯ ಪರವಾಗಿದ್ದ ಮುಸ್ಲಿಂ ನಾಯಕ ಜಿನ್ನಾರ ನೆನಪೇ ಬೇಗ ಆಗುವಂಥ ಪೂರ್ವಗ್ರಹೀತ ಮನಃಸ್ಥಿತಿಯ ಈಗಿನ ಹಲವರಿಗೆ, ಅಖಂಡ ಭಾರತದ ಪರವಾಗಿದ್ದ ಮುಸ್ಲಿಂ ನಾಯಕ ಮೌಲಾನಾ ಆಜಾದರ ನೆನಪೇ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ನಬಿಯ ಮೇಲೆ ಮರುಕ, ರೋಶನ್ ಸಾಹೇಬರ ಮೇಲೆ ಗೌರವ, ಶಂಕರ-ರೆಹಮಾನ-ಶೇಖರರ ಮೇಲೆ ಅಭಿಮಾನ, ದೇಸಾಯರ ಮೇಲೆ ಅಸಹ್ಯ ಮತ್ತು ವಸಂತನ ಮೇಲೆ ಛೀದರಿಕೆ ಭಾವ ಮೂಡುವಂತೆ ಅವುಗಳ ಪಾತ್ರಪೋಷಣೆ ಮಾಡಿರುವ ಲೇಖಕರ ಕ್ರಮ ಗಮನಾರ್ಹವಾಗಿದೆ.

ಇನ್ನು ಇಬ್ರಾಹಿಂಸಾಬರು ನಬಿಗೆ ಹೇಳುವ 'ಜಿಹಾದ್ ಅಂದರೆ ನಮ್ಮೊಳಗಿನ ಸೈತಾನನ ವಿರುದ್ಧ ಹೋರಾಡೋದು' ಎಂಬ ಮಾತು; 'ಸಾಮಾನ್ಯ ಜನರು ದೇವರೇ ತಮಗೆ ದಿಕ್ಕುದೆಸೆ ಅಂತ ನಂಬಿಕೊಂಡರೆ, ನಾಯಕರು ತಾವೇ ದೇವರು-ಧರ್ಮಕ್ಕ ದಿಕ್ಕುದೆಸೆ ಕಲ್ಪಿಸಬಲ್ಲವರು ಅಂತ ತಿಳಕೊಂಡಿರ್ತಾರ' ಎನ್ನುವ ಮಾತು ಮತ್ತು ಗುರವ್ವಳು ಶಂಕರನಿಗೆ 'ಹರಾಮಿ ದುಡ್ಡಂದ್ರ ಚೇಳಿದ್ದಂಗ. ನಾವು ದುಡಿದಿದ್ದಷ್ಟ ನಮ್ಮ ದುಡ್ಡು' ಎನ್ನುವ ಮಾತುಗಳಂತೂ ಗುಂಗು ಹಿಡಿಸುವಷ್ಟು ಶಕ್ತವಾಗಿವೆ. ಎಲ್ಲಮ್ಮನ ಜೋಗತಿ, ಜಾತ್ರಿ, ಗವಿಮಠದ ರಬ್ಬುಳಗಿಯ ವಿವರಗಳ ಜೊತೆಗೆ ಶಿವಮೂರ್ತಿಸ್ವಾಮಿ ಅಳವಂಡಿ, ಪಂಚಾಕ್ಷರಿ ಹಿರೇಮಠರಂಥ ನೈಜ ಸ್ವಾತಂತ್ರ್ಯ ಹೋರಾಟಗಾರರ ಪಾತ್ರಗಳೂ ಇಲ್ಲಿ ಬರುತ್ತವೆ.

ವಿಮೋಚನಾ ಹೋರಾಟದ ಕರಾಳತೆಯು ದೇಶದ ಸ್ವಾತಂತ್ರ್ಯ ಹೋರಾಟದ ಕರಾಳತೆಗಿಂತ ಯಾವ ವಿಧದಲ್ಲೂ ಎಳ್ಳಷ್ಟೂ ಬೇರೆಯಲ್ಲ ಎನ್ನುವುದನ್ನು ಕಾದಂಬರಿಕಾರರು ತಮ್ಮ ಎಂದಿನ ನಿರುದ್ವಿಗ್ನವಾದ ನಿರಾಭರಣ ಶೈಲಿಯಲ್ಲಿ ದಾಖಲಿಸಿ ತೋರಿಸಿ ಯಶಸ್ವಿಯಾಗಿದ್ದಾರೆ.

ಭಾಗವತರ 'ಅಶ್ವತ್ಥಧಾಮ'

ಸದಾಶಿವ ಎಂ.ಎಸ್.

ಮೋತಿಗುಡ್ಡವು ಉತ್ತರ ಕನ್ನಡದ ಅತಿ ಎತ್ತರದ ಶಿಖರ. ಸಮುದ್ರಮಟ್ಟಕ್ಕಿಂತ ಸುಮಾರು 3,200 ಅಡಿಗಳಷ್ಟು ಮೇಲಿರುವ ತುದಿಯೀಗ 'ಅಶ್ವತ್ಥಧಾಮ'ವಾಗಿದೆ. 'ಯಕ್ಷಋಷಿ' ಎಂದೇ ಪ್ರಸಿದ್ಧರಾದ ಹೊಸ್ತೋಟ ಮಂಜುನಾಥ ಭಾಗವತ ಅವರ ನೆನಪಿಲ್ಲಿ ಈಗ ಚಿರಸ್ಥಾಯಿ ಆಗಿದೆ.

ಅಂಕೋಲಾ ತಾಲ್ಲೂಕಿನ ಈ ಗುಡ್ಡವು ಭಾಗವತರಿಗೆ ಅತ್ಯಂತ ನೆಚ್ಚಿನ ತಾಣವಾಗಿತ್ತು. ಹುಟ್ಟೂರು ಶಿರಸಿಯಾಗಿದ್ದರೂ ತಮ್ಮ ಜೀವನದ ಕೊನೆಯ 20 ವರ್ಷಗಳನ್ನು ಇಲ್ಲೇ ಕಳೆದಿದ್ದರು. ಇಲ್ಲೊಂದು ಎರಡು-ಮೂರು ಶತಮಾನಗಳಷ್ಟು ಹಳೆಯದಾದ ಅಶ್ವತ್ಥ ಮರವಿದೆ. ಅದರ ಕೆಳಗೆ ಕುಳಿತು ಧ್ಯಾನದಲ್ಲಿ ತಲ್ಲೀನರಾಗುತ್ತಿದ್ದರು. ಇದೇ ಜಾಗದಲ್ಲಿ 250ಕ್ಕೂ ಅಧಿಕ ಯಕ್ಷಗಾನ ಪ್ರಸಂಗಗಳನ್ನು ಬರೆದು ಸಾಂಸ್ಕೃತಿಕ ಪರಂಪರೆಗೆ ದೊಡ್ಡ ಕೊಡುಗೆಯನ್ನು ನೀಡಿದ್ದರು.

ಸುತ್ತಲೂ ದಟ್ಟವಾದ ಕಾಡು ವ್ಯಾಪಿಸಿದೆ. ಶಿಖರಕ್ಕೆ ಬರಲು ರಸ್ತೆಯೂ ಅಷ್ಟೇ ದುರ್ಗಮವಾಗಿದೆ. ಆದರೂ ಅವರು ಅದೇ ಮಾರ್ಗದಲ್ಲಿ ಓಡಾಡುತ್ತಿದ್ದರು. ಒಮ್ಮೆಯೂ ಬೇಸರಿಸದೇ ಮಳೆ, ಬಿಸಿಲು, ಚಳಿ ಎಂದು ಭಾವಿಸದೇ ಬೆಟ್ಟವನ್ನು ಹತ್ತಿಳಿಯುತ್ತಿದ್ದರು. ದೈವದತ್ತವಾಗಿ ತಮಗೆ ಬಂದ ಕಲೆಯನ್ನು ಆಸಕ್ತರಿಗೆ ಧಾರೆ ಎರೆಯುತ್ತಿದ್ದರು. ಯಕ್ಷ ವಿಶ್ವಕೋಶ, ಅರ್ಥಗಾರಿಕೆ, ಕುಣಿತ, ಮದ್ದಳೆ, ಚಂಡೆ, ಮುಖವರ್ಣಿಕೆ, ರಂಗಸ್ಥಳ, ವೇಷಭೂಷಣ... ಹೀಗೆ ಯಕ್ಷಗಾನದ ಎಲ್ಲ ರಂಗಗಳನ್ನೂ ಮೈತುಂಬಿಕೊಂಡಿದ್ದರು. ಅದನ್ನೇ ಜೀವಿಸುತ್ತಿದ್ದರು.

2020ರ ಜನವರಿ 7ರಂದು ತಮ್ಮ 80ನೇ ವಯಸ್ಸಿನಲ್ಲಿ ಅವರು ನಿಧನರಾದ ಬಳಿಕ ಆ ತಾಣದ ಬಗ್ಗೆ, ಯಕ್ಷಗಾನದ ಮೇರು ಗುರುವಿನ ನೆನಪು ಶಾಶ್ವತಗೊಳಿಸುವ ಕುರಿತು ಅಭಿಮಾನಿಗಳಲ್ಲಿ ಚರ್ಚೆಗಳು ಶುರುವಾದವು. ಅಧಿಕೃತವಾಗಿ ಕೆಲಸಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಪರಿಸರ ಬರಹಗಾರ, ಭಾಗವತರ ಅಭಿಮಾನಿ ಶಿವಾನಂದ ಕಳವೆ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಯಿತು. ಕಾರವಾರದ ವಸಂತಕುಮಾರ ಕತಗಾಲ ಹಾಗೂ ಮೋತಿಗುಡ್ಡದ ಗ್ರಾಮಸ್ಥರು ಜವಾಬ್ದಾರಿಗಳನ್ನು ಸಮಾನವಾಗಿ ಹಂಚಿಕೊಂಡು ಕಾರ್ಯ ಪೂರ್ಣಗೊಳಿಸಿದರು. ಮಕರ ಸಂಕ್ರಾಂತಿಯ ದಿನವಾದ ಜ.14ರಂದು ಭಾಗವತರ ಪುಣ್ಯತಿಥಿಯೂ ಆಗಿತ್ತು. ಅಂದೇ ಈ ತಾಣವನ್ನು ಲೋಕಾರ್ಪಣೆ ಮಾಡಿದ್ದು ವಿಶೇಷವಾಗಿತ್ತು.

'ಭಾಗವತರ ನೆನಪನ್ನು ಅಜರಾಮರವಾಗಿಸಲು ಅಭಿವೃದ್ಧಿ ಕಾಮಗಾರಿಗಳು ನಡೆದಿವೆ. ಅಶ್ವತ್ಥಧಾಮ ಅಭಿವೃದ್ಧಿಗೆ ಶಾಸಕಿ ರೂಪಾಲಿ ನಾಯ್ಕ ದೊಡ್ಡ ಕೊಡುಗೆ ನೀಡಿದ್ದಾರೆ. ಅವರಿಗೆ ಊರಿನ ಜನತೆ, ಭಾಗವತರ ಅಭಿಮಾನಿಗಳ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ' ಎನ್ನುತ್ತಾರೆ ಗ್ರಾಮಸ್ಥ ಭಾಸ್ಕರ ಹೆಗಡೆ.



ಅಂಕೋಲಾ ತಾಲ್ಲೂಕಿನ ಮೋತಿಗುಡ್ಡದಲ್ಲಿ ಹೊಸ್ತೋಟ ಮಂಜುನಾಥ ಭಾಗವತರ ನೆನಪಿನಲ್ಲಿ ಜ.14ರಂದು ಉದ್ಘಾಟನೆಯಾದ 'ಅಶ್ವತ್ಥಧಾಮ' ಮತ್ತು ಅವರ ಕಾರ್ಯಗಳಿಗೆ ಪ್ರೇರಣಾದಾಯಿಯಾಗಿದ್ದ ಅಶ್ವತ್ಥಮರ. ಚಿತ್ರಗಳು: ಸಂದೀಪ್ ಕೇಶವಳ್ಳಿ

'ಅಶ್ವತ್ಥಧಾಮ'ದಲ್ಲಿ ಏನೇನಿದೆ?

'ಅಶ್ವತ್ಥಧಾಮ'ವನ್ನು ಪ್ರವೇಶಿಸುತ್ತಿದ್ದಂತೆ ಹೊಸ್ತೋಟ ಮಂಜುನಾಥ ಭಾಗವತ ಅವರ ಅತ್ಯಾಕರ್ಷಕ ಪುತ್ಥಳಿ ಕಣ್ಮನ ಸೆಳೆಯುತ್ತದೆ. ಕಾರ್ಕಳದ ಪ್ರಸಿದ್ಧ ಶಿಲ್ಪಕಲಾ ಶಿಕ್ಷಕ ಗುಣವಂತೇಶ್ವರ ಭಟ್ ಇದರ ಶಿಲ್ಪಿ.

ಅದರ ಪಕ್ಕದಲ್ಲೇ ಇರುವ ಅಶ್ವತ್ಥ ಮರವು ಇಡೀ ಯಕ್ಷಗಾನ ರಂಗಕ್ಕೇ 'ಆಮ್ಲಜನಕ' ಪೂರೈಕೆಯ ಕೇಂದ್ರವಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ. ಅದರ ಕಟ್ಟೆಯನ್ನು ಸುಸಜ್ಜಿತಗೊಳಿಸಿ ಚಾವಣಿ ನಿರ್ಮಿಸಬೇಕು ಎನುವುದು ಭಾಗವತರ ಇಚ್ಛೆಯಾಗಿತ್ತು. ಆ ನಿಟ್ಟಿನಲ್ಲಿ ಅವರು ಪ್ರಯತ್ನವನ್ನೂ ಆರಂಭಿಸಿದ್ದರು. ಆದರೆ, ಅಷ್ಟರಲ್ಲಿ ಅವರು ನಿಧನರಾದರು. ಅವರ ಬಯಕೆಯಂತೆ ಕಾರ್ಯ ನಿರ್ವಹಿಸಿದ ಅಭಿಮಾನಿಗಳು, ಕಟ್ಟೆ ನಿರ್ಮಿಸಿ, ತಗಡಿನ ಚಾವಣಿ ಅಳವಡಿಸಿದ್ದಾರೆ.

ಸಮೀಪದಲ್ಲಿರುವ ಕುಟೀರವು ಮಂಜುನಾಥ ಭಾಗವತರಿಗೆ 20 ವರ್ಷ ಆಶ್ರಯ ನೀಡಿತ್ತು. ಅದನ್ನು ಅವರ ನೆನಪಿನಲ್ಲಿ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿದೆ. ಅದರ ಗೋಡೆಗಳಿಗೆ ಬಣ್ಣ ಬಳಿದು, ಭಾಗವತರ ವಿವಿಧ ಭಾವಚಿತ್ರಗಳನ್ನು ಅಳವಡಿಸಲಾಗಿದೆ. ಕಲಾವಿದ ಸತೀಶ ಯಲ್ಲಾಪುರ ಹಾಗೂ ಸಂಗಡಿಗರು ಭಾಗವತರ ರೇಖಾಚಿತ್ರಗಳನ್ನು ಗೋಡೆಗಳಲ್ಲಿ ಬರೆದು ಕುಟೀರಕ್ಕೆ ಮತ್ತಷ್ಟು ರಂಗು ನೀಡಿದ್ದಾರೆ.

ಭಾಗವತರ ದೈನಂದಿನ ಬಳಕೆಯ ವಸ್ತುಗಳನ್ನು, ಅವರ ಹಸ್ತಪ್ರತಿಗಳನ್ನು ಕಾಪಿಡಲಾಗಿದೆ. ಅವರಿಗೆ ಸಂದಾಯವಾದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಜಾನಪದ ಅಕಾಡೆಮಿ ಪುರಸ್ಕಾರ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಮುಂತಾದ ಪುರಸ್ಕಾರಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಅಶ್ವತ್ಥ ಮರದ ಅಡಿಯಲ್ಲಿ ಭಾಗವತರು ಧ್ಯಾನ ಮಾಡಲು ನಿರ್ಮಿಸಿದ್ದ ಪೀಠವನ್ನು ಸುಸ್ಥಿತಿಗೆ ತರಲಾಗಿದೆ. ಅಶ್ವತ್ಥಧಾಮದ ಪ್ರದೇಶವನ್ನು ಸಮತಟ್ಟು ಮಾಡಲಾಗಿದೆ. ಭಾಗವತರ ಪರಿಚಯ, ಸಾಧನೆಯನ್ನು ಬಿಂಬಿಸುವ ಶಿಲಾಫಲಕವನ್ನೂ ಅಳವಡಿಸಲಾಗಿದೆ. ಈ ಎಲ್ಲ ಬದಲಾವಣೆಗಳ ಮೂಲಕ ಮೋತಿಗುಡ್ಡವೀಗ ಯಕ್ಷಗಾನಪ್ರಿಯರ ಪಾಲಿಗೆ ಆರಾಧನಾ ಸ್ಥಳವಾಗಿ ಮಾರ್ಪಟ್ಟಿದೆ.



ಹೊಸ್ತೋಟ ಮಂಜುನಾಥ ಭಾಗವತರು ಮೋತಿಗುಡ್ಡದಲ್ಲಿ ವಾಸ್ತವ್ಯ ಹೂಡಿದ್ದ ಕುಟೀರ

ಎತ್ತರಕ್ಕೇರಿದಷ್ಟೂ ಸಣ್ಣವನೆಂಬ ಅರಿವು

'ನೀವ್ಯಾಕೆ ಯಾವಾಗಲೂ ಎತ್ತರದ ಬೆಟ್ಟವೇರುತ್ತೀರಿ ಎಂದು ಮಂಜುನಾಥ ಭಾಗವತರಿಗೆ ಕೇಳಿದ್ದೆ. ಅದಕ್ಕವರು, ಗುಡ್ಡವನ್ನೇರಿದಾಗ ತಾನು ಎಷ್ಟು ಗಿಡ್ಡ ಎಂದು ಅರಿವಾಗುತ್ತದೆ ಎಂದಿದ್ದರು. ಮನುಷ್ಯ ಎಷ್ಟೇ ಮೇಲೇರಿದರೂ ತಾನೆಷ್ಟು ಸಣ್ಣವನು ಎಂಬುದನ್ನು ಮರೆಯಬಾರದು ಎಂಬುದು ಅವರ ಚಿಂತನೆಯಾಗಿತ್ತು' ಎಂದು ಅವರೊಂದಿಗಿನ ಒಡನಾಟದ ಸವಿಯನ್ನು ಹಂಚಿಕೊಂಡವರು ಶಿವಾನಂದ ಕಳವೆ.



ಧ್ಯಾನಪೀಠದ ಸಮೀಪದಲ್ಲಿ ಅನಾವರಣಗೊಳಿಸಲಾದ ಮಂಜುನಾಥ ಭಾಗವತರ ಆಕರ್ಷಕ ಶಿಲಾ ಪುತ್ಥಳಿ

'ಮೋತಿಗುಡ್ಡದಂಥ ಜಾಗಗಳು ಸಕಾರಾತ್ಮಕ ಶಕ್ತಿಯನ್ನು ನೀಡುತ್ತವೆ. 175 ವರ್ಷಗಳ ಹಿಂದೆ ಅಲ್ಲಿಯ ಭೈರವೇಶ್ವರ ಭಟ್ ಎಂಬುವವರು ಅಶ್ವತ್ಥ ಮರಕ್ಕೆ ಉಪನಯನ ಮಾಡಿದ್ದರು. ಈಗ ಮರಕ್ಕೆ ಸುಮಾರು 230 ವರ್ಷಗಳಾಗಿವೆ. ಆ ಮರವಿರುವ ಕಾರಣ ನಾವೆಲ್ಲ ಅಲ್ಲಿ ಸೇರುತ್ತಿದ್ದೇವೆ. ಭಾಗವತರೂ ಆ ಮರದ ಕಾರಣದಿಂದಲೇ ಬರುತ್ತಿದ್ದರು. ಒಂದು ಮರ ಮತ್ತು ಮನುಷ್ಯನ ಒಡನಾಟ ಹೇಗೆ ಬೆಳೆಯುತ್ತದೆ ಎಂಬುದಕ್ಕೆ ಇದು ಉದಾಹರಣೆ' ಎಂದರು ಅವರು.

ಜುರಿಜುರಿ ಕಾಲ್ಮರಿ

10ನೇ ಪುಟದಿಂದ...

ಮುನಿದು ಸುಮ್ಮನಾದ ನಾಗವಲ್ಲಿಯಂತೆ ಮೌನವಾಗಿತ್ತು. ಪ್ರಶ್ನಾರ್ಥಕವಾಗಿ ಶ್ರೀಧರ ಕಡೆ ನೋಡಿದೆ... ನಸುನಗುತ್ತ, 'ಮುಟ್ಟಿದ ಕೂಡಲೇ ಸಪ್ಪಳ ಮಾಡಾಕ ಅವೇನು ಚೈನಾ ಮಾಲೇನ್ರಿ ಅಕ್ಕಾ... ಕಾಲಿಗೆ ಹಾಕ್ಕೊಂಡು, ಪಾದ ಊರಿ, ಹೆಬ್ಬೆರಳಿನ ಮೇಲೆ ಭಾರ ಹಾಕಿದ್ಹಂಗ ಹೆಜ್ಜಿ ಎತ್ತಬೇಕು...' ನಡಿಗೆಯ ಪಾಠ ಮಾಡಿದರು ಶ್ರೀಧರ್. ಹಾಗೆ ನಡೆದಾಗ ಚುರುಚುರು ಸದ್ದಾಗತೊಡಗಿದಾಗ, ಕಣ್ಣೊಳಗೆ ಮಿಂಚು.

ಹೆಂಗಿದು ಸಾಧ್ಯ ಅಂದಾಗ ಶ್ರೀಧರ್ ಅದರ ಕತೆ ಹೇಳತೊಡಗಿದರು. 'ಇವಕ್ಕ ನೋಡ್ರಿ ಅಕ್ಕಾರ, ಹಿಂಗ ಮೊದಲು ಕಾಲಿನ ಅಳತಿಯ ಮೆಟ್ಟು ಮಾಡ್ತೀವಿ. ಆಮೇಲೆ ಉಳಿಯಿಂದ ಮೇಲ್ಪಟ್ಟಿ ಮಾಡ್ಕೊಂತೀವಿ. ಸಂದೂಕಿನ ಮ್ಯಾಲೆ ಬಡದು ಅಳತಿ ಸರಿ ಮಾಡ್ಕೊಂತೇವಿ. ಆದ್ರ ಕೆಲವೊಮ್ಮೆ ಕೈಲೆ ಕಟ್ ಮಾಡೂದ್ರಿಂದ ಅಂಚು ಸಮ ಇರೂದಿಲ್ಲ. ಗಾಜಿನಿಂದ ಅಂಚು ಸಮಗೊಳಸ್ತೀವಿ. ಅದಕ್ಕ ಒಡದ ಗಾಜು ಬೇಕು. ಅಗ್ದಿ ತೀಕ್ಷ್ಣ ಇರಬೇಕದು. ನಾಜೂಕಿನ ಕೆಲಸ. ಪರಪರ ಮಾಡಿ ಮುಗಿಸಬೇಕು...' ಅಂತ್ಹೇಳ್ಕೊಂತನ ಅಲ್ಲಿದ್ದ ಒಂದು ಮೆಟ್ಟನ್ನು ಗಾಜಿನಿಂದ ಕೊರೆದು ಸಮ ಮಾಡಿ, ಒಮ್ಮೆ ಬೆರಳಾಡಿಸಿ ನೋಡಿದ್ರು. ಪಟ್ಟಿಯನ್ನು ಮೊದಲೇ ಜಡಿಹೆಣದ್ಹಂಗ ಹೆಣದಿಟ್ಟಿದ್ರು. ಅದಕ್ಕ ಅಡಿಪಟ್ಟಿ ಹಾಕಿ, ಅವನ್ನು ಮೆಟ್ಟಿಗೆ ಜೋಡಿಸಿ, ಹೊಲಗಿ ಹಾಕಿದ್ರು.

ಆದ್ರ ಆಗಲೂ ನನಗ ಸ್ಪಷ್ಟ ಆಗಿರಲಿಲ್ಲ. ಈ ಚೊರಚೊರ ಸದ್ದಿಗೆ ಕಾರಣ ಏನಂತ. ಅದನ್ನೇ ಶ್ರೀಧರ್ ಅವರಿಗೆ ಕೇಳಿದ್ವಿ. ಶ್ರೀಧರ್ ಈ ಚೊರಚೊರ ಸದ್ದಿಗೂ ಎಮ್ಮಿಬಾಲಕ್ಕೂ, ಕಾಗಿಕಾಯಿಗೂ ಸಂಬಂಧ ಅದ ಅಂದ್ರು.

ಹುಬ್ಬು ಗಂಟಿಕ್ಕಿ ನೋಡಿದೆ. ಡಬ್ಬಿಯೊಳಗಿಂದ ಒಂದು ಎಮ್ಮಿಬಾಲ ತೆಗೆದುಕೊಟ್ರು. ಬದುಕಿನಾಗ ಮೊದಲ ಸಲ ಎಮ್ಮಿ ಬಾಲ ಹಿಡದಿದ್ದೆ. ತಣ್ಣಗ ಕೊರೀತಿತ್ತದು. ಹದವಾಗಿರುವ ಎಮ್ಮಿಬಾಲದ ಚರ್ಮ ಅದು. ಅದನ್ನ ಒಂದಂಗುಲದಷ್ಟು ಸಣ್ಣ ಸಣ್ಣ ಚೂರುಗಳನ್ನು ಮಾಡಿದ್ದರು. ಕಾಗಿಕಾಯಿ ಅಂತ ಕರೆಯಿಸಿಕೊಳ್ಳುವ ಕಾಯಿಗಳನ್ನು ಬಡಿದು ಚಪ್ಪಟೆಯಾಗಿಸಿದ್ದರು. ಅದಕ್ಕೊಂದು ಮುಳ್ಳಿನ ಮೊನಚು ಇರ್ತದ. ಅವೆರಡನ್ನೂ ಹೊಟ್ಟೆಯೊಳಗೆ ಹಾಕಿ, ಹೊಲಿಗೆ ಹಾಕ್ತಾರ. ಈ ಮೊಳೆಹೊಡೆದು ಜೋಡಿಸಿರುವ ಮೆಟ್ಟಿನ ಪಟ್ಟಿಯ ಸಂದಿಯೊಳಗ ಚಿಮಣಿ ಎಣ್ಣಿ ಹನಿಯುಣಸ್ತಾರ. ಇನ್ನೊಂದು ಕಡೆಯಿಂದ ಅದು ಹೊರಗ ಬರುವಷ್ಟು ಎಣ್ಣಿಯುಣಿಸಬೇಕು. ಆಮೇಲೆ ಒಂದೆರಡು ದಿನ ಬಿಟ್ಟು, ಈ ಕಾಲ್ಮರಿ ಮೆಟ್ಟು ನಡೆದರೆ, ನಡಿಗಿಗೆ ಒಂದು ಗತ್ತು ಬರ್ತದ.

ಹದ ಮಾಡಿದ ಐದು ಕೆ.ಜಿ. ಚರ್ಮದೊಳಗ ಮೂರು ಜೊತಿ ಕಾಲ್ಮರಿ ಆಗ್ತಾವ. ಒಂದು ಜೋಡಿ ತಯಾರಿ ಮಾಡಾಕ ಎರಡು ದಿನ ಬೇಕು. ಈಗ ಒಂದು ಕೆ.ಜಿ. ಚರ್ಮಕ್ಕ ಕನಿಷ್ಠ ಅಂದ್ರೂ ಎರಡು ಸಾವಿರ ರೂಪಾಯಿ ಕೊಡಬೇಕು. ಬೆಲಿ ಹೆಚ್ಚಾಗೇದ. ಯಾರೂ ಅಷ್ಟು ರೊಕ್ಕ ಕೊಟ್ಟು ತೊಗೊಳೂದಿಲ್ಲ. ಶೋಕಿಗೆ ಹಾಕ್ಕೊಳ್ಳೋರು ಅಷ್ಟೆ ತೊಗೊತಾರ. ಆದ್ರ ಹಂಗ ತೊಗೊಳ್ಳೋರಿಗೆ ಇಲ್ಲಿ ಸಿಗ್ತಾವ ಅನ್ನೂದು ಗೊತ್ತಿಲ್ಲ. ಹಂಗಾಗಿ ಈ ಕೆಲಸ ಮಾಡೋರು ಹಗುರಕ್ಕ ಇದನ್ನ ಬಿಟ್ಟು ಬ್ಯಾರೆ ಚಪ್ಪಲಿ ಅಂಗಡಿ ಇಟ್ಕೊಂಡಾರ ಅಂತ ಶ್ರೀಧರ್ ವಿವರಿಸಿದ್ರು.

'ನೀವು ಯಾಕ ಮುಂದುವರಿಸೀರಿ' ಅಂತ ಕೇಳಿದಾಗ, 'ನಾವು ಬರೆ ಮನುಷ್ಯರಿಗಷ್ಟೆ ಮಾಡೂದಿಲ್ರಿ. ದೇವರಿಗೂ ಮಾಡ್ತೀವಿ. ದೇವರಿಗೆ ಆಕಳ ಚರ್ಮ ಬಳಸಿ ಮಾಡ್ತೀವಿ. ಒಂದು ಜೊತಿ ದೇವರ ಚಡಾವು ಮಾಡಾಕ 14-16 ಕೆ.ಜಿ. ಚರ್ಮ ಬೇಕು. ಮತ್ತ ಅವು ಒಂದೊಂದೂ ಒಂದು ಮಾರು ಉದ್ದ ಇರ್ತಾವ. ಆ ಒಂದು ಜೊತಿ ಮಾಡಾಕ, ಕನಿಷ್ಠ ಒಂದು ವಾರ ಬೇಕು. ಆ ಸಮಯದೊಳಗ ಬ್ಯಾರೆ ಕಾಲ್ಮರಿ ಮಾಡೂದಿಲ್ಲ, ಬ್ಯಾರೆ ಚರ್ಮ ಮುಟ್ಟೂದಿಲ್ಲ ಅಂತ ಹೇಳುವ ಶ್ರೀಧರ್, ಈ ಭಾಗದಲ್ಲಿ ಮೈಲಾರಜ್ಜನಿಗೆ, ಕದರಮಂಡಲಗಿ ಹನುಮಪ್ಪನಿಗೆ, ನುಗ್ಗಿಕಾಯಿ ಹನುಮಪ್ಪನಿಗೆ ಈ ಜೋಡುಗಳನ್ನು ಮಾಡಿಕೊಡ್ತಾರ.

ಪ್ರತಿವರ್ಷವೂ ಈ ಜೋಡುಗಳನ್ನು ಹಾಕ್ಕೊಂಡು ರಾತ್ರಿ ಇಡೀ ದೇವರು ಅಡ್ಡಾಡುವುದರಿಂದ, ಚಪ್ಪಲಿ ಸವೀತಾವಂತ. ಮತ್ತ ಮುಂದಿನ ಜಾತ್ರಿಯೊಳಗ ಹೊಸಾವು ಮಾಡಿಕೊಡ್ತಾರಂತ. ಈ ನಂಬಿಕಿ ಇರೂದ್ರಿಂದ ಪ್ರತಿವರ್ಷವೂ ಹೊಸ ಜೋಡು ಮಾಡಿಕೊಡುವ ಹೊಣೆ ಇವರ ಕುಟುಂಬಕ್ಕ ಅದ. ಅದೇ ದೇವರು ಕಾಯ್ತಾನ ಅನ್ನುವ ನಂಬಿಕಿಯೊಳಗ ಇವರೂ ನಡದಾರ. ಇವರ ಕುಟುಂಬ ನೆಮ್ಮದಿಯಿಂದ ಇರಲಿ ಅನ್ನೂದಾದ್ರ ನಾವೂ ಒಂದು ಜೊತಿ ಜುರಕಿ ಚಪ್ಪಲಿ ತೊಗೊಬೇಕು ಅಷ್ಟೆ!

ಹೆಚ್ಚಿನ ಮಾಹಿತಿಗೆ: ಶ್ರೀಧರ ದೊಡ್ಡವಾಡ 7090876760/9964383975



ಕೈ ಹಿಡಿದ ಸಿನಿಮಾ ರಂಗ

ರಾಜಾ ಹುಲಿ ಚಿತ್ರದಲ್ಲಿ ಯಶ್‌ಗೆ, ಸಂಗೊಳ್ಳಿ ರಾಯಣ್ಣ ಚಿತ್ರಕ್ಕಾಗಿ ದರ್ಶನ್‌ಗೆ ಇಲ್ಲಿಂದಲೇ ಜುರಕಿ ಚಪ್ಪಲಿ ಮಾಡಿಸಿಕೊಂಡು ಹೋಗಿದ್ದರಂತೆ. ಇದಾದ ನಂತರ ದುಬೈನ ಉದ್ಯಮಿಯೊಬ್ಬರು ಒಟ್ಟಿಗೆ 25 ಜೋಡು ಚಪ್ಪಲಿಗಳಿಗೆ ಆದೇಶ ನೀಡಿ, ತರಿಸಿಕೊಂಡಿದ್ದರಂತೆ.



ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಮಿಶ್ರಿಕೋಟಿ ಗ್ರಾಮದಲ್ಲಿ ಕೈಯಿಂದಲೇ ಜುರಕಿ ಚಪ್ಪಲಿ ತಯಾರಿಸುತ್ತಿರುವ ಶ್ರೀಧರ ದೊಡ್ಡವಾಡ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

9ರಿಂದ ಕೊನೆಗೊಳ್ಳುವ ಯಾವುದೇ ಸಂಖ್ಯೆಯ ಮಗ್ಗಿಯನ್ನು ಸುಲಭವಾಗಿ ಬರೆಯುವುದು

ಉದಾ: 69ರ ಮಗ್ಗಿ ರಚನೆ ಮಾಡಬೇಕಿದ್ದರೆ ಮೊದಲು ಬಲಭಾಗದ 9ರಿಂದ ಇಳಿಕೆ ಕ್ರಮದಲ್ಲಿ 9-8-7-6-5-4-3-2-1-0 ಹೀಗೆ ಬರೆದುಬಿಡಿ. ನಂತರ ಎಡಭಾಗದಲ್ಲಿ ಯಾವ ಅಂಕಿ ಇದೆಯೋ ಆ ಅಂಕಿಗೆ 1 ಹೆಚ್ಚಿಗೆ ಮಾಡಿಕೊಂಡು (3 ಇದ್ದರೆ 4, 4 ಇದ್ದರೆ 5, 5 ಇದ್ದರೆ 6 ಹೀಗೆ) ಹೀಗೆ ಮೇಲೆ ಬರೆದುಕೊಂಡು ಮಗ್ಗಿಯ ಎಡಭಾಗದ ಅಂಕಿಗೆ ತಲೆಮೇಲಿನ ಅಂಕಿ ಕೂಡಿಸಿ ಕೆಳಗೆ ಬರೆಯಿರಿ. ಈಗ ಬಂದ ಉತ್ತರವನ್ನೇ ತೆಗೆದುಕೊಂಡು ಮತ್ತೆ ತಲೆಯ ಮೇಲಿನ ಅಂಕಿಗೆ ಕೂಡಿಸಿ ಬಂದ ಉತ್ತರವನ್ನು ಮತ್ತೆ ಕೆಳಗೆ ಬರೆಯಿರಿ. ಈಗ ಬಂದ ಉತ್ತರಕ್ಕೆ ಮತ್ತೆ ಮೊದಲಿನಂತೆ ಮೇಲಿನ ಅಂಕಿ ಕೂಡಿಸಿ ಮತ್ತೆ ಕೆಳಗೆ ಬರೆಯಿರಿ. ಹೀಗೆ 10 ಸ್ಥಾನದವರೆಗೆ ಮುಂದುವರಿದು ಎಡ ಹಾಗೂ ಬಲಭಾಗದ ಅಂಕಿಗಳನ್ನು ಗಮನಿಸುತ್ತಾ ಹೋದರೆ ನಿಮ್ಮ ಇಚ್ಛಿತ ಮಗ್ಗಿಯಾಗಿರುತ್ತದೆ.

ಉದಾ
69ರ ಮಗ್ಗಿ

+7	
6	9
13	8
20	7
27	6
34	5
41	4
48	3
55	2
62	1
69	0

ಇಲ್ಲಿ ಬಲಭಾಗದಲ್ಲಿ 9 ಇದೆ. ಆದ್ದರಿಂದ ಇಳಿಕೆ ಕ್ರಮದಲ್ಲಿ 9-8-7-6-5-4-3-2-1-0 ಎಂದು ಬರೆದಿದೆ. ನಂತರ ಎಡಭಾಗದಲ್ಲಿ 6 ಇದೆ. 1 ಹೆಚ್ಚಿಗೆ ಎಂದರೆ 7ನ್ನು 6ರ ತಲೆಮೇಲೆ ಬರೆದಿದೆ. ಈಗ 6 ಅಂಕಿಗಳು = 13ನ್ನು 6ರ ಕೆಳಗೆ ಬರೆದಿದೆ. ಮತ್ತೆ 13 + 7 = 20ನ್ನು 13ರ ಕೆಳಗೆ ಬರೆದಿದೆ. ಈಗ 20 + 7 = 27ನ್ನು 20ರ ಕೆಳಗೆ ಬರೆದಿದೆ. ಹೀಗೆ ಪ್ರತಿಬಾರಿ ಬಂದ ಉತ್ತರವನ್ನು 7ಕ್ಕೆ ಕೂಡಿಸುತ್ತಾ ಮುಂದೆ ಸಾಗಿ 10ಸ್ಥಾನಗಳವರೆಗೆ ಬರೆದಿದೆ. ಈಗ 69ರ ಮಗ್ಗಿ ತಯಾರಾಗಿದೆ.

ಪ್ರಾಮಾಣಿಕ ಚಾಣಕ್ಯ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಚಾಣಕ್ಯನು ಚಂದ್ರಗುಪ್ತ ಮೌರ್ಯನ ಆಸ್ಥಾನದ ರಾಜಗುರು ಹಾಗೂ ಮಂತ್ರಿ ಆಗಿದ್ದ. ತನ್ನ ಬುದ್ಧಿಮತ್ತೆ ಮತ್ತು ತಂತ್ರಗಾರಿಕೆಯಿಂದ ಪ್ರಸಿದ್ಧನಾಗಿದ್ದ



ಒಂದು ದಿನ ರಾಜ ಚಂದ್ರಗುಪ್ತ ಮೌರ್ಯ ಮಾರುವೇಷದಲ್ಲಿ ನಗರ ಪ್ರದಕ್ಷಿಣೆಗೆ ಹೊರಟ. ಅಲ್ಲಿ ಅವರಿಗೆ ಜನರ ಕಷ್ಟ ಸುಖಗಳು ತಿಳಿಯುತ್ತಿದ್ದವು




ರಾಜ ಹೀಗೆ ಸುತ್ತಾಡುವಾಗ ಕೆಲವರು ಚಳಿಯಲ್ಲಿ ನಡುಗುತ್ತಿರುವುದನ್ನು ಕಂಡ. ಅವರಿಗೆ ಕಂಬಳಿ ಒದಗಿಸಲು ಚಾಣಕ್ಯನಿಗೆ ಆಜ್ಞಾಪಿಸಿದ



ಚಾಣಕ್ಯನ ಮನೆಯಲ್ಲಿರಿಸಿದ ಆ ಕಂಬಳಿಗಳನ್ನು ಕದಿಯಲು ಕಳ್ಳರು ಹೊಂಚು ಹಾಕಿದ್ದರು. ಚಾಣಕ್ಯ ಮತ್ತು ಅವನ ತಾಯಿ ಹರಕು ಕಂಬಳಿ ಹೊದ್ದಿರುವುದನ್ನು ಕಂಡು ಅಚ್ಚರಿಯಾಗಿ ಅವರಿಗೆ ಕದಿಯುವ ಉದ್ದೇಶವೇ ಮರೆತುಹೋಯಿತು



ಅಷ್ಟೊಂದು ಕಂಬಳಿಗಳಿದ್ದರೂ ನೀವೇಕೆ ಹರಕು ಕಂಬಳಿ ಹೊದ್ದುಕೊಂಡಿದ್ದೀರಿ? ಎಂದು ಕಳ್ಳರು ಚಾಣಕ್ಯನ ಬಳಿ ಕೇಳಿದರು. ಏನೂ ಇಲ್ಲದವರಿಗೆ ಕೊಡಬೇಕಾದ್ದನ್ನು ಸ್ವಂತಕ್ಕೆ ಬಳಸಿದರೆ ನಾನೂ ಕಳ್ಳನಾಗುತ್ತೇನಲ್ಲವೇ ಎಂದು ಚಾಣಕ್ಯ ಉತ್ತರಿಸಿದ



ಕಳ್ಳರಿಗೆ ತಮ್ಮ ತಪ್ಪಿನ ಅರಿವಾಯಿತು. ಇನ್ನು ಮುಂದೆ ಕಳ್ಳತನ ಬಿಟ್ಟು ಪ್ರಾಮಾಣಿಕವಾಗಿ ದುಡಿಯುತ್ತೇವೆ ಎಂದು ಚಾಣಕ್ಯನಿಗೆ ಮಾತುಕೊಟ್ಟು ಹೊರಟರು. ನೀತಿ: ಪ್ರಾಮಾಣಿಕತೆಗೆ ಕಳ್ಳರನ್ನೂ ಪರಿವರ್ತಿಸುವ ಶಕ್ತಿ ಇದೆ

ಪದ - ಹಿಗ್ಗು

1. ಕೆನೆ 2. ಚಿರ 3. ಮುತ್ತು 4. ಹಸು 5. ಕತ್ತು 6. ಮಣಿ 7.ಹುರಿ 8.ಅರೆ

1		ಲ್ಲ		5		ಣ	
2		ಬ್ಬಿ		6		ನ್ನ	
3		ದ್ದ		7		ಕ್ಕ	
4		ತ್ತ		8		ತ್ತಾ	



ಅದಲು ಬದಲು ಕಂಚಿ ಕದಲು

1 ಕಡತಿನ್ನ = ———
2 ಗಡಿಕನ್ನ = ———
3 ನನ್ನ ಕಡತ = ———
4 ಹಾಸುವಿರಿ = ———

ಟ್ವೆಂಟಿ – 20 ಮ್ಯಾಚ್

ಶಬ್ದ ಅರ್ಥ ಹೊಂದಿಸಿ

1	ಕಲಿ	A	ಭವಿಷ್ಯ
2	ದಂಡ	B	ಸಣ್ಣ
3	ಮಾರಿ	C	ಸ್ತ್ರೀ
4	ಹರಿ	D	ಗವಿ
5	ಹೊಳೆ	E	ಹಳೆಯ
6	ತಿಂಡಿ	F	ಯಕ್ಷಿಣಿ
7	ಕಣಿ	G	ಪ್ರವಹಿಸು
8	ಗತ	H	ಘನಶಾಮ
9	ನೀರೆ	I	ದೇವತೆ
10	ಅರಿ	J	ಬಂದೂಕು

11	ಕೋವಿ	K	ಬಡಿಗೆ
12	ವೇಣಿ	L	ಮಿಂಚು
13	ಕೃಷ್ಣ	M	ಶೂರ
14	ಮೋಡಿ	N	ವೈರಿ
15	ಗುಹೆ	O	ನವೆ
16	ದುಡಿ	P	ಕೆಸರು
17	ಗುಡಿ	Q	ಚಂದ್ರ
18	ರಾಡಿ	R	ಒಂದು ವಾದ್ಯ
19	ಸಖಿ	S	ಜಡೆ
20	ಇಂದು	T	ಗೆಳತಿ

ಶಬ್ದಗಳಲ್ಲಿ ಸರಸ

ಬಿಂಬ ಪ್ರತಿಬಿಂಬ ಪದಗಳು

ಇಲ್ಲಿರುವ ಪದಗಳನ್ನು ಎಡದಿಂದ ಓದಿದರೆ ಒಂದು ಅರ್ಥ ಬಲದಿಂದ ಓದಿದರೆ ಇನ್ನೊಂದು ಅರ್ಥ ಬರುವುದು.

DRAW	X	WARD
TENDER	X	REDNET
LIVE	X	EVIL
MAD	X	DAM
TRAMS	X	SMART
TOP	X	POT
TRAP	X	PART
POTS	X	STOP
EDIT	X	TIDE
ROOM	X	NET

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಹಿಗ್ಗು: 1 ಕಿಚಡಿ 2 ಬಾನಾಡಿ 3 ಅಬ್ಬರ 4 ವಠಾರ 5 ಪಣತಿ 6 ಕಿಲಾರಿ 7 ಪಗಾರ 8 ಶಿಶಿರ

ಅದಲು ಬದಲು ಕಂಚಿ ಕದಲು: 1 ರಾಜನಸರ 2 ಅಮರನಾಥ 3 ಜನತಾದಳ 4 ಮತದಾನ

ಟ್ವೆಂಟಿ – 20 ಮ್ಯಾಚ್: A ವಿಭಾಗ: 1-B 2-A 3-B 4-B 5-B 6-A 7-B 8-A 9-A 10-B
B ವಿಭಾಗ: 1-J 2-H 3-F 4-E 5-G 6-D 7-I 8-A 9-C 10-B

ಟ್ವೆಂಟಿ – 20 ಮ್ಯಾಚ್: A) 1-C 2-E 3-A 4-F 5-G 6-J 7-H 8-B 9-D 10-I
B) 1-A 2-E 3-F 4-G 5-H 6-I 7-B 8-D 9-J 10-C

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಪ್ರವೀಣ ಚಿಕ್ಕೋಡಿ
ಬಾಗಲಕೋಟೆ



ಸುಪ್ರೀತ ಪ್ರವೀಣ್
ಕಲಬುರಗಿ




ಉದಾತ್ತ ಸು. ನಿಗಳೆ, ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ಅಹಮದಾಬಾದ್‌ನಲ್ಲಿ ಇಂದು ರೋಹಿತ್ ಬಳಗಕ್ಕೆ ವೆಸ್ಟ್ ಇಂಡೀಸ್ ಸವಾಲು: ಐತಿಹಾಸಿಕ ಪಂದ್ಯವಾಡಲಿರುವ ಭಾರತ

ಸಹಸ್ರ ಕಿರೀಟಕ್ಕೆ ಜಯದ ಮೆರುಗು ತುಂಬುವ ಛಲ


ಕಪಿಲ್ ದೇವ್ ಮಹೇಂದ್ರಸಿಂಗ್ ಧೋನಿ


ರಾಹುಲ್ ದ್ರಾವಿಡ್ – ವಿರಾಟ್ ಕೊಹ್ಲಿ

ಅಹಮದಾಬಾದ್ (ಪಿಟಿಐ): ಮೂರು ದಶಕಗಳ ಹಿಂದೆ ಲಾರ್ಡ್ಸ್ ಮೈದಾನದ ಆ ಅಟ್ಟಣಿಗೆಯ ಮೇಲೆ ಮಿರಿಮಿರಿ ಮಿಂಚುವ ವಿಶ್ವಕಪ್‌ಗೆ ಕಪಿಲ್ ದೇವ್ ಮುತ್ತಿಡುವುದರೊಂದಿಗೆ ಕ್ರಿಕೆಟ್ ಆಟದ ನವಯುಗ ಆರಂಭವಾಯಿತು.

ಟೆಸ್ಟ್ ಕ್ರಿಕೆಟ್‌ನ ಜನಪ್ರಿಯತೆಯನ್ನು ಮೀರಿ ಬೆಳೆಯುವ ಏಕದಿನ ಮಾದರಿಗೆ ಶರವೇಗ ಸಿಕ್ಕಿದ್ದೂ ಆಗಲೇ. ಭಾರತ ತಂಡ 1983ರ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಒಂಬತ್ತು ವರ್ಷಗಳ ಮುನ್ನ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿತ್ತು. ಆದರೆ ಹೇಳಿಕೊಳ್ಳುವಂತಹ ಸಾಧನೆಯನ್ನು ಮಾಡಿರಲಿಲ್ಲ. 'ಕಪ್ಪುಕುದುರೆ'ಯಾಗಿ ಕಣಕ್ಕಿಳಿದಿದ್ದ ತಂಡವೊಂದು ಬಲಿಷ್ಠ ವೆಸ್ಟ್ ಇಂಡೀಸ್ ತಂಡವನ್ನೇ 'ಚಿತ್' ಮಾಡುವುದು ಹೇಗೆಂಬುದು ತೋರಿಸಿಕೊಟ್ಟಿತ್ತು. ಸೀಮಿತ ಓವರ್‌ಗಳ ಕ್ರಿಕೆಟ್‌ನ ರೋಚಕತೆಗಳ ಕಣಜವನ್ನು ಅನಾವರಣ ಮಾಡಿತ್ತು. ಇಂದು ಕ್ರಿಕೆಟ್ ಎಲ್ಲ ಆಯಾಮಗಳಲ್ಲಿಯೂ ಶ್ರೀಮಂತವಾಗುವುದಕ್ಕೆ ಮುನ್ನುಡಿ ಬರೆದಿದ್ದು ಭಾರತ. ಈ ಹೆಗ್ಗಳಿಕೆಯ ಕಿರೀಟಕ್ಕೆ ಈಗ ಮತ್ತೊಂದು ರತ್ನ ಸೇರ್ಪಡೆಯಾಗುತ್ತಿದೆ.

1000ನೇ ಏಕದಿನ ಪಂದ್ಯವಾಡಲು ಭಾರತ ಸಿದ್ಧವಾಗಿದೆ. ಭಾನುವಾರ ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಅಂಗಳದಲ್ಲಿ ವೆಸ್ಟ್ ಇಂಡೀಸ್ ಎದುರಿನ ಪಂದ್ಯದಲ್ಲಿ ಆಡುವುದರೊಂದಿಗೆ ಈ ಮಾದರಿಯಲ್ಲಿ ಸಹಸ್ರದ ಮೈಲುಗಲ್ಲು ಸ್ಥಾಪಿಸಲಿದೆ. ಈ ಸಾಧನೆ ಮಾಡಿದ ಮೊದಲ ತಂಡವಾಗಲಿದೆ. ಇದರೊಂದಿಗೆ ರಾಹುಲ್ ದ್ರಾವಿಡ್ –ರೋಹಿತ್ ಶರ್ಮಾ ಜೋಡಿಯ ಯುಗಾರಂಭವಾಗಲಿದೆ.

ಅಜಿತ್‌ರಿಂದ ರೋಹಿತ್‌ವರೆಗೆ..

1974ರಲ್ಲಿ ಲೀಡ್ಸ್‌ನಲ್ಲಿ ಅಜಿತ್ ವಾಡೇಕರ್ ನಾಯಕತ್ವದ ತಂಡವು ಇಂಗ್ಲೆಂಡ್ ವಿರುದ್ಧ ಮೊದಲ ಏಕದಿನ ಪಂದ್ಯದಲ್ಲಿ ಆಡಿತ್ತು. ಕರ್ನಾಟಕದ ಜಿ.ಆರ್. ವಿಶ್ವನಾಥ್ ಮತ್ತು ಬ್ರಿಜೇಶ್ ಪಟೇಲ್ ಕೂಡ ಆಡಿದ್ದರು. ಅದರಲ್ಲಿ ಬ್ರಿಜೇಶ್ 82 ರನ್ ಬಾರಿಸಿದ್ದರು. ಆದರೆ, ತಂಡವು ಸೋಲನುಭವಿಸಿತ್ತು. 1975 ಮತ್ತು 1979ರಲ್ಲಿ ನಡೆದ ವಿಶ್ವಕಪ್ ಟೂರ್ನಿಗಳಲ್ಲಿ ವಿಂಡೀಸ್ ಚಾಂಪಿಯನ್ ಆಗಿತ್ತು. 1983ರಲ್ಲಿ ನಡೆದ ಜಾದೂ ಕ್ರಿಕೆಟ್ ಲೋಕದ ಕಣ್ಣುಕುಕ್ಕಿತು.

ಅದರಲ್ಲೂ ಜಿಂಬಾಬ್ವೆ ಎದುರು ಕಪಿಲ್ ಬಾರಿಸಿದ ಅಜೇಯ 175 ರನ್‌ಗಳು ಕ್ರಿಕೆಟ್‌ನ ಇತಿಹಾಸವನ್ನೇ ಬದಲಿಸಿತು. ಏಕದಿನ ಮಾದರಿಯಲ್ಲಿ ಶತಕ ಬಾರಿಸಿದ ಮೊದಲ ಭಾರತೀಯನಾದ ಕಪಿಲ್, ಮುಂದೆ ವಿಶ್ವಕಪ್ ಜಯಿಸಿದ ಮೊದಲ ನಾಯಕನೂ ಆದರು. ಈ ಮಾದರಿಯ ರೋಚಕ ಸಂಗತಿಗಳು ಜನರನ್ನು ಆಕರ್ಷಿಸಿದ್ದನ್ನು ಕಂಡ ವಾಣಿಜ್ಯ ಸಂಸ್ಥೆಗಳು ತಮ್ಮ ಉತ್ಪನ್ನಗಳ ಪ್ರಚಾರಕ್ಕೆ ಮುಗಿಬಿದ್ದವು.

ಅದೇ ಕಾಲಕ್ಕೆ ಬಂದ ಟೆಲಿವಿಜನ್ ಮತ್ತು 1991ರಲ್ಲಿ ಆರ್ಥಿಕ ಉದಾರೀಕರಣ ನೀತಿಯಿಂದಾಗಿ ಪ್ರಾಯೋಜಕರಿಗೆ ಕ್ರಿಕೆಟ್ ಚಿನ್ನದ ಮೊಟ್ಟೆಯಿಡುವ ಕೋಳಿಯಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಪಂದ್ಯಗಳು ಆಯೋಜನೆಗೊಂಡವು. ಭಾರತ ತಂಡವು ಉಳಿದೆಲ್ಲರನ್ನೂ ಹಿಂದಿಕ್ಕಿ ಮುನ್ನುಗಿತ್ತು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ವಿಶ್ವದ ಶ್ರೀಮಂತ ಕ್ರೀಡಾಸಂಸ್ಥೆಗ ಳಲ್ಲಿ ಒಂದಾಯಿತು. ಕ್ರಿಕೆಟಿಗರೂ ಶತಕೋಟಿಯ ಒಡೆಯರಾದರು. ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಮೊಹಮ್ಮದ್ ಅಜರುದ್ದೀನ್, ಅನಿಲ್ ಕುಂಬ್ಳೆ, ಸೌರವ್ ಗಂಗೂಲಿ, ಮಹೇಂದ್ರಸಿಂಗ್ ಧೋನಿ, ಯುವರಾಜ್ ಸಿಂಗ್, ವಿರೇಂದ್ರ ಸೆಹ್ವಾಗ್, ಜಾವಗಲ್ ಶ್ರೀನಾಥ್, ಹರಭಜನ್ ಸಿಂಗ್, ಜಹೀರ್ ಖಾನ್ ಮತ್ತಿತರರು ಮಾಡಿದ ದಾಖಲೆಗಳು ಕ್ರಿಕೆಟ್ ಜನಪ್ರಿಯತೆಯನ್ನು ಉತ್ತುಂಗಕ್ಕೇರಿಸಿದವು. ಇದೀಗ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಕೆ.ಎಲ್. ರಾಹುಲ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ರವೀಂದ್ರ ಜಡೇಜ ಅವರು ಪರಂಪರೆಯನ್ನು ಮುಂದುವರಿಸಿದ್ದಾರೆ.

ಇವರಷ್ಟೇ ಅಲ್ಲ. ದೇಶದ ಬೇರೆ ಬೇರೆ ರಾಜ್ಯಗಳಿಂದ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿ, ಮಿಂಚಿ ಮರೆಯಾದ ಪ್ರತಿಭೆಗಳ ಯೋಗದಾನವೂ ದೊಡ್ಡದೇ. ಟ್ವೆಂಟಿ–20 ಕ್ರಿಕೆಟ್ ಭರಾಟೆಯಲ್ಲಿಯೂ ತನ್ನ ನೈಜತೆಯನ್ನು ಉಳಿಸಿಕೊಂಡಿರುವ ಏಕದಿನ ಕ್ರಿಕೆಟ್ ಮನರಂಜನೆಯ ಮೂಲವಾಗಿ ನಿರಂತರವಾಗಿ ಸಾಗುತ್ತಿದೆ.

ಅತಿ ಹೆಚ್ಚು ಏಕದಿನ ಪಂದ್ಯಗಳು

ದೇಶ	ಪಂದ್ಯ	ಜಯ	ಸೋಲು	ಫಲಿತಾಂಶವಿಲ್ಲ	ಟೈ
ಭಾರತ	999	518	431	41	9
ಆಸ್ಟ್ರೇಲಿಯಾ	958	581	334	34	9
ಪಾಕಿಸ್ತಾನ	936	490	417	20	9


ಭಾರತದ ಏಕದಿನ ಕ್ರಿಕೆಟ್ ಮೈಲುಗಲ್ಲುಗಳು

ಸಂಖ್ಯೆ	ಎದುರಾಳಿ	ಫಲಿತಾಂಶ	ಸ್ಥಳ	ಇಸವಿ
1	ಇಂಗ್ಲೆಂಡ್	ಸೋಲು	ಲೀಡ್ಸ್	1974
100	ಆಸ್ಟ್ರೇಲಿಯಾ	ಸೋಲು	ಶ್ರೀನಗರ	1986
200	ಆಸ್ಟ್ರೇಲಿಯಾ	ಸೋಲು	ಸಿಡ್ನಿ	1992
300	ದಕ್ಷಿಣ ಆಫ್ರಿಕಾ	ಸೋಲು	ರಾಜ್‌ಕೋಟ್	1996
400	ಕಿನ್ಯಾ	ಗೆಲುವು	ಬ್ರಿಸ್ಟಲ್	1999
500	ಇಂಗ್ಲೆಂಡ್	ಫಲಿತಾಂಶವಿಲ್ಲ	ಚೆಸ್ಟರ್ ಲಿ ಸ್ಟ್ರೀಟ್	2002
600	ಶ್ರೀಲಂಕಾ	ಜಯ	ರಾಜ್‌ಕೋಟ್	2005
700	ಇಂಗ್ಲೆಂಡ್	ಜಯ	ಬೆಂಗಳೂರು	2008
800	ಆಸ್ಟ್ರೇಲಿಯಾ	ಸೋಲು	ಸಿಡ್ನಿ	2012
900	ನ್ಯೂಜಿಲೆಂಡ್	ಜಯ	ಧರ್ಮಶಾಲ	2016
999	ದಕ್ಷಿಣ ಆಫ್ರಿಕಾ	ಸೋಲು	ಕೇಪ್‌ಟೌನ್	2022

ಭಾರತದ ಗರಿಷ್ಠ ಮೊತ್ತ				
ರನ್	ಓವರ್	ಎದುರಾಳಿ	ವರ್ಷ	ಸ್ಥಳ
5ಕ್ಕೆ418	50	ವೆಸ್ಟ್ ಇಂಡೀಸ್	2011	ಇಂದೋರ್
ಭಾರತದ ಕನಿಷ್ಠ ಮೊತ್ತ				
ರನ್	ಓವರ್	ಎದುರಾಳಿ	ವರ್ಷ	ಸ್ಥಳ
54	26.3	ಶ್ರೀಲಂಕಾ	2000	ಶಾರ್ಜಾ

ಅಂಕಿ ಅಂಶಗಳು: ಎಚ್.ಆರ್.ಗೋಪಾಲಕೃಷ್ಣ ಮತ್ತು ಪಿಟಿಐ


ಸಚಿನ್ ತೆಂಡೂಲ್ಕರ್


ಅಜಿತ್ ವಾಡೇಕರ್


ಬ್ರಿಜೇಶ್ ಪಟೇಲ್


ವಿಶ್ವನಾಥ್


ಅನಿಲ್ ಕುಂಬ್ಳೆ


ಸೌರವ್ ಗಂಗೂಲಿ

ಪ್ರಮುಖ ಅಂಶಗಳು

- 2007ರಲ್ಲಿ ಪೋರ್ಟ್ ಆಫ್ ಸ್ಪೇನ್‌ನಲ್ಲಿ ಬರ್ಮುಡಾವನ್ನು **257** ರನ್‌ಗಳಿಂದ ಸೋಲಿಸಿದ್ದು ಭಾರತದ ಅತಿದೊಡ್ಡ ಜಯ. ವೆಲಿಂಗ್ಟನ್‌ನಲ್ಲಿ ನ್ಯೂಜಿಲೆಂಡ್ ಎದುರು 1990ರಲ್ಲಿ, ಕೊಲಂಬೊದಲ್ಲಿ ಶ್ರೀಲಂಕಾ ಎದುರು 1993ರಲ್ಲಿ ಮತ್ತು ಜೈಪುರದಲ್ಲಿ ದಕ್ಷಿಣ ಆಫ್ರಿಕಾ ಎದುರು 2010ರಲ್ಲಿ ತಂಡ ಒಂದು ರನ್ ಅಂತರದಲ್ಲಿ ಗೆಲುವು ಸಾಧಿಸಿತ್ತು.
- ಭಾರತದ ಪರ ಅತಿ ಹೆಚ್ಚು ಪಂದ್ಯ ಆಡಿದವರು ಸಚಿನ್ ತೆಂಡೂಲ್ಕರ್–**463;** ಹೆಚ್ಚು ರನ್ ಕಲೆ ಹಾಕಿದವರೂ ಸಚಿನ್ ತೆಂಡೂಲ್ಕರ್–**18,426;** ಪಂದ್ಯದಲ್ಲಿ ಗರಿಷ್ಠ ಮೊತ್ತ ಗಳಿಸಿದವರು ರೋಹಿತ್ ಶರ್ಮಾ–**264,** ಶ್ರೀಲಂಕಾ ಎದುರು ಕೋಲ್ಕತ್ತದಲ್ಲಿ 2014ರಲ್ಲಿ. ಇವರು ಮೂರು ಬಾರಿ 200ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ.
- ಭಾರತದ ಪರ ಅತಿ ಹೆಚ್ಚು ಶತಕ ಗಳಿಸಿದವರು ಸಚಿನ್ ತೆಂಡೂಲ್ಕರ್–**49;** ಅತಿ ಹೆಚ್ಚು ಅರ್ಧಶತಕ ಗಳಿಸಿದವರು ಕೂಡ ಸಚಿನ್ ತೆಂಡೂಲ್ಕರ್–96; ಹೆಚ್ಚು ಬಾರಿ ಶೂನ್ಯಕ್ಕೆ ಔಟಾದವರು ಸಚಿನ್ ತೆಂಡೂಲ್ಕರ್–20.
- ದೇಶದ ಪರ ಅತಿ ಹೆಚ್ಚು ವಿಕೆಟ್ ಗಳಿಸಿದವರು ಅನಿಲ್ ಕುಂಬ್ಳೆ –334; ಪಂದ್ಯದಲ್ಲಿ ಶ್ರೇಷ್ಠ ಬೌಲಿಂಗ್ ಸ್ಟುವರ್ಟ್ ಬಿನ್ನಿ–4ಕ್ಕೆ6, ಬಾಂಗ್ಲಾದೇಶ ವಿರುದ್ಧ ಮೀರ್‌ಪುರದಲ್ಲಿ 2014; ಸರಣಿಯಲ್ಲಿ ಹೆಚ್ಚು ವಿಕೆಟ್ ಗಳಿಸಿದವರು ಜಹೀರ್ ಖಾನ್–21 ವಿಕೆಟ್; ಹೆಚ್ಚು ರನ್ ಕೊಟ್ಟವರು ಭುವನೇಶ್ವರ್ ಕುಮಾರ್–106, ದಕ್ಷಿಣ ಆಫ್ರಿಕಾ ಎದುರು ಮುಂಬೈಯಲ್ಲಿ, 2015.
- ಹೆಚ್ಚು ಬ್ಯಾಟರ್‌ಗಳನ್ನು ಔಟ್ ಮಾಡಿದ ವಿಕೆಟ್ ಕೀಪರ್–ಮಹೇಂದ್ರ ಸಿಂಗ್ ಧೋನಿ– 438 (318 ಕ್ಯಾಚ್, 120 ಸ್ಟಂಪಿಂಗ್); ಪಂದ್ಯದಲ್ಲಿ ಹೆಚ್ಚು ಔಟ್ ಮಾಡಿದ ವಿಕೆಟ್ ಕೀಪರ್–ಮಹೇಂದ್ರ ಸಿಂಗ್ ಧೋನಿ–6 ವಿಕೆಟ್ (5 ಕ್ಯಾಚ್, 1 ಸ್ಟಂಪಿಂಗ್; ಇಂಗ್ಲೆಂಡ್ ಎದುರು ಲೀಡ್ಸ್‌ನಲ್ಲಿ 2007)
- ಹೆಚ್ಚು ಕ್ಯಾಚ್ ಪಡೆದ ಭಾರತದ ಆಟಗಾರ ಮೊಹಮ್ಮದ್ ಅಜರುದ್ದೀನ್–156.
- **ಅತಿದೊಡ್ಡ ಜೊತೆಯಾಟ:** ಸಚಿನ್ ತೆಂಡೂಲ್ಕರ್–ರಾಹುಲ್ ದ್ರಾವಿಡ್, 2ನೇ ವಿಕೆಟ್‌ಗೆ 331 ರನ್. ನ್ಯೂಜಿಲೆಂಡ್ ಎದುರು ಹೈದರಾಬಾದ್‌ನಲ್ಲಿ, 1999; ನಾಯಕನಾಗಿ ಹೆಚ್ಚು ಪಂದ್ಯ–ಮಹೇಂದ್ರ ಸಿಂಗ್ ಧೋನಿ–200 ಪಂದ್ಯ (110ರಲ್ಲಿ ಜಯ, 74ರಲ್ಲಿ ಸೋಲು, 5 ಟೈ, 11ರಲ್ಲಿ ಫಲಿತಾಂಶವಿಲ್ಲ).
- **ದ್ವಿಶತಕದ ವಿಶ್ವದಾಖಲೆ:** ಏಕದಿನ ಮಾದರಿಯಲ್ಲಿ ಮೊಟ್ಟಮೊದಲ ದ್ವಿಶತಕ ಬಾರಿಸಿದ್ದು ಸಚಿನ್ ತೆಂಡೂಲ್ಕರ್. ನಂತರ ವೀರೇಂದ್ರ ಸೆಹ್ವಾಗ್ ಮತ್ತು ಮೂರು ದ್ವಿಶತಕಗಳನ್ನು ಬಾರಿಸಿದ ರೋಹಿತ್ ಶರ್ಮಾ.

ಆತ್ಮವಿಶ್ವಾಸದಲ್ಲಿ ವಿಂಡೀಸ್

ಅಹಮದಾಬಾದ್ (ಪಿಟಿಐ): ಇಂಗ್ಲೆಂಡ್ ಎದುರಿನ ಟಿ20 ಸರಣಿಯಲ್ಲಿ ಅಮೋಘ ಜಯ ಸಾಧಿಸಿರುವ ಕೀರನ್ ಪೊಲಾರ್ಡ್ ನಾಯಕತ್ವದ ವೆಸ್ಟ್ ಇಂಡೀಸ್ ಬಳಗವು ಭಾರತಕ್ಕೆ ಬಂದಿಳಿದಿದೆ.


ಕೀರನ್ ಪೊಲಾರ್ಡ್

ತನ್ನ ತವರಿನಲ್ಲಿ ಅಮೋಘವಾಗಿ ಆಡಿದ್ದ ವಿಂಡೀಸ್ ಇಲ್ಲಿಯೂ ಅದೇ ಲಯವನ್ನು ಮುಂದುವರಿಸುವ ಛಲದಲ್ಲಿದೆ. ಅಲ್ಲದೇ ಮುಂದಿನ ವಾರ ನಡೆಯಲಿರುವ ಐಪಿಎಲ್ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ಫ್ರ್ಯಾಂಚೈಸಿಗಳ ಗಮನ ಸೆಳೆಯುವ ಗುರಿಯೂ ತಂಡದ ಆಟಗಾರರಲ್ಲಿದೆ. ಆದ್ದರಿಂದ ಆತಿಥೇಯ ಭಾರತಕ್ಕೆ ದಿಟ್ಟ ಸವಾಲೊಡ್ಡುವ ವಿಶ್ವಾಸದಲ್ಲಿದೆ. ಏಕದಿನ ಮಾದರಿಯಲ್ಲಿ ಉಭಯ ತಂಡಗಳು 133 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಅದರಲ್ಲಿ ಭಾರತವು 64 ರಲ್ಲಿ ಮತ್ತು ವಿಂಡೀಸ್ 63ರಲ್ಲಿ ಜಯಿಸಿವೆ. ಎರಡು ಪಂದ್ಯ ಟೈ ಆಗಿವೆ. ನಾಲ್ಕರಲ್ಲಿ ಫಲಿತಾಂಶ ಹೊರಹೊಮ್ಮಿಲ್ಲ.


ರೋಹಿತ್ ಶರ್ಮಾ

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ಶಾರ್ದೂಲ್ ಠಾಕೂರ್, ದೀಪಕ್ ಚಾಹರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಯಜುವೇಂದ್ರ ಚಾಹಲ್, ರವಿ ಬಿಷ್ಣೋಯಿ, ಮಯಂಕ್ ಅಗರವಾಲ್, ಪ್ರಸಿದ್ಧ ಕೃಷ್ಣ, ಆವೇಶ್ ಖಾನ್, ವಾಷಿಂಗ್ಟನ್ ಸುಂದರ್.

ವೆಸ್ಟ್ ಇಂಡೀಸ್: ಕೀರನ್ ಪೊಲಾರ್ಡ್ (ನಾಯಕ), ಶಾಯ್ ಹೋಪ್ (ವಿಕೆಟ್‌ಕೀಪರ್), ಬ್ರೆಂಡನ್ ಕಿಂಗ್, ನಿಕೊಲಸ್ ಪೂರನ್, ಶಾಮ್ರಾ ಬ್ರೂಕ್ಸ್, ಡರೆನ್ ಬ್ರಾವೊ, ಜೇಸನ್ ಹೋಲ್ಡರ್, ಫ್ಯಾಬಿಯನ್ ಅಲೆನ್, ರೊಮೆರಿಯೊ ಶೇಫರ್ಡ್, ಒಡಿಯನ್ ಸ್ಮಿತ್, ಅಲ್ಜರಿ ಜೋಸೆಫ್, ಅಕೀಲ್ ಹುಸೇನ್, ಹೇಡನ್ ವಾಲ್ಶ್, ಕೆಮರ್ ರೋಚ್, ಎನ್‌ಕ್ರುಮಾ ಬಾನೆರ್

ಪಂದ್ಯ ಆರಂಭ: ಮಧ್ಯಾಹ್ನ 1.30; ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ದಾಖಲೆಯ ಹೊಸ್ತಿಲಲ್ಲಿ ವಿರಾಟ್ ಕೊಹ್ಲಿ

ಭಾರತ ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಬ್ಯಾಟಿಂಗ್‌ನಲ್ಲಿ ದಾಖಲೆಯೊಂದರ ಸನಿಹದಲ್ಲಿದ್ದಾರೆ.

ಭಾನುವಾರದ ಪಂದ್ಯದಲ್ಲಿ ಅವರು ಆರು ರನ್ ಗಳಿಸಿದರೆ ಏಕದಿನ ಕ್ರಿಕೆಟ್ ಮಾದರಿಯಲ್ಲಿ ಸ್ವದೇಶಿ ನೆಲದಲ್ಲಿ ಐದು ಸಾವಿರ ರನ್‌ಗಳನ್ನು ಪೂರೈಸಲಿದ್ದಾರೆ. ಸಚಿನ್ ತೆಂಡೂಲ್ಕರ್ ನಂತರ ಈ ಸಾಧನೆ ಮಾಡಿದ ಬ್ಯಾಟ್ಸ್‌ಮನ್ ಎನಿಸಿಕೊಳ್ಳಲಿದ್ದಾರೆ. ಅವರು ಇದುವರೆಗೆ ಭಾರತದಲ್ಲಿ ಆಡಿರುವ 95 ಇನಿಂಗ್ಸ್‌ಗಳಲ್ಲಿ 4994 ರನ್‌ಗಳನ್ನು ಗಳಿಸಿದ್ದಾರೆ. ಅವರು ಈ ಮಾದರಿಯಲ್ಲಿ ಒಟ್ಟು 12285 ರನ್‌ಗಳನ್ನು ಗಳಿಸಿದ್ದಾರೆ. ಸಚಿನ್ ಭಾರತದಲ್ಲಿ 160 ಇನಿಂಗ್ಸ್‌ಗಳಲ್ಲಿ 6976 ರನ್ ಗಳಿಸಿದ್ದಾರೆ.

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ಚೆಟ್ರಿ ಕಾಲ್ಚಳಕ; ಬಿಎಫ್‌ಸಿಗೆ ಜಯ


ಗೋಲು ಗಳಿಸಿ ಸಂಭ್ರಮಿಸಿದ ಬಿಎಫ್‌ಸಿಯ ಸುನಿಲ್ ಚೆಟ್ರಿ

ಬ್ಯಾಂಬೊಲಿಮ್ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡದ ನಾಯಕ ಸುನಿಲ್ ಚೆಟ್ರಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಅತಿಹೆಚ್ಚು ಗೋಲು ಗಳಿಸಿದವರ ದಾಖಲೆ ಸಮಗಟ್ಟಿದರು. ಅವರೊಂದಿಗೆ ಮಿಂಚಿದ ಕ್ಲಿಟನ್ ಸಿಲ್ವಾ ಎರಡು ಗೋಲು ಗಳಿಸಿದರು. ಇವರಿಬ್ಬರ ಅಮೋಘ ಆಟದ ನೆರವಿನಿಂದ ತಂಡ ಭರ್ಜರಿ ಜಯ ಗಳಿಸಿತು.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಜೆಮ್ಷೆಡ್‌ಪುರ ಎಫ್‌ಸಿ (ಜೆಎಫ್‌ಸಿ) ತಂಡವನ್ನು ಬಿಎಫ್‌ಸಿ 3–1ರಿಂದ ಮಣಿಸಿತು. ಮೊದಲ ನಿಮಿಷದಲ್ಲೇ ಚುಕ್ವು ಗೋಲು ಗಳಿಸಿ ಜೆಎಫ್‌ಸಿಗೆ ಮುನ್ನಡೆ ಗಳಿಸಿಕೊಟ್ಟಿದ್ದರು. ದ್ವಿತೀಯಾರ್ಧದಲ್ಲಿ (55ನೇ ನಿ) ಸುನಿಲ್ ಚೆಟ್ರಿ ಚೆಂಡನ್ನು ಗುರಿಸೇರಿಸಿದರು. ಇದು ಟೂರ್ನಿಯಲ್ಲಿ ಅವರು ಗಳಿಸಿದ 49ನೇ ಗೋಲು. ಈ ಮೂಲಕ ಹೈದರಾಬಾದ್ ಎಫ್‌ಸಿಯ ಬಾರ್ತೊಲೊಮೆ ಒಗ್ಬೆಚೆ ಅವರ ದಾಖಲೆ ಸಮಗಟ್ಟಿದರು. 62 ಮತ್ತು 90ನೇ ನಿಮಿಷದಲ್ಲಿ ಕ್ಲೀಟನ್ ಗೋಲು ಗಳಿಸಿ ತಂಡಕ್ಕೆ ಜಯದ ಕಾಣಿಕೆ ನೀಡಿದರು. ಈ ಜಯದೊಂದಿಗೆ ಬಿಎಫ್‌ಸಿ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು.

ಚೆನ್ನೈಯಿನ್–ಮುಂಬೈ ಮುಖಾಮುಖಿ: ಫತೋರ್ಡದ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಗಳು ಮುಖಾಮುಖಿಯಾಗಲಿವೆ.

ಹಿಂದಿನ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ತಂಡ ಪಾಯಿಂಟ್ ಪಟ್ಟಿಯ ಕೊನೆಯ ಸ್ಥಾನದಲ್ಲಿರುವ ಎಸ್‌ಸಿ ಈಸ್ಟ್ ಬೆಂಗಾಲ್ ಎದುರು 2–2ರ ಡ್ರಾ ಮಾಡಿಕೊಂಡಿತ್ತು. ಇದರಿಂದಾಗಿ ಅಗ್ರ ನಾಲ್ಕರಲ್ಲಿ ಸ್ಥಾನ ಗಳಿಸುವ ಅವಕಾಶವನ್ನು ಕಳೆದುಕೊಂಡಿತ್ತು. ತಂಡದ ಖಾತೆಯಲ್ಲಿ ಈಗ 19 ಪಾಯಿಂಟ್‌ಗಳು ಇವೆ. 14 ಪಂದ್ಯಗಳನ್ನು ತಂಡ ಆಡಿದೆ.

ಮುಂಬೈ ಸಿಟಿ ಎಫ್‌ಸಿ ಕೂಡ ಈ ಬಾರಿ ನಿರಾಶೆ ಅನುಭವಿಸಿದೆ. 13 ಪಂದ್ಯಗಳ ಪೈಕಿ ಐದನ್ನು ಮಾತ್ರ ಗೆದ್ದಿರುವ ತಂಡದ ಬಳಿ 19 ಪಾಯಿಂಟ್‌ಗಳು ಇವೆ.

ಚೆನ್ನೈಯಿನ್ ಎಫ್‌ಸಿಯಲ್ಲಿದ್ದ ಲಾಲಿಯನ್‌ಜ್ವಾಲ ಚಾಂಗ್ಟೆ ಜನವರಿಯಲ್ಲಿ ಆದ ಬದಲಾವಣೆಯ ಭಾಗವಾಗಿ ಈಗ ಮುಂಬೈ ತಂಡದಲ್ಲಿದ್ದಾರೆ. ಎಟಿಕೆ ಮೋಹನ್ ಬಾಗನ್ ಎದುರಿನ ಪಂದ್ಯದಲ್ಲಿ ಬದಲಿ ಆಟಗಾರನಾಗಿ ಆಡಿದ್ದರು. ಚೆನ್ನೈಯಿನ್ ತಂಡದಲ್ಲಿ 53 ಪಂದ್ಯಗಳನ್ನು ಆಡಿರುವ ಅವರು 12 ಗೋಲುಗಳನ್ನು ಗಳಿಸಿದ್ದು ಎರಡು ಗೋಲುಗಳಿಗೆ ಅಸಿಸ್ಟ್ ಮಾಡಿದ್ದಾರೆ.

ಚೆನ್ನೈಯಿನ್ ತಂಡದ ನೆರಿಜಸ್ ವಲ್‌ಸ್ಕಿಸ್ ಅವರು ವೈಯಕ್ತಿಕ 50ನೇ ಪಂದ್ಯ ಆಡಲು ಸಜ್ಜಾಗುತ್ತಿದ್ದಾರೆ. ಭಾನುವಾರದ ಪಂದ್ಯದಲ್ಲಿ ಗೆದ್ದರೆ ಅದು ಐಎಸ್‌ಎಲ್‌ನಲ್ಲಿ ಚೆನ್ನೈಯಿನ್ ತಂಡದ 50ನೇ ಜಯ ಆಗಲಿದೆ. ಈ ಆವೃತ್ತಿಯಲ್ಲಿ ವಲ್‌ಸ್ಕಿಸ್ ಎರಡು ಗೋಲು ಮಾತ್ರ ಗಳಿಸಿದ್ದಾರೆ. ಅವೆರಡೂ ಎಫ್‌ಸಿ ಗೋವಾ ಎದುರಿನ ಪಂದ್ಯದಲ್ಲಿ ಬಂದಿದ್ದವು. ಆ ಗೋಲುಗಳನ್ನು ಬಿಟ್ಟರೆ, ಕಳೆದ 15 ಪಂದ್ಯಗಳಲ್ಲಿ ಅವರಿಗೆ ಚೆಂಡನ್ನು ಗುರಿ ಮುಟ್ಟಿಸಲು ಆಗಲಿಲ್ಲ.

ಹಾಲಿ ಚಾಂಪಿಯನ್ ಮುಂಬೈ ಕಳೆದ ಏಳು ಪಂದ್ಯಗಳಲ್ಲಿ ಜಯ ಕಾಣಲಿಲ್ಲ. ಈ ಆವೃತ್ತಿಯ ಆರಂಭದ ಕೆಲವು ಪಂದ್ಯಗಳಲ್ಲಿ ಆಕ್ರಮಣ ವಿಭಾಗದಲ್ಲಿ ಭರ್ಜರಿ ಆಟವಾಡಿದ್ದ ತಂಡ ಈಗ ಸಪ್ಪೆಯಾಗಿದೆ. ರಕ್ಷಣಾ ವಿಭಾಗವೂ ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ. ತಂಡ ಈ ವರೆಗೆ 22 ಗೋಲುಗಳನ್ನು ಬಿಟ್ಟುಕೊಟ್ಟಿದೆ.

ಪ್ರೊ ಕಬಡ್ಡಿ ಟೂರ್ನಿ: ಮುಂಬಾ, ಯೋಧಾಗೆ ರೋಚಕ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಷೇಕ್ ಸಿಂಗ್ ಚುರುಕಿನ ದಾಳಿಯ ಬಲದಿಂದ ಯು ಮುಂಬಾ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ತಮಿಳ್ ತಲೈವಾಸ್ ಎದುರು ರೋಚಕ ಜಯ ಸಾಧಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮುಂಬಾ ತಂಡ 35–33ರಿಂದ ತಮಿಳ್ ತಲೈವಾಸ್ ವಿರುದ್ಧ ಜಯಿಸಿತು. ಅಭಿಷೇಕ್ ಸಿಂಗ್ ಹತ್ತು ಅಂಕಗಳನ್ನು ಗಳಿಸಿ ಮಿಂಚಿದರು. ಮೊದಲಾರ್ಧದ ವಿರಾಮದ ವೇಳೆಗೆ ಮುಂಬಾ ತಂಡವು 26–11 ರಿಂದ ಮುನ್ನಡೆಯಲ್ಲಿತ್ತು. ಮರುಹೋರಾಟ ತೋರಿದ ತಮಿಳ್ ತಲೈವಾಸ್ ಗೆಲುವಿನ ಸನಿಹ ನಿರಾಶೆ ಅನುಭವಿಸಿತು. ಮಂಜಿತ್ ಮತ್ತು ಅಜಿಂಕ್ಯ ಪವಾರ್ ತಲಾ ಏಳು ಅಂಕ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಯುಪಿ ಯೋಧಾ ತಂಡವು 39–35ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಭೇರಿ ಬಾರಿಸಿತು. ಯೋಧಾ ತಂಡದ ಸುರೇಂದರ್ ಗಿಲ್ 12 ಮತ್ತು ಶ್ರೀಕಾಂತ್ ಜಾಧವ್ 9 ಅಂಕಗಳನ್ನು ರೇಡಿಂಗ್‌ನಲ್ಲಿ ಗಳಿಸಿದರು. ತೆಲುಗು ಟೈಟನ್ಸ್‌ನ ರೇಡರ್ ರಜನೀಶ್ 13 ಅಂಕ ಗಳಿಸಿದರು.

ಮೂರನೇ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 35–28ರಲ್ಲಿ ಜೈಪುರ್ ಪಿಂಕ್ ಪ್ಯಾಂಥರ್ಸ್ ಎದುರು ಜಯ ಗಳಿಸಿತು. ಹರಿಯಾಣದ ವಿಕಾಸ್ ಖಂಡೋಲ 10 ಪಾಯಿಂಟ್ ಕಲೆ ಹಾಕಿದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	17	9	5	3	57
ಪಟ್ನಾ ಪೈರೇಟ್ಸ್	15	10	4	1	55
ಬೆಂಗಳೂರು ಬುಲ್ಸ್	18	9	7	2	54
ಹರಿಯಾಣ ಸ್ಟೀಲರ್ಸ್	17	8	6	3	53
ಯು ಮುಂಬಾ	16	6	5	5	48
ಯು ಪಿ ಯೋಧಾ	17	6	8	3	47
ಜೈಪುರ ಪಿಂಕ್ ಪ್ಯಾಂಥರ್ಸ್	16	7	7	2	46
ತಮಿಳ್ ತಲೈವಾಸ್	16	5	5	6	45
ಪುಣೇರಿ ಪಲ್ಟನ್	15	8	7	-	42
ಬೆಂಗಾಲ್ ವಾರಿಯರ್ಸ್	16	7	8	1	41
ಗುಜರಾತ್ ಜೈಂಟ್ಸ್	15	5	7	3	38
ತೆಲುಗು ಟೈಟನ್ಸ್	16	1	12	3	23

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)